## GNANADHARE EDUCATIONAL TRUST ®

# GNANADHARE ACADEMY

#2 Sharada Arcade,Nagarbhavi Main Road Prashanth Nagar, Vijaynagar North Bangalore-560079, Mob:9513804777/9513809777

GNANADHARE EDUCATIONAL TRUST (R)

“ಸ್ಪರ್ಧಾರ್ಥಿಗಳ ಭರವಸೆಯ ಬೆಳಕು”

K A S MAINS

# ಪತ್ರಿಕೆ 3 ವಿಭಾಗ 2 ಭಾರತ ಸಂವಿಧಾನದ ಪಕ್ಷಿನೋಟ

**“TO AQUIRE KNOWLEDGE, ONE MUST STUDY,BUT TO AQUIRE WISDOM,ONE MUST OBSERVE”.**

GNANADHARE IAS ACADEMY

# ಸಂವಿಧಾನದ 12 ಅನುಸೂಚಿಗಳು :

| ಅನುಸೂಚಿಗಳು | ವಿಷಯಗಳು | ವಿಧಿಗಳು |
|---|---|---|
| 1 | 1. ರಾಜ್ಯಗಳ ಹೆಸರು & ಅವುಗಳ ಭೂ ಪ್ರದೇಶ ಅಧಿಕಾರ ವ್ಯಾಪ್ತಿಗಳು<br>2. ಕೇಂದ್ರಾಡಳಿತ ಪ್ರದೇಶಗಳ ಹೆಸರು ಮತ್ತು ಅವುಗಳ ಭೂ ಪ್ರದೇಶ ಅಧಿಕಾರ ವ್ಯಾಪ್ತಿಗಳು. | 1 & 4 |
| 2 | **ವೇತನ, ಭತ್ಯೆ, ಇತರೆ ಸೌಲಭ್ಯಗಳ ಹಂಚಿಕೆ**<br>1. ರಾಷ್ಟ್ರಪತಿ<br>2. ರಾಜ್ಯಪಾಲರು<br>3. ರಾಜ್ಯಸಭೆಯ ಅಧ್ಯಕ್ಷರು & ಉಪಾಧ್ಯಕ್ಷರು<br>4. ಲೋಕಸಭೆಯ ಸಭಾಪತಿ & ಉಪ ಸಭಾಪತಿ<br>5. ರಾಜ್ಯಗಳ ವಿಧಾನಪರಿಷತ್ತಿನ ಅಧ್ಯಕ್ಷರು & ಉಪಾಧ್ಯಕ್ಷರು<br>6. ರಾಜ್ಯಗಳ ವಿಧಾನಸಭೆಯ ಸಭಾಪತಿ & ಉಪಸಭಾಪತಿ<br>7. ಭಾರತದ ಕಂಟ್ರೋಲ್ & ಆಡಿಟರ್ ಜನರಲ್<br>8. ಸರ್ವೋಚ್ಚ ನ್ಯಾಯಾಲಯ & ಉಚ್ಚ ನ್ಯಾಯಾಲಯದ ನ್ಯಾಯಾಧೀಶರು | 59, 65, 97, 125, 148, 158, 164, 186 & 221 |
| 3 | **ಪ್ರಮಾಣ ವಚನ ಸ್ವೀಕರಿಸುವ ವಿಧಾನಗಳು**<br>1. ಕೇಂದ್ರ ಮಂತ್ರಿಗಳು<br>2. ಸಂಸತ್ತಿನ ಚುಣಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು<br>3. ಸಂಸತ್ತಿನ ಸದಸ್ಯರು<br>4. ಸರ್ವೋಚ್ಚ ನ್ಯಾಯಲಯದ ನ್ಯಾಯಾಧೀಶರು<br>5. ಭಾರತದ ಕಂಟ್ರೋಲರ್ & ಆಡಿಟರ್ ಜನರಲ್<br>6. ರಾಜ್ಯ ಮಂತ್ರಿಗಳು<br>7. ರಾಜ್ಯ ಶಾಸಕಾಂಗ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು<br>8. ರಾಜ್ಯ ಶಾಸಕಾಂಗಗಳ ಸದಸ್ಯರು<br>9. ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರು | 75, 99, 124, 148, 164, 188 & 219 |
| 4 | ರಾಜ್ಯಗಳ & ಕೇಂದ್ರಾಡಳಿತ ಪ್ರದೇಶಗಳಿಗೆ ರಾಜ್ಯಸಭೆ ಸ್ಥಾನಗಳ ಹಂಚಿಕೆ | 4 & 80 |
| 5 | ಅನುಸೂಚಿತ ಪ್ರದೇಶಗಳು & ಅನುಸೂಚಿತ ಬುಡಕಟ್ಟುಗಳ ಆಡಳಿತ & ನಿಯಂತ್ರಣಕ್ಕೆ ಸಂಬಂಧಿಸಿದ ವಿಷಯಗಳು | 244 |
| 6 | ಅಸ್ಸಾಂ, ಮೇಘಾಲಯ, ತ್ರಿಪುರ & ಮಿಜೋರಾಂ ಆಡಳಿತ & | 244 & 275 |

| | | |
|---|---|---|
| | ನಿಯಂತ್ರಣಕ್ಕೆ ಸಂಬಂಧಿಸಿದ ವಿಷಯಗಳು | |
| 7 | ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ & ಸಮವರ್ತಿಪಟ್ಟಿಯಲ್ಲಿ ನಮೂದಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ & ರಾಜ್ಯಗಳ ನಡುವೆ ಅಧಿಕಾರಗಳ ಹಂಚಿಕೆ. | 246 |
| 8 | **ಸಂವಿಧಾನ ಅಂಗೀಕಾರ ಮಾಡಿದ ಭಾಷೆಗಳು**<br>ಭಾಷೆಗಳು – 14<br>1. ಅಸ್ಸಾಮಿ 8. ಮಲಯಾಳಂ<br>2. ಬೆಂಗಾಲಿ 9. ಪಂಜಾಬಿ<br>3. ಗುಜರಾತಿ 10. ಮರಾಠಿ<br>4. ಹಿಂದಿ 11. ಸಂಸ್ಕೃತ<br>5. ಕನ್ನಡ 12. ತಮಿಳು<br>6. ಕಾಶ್ಮೀರಿ 13. ತೆಲುಗು<br>7. ಒರಿಯಾ 14. ಉರ್ದು<br><br>**21ನೇ ತಿದ್ದುಪಡಿ–1967ರಲ್ಲಿ ಸೇರ್ಪಡೆಯಾದ 15ನೇ ಭಾಷೆ ಸಿಂಧಿ.**<br><br>**71ನೇ ತಿದ್ದುಪಡಿ–1992ರಲ್ಲಿ ಸೇರ್ಪಡೆಯಾದ ಭಾಷೆಗಳು**<br>16. ಕೊಂಕಣಿ<br>17. ಮಣೀಪುರಿ<br>18. ನೇಪಾಳಿ<br><br>**92ನೇ ತಿದ್ದುಪಡಿ–2003ರಲ್ಲಿ ಸೇರ್ಪಡೆಯಾದ ಭಾಷೆಗಳು**<br>19. ಬೋಡೋ<br>20. ಡೋಂಗ್ರಿ<br>21. ಮೈಥಿಲಿ<br>22. ಸೈತಾಲಿ | 344 & 351 |
| 9 | ಭೂಸುಧಾರಣಾ ಕಾಯ್ದೆ 1952ರಿಂದ ಜಾರಿಯಾಯಿತು.<br>ಈ ಅನುಸೂಚಿಯಲ್ಲಿ 284 ಕಾಯ್ದೆಗಳನ್ನು ಸೇರಿಸಲಾಗಿದೆ.<br>ಈ ಅನುಸೂಚಿಯನ್ನು ಮೊದಲ ತಿದ್ದುಪಡಿ–1951ರಲ್ಲಿ ಸೇರಿಸಲಾಯಿತು. ಈ ಕಾಯ್ದೆಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. | 31 – ಬಿ |

GNANADHAREIAS KAS ACADEMY

| | | |
|---|---|---|
| 10 | ಪಕ್ಷಾಂತರ ಮಾಡಿದ ಮೂಲ ಕಾರಣದ ಮೇಲೆ ಶಾಸಕರನ್ನು ಅನರ್ಹತೆಗೊಳಿಸುವ ವಿಷಯಗಳು<br>ಈ ಅನುಸೂಚಿಯನ್ನು 52ನೇಯ ತಿದ್ದುಪಡಿ–1985ರಲ್ಲಿ ಸೇರಿಸಲಾಯಿತು. ಪಕ್ಷಾಂತರ ನಿಷೇಧ ಕಾಯ್ದೆ ಜಾರಿಯಾದ ವರ್ಷ 1995. | 102 & 191 |
| 11 | ಸಂವಿಧಾನ 73ನೇ ತಿದ್ದುಪಡಿ, 1992ರಲ್ಲಿ ಈ ಅನುಸೂಚಿಯನ್ನು ಸೇರಿಸಲಾಯಿತು. ಪಂಚಾಯತ್ ರಾಜ್ ಕಾಯ್ದೆ ಏಪ್ರಿಲ್ 24 1993ರಿಂದ ಜಾರಿಯಾಯಿತು. ಮೊಟ್ಟ ಮೊದಲ ಬಾರಿಗೆ ಪಂಚಾಯತ್‌ನ್ನು ರಾಜಸ್ಥಾನದ ನಾಗೂರ್‌ನಲ್ಲಿ 1959 ಅಕ್ಟೋಬರ್ 2ರಂದು ಸ್ಥಾಪಿಸಲಾಯಿತು. ಬಲ್ವಂತ್ ರಾಯ್ ಮಹ್ತಾ ಆಯೋಗ (1957)ದ ಶಿಫಾರಸ್ಸಿನ ಆಧಾರದ ಮೇರೆಗೆ ಪಂಚಾಯತ್‌ನ್ನು ಸ್ಥಾಪಿಸಲಾಯಿತು. ಬಲ್ವಂತ್ ರಾಯ್ ಮೆಹ್ತಾ ಅವರನ್ನು ಪಂಚಾಯತ್‌ನ ಪಿತಾಮಹ ಎಂದು ಕರೆಯುತ್ತಾರೆ. ಏಪ್ರಿಲ್ 24ರಂದು ಪಂಚಾಯತ್ ರಾಜ್ ದಿನಾಚರಣೆ ಎಂದು ಆಚರಣೆ ಮಾಡುತ್ತಾರೆ.<br>ಪಂಚಾಯತ್‌ನ್ನು ಸಂವಿದಾನದ 9ನೇ ಭಾಗದಲ್ಲಿ 243– 243(ಓ) ವಿಧಿಗಳನ್ನು ಒಳಗೊಂಡಿದೆ. ಇದರಲ್ಲಿ 29 ವಿಷಯಗಳನ್ನು ಒಳಗೊಂಡಿದೆ. | 243–243(ಓ) |
| 12 | ಮುನಿಸಿಪಾಲಿಟಿ/ನಗರ ಪಾಲಿಕೆಗಳ ವಿಶೇಷ ಅಧಿಕಾರಿಗಳು & ಜವಾಬ್ದಾರಿಗಳು. ಇದು 18 ವಿಷಯಗಳನ್ನು ಒಳಗೊಂಡಿದೆ. ಸಂವಿಧಾನದ 74ನೇ ತಿದ್ದುಪಡಿ–1992ರಲ್ಲಿ ಈ ಅನುಸೂಚಿಯನ್ನು ಸೇರಿಸಲಾಯಿತು.<br>ಸಂವಿಧಾನದ 9/ಎ ಭಾಗದಲ್ಲಿ 243(ಪಿ) 243(ಝಡ್‌ಜಿ) ವರೆಗು ವಿಧಿಗಳನ್ನು ಒಳಗೊಂಡಿದೆ. | 243ಪಿ-243 ಝಡ್‌ಜಿ (243ಪಿ-243zಜಿ) |

# ಸಂವಿಧಾನದ ಭಾಗಗಳು :

| ಭಾಗಗಳು | ವಿಷಯಗಳು | ವಿಧಿಗಳು |
|---|---|---|
| 1 | ಒಕ್ಕೂಟ ಮತ್ತು ಅದರ ಭೂ ಪ್ರದೇಶ | 1–4 |
| 2 | ಪೌರತ್ವ | 5–11 |
| 3 | ಮೂಲಭೂತ ನೀತಿಗಳು | 12–35 |
| 4<br>4ಎ | ರಾಜ್ಯ ನಿರ್ದೇಶಕ ತತ್ವಗಳು<br>ಮೂಲಭೂತ ಕರ್ತವ್ಯಗಳು (1976 ಸೇರ್ಪಡೆ) | 36–51<br>51ಎ |
| 5 | ಕೇಂದ್ರ ಸರ್ಕಾರ | 52–151 |
| 6 | ರಾಜ್ಯ ಸರ್ಕಾರ | 152–237 |
| 7 | **ರದ್ದು ಮಾಡಲಾಗಿದೆ** | |
| 8 | ಕೇಂದ್ರಾಡಳಿತ ಪ್ರದೇಶ | 239–242 |
| 9<br>9ಎ | ಪಂಚಾಯತ್ ಸಂಸ್ಥೆಗಳು<br>ಮುನಿಸಿ ಪಾಲಿಟಿಗಳು | 243–243<br>243 ಪಿ–243 ಝಡ್ ಜಿ |
| 10 | ಅನುಸೂಚಿತ ಮತ್ತು ಬುಡಕಟ್ಟು ಪ್ರದೇಶಗಳು | 244–244ಎ |
| 11 | ಕೇಂದ್ರ ರಾಜ್ಯಗಳ ಸಂಬಂಧಗಳು | 245–263 |
| 12 | ಹಣಕಾಸು, ಆಸ್ತಿ (ಕೇಂದ್ರ ಮತ್ತು ರಾಜ್ಯಗಳ ಆರ್ಥಿಕ ಸಂಬಂಧಗಳು) | 264–300ಎ |
| 13 | ಭಾರತದೊಳಗೆ ವ್ಯಾಪಾರ ಮತ್ತು ವಾಣಿಜ್ಯ | 301–307 |
| 14<br>14ಎ | ಕೇಂದ್ರ ಮತ್ತು ರಾಜ್ಯ ಆಡಳಿತ ಸೇವೆಗಳು<br>Tribunal / ನ್ಯಾಯಾಧೀಕರಣಗಳು | 308–323<br>232ಎ–323ಬಿ |
| 15 | ಚುನಾವಣೆಗಳು | 324–329ಎ |
| 16 | ಕೆಲವು ವರ್ಗಗಳಿಗೆ ಸಂಬಂಧಿಸಿದ ವಿಶೇಷ ನಿಯಮಗಳು | 330–342 |
| 17 | ಅಧಿಕೃತ ಭಾಷೆ | 343–350 |
| 18 | ತುರ್ತು ಪರಿಸ್ಥಿತಿಗಳು | 352–360 |
| 19 | ಮಿಸಲೇನಿಯಸ್/ ಇತರೆ | 361–367 |
| 20 | ಸಂವಿಧಾನದ ತಿದ್ದುಪಡಿ | 368 |
| 21 | ತಾತ್ಕಾಲಿಕ ಮತ್ತು ವಿಶೇಷ ನಿಯಮಗಳು | 369–392 |
| 22 | ಚಿಕ್ಕ ಹೆಸರು, ಪ್ರಾರಂಭ | 393–395 |

GNANADHARE IASKAS ACADEMY

## ರಾಷ್ಟ್ರಲಾಂಛನ :



- ನಮ್ಮ ಭಾರತದ ರಾಷ್ಟ್ರಲಾಂಛನ ಸಿಂಹಘೋಧಿ.
- ರಾಷ್ಟ್ರಲಾಂಛನದಲ್ಲಿ ಅಶೋಕ ಸ್ಥಂಭದ ಮೇಲ್ಭಾಗದಲ್ಲಿ 4 ಸಿಂಹಗಳು ಬೆನ್ನಿಗೆ ಬೆನ್ನು ಮಾಡಿಕೊಂಡು ಲಾಂಛನದ ಪೀಠದ ಮೇಲೆ ಕುಳಿತಿವೆ. ಲಾಂಛನ ಪೀಠದ ಕೆಳಭಾಗದಲ್ಲಿ ಬಲಭಾಗಕ್ಕೆ ಗೂಳಿ, ಎಡಭಾಗಕ್ಕೆ ಆನೆ, ಕುದುರೆ ಪ್ರಾಣಿಗಳ ಕೆತ್ತನೆ ಇದೆ. ಪ್ರಾಣಿಗಳ ನಡುವೆ ಅಶೋಕ ಚಕ್ರವಿದೆ. ಇವುಗಳ ಅಡಿಯಲ್ಲಿ ಗಂಟೆಯಾಕಾರದ ಕಮಲವಿದೆ.
- ಲಾಂಛನ ಪೀಠದ ಕೆಳಗೆ ದೇವನಾಗರ ಲಿಪಿಯಲ್ಲಿ **ಮಂಡಕೋಪನಿಷತ್ತಿ**ನಿಂದ ತೆಗೆದುಕೊಂಡ **ಸತ್ಯ ಮೇವ ಜಯತೆ** ಎಂಬ ಸಾಲನ್ನು ಕೆತ್ತಲಾಗಿದೆ. ಇಂತಹ ರಾಷ್ಟ್ರಲಾಂಛನವನ್ನು ಜನವರಿ 26 1950ರಂದು ನಮ್ಮ ಸಂವಿಧಾನದಲ್ಲಿ ಅಂಗೀಕರಿಸಲಾಗಿದೆ.

## ರಾಷ್ಟ್ರಧ್ವಜ :



ನಮ್ಮ ರಾಷ್ಟ್ರಧ್ವಜ 3 ಬಣ್ಣಗಳನ್ನು ಹೊಂದಿದೆ.

- ಕೇಸರಿ ಬಣ್ಣ (ತ್ಯಾಗ & ಧೈರ್ಯದ ಸಂಕೇತ).
- ಬಿಳಿ ಬಣ್ಣ (ಶಾಂತಿಯ ಸಂಕೇತ)
- ಹಸಿರು (ಸಮೃದ್ಧಿಯ ಸಂಕೇತ)
- ನಮ್ಮ ರಾಷ್ಟ್ರಧ್ವಜದ ಅಗಲ & ಉದ್ದ 2:3
- ಅಗಲದ 24 ಇಂಚುಗಳನ್ನು 8 ಇಂಚುಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮಧ್ಯ **ಅಶೋಕನ** ಧರ್ಮಚಕ್ರವಿದೆ. ಇದು ಸರ್ವಧರ್ಮಗಳ ಸಂಕೇತವಾಗಿದೆ. ಇದರಲ್ಲಿ 24 ಕಡ್ಡಿಗಳಿವೆ. ಇದು 24 ಗಂಟೆಗಳನ್ನು ಸೂಚಿಸುತ್ತದೆ. ಇಂತಹ ರಾಷ್ಟ್ರಧ್ವಜವನ್ನು ಜುಲೈ 22 1947ರಂದು ಸಂವಿಧಾನದ ರಚನಾ ಸಭೆ ಒಪ್ಪಿಕೊಂಡಿತು.

GNANADHARE IAS KAS AC

## ರಾಷ್ಟ್ರಗೀತೆ :

- ‘ಜನಗಣಮನ ಅಧಿನಾಯಕ ಜಯಹೇ’ ಗೀತೆ ನಮ್ಮ ರಾಷ್ಟ್ರಗೀತೆಯಾಗಿದೆ. ಇದನ್ನು ರವೀಂದ್ರನಾಥ ಠಾಗೂರ್ ಅವರು ಬಂಗಾಳಿ ಭಾಷೆಯಲ್ಲಿ ರಚಿಸಿದ್ದಾರೆ.
- ಬಂಕಿಮ ಚಂದ್ರ ಚಟರ್ಜಿ ಅವರು ಬರೆದ ವಂದೇ ಮಾತರಂ ಗೀತೆ ರಾಷ್ಟ್ರದ ಹಾಡಿನ ಸ್ಥಾನಮಾನವನ್ನು ಪಡೆಯಿತು.
- ಪಂಡಿತ್ ರವಿಶಂಕರ್ ನೇತೃತ್ವದ ಶಿಫಾರಸ್ಸಿನ ಆಧಾರದ ಮೇಲೆ ಜನಗಣಮನ ಗೀತೆಯನ್ನು ಜನವರಿ 24 1950ರಂದು ಸಂವಿಧಾನದ ರಚನಾ ಸಭೆ ಅಂಗೀಕಾರ ನೀಡಿತು.




## ಸಂವಿಧಾನದ ಐತಿಹಾಸಿಕ ಬೆಳವಣಿಗೆಗಳು :

### 1773ರ ರೆಗ್ಯುಲೇಟಿಂಗ್ ಕಾಯ್ದೆ :

- ಬ್ರಿಟಿಷ್ ಸರ್ಕಾರವು ಪ್ರಥಮ ಬಾರಿಗೆ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವ್ಯವಹಾರಗಳನ್ನು ನಿಯಂತ್ರಿಸಲಾರಂಭಿಸಿತು.
- ಬಂಗಾಳದ ಗವರ್ನರ್ ಅನ್ನು ಬಂಗಾಳದ ಗವರ್ನರ್ ಜನರಲ್‌ನನ್ನಾಗಿಸಲಾಯಿತು.
- 4 ಮಂದಿ ಸದಸ್ಯರಿಂದ ಕೂಡಿದ ಒಂದು ಕಾರ್ಯಕಾರಿ ಮಂಡಳಿಯನ್ನು ರಚಿಸಲಾಯಿತು. ಲಾರ್ಡ್ ವಾರನ್ ಹೇಸ್ಟಿಂಗ್ಸ್‌ನೇ ಅಂತಹ ಮೊದಲನೆಯ ಗವರ್ನರ್ ಜನರಲ್.
- ಬಾಂಬೆ & ಮದ್ರಾಸ್ ಪ್ರಾಂತ್ಯಗಳ ಗವರ್ನರ್‌ಗಳನ್ನು ಬಂಗಾಳದ ಗವರ್ನರ್ ಜನರಲ್‌ನಿಗೆ ಅಧೀನಗೊಳಿಸಲಾಯಿತು. ಇದಕ್ಕೂ ಮುನ್ನ ಬಾಂಬೆ & ಮದ್ರಾಸ್ ಪ್ರಾಂತ್ಯಗಳು ಪರಸ್ಪರ ಸ್ವತಂತ್ರವಾಗಿದ್ದವು.

GNANADHARE IAS K

- ಒಬ್ಬ ಮುಖ್ಯ ನ್ಯಾಯಾಧೀಶ ಹಾಗೂ ಮೂವರು ಇತರೆ ನ್ಯಾಯಾಧೀಶರನ್ನೊಳಗೊಂಡ ಸುಪ್ರೀಂಕೋರ್ಟ್‌ನ್ನು ಕಲ್ಕತ್ತಾದಲ್ಲಿ ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿತು.
- ಯಾವುದೇ ಖಾಸಗಿ ವ್ಯವಹಾರದಲ್ಲಿ ತೊಡಗದಂತೆ & ಸ್ಥಳಿಯರಿಂದ ಕಾಣಿಕೆ ಅಥವಾ ಲಂಚ ಸ್ವೀಕರಿಸದಂತೆ ಈಸ್ಟ್ ಇಂಡಿಯಾ ಕಂಪನಿಯ ನೌಕರರ ಮೇಲೆ ನಿರ್ಬಂಧ ಹೇರಿತು.

1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆ ಜಾರಿಯಾಯಿತು. ಇದು ಭಾರತದ ಸಂವಿಧಾನ ರಚನಾ ಬೆಳವಣಿಗೆಗೆ ಮೊದಲ ಹಂತವಾಗಿದೆ. 1773ರಲ್ಲಿ ಜಾರಿಗೆ ಬಂದ ರೆಗ್ಯೂಲೇಟಿಂಗ್ ಕಾಯ್ದೆಯು ರಾಬರ್ಟ್ ಕ್ಲೈವ್ ಜಾರಿಗೊಳಿಸಿದ್ದ ದ್ವಿಮುಖ ಸರ್ಕಾರ ಪದ್ಧತಿ ರದ್ದು ಮಾಡಿತು.

## 1784ರ ಪಿಟ್ಸ್ ಇಂಡಿಯಾ ಕಾಯ್ದೆ :

ರೆಗ್ಯುಲೆಂಟಿಗ್ ಕಾಯ್ದೆ, 1773ರ ಲೋಪದೋಷಗಳನ್ನು ಸರಿಪಡಿಸಲು ಬ್ರಿಟಿಷ್ ಸಂಸತ್ತು ತಿದ್ದುಪಡಿ ಕಾಯ್ದೆ, 1781ನ್ನು ಪಾಸು ಮಾಡಿತು. ನಂತರ ಜಾರಿಗೆ ಬಂದ ಮಹತ್ವದ ಕಾಯ್ದೆ 1784ರ ಪಿಟ್ಸ್ ಇಂಡಿಯಾ ಕಾಯ್ದೆ. ಈ ಕಾಯ್ದೆ ರಾಜಕೀಯ ವ್ಯವಹಾರಗಳನ್ನು ನಿರ್ವಹಿಸಲು ಪ್ರತ್ಯೇಕವಾದ ಬೋರ್ಡ್ ಆಫ್ ಕಂಟ್ರೋಲ್‌ನ್ನು ರಚಿಸಿತು. ಕಂಪನಿಯ ಭಾರತದ ಭೂ ಪ್ರದೇಶವನ್ನು ಬ್ರಿಟಿಷ್ ಪೊಸೆಷನ್ ಇನ್ ಇಂಡಿಯಾ ಎಂದು ಕರೆಯಲಾಯಿತು.

### ಪಿಟ್ಸ್ ಇಂಡಿಯಾ ಕಾಯ್ದೆಯ ಲಕ್ಷಣಗಳು :

1. ಈ ಕಾಯ್ದೆ ಕಂಪನಿಯ ವಾಣಿಜ್ಯ & ರಾಜಕೀಯ ಕಾರ್ಯಗಳನ್ನು ಬೇರ್ಪಡಿಸಿತು.
2. ಸಿವಿಲ್, ಮಿಲಿಟರಿ & ರೆವಿನ್ಯೂ ವಿಷಯಗಳ ಮೇಲ್ವಿಚಾರಣೆಗಾಗಿ 6 ಮಂದಿ ಪ್ರೀವ್ಯೂವ್ ಕೌನ್ಸಿಲ್ ಸದಸ್ಯರ ಒಂದು ಸಮಿತಿಯನ್ನು ಇಂಗ್ಲೇಂಡಿನಲ್ಲಿ ರಚಿಸಿತು. ಈ ಕಾಯ್ದೆ ದ್ವಿಮುಖ ಸರ್ಕಾರವನ್ನು ಸ್ಥಾಪಿಸಿತು.
3. ಮಂಡಳಿಯ ಆದೇಶವನ್ನು ಭಾರತಕ್ಕೆ ವರ್ಗಾಯಿಸುವ ಜವಾಬ್ದಾರಿಯನ್ನು ಮೂವರು ನಿರ್ದೇಶಕರನ್ನೊಳಗೊಂಡ ಒಂದು ರಹಸ್ಯ ಸಮಿತಿಗೆ ನೀಡಲಾಯಿತು.
4. ಗವರನ್ನರ್ ಜನರಲ್‌ನ ಸಮಿತಿ ಸದಸ್ಯರ ಸಂಖ್ಯೆಯನ್ನು 4–3ಕ್ಕೆ ಇಳಿಸಲಾಯಿತು.
5. ರಾಯಭಾರತ್ವ, ಯುದ್ಧ & ಕಂದಾಯ ಈ ವಿಷಯಗಳಿಗೆ ಸಂಬಂಧಿಸಿದಂತೆ ಮದ್ರಾಸ್ & ಬಾಂಬೆ ಪ್ರೆಸಿಡೆನ್ಸಿಗಳನ್ನು ಬಂಗಾಳದ ಗವರ್ನರ್ ಜನರಲ್‌ನ ಸಮಿತಿಗೆ ಅಧೀನಗೊಳಿಸಲಾಯಿತು.

## 1793 ಚಾರ್ಟರ್ ಕಾಯ್ದೆ :

ಕಂಪನಿಯು ಇನ್ನೂ 20 ವರ್ಷಗಳ ಕಾಲ ವ್ಯಾಪಾರದಲ್ಲಿ ಭಾರತದೊಂದಿಗೆ ಏಕಸ್ವಾಮ್ಯ ಪಡೆಯಿತು. ಬೋರ್ಡ್ ಆಫ್ ಕಂಟ್ರೋಲ್ & ಸದಸ್ಯರು ಕಂಪನಿಯ ಇತರೆ ಕಾರ್ಯಕಾರಣಿಗಳಿಗೆ ಭಾರತದ ಖಾಜನೆಯಿಂದ ವೇತನ ಪಡೆಯಲು ಅವಕಾಶ ನೀಡಲಾಯಿತು

## 1813 ಚಾರ್ಟರ್ ಕಾಯ್ದೆ :

1813 ಚಾರ್ಟ್ರ್ ಕಾಯ್ದೆಯ ಪ್ರಕಾರ ಶಿಕ್ಷಣ, ಸಂಸ್ಕೃತಿ & ವಿಜ್ಞಾನ ಕ್ಷೇತ್ರಗಳಿಗೆ 1 ಲಕ್ಷ ರೂ. ಹಣವನ್ನು ಮೀಸಲಿಡಬೇಕೆಂದು ನಿರ್ದೇಶನ ಮಾಡಲಾಯಿತು. ಬ್ರಿಟಿಷರು ಭದ್ರವಾಗಿ ಭಾರತದಲ್ಲಿ ತಳವೂರಲು ಸಹಾಯ ಮಾಡಿದ ಆಕ್ಟ್ ಇದಾಗಿದೆ. ಕ್ರೈಸ್ತ ಮತ ಪ್ರಚಾರಕ ಪ್ರವೇಶದ ಮೇಲೆ ಇದ್ದ ಪ್ರತಿಬಂಧಕವನ್ನು ತೆಗೆದುಹಾಕಿ ಇಲ್ಲಿ ಶಾಲಾ-ಕಾಲೇಜುಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿತು.

## 1833 ಚಾರ್ಟರ್ ಕಾಯ್ದೆ :

1833ರ ಚಾರ್ಟ್ರ್ ಕಾಯ್ದೆಯ ಬ್ರಿಟಿಷರ ಆಡಳಿತವನ್ನು ಭಾರತಾದ್ಯಂತ ವಿಸ್ತರಣೆಯಾಗಲು ಅವಕಾಶ ಮಾಡಿಕೊಟ್ಟ ಕಾಯ್ದೆಯಾಗಿದೆ.

GNANADHARE IAS KAS ACADEMY

## ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ :

- ಈ ಕಾಯ್ದೆಯ ಮೂಲಕ ಬಾಂಬೆ & ಮದ್ರಾಸ್ ಪ್ರಾಂತ್ಯಗಳ ಗವರ್ನರ್‌ಗಳ ಶಾಸನೀಯ ಅಧಿಕಾರಗಳನ್ನು ಹಿಂತೆಗೆದುಕೊಳ್ಳಲಾಯಿತು. ಇಡೀ ಬ್ರಿಟಿಷ್ ಇಂಡಿಯಾಕ್ಕೆ ಸಂಬಂಧಿಸಿದ ಶಾಸನೀಯ ಅಧಿಕಾರಗಳನ್ನು ಭಾರತದ ಗವರ್ನರ್ ಜನರಲ್‌ನಿಗೆ ನೀಡಲಾಯಿತು.
- ಈಸ್ಟ್ ಇಂಡಿಯಾ ಕಂಪನಿಯು ತನ್ನ ವಾಣಿಜ್ಯ ಚಟುವಟಿಕೆಗಳನ್ನು ಕೈಬಿಟ್ಟು ಪೂರ್ಣ ಪ್ರಮಾಣದ ಆಡಳಿತಾತ್ಮಕ ಸಂಸ್ಥೆಯಾಗಿ ಮಾರ್ಪಾಟ್ಟಿತು.
- ನಾಗರೀಕ ಸೇವಾ ವರ್ಗದ ಸದಸ್ಯರ ಆಯ್ಕೆಗೆ ಮುಕ್ತ ಸ್ಪರ್ಧಾತ್ಮಕ ವ್ಯವಸ್ಥೆಯನ್ನು ಜಾರಿಗೆ ತರಲು ಪ್ರಯತ್ನಿಸಿತು, ಈ ಕಾಯ್ದೆಯು ಯಾವುದೇ ಹುದ್ದೆಯನ್ನು, ಸ್ಥಾನವನ್ನು, ಉದ್ಯೋಗವನ್ನು ಹೊಂದದಂತೆ ಭಾರತೀಯರನ್ನು ನಿರ್ಬಂಧಿಸುವಂತಿಲ್ಲ ಎಂಬ ನಿಯಮವನ್ನು ಒಳಗೊಂಡಿತ್ತು. ಆದರೆ ಕೋರ್ಟ್ ಆಫ್ ಡೈರಕ್ಟರ್ ವಿರೋಧದಿಂದ ಈ ಅಂಶವನ್ನು ನಿರಾಕರಿಸಲಾಯಿತು.
- ಈ ಕಾಯ್ದೆ ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್‌ನನ್ನಾಗಿ ಮಾಡಿತು. ಎಲ್ಲ ಸಿವಿಲ್ & ಮಿಲಿಟರಿ ಅಧಿಕಾರಗಳನ್ನು ಅವನಿಗೆ ನೀಡಿತು. ಹೀಗೆ ಈ ಕಾಯ್ದೆಯ ಮೂಲಕ ಪ್ರಥಮ ಬಾರಿಗೆ ಬ್ರಿಟಿಷ್ ಸ್ವಾಮ್ಯದ ಭಾರತದ ಎಲ್ಲ ಭೂಪ್ರದೇಶಗಳ ಮೇಲೆ ನಿಯಂತ್ರಣ ಹೊಂದಿದ ಭಾರತ ಸರ್ಕಾರವನ್ನು ಸೃಷ್ಟಿಸಲಾಯಿತು. ಲಾರ್ಡ್ ವಿಲಿಯಂ ಬೆಂಟಿಕ್‌ರವರನ್ನು ಭಾರತದ ಪ್ರಥಮ ಗವರ್ನರ್ ಜನರಲ್‌ನನ್ನಾಗಿ ಮಾಡಲಾಯಿತು.
- ಲಾರ್ಡ್ ಮೆಕಾಲೆಯವರ ಅಧ್ಯಕ್ಷತೆಯಲ್ಲಿ ಒಂದು ಕಾನೂನು ಆಯೋಗವನ್ನು ನೇಮಿಸಲಾಯಿತು.
- ಕಾನೂನು ಸದಸ್ಯನ ಸೇರ್ಪಡೆಯೊಂದಿಗೆ ಗವರ್ನರ್ ಜನರಲ್‌ನ ಕಾರ್ಯಕಾರಿ ಮಂಡಳಿಯನ್ನು ವಿಸ್ತರಿಸಲಾಯಿತು.

## 1853ರ ಚಾರ್ಟರ್ ಕಾಯ್ದೆ :

- ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಸೇವೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ & ನೇಮಕ ಮಾಡುವ ಪದ್ದತಿಗೆ ಅವಕಾಶ ನೀಡಿತು. ಇದರಿಂದ ಉನ್ನತ ನಾಗರೀಕ ಸೇವೆಗಳಿಗೆ ನೇಮಕವಾಗುವ ಅವಕಾಶ ಭಾರತೀಯರಿಗೂ ಲಭಿಸಿತು.
- 1835ರಲ್ಲಿ ಮೆಕಾಲೆ ಆಯೋಗ ಜಾರಿಯಾಯಿತು ಇದು ಇಂಗ್ಲೀಷ್ ಶಿಕ್ಷಣಕ್ಕೆ ಸಂಬಂಧಿಸಿದೆ.
- 1854ರಲ್ಲಿ ವುಡ್ಸ್ ವರದಿ ಜಾರಿಯಾಗಿದ್ದು ಇದು ಭಾರತೀಯರ ಶಿಕ್ಷಣಕ್ಕೆ ಸಂಬಂಧಿಸಿದೆ.

- ಈ ಕಾಯ್ದೆ ಪ್ರಥಮ ಬಾರಿಗೆ ಭಾರತೀಯ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಸ್ಥಳಿಯ ಪ್ರಾತಿನಿಧ್ಯ ನೀಡಿತು.
- ಪ್ರಥಮ ಬಾರಿಗೆ ಗವರ್ನರ್ ಜನರಲ್‌ನ ಕೌನ್ಸಿಲ್‌ನ ಶಾಸನೀಯ ಹಾಗೂ ಕಾರ್ಯಂಗೀಯ ಕಾರ್ಯಗಳನ್ನು ಪರಸ್ಪರ ಪ್ರತ್ಯೇಕಿಸಲಾಯಿತು. ಈ ಕಾಯ್ದೆಯು ಲೆಜಿಸ್ಲೇಟಿವ್ ಕೌನ್ಸಿಲರ್ಸ್ ಎಂಬ 6 ಮಂದಿ ಹೊಸ ಸದಸ್ಯರನ್ನು ಗವರ್ನರ್ ಜನರಲ್‌ನ ಕೌನ್ಸಿಲ್‌ಗೆ ಸೇರ್ಪಡೆ ಮಾಡಲು ಅವಕಾಶ ನೀಡಿತು.
- ಬೋರ್ಡ್ ಆಫ್ ಕಂಟ್ರೋಲಿನ ಸದಸ್ಯರ, ಕಾರ್ಯದರ್ಶಿಯ & ಇತರ ಅಧಿಕಾರಿಗಳ ವೇತನವನ್ನು ಬ್ರಿಟಿಷ್ ಸರ್ಕಾರವೇ ನಿರ್ಧರಿಸಬೇಕು & ಆ ವೇತನವನ್ನು ಕಂಪನಿಯ ಭಾರತೀಯ ಆದಾಯದಿಂದ ನೀಡಬೇಕು ಎಂದು ಈ ಕಾಯ್ದೆ ಸ್ಪಷ್ಟಪಡಿಸಿತು.
- ಕೋರ್ಟ್ ಆಫ್ ಡೈರಕ್ಟರ್‌ಗಳ ಸದಸ್ಯರ ಸಂಖ್ಯೆಯನ್ನು 24–18ಕ್ಕೆ ಇಳಿಸಲಾಯಿತು. ಈ 18 ಮಂದಿ ಸದಸ್ಯರ ಪೈಕಿ 6 ಮಂದಿ ಬ್ರಿಟಿಷ್ ಸಾಮ್ರಾಜ್ಞೆಯಿಂದ ನೇಮಕವಾಗಬೇಕು ಎಂದು ಸ್ಪಷ್ಟಪಡಿಸಿತು.

## 1858ರ ಭಾರತ ಸರ್ಕಾರ ಕಾಯ್ದೆ :

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮವಾಗಿ ಬ್ರಿಟಿಷ್ ಸಂಸತ್ತು ಈ ಕಾಯ್ದೆಯನ್ನು 1858ರಲ್ಲಿ ಹೊರಡಿಸಿತು. ಈ ಕಾಯ್ದೆಯನ್ನು ಮ್ಯಾಗ್ನಕಾರ್ಟ್ ಎಂದು ಕರೆಯುತ್ತಾರೆ. ಈ ಕಾಯ್ದೆಯ ಮೂಲಕ ಮಹಾರಾಣಿ ವಿಕ್ಟೋರಿಯಾಳು ಭಾರತದ ಆಡಳಿತದ ಹೊಣೆಯನ್ನು ಈಸ್ಟ್ ಇಂಡಿಯಾ ಕಂಪನಿಯಿಂದ ತನ್ನ ನೇರ ಆಳ್ವಿಕೆಗೆ ತೆಗೆದುಕೊಂಡಳು.

### ಭಾರತ ಸರ್ಕಾರ ಕಾಯ್ದೆಯ ಲಕ್ಷಣಗಳು :

- ನಿಯಂತ್ರಣ ಮಂಡಳಿ & ನಿರ್ದೇಶಕರುಗಳ ಮಂಡಳಿಯನ್ನು ರದ್ದುಪಡಿಸುವ ಮೂಲಕ ದ್ವಿ–ಸರ್ಕಾರ ಪದ್ದತಿಯನ್ನು ಅಂತ್ಯಗೊಳಿಸಲಾಯಿತು.
- ಭಾರತದ ನಿರ್ವಹಣೆಯ ಹೊಣೆಯನ್ನು ಈಸ್ಟ್ ಕಂಪನಿಯಿಂದ ಬ್ರಿಟಿಷ್ ಸಾಮ್ರಾಜ್ಞೆಗೆ ವರ್ಗಾಯಿಸಲಾಯಿತು. ಭಾರತದ ಗವರ್ನರ್ ಜನರಲ್ ಎಂಬ ಪದವನ್ನು ಭಾರತದ ವೈಸರಾಯ್ ಎಂದು ಬದಲಾಯಿಸಲಾಯಿತು.
- ಭಾರತ ರಾಜ್ಯ ಕಾರ್ಯದರ್ಶಿ ಎಂಬ ಹೊಸ ಹುದ್ದೆಯನ್ನು ಸೃಷ್ಟಿಸಲಾಯಿತು.

- ಭಾರತ ಆಡಳಿತದ ಎಲ್ಲಾ ಅಧಿಕಾರ & ಆಡಳಿತ ಮೇಲಿನ ನಿಯಂತ್ರಣವನ್ನು ಭಾರತ ರಾಜ್ಯ ಕಾರ್ಯದರ್ಶಿಗೆ ನೀಡಲಾಯಿತು. ಇವನು ಬ್ರಿಟಿಷ್ ಸಚಿವ ಸಂಪುಟದ ಸದಸ್ಯನಾಗಿದ್ದು, ಬ್ರಿಟಿಷ್ ಸಂಸತ್ತಿಗೆ ಅಂತಿಮವಾಗಿ ಹೊಣೆಗಾರನಾಗಿರುತ್ತಾನೆ.
- ಭಾರತ ರಾಜ್ಯ ಕಾರ್ಯದರ್ಶಿ ಆಡಳಿತದಲ್ಲಿ ನೆರವಾಗಲು 15 ಮಂದಿ ಸದಸ್ಯರ ಭಾರತದ ಮಂಡಳಿಯನ್ನು ಸ್ಥಾಪಿಸಲಾಯಿತು. ಈ ಮಂಡಳಿ ಸಲಹಾ ಸಂಸ್ಥೆಯಾಗಿತ್ತು. ಭಾರತ ರಾಜ್ಯ ಕಾರ್ಯದರ್ಶಿಯು, ಮಂಡಳಿಯ ತೀರ್ಮಾನಗಳನ್ನು ಬದಿಗೊತ್ತಿ ತಾನೇ ಅಂತಿಮ ನಿರ್ಧಾರವನ್ನು ಕೈಗೊಳ್ಳುವ ಅಧಿಕಾರ ಹೊಂದಿದ್ದನು.

## 1861ರ ಭಾರತೀಯ ಕೌನ್ಸಿಲ್ ಆಕ್ಟ್ :

ಆಡಳಿತ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆ ತರುವುದಕ್ಕಾಗಿ ಬ್ರಿಟಿಷ್ ಸಂಸತ್ತು 1861 ರ ಭಾರತೀಯ ಕೌನ್ಸಿಲ್ ಕಾಯ್ದೆಯನ್ನು ಪಾಸು ಮಾಡಿತು. ಈ ಕಾಯ್ದೆಯು ಭಾರತದಲ್ಲಿ ಅನೇಕ ಮಹತ್ತರ ಬದಲಾವಣೆಗೆ ಕಾರಣವಾಯಿತು. ಇದು ಸಂವಿಧಾನದ ಬೆಳವಣಿಗೆಗೆ ಅಪಾರವಾದ ಕೊಡುಗೆ ನೀಡಿದೆ.

### ಭಾರತೀಯ ಕೌನ್ಸಿಲ್ ಕಾಯ್ದೆಯ ಲಕ್ಷಣಗಳು :

- ಈ ಕಾಯ್ದೆಯು ಭಾರತೀಯರು ಕಾನೂನು ರೂಪಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಅವಕಾಶ ಕಲ್ಪಿಸಿತು.
- 1861ರಲ್ಲಿ ಐಪಿಸಿ (ಭಾರತೀಯ ದಂಡ ಸಂಹಿತಾ ನೀತಿ) ಜಾರಿಯಾಯಿತು.
- ವೈಸರಾಯ್ ತನ್ನ ಕೌನ್ಸಿಲ್‌ಗೆ ಭಾರತೀಯರನ್ನು ಅಧಿಕಾರೇತರ ಸದಸ್ಯರಾಗಿ ನಾಮಕರಣ ಮಾಡಿಕೊಂಡರು. ಈ ಕಾಯ್ದೆಯಂತೆ 1862ರಲ್ಲಿ ವೈಸರಾಯ್ ಲಾರ್ಡ್ ಕ್ಯಾನಿಂಗ್‌ರವರು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬನಾರಾಸ್ ರಾಜ, ಪಾಟಿಯಾಲದ ಮಹಾರಾಜ ಹಾಗೂ ಸರ್ ದಿವಾಕರ್ ರಾವ್‌ರವರನ್ನು ನಾಮಕರಣ ಮಾಡಿದರು.

## 1892ರ ಭಾರತೀಯ ಕೌನ್ಸಿಲ್ ಕಾಯ್ದೆ :

1892 ಕಾಯ್ದೆಯಡಿಯಲ್ಲಿ 1861 ಕೌನ್ಸಿಲ್ ಕಾಯ್ದೆಯ ಮುಂದುವರೆದ ಕಾಯ್ದೆಯಾಗಿ ರೂಪವಾಗಿದೆ. 1861ರ ಕಾಯ್ದೆಯ ಪ್ರಕಾರ ಸ್ಥಾಪಿತವಾಗಿರುವ ಮಂಡಳಿಗಳಲ್ಲಿ ಭಾರತೀಯರಿಗೆ ನ್ಯಾಯ ಸಮ್ಮತವಾದ ಪ್ರಾತಿನಿಧ್ಯತೆಯನ್ನು ನೀಡಲಾಗಿಲ್ಲ ಎಂದು ಕಾಂಗ್ರೆಸ್ ಪ್ರತಿಭಟಿಸಿತು. ಜೊತೆಗೆ ಶಾಸನೀಯ



GNANADHARE IAS KAS ACADEMY

ಮಂಡಳಿಗಳ ಸದಸ್ಯರ ನೇಮಕಾತಿ ಪದ್ಧತಿಯನ್ನು ವಿರೋಧಿಸಿದ್ದಲ್ಲದೇ ಚುನಾಯಿತ ಪದ್ಧತಿ ಆಯ-ವ್ಯಯ ಪಟ್ಟಿಯ ಮೇಲೆ ಮಂಡಳಿಗೆ ಅಧಿಕಾರ, ಕಾರ್ಯಾಂಗದ ಮೇಲೆ ಶಾಸಕಾಂಗದ ನಿಯಂತ್ರಣ ಮುಂತಾದ ಬೇಡಿಕೆಗಳನ್ನು ಕಾಂಗ್ರೆಸ್ ಬ್ರಿಟಿಷ್ ಸರ್ಕಾರದ ಮುಂದೆ ಇಟ್ಟಿತು. ಈ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ 1892ರ ಭಾರತೀಯ ಕೌನ್ಸಿಲ್ ಕಾಯ್ದೆ ಜಾರಿಗೆ ಬಂದಿತು.

## ಭಾರತೀಯ ಕೌನ್ಸಿಲ್‌ನ ಲಕ್ಷಣಗಳು :

- ಕೇಂದ್ರ & ಪ್ರಾಂತೀಯ ಲೆಜಿಸ್ಲೇಟಿವ್ ಕೌನ್ಸಿಲ್‌ನ ಹೆಚ್ಚುವರಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು.
- ಈ ಕಾಯ್ದೆಯು ಅಧೀಕಾರೇತರವನ್ನು ಕೇಂದ್ರ ಹಾಗೂ ಪ್ರಾಂತೀಯಗಳಿಗೆ ಆಯ್ಕೆ ಮಾಡಲು ನಾಮಕರಣ ವಿಧಾನವನ್ನು ಹೆಚ್ಚು ಬಳಕೆ ಮಾಡಲಾಯಿತು
- ಲೆಜಿಸ್ಲೇಟಿವ್ ಕೌನ್ಸಿಲ್‌ನ ಕಾರ್ಯಗಳನ್ನು ಹೆಚ್ಚಿಸಲಾಯಿತು. ಆಯ-ವ್ಯಯ ಪಟ್ಟಿಯನ್ನು ಚರ್ಚಿಸುವ & ಕಾರ್ಯಾಂಗಕ್ಕೆ ಪ್ರಶ್ನೆಗಳನ್ನು ಕೇಳುವ ಅಧಿಕಾರ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಿಗೆ ನೀಡಲಾಯಿತು.

## 1909 ಭಾರತ ಕೌನ್ಸಿಲ್ ಕಾಯ್ದೆ :

ಭಾರತ ಕೌನ್ಸಿಲ್ ಕಾಯ್ದೆ 1909ನ್ನು ಮಾರ್ಲೆ-ಮಿಂಟೋ ಸುಧಾರಣೆಗಳು ಎಂದು ಕರೆಯುತ್ತಾರೆ. ಈ ಕಾಯ್ದೆ ಜಾರಿಗೆ ಬಂದ ಸಂದರ್ಭದಲ್ಲಿ ಲಾರ್ಡ್ ಮಾರ್ಲೆ, ಭಾರತದ ಕಾರ್ಯದರ್ಶಿಯಾಗಿದ್ದರು & ಲಾರ್ಡ್ ಮಿಂಟೋ ಭಾರತದ ವೈಸರಾಯ್ ಆಗಿದ್ದರು.

## 1909ರ ಭಾರತ ಕೌನ್ಸಿಲ್ ಕಾಯ್ದೆಯ ಲಕ್ಷಣಗಳು :

- ಪ್ರಾಂತ್ಯಗಳಲ್ಲೂ ಸ್ಥಾನಗಳ ಸಂಖ್ಯೆ ಹೆಚ್ಚಿಸಲಾಯಿತು. ಬಂಗಾಳ, ಮದ್ರಾಸ್, ಬಾಂಬೆ ಪ್ರಾಂತ್ಯಗಳಲ್ಲಿ ಸಂಖ್ಯೆಯನ್ನು 50ಕ್ಕೆ ಹೆಚ್ಚಿಸಲಾಯಿತು. ಉಳಿದ ಪ್ರಾಂತ್ಯಗಳಲ್ಲಿ 30ಕ್ಕೆ ನಿಗಧಿಗೊಳಿಸಲಾಯಿತು.
- ಕೇಂದ್ರ ಶಾಸನಸಭೆಯ ಸದಸ್ಯರ ಸಂಖ್ಯೆಯನ್ನು 16-68ಕ್ಕೆ ಹೆಚ್ಚಿಸಲಾಯಿತು. ಅದರಲ್ಲಿ 36 ಮಂದಿ ಸರ್ಕಾರಿ ಸದಸ್ಯರಾಗಿದ್ದರು ಹಾಗೂ 32 ಮಂದಿ ಸರ್ಕಾರೇತರ ಸದಸ್ಯರಾಗಿದ್ದರು.
- ಶಾಸನ ಸಭೆಗಳ ಅವಧಿಯನ್ನು 3 ವರ್ಷಗಳಿಗೆ ನಿಗಧಿಪಡಿಸಲಾಯಿತು.

- ಪ್ರತ್ಯೇಕ ಮತದಾರದ ವರ್ಗದ ಪರಿಕಲ್ಪನೆಯನ್ನು ಒಪ್ಪಿಕೊಳ್ಳುವ ಮೂಲಕ ಮುಸ್ಲಿಂರಿಗೆ ಕೋಮು ಪ್ರಾತಿನಿಧ್ಯ ಪದ್ದತಿಯನ್ನು ಜಾರಿಗೆ ತರಲಾಯಿತು. ಈ ಪದ್ದತಿಯ ಪ್ರಕಾರ ಮುಸ್ಲಿಂ ಪ್ರತಿನಿಧಿಗಳು ಮುಸ್ಲಿಂ ಮತದಾರರಿಂದಲೇ ಚುನಾಯಿತರಾಗಬೇಕೇಂದು ಶಿಫಾರಸ್ಸು ಮಾಡಿತು.
- ಲಾರ್ಡ್ ಮಿಂಟೋ ರವರನ್ನು ಕೋಮು ಮತದಾರ ವರ್ಗದ ಪಿತಾಮಹ ಎಂದು ಕರೆಯುತ್ತಾರೆ
- ವೈಸರಾಯ್‌ರವರ ಕಾರ್ಯ ನಿರ್ವಾಹಕ ಸಮಿತಿಗೆ ಒಬ್ಬ ಭಾರತೀಯನನ್ನು ನಾಮಕರಣ ಮಾಡಲು ಪ್ರಥಮ ಬಾರಿಗೆ ಅವಕಾಶ ನೀಡಲಾಯಿತು. ಸತ್ಯೇಂದ್ರ ಪ್ರಸಾದ್ ಸಿನ್ಹಾರವರು ವೈಸರಾಯ್‌ರವರ ಕಾರ್ಯ ನಿರ್ವಾಹಕ ಸಮಿತಿಗೆ ಸದಸ್ಯರಾಗಿ ನೇಮಕವಾದ ಮೊದಲ ಭಾರತೀಯ.

## 1919 ಮಾಂಟೆಗೋ–ಚೆಮ್ಸ್ ಫರ್ಡ್ ಕಾಯ್ದೆ :

ಮಾಂಟೆಗೋರವರು ಭಾರತದ ಕಾರ್ಯದರ್ಶಿಯಾಗಿಯೂ ಲಾರ್ಡ್ ಚೆಮ್ಸ್ ಫರ್ಡ್‌ರವರು ಭಾರತದ ವೈಸರಾಯ್ ಆಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಆದ್ದರಿಂದ ಈ ಕಾಯ್ದೆಯನ್ನು ಮಾಂಟೆಗೋ–ಚೆಮ್ಸ್ ಫರ್ಡ್ ಕಾಯ್ದೆ ಎಂದು ಕರೆಯುತ್ತಾರೆ.

## ಮಾಂಟೆಗೋ–ಚೆಮ್ಸ್ ಫರ್ಡ್ ಕಾಯ್ದೆಯ ಪ್ರಮುಖ ಲಕ್ಷಣಗಳು :

- ಈ ಕಾಯ್ದೆಯಡಿಯಲ್ಲಿ ಕೇಂದ್ರ ವಿಷಯಗಳು & ಪ್ರಾಂತೀಯ ವಿಷಯಗಳು ಎಂದು ಎರಡು ವಿಧಗಳಾಗಿ ವರ್ಗೀಕರಿಸಲಾಯಿತು. ಕೇಂದ್ರ ಪಟ್ಟಿಯಲ್ಲಿ ಬರುವ ವಿಷಯಗಳ ಮೇಲೆ ಕಾನೂನು ಮಾಡುವ ಅಧಿಕಾರ ಪ್ರಾಂತೀಯ ಸರ್ಕಾರಗಳಿಗಿದೆ.
- ದ್ವಿ–ಸದನ ಶಾಸಕಾಂಗ ಪದ್ದತಿಯನ್ನು ಪ್ರಥಮ ಬಾರಿಗೆ ಜಾರಿಗೆ ತರಲಾಯಿತು.
- ಪ್ರಾಂತೀಯ ವಿಷಯಗಳನ್ನು ವರ್ಗಾಯಿಸಲ್ಪಟ್ಟ ವಿಷಯಗಳು & ಮೀಸಲು ವಿಷಯಗಳು ಎಂದು ವರ್ಗೀಕರಿಸಲಾಯಿತು. ಮಂತ್ರಿಗಳ ನೆರವಿನಿಂದ ರಾಜ್ಯಪಾಲರು ವರ್ಗಾಯಿಸಲ್ಪಟ್ಟ ವಿಷಯಗಳು ನಿರ್ವಹಿಸಬೇಕಿತ್ತು. ಮೀಸಲು ವಿಷಯಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ರಾಜ್ಯಪಾಲ & ಅವರ ಕಾರ್ಯನಿರ್ವಾಹಕ ಮಂಡಳಿಗೆ ನೀಡಲಾಯಿತು.
- ಈ ಕಾಯ್ದೆಯಲ್ಲಿ ಲೋಕಸೇವಾ ಆಯೋಗದ ಸ್ಥಾಪನೆಗೆ ಅವಕಾಶ ನೀಡಲಾಯಿತು. ಆದ್ದರಿಂದ ನಾಗರೀಕ ಸೇವೆಗಳಿಗೆ ಸೂಕ್ತ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳಲು 1926ರಲ್ಲಿ ಕೇಂದ್ರ ಲೋಕಸೇವಾ ಆಯೋಗವನ್ನು ಸ್ಥಾಪಿಸಲಾಯಿತು.

GNANADHARE IAS KAS ACADEMY

- ಲಂಡನ್ನಿನಲ್ಲಿ ಭಾರತೀಯರಿಗಾಗಿ ಹೈಕಮೀಷನರ್ ಎಂಬ ಹೊಸ ಹುದ್ದೆಯನ್ನು ಸೃಷ್ಟಿಸಲಾಯಿತು. ಈ ಹಿಂದೆ ಭಾರತದ ಕಾರ್ಯದರ್ಶಿ ನಿರ್ವಹಿಸುತ್ತಿದ್ದ ಕೆಲವು ಕಾರ್ಯಗಳನ್ನು ಹೈಕಮೀಷನರ್‌ಗೆ ವರ್ಗಾಯಿಸಲಾಯಿತು.

## ಸೈಮನ್ ಆಯೋಗ :

1919ರ ಕಾಯ್ದೆಯ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವರದಿ ನೀಡಲು & ಅಗತ್ಯವೆನಿಸಿದರೆ ಸುಧಾರಣೆಗಳನ್ನು ಶಿಫಾರಸು ಮಾಡಲು 1927ರಲ್ಲಿ ಸೈಮನ್ ಆಯೋಗವನ್ನು ನೇಮಿಸಲಾಯಿತು.




### ಸೈಮನ್ ಆಯೋಗವು ಈ ಕೆಳಗಿನ ಶಿಫಾರಸುಗಳನ್ನು ಮಾಡಿತು :

- ಪ್ರಾಂತೀಯ ಆಡಳಿತದ ಸಂಪೂರ್ಣ ನಿಯಂತ್ರಣವನ್ನು ಮಂತ್ರಿಗಳಿಗೆ ನೀಡಬೇಕು & ಮಂತ್ರಿಗಳು ಶಾಸಕಾಂಗಕ್ಕೆ ಹೊಣೆಯಾಗಿರಬೇಕು.
- ದ್ವಿ–ಸದನ ಪದ್ಧತಿ ವಿಫಲವಾಗಿರುವುದರಿಂದ ಅದನ್ನು ರದ್ದುಪಡಿಸಬೇಕು.
- ಭಾರತ ಸಂವಿಧಾನಕ್ಕೆ ಸಂಬಂಧಿಸಿದ ವಿಷಯವನ್ನು ದುಂಡು ಮೇಜಿನ ಪರಿಷತ್ತಿನಲ್ಲಿ ಚರ್ಚಿಸಬೇಕು.

## ದುಂಡು ಮೇಜಿನ ಪರಿಷತ್ತುಗಳು :

- ಭಾರತಕ್ಕೆ ಒಂದು ಹೊಸ ಸಂವಿಧಾನ ರಚಿಸಬೇಕು.
- ಭಾರತವು ಒಕ್ಕೂಟ ಸ್ವರೂಪದ ಸರ್ಕಾರ ರಚಿಸಬೇಕು
- ಸರ್ಕಾರವು ಶಾಸಕಾಂಗಕ್ಕೆ ಹೊಣೆಯಾಗಿರಬೇಕು.
- ತಮ್ಮ ಆಂತರಿಕ ವಿಷಯಗಳಲ್ಲಿ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಬೇಕು.

GNANADHARE IAS KAS ACADEMY

# ಭಾರತ ಸರ್ಕಾರ ಕಾಯ್ದೆ :

ಭಾರತೀಯರ ಅಸಂತೃಪ್ತಿಯನ್ನು ಕಡಿಮೆ ಮಾಡುವ ಉದ್ದೇಶದಿಂದ ಬ್ರಿಟಿಷ್ ಸರ್ಕಾರವು ಭಾರತ ಸರ್ಕಾರ ಕಾಯ್ದೆ–1935ನ್ನು ಜಾರಿಗೆ ತಂದಿತು. ಈ ಕಾಯ್ದೆಯನ್ನು ಭಾರತ ಸಂವಿಧಾನದ ನೀಲಿ ನಕಾಶೆ ಎಂದು ಕರೆಯಲಾಗುತ್ತದೆ.

## ಭಾರತ ಸರ್ಕಾರ ಕಾಯ್ದೆಯ ಪ್ರಮುಖ ಲಕ್ಷಣಗಳು :

- ಈ ಕಾಯ್ದೆಯು ಪ್ರಾಂತ್ಯಗಳು & ದೇಶಿಯ ಸಂಸ್ಥಾನಗಳಿಂದ ಕೂಡಿದ ಒಕ್ಕೂಟ ವ್ಯವಸ್ಥೆಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟಿತ್ತು.
- ಒಕ್ಕೂಟ ಪಟ್ಟಿ, ಪ್ರಾಂತೀಯ ಪಟ್ಟಿ & ಸಮವರ್ತಿ ಪಟ್ಟಿ ಎಂಬ ಮೂರು ಪಟ್ಟಿಗಳ ಮೂಲಕ ಕೇಂದ್ರ & ಘಟಕಗಳ ನಡುವೆ ಅಧಿಕಾರವನ್ನು ವಿಭಜಿಸಲಾಯಿತು.
- ಭಾರತದಲ್ಲಿ ಪ್ರಥಮ ಬಾರಿಗೆ ದೆಹಲಿಯಲ್ಲಿ ಒಕ್ಕೂಟ ನ್ಯಾಯಾಲಯವನ್ನು ಸ್ಥಾಪಿಸಲಾಯಿತು.
- ದೇಶದ ಹಣಕಾಸು & ಪತ್ತನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ನ್ನು ಸ್ಥಾಪಿಸಲಾಯಿತು.
- ಒಕ್ಕೂಟ ಲೋಕಸೇವಾ ಆಯೋಗದ ಸ್ಥಾಪನೆಗಲ್ಲದೆ, ಪ್ರಾಂತೀಯ ಲೊಕಸೇವಾ ಆಯೋಗ ಹಾಗೂ ಜಂಟಿ ಲೋಕಸೇವಾ ಆಯೋಗಗಳ ಸ್ಥಾಪನೆಗೂ ಅವಕಾಶ ನೀಡಲಾಯಿತು.

GNANADHARE IAS KAS ACADEMY

# 1942– ಕ್ರಿಪ್ಸ್ ಆಯೋಗ :

ವಿನ್‌ಸ್ಟನ್ ಚರ್ಚಿಲ್‌ರವರ ನೇತೃತ್ವದ ಬ್ರಿಟಿಷ್ ಸರ್ಕಾರ ಭಾರತದ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಮಾರ್ಚ್ 22, 1942ರಂದು ಬ್ರಿಟಿಷ್ ಕ್ಯಾಬಿನೆಟ್ ಸದಸ್ಯರಾಗಿದ್ದ ಸರ್ ಸ್ಟ್ಯಾಫೋರ್ಡ್ ಕ್ರಿಪ್ಸ್‌ರವರ ನೇತೃತ್ವದಲ್ಲಿ ಒಂದು ನಿಯೋಗವನ್ನು ಭಾರತಕ್ಕೆ ಕಳುಹಿಸಿತು.

ಈ ನಿಯೋಗವು ಭಾರತೀಯ ಮುಖಂಡರ ಮುಂದೆ ಕೆಲವು ಸಲಹೆಗಳನ್ನು ಪ್ರಸ್ತಾಪಿಸಿತು. ಈ ಸಲಹೆಗಳನ್ನು ಕ್ರಿಪ್ಸ್ ಪ್ರಸ್ತಾವನೆ ಎಂದು ಕರೆಯುತ್ತಾರೆ.

- ಭಾರತದಲ್ಲಿ ಒಂದು ಡೊಮಿನಿಯನ್ ರಾಜ್ಯ ಸ್ಥಾಪಿಸುವುದು
- ಹೊಸ ಸಂವಿಧಾನದ ರಚನೆಯ ಹೊಣೆಯನ್ನು ಸಂಪೂರ್ಣವಾಗಿ ಭಾರತೀಯರಿಗೆ ವಹಿಸತಕ್ಕದ್ದು.
- ಎರಡನೇ ಮಹಾಯುದ್ಧ ನಿಂತ ತಕ್ಷಣ ಭಾರತಕ್ಕೆ ಒಂದು ಹೊಸ ಸಂವಿಧಾನವನ್ನು ರಚಿಸಲು ಚುನಾಯಿತ ಸಭೆಯ ಸ್ಥಾಪನೆ.
- ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸಲು ಭಾರತದ ರಾಜ್ಯಗಳಿಗೆ ಅವಕಾಶ ನೀಡುವುದು.
- ಸಂವಿಧಾನ ರಚನಾ ಸಭೆಗೆ ದೇಶಿಯ ಸಂಸ್ಥಾನಗಳ ಪ್ರತಿನಿಧಿಯನ್ನು ಅಲ್ಲಿನ ಜನಸಂಖ್ಯೆ ಆಧಾರದ ಮೇಲೆ ಚುನಾಯಿಸಿ ಕಳುಹಿಸುವುದು.
- ಸಂವಿಧಾನ ರಚನಾ ಸಭೆಗೆ ಬ್ರಿಟಿಷ್ ಪ್ರಾಂತ್ಯಗಳ ಲೆಜಿಸ್ಲೇಟಿವ್ ಅಸೆಂಬ್ಲಿಯ ಸದಸ್ಯರು ಅಲ್ಲಿನ ಜನಸಂಖ್ಯಾ ಆಧಾರದ ಮೇಲೆ ಆಯ್ಕೆಯಾಗುವುದು.
- ಭಾರತದ ರಕ್ಷಣೆಯ ಹೊಣೆಗಾರಿಕೆ & ನಿರ್ದೇಶನಗಳನ್ನು ಹೊಸ ಸಂವಿಧಾನ ರಚನೆಯಾಗುವವರೆಗೂ ಬ್ರಿಟಿಷ್ ಸಾರ್ವಭೌಮ ಸರ್ಕಾರವೇ ನಿಯಂತ್ರಿಸತಕ್ಕದ್ದು.

# ವೇವಲ್ ಯೋಜನೆ – 1945 :

ಯುದ್ಧ ಮುಗಿದ ಕೂಡಲೇ ಬ್ರಿಟಿಷ್ ಸರ್ಕಾರ ಭಾರತಿಯರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವ & ರಾಷ್ಟ್ರೀಯ ಸರ್ಕಾರ ರಚಿಸುವ ಭರವಸೆ ಕೊಟ್ಟರೆ ಮಾತ್ರ ಭಾರತೀಯರು ಯುದ್ಧದಲ್ಲಿ ಭಾಗವಹಿಸುವುದಾಗಿ ಗಾಂಧೀಜಿ ಲಾರ್ಡ್ ವೇವಲ್‌ರವರಿಗೆ ಪತ್ರ ಬರೆದರು. ಈ ಹಿನ್ನೆಲೆಯಲ್ಲಿ ಲಾರ್ಡ್‌ವೇವಲ್‌ರವರು ಒಂದು ಯೋಜನೆಯನ್ನು ರೂಪಿಸಿದರು.

## ಈ ಯೋಜನೆಯ ಮುಖ್ಯ ಅಂಶಗಳೆಂದರೆ :

- ವೈಸರಾಯ್ ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಹಿಂದು-ಮುಸ್ಲಿಂ ಇಬ್ಬರಿಗೂ ಕಾರ್ಯಕಾರಿ ಸಮಿತಿಯಲ್ಲಿ ಸಮಾನ ಪ್ರಾತಿನಿಧ್ಯ ನೀಡುವುದು. ಗವರ್ನರ್ ಜನರಲ್ & ಮುಖ್ಯ ದಂಡನಾಯಕರು ಭಾರತದ ರಕ್ಷಣೆಯ ಹೊಣೆಯನ್ನು ನಿಭಾಯಿಸತಕ್ಕದು. ಗವರ್ನರ್ ಜನರಲ್ & ಮುಖ್ಯ ದಂಡನಾಯಕನನ್ನು ಹೊರತುಪಡಿಸಿ ಉಳಿದ ಎಲ್ಲ ಕಾರ್ಯಕಾರಿ ಸಮಿತಿಯ ಸದಸ್ಯರು ಭಾರತೀಯರೆ ಆಗಿರತಕ್ಕದ್ದು.
- 1935ರ ಭಾರತ ಸರ್ಕಾರ ಕಾಯ್ದೆಯ ಚೌಕಟ್ಟಿನಲ್ಲಿ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸತಕ್ಕದ್ದು.
- ಬ್ರಿಟಿಷರ ವಾಣಿಜ್ಯ & ಇತರ ಹಿತಾಸಕ್ತಿಗಳನ್ನು ನೋಡಿಕೊಳ್ಳಲು ಹೈಕಮೀಶನರ್‌ಗಳನ್ನು ನೇಮಿಸತಕ್ಕದ್ದು.
- ಗಡಿ ಪ್ರಾಂತ್ಯಗಳು & ಬುಡಕಟ್ಟು ವಿಷಯಗಳನ್ನು ಬಿಟ್ಟು ಉಳಿದೆಲ್ಲ ವಿಷಯಗಳನ್ನು ಭಾರತೀಯ ಸದಸ್ಯರಿಗೆ ವಹಿಸಿಕೊಡತಕ್ಕದ್ದು.

GNANADHARE IAS KAS ACADEMY

# ಕ್ಯಾಬಿನೆಟ್ ಮಿಷನ್ :




ಅಂದಿನ ಬ್ರಿಟನ್ನಿನ ಕ್ಲೆಮೆಂಟ್ ಅಟ್ಲೆ ಭಾರತಕ್ಕೆ ಬ್ರಿಟಿಷ್ ಮಂತ್ರಿಮಂಡಲದ ಸದಸ್ಯರ ನಿಯೋಗವನ್ನು ಕಳುಹಿಸಿದನು. ಲಾರ್ಡ್ ಪೆಥಿಕ್ ಲಾರೆನ್ಸ್, ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ & ಎ.ವಿ. ಅಲೆಕ್ಸಾಂಡರ್ ಈ ಮೂರು ಮಂದಿ ಮಂತ್ರಿ ಮಂಡಲದ ಸದಸ್ಯರು ಈ ನಿಯೋಗದಲ್ಲಿದ್ದರು. ಈ ನಿಯೋಗವು ಮಾರ್ಚ್ 24, 1946ರಂದು ಭಾರತಕ್ಕೆ ಆಗಮಿಸಿತು. ಕ್ಯಾಬಿನೆಟ್ ನಿಯೋಗವು ಮೇ, 16 1946ರಂದು ತನ್ನ ಯೋಜನೆಯನ್ನು ಪ್ರಕಟಿಸಿತು, ಕ್ಯಾಬಿನೆಟ್ ನಿಯೋಗವು ಈ ಕೆಳಗಿನ ಶಿಫಾರಸುಗಳನ್ನು ಮಾಡಿತು.

ಹೊಸ ಸಂವಿಧಾನ ರಚನೆಯಾಗುವವರೆಗೆ ಆಡಳಿತ ನೋಡಿಕೊಳ್ಳಲು ಒಂದು ಮದ್ಯಂತರ ಸರ್ಕಾರವನ್ನು / ತಾತ್ಕಾಲಿಕ ಸರ್ಕಾರವನ್ನು ರಚಿಸಬೇಕು. ಈ ಸರ್ಕಾರವನ್ನು ಐವರು ಮುಸ್ಲಿಂ ಲೀಗ್ ಸದಸ್ಯರು, ಆರು ಮಂದಿ ಕಾಂಗ್ರೆಸ್ ಸದಸ್ಯರು, ಒಬ್ಬ ಸಿಖ್, ಒಬ್ಬ ಪಾರ್ಸಿ & ಒಬ್ಬ ಭಾರತೀಯ ಕ್ರಿಶ್ಚಿಯನ್ ಹೀಗೆ ಒಟ್ಟು 14 ಮಂದಿ ಸದಸ್ಯರಿರಬೇಕು. ಎಲ್ಲ ಖಾತೆಗಳ ಭಾರತೀಯರ ನಿಯಂತ್ರಣದಲ್ಲಿದ್ದು, ಬ್ರಿಟಿಷ್ ಸರ್ಕಾರ ಮಧ್ಯಂತರ ಸರ್ಕಾರದ ಎಲ್ಲ ಕಾರ್ಯಗಳನ್ನು ಸಂಪೂರ್ಣ ಸಹಕಾರ ನೀಡಬೇಕು.

# ತಾತ್ಕಾಲಿಕ ಸರ್ಕಾರ :

ಭಾರತದಲ್ಲಿ ತಾತ್ಕಾಲಿಕ ಸರ್ಕಾರವು ಸೆಪ್ಟಂಬರ್ 2, 1946ರಿಂದ ಆಗಸ್ಟ್ 15, 1947ರವರೆಗೆ ಅಸ್ತಿತ್ವದಲ್ಲಿತ್ತು. ತಾತ್ಕಾಲಿಕ ಸರ್ಕಾರವು ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯದೆಡೆಗೆ ಕೊಂಡೊಯ್ಯುವ ಉದ್ದೇಶ ಹೊಂದಿತ್ತು. ಹೊಸದಾಗಿ ಚುನಾಯಿಸಲ್ಪಟ್ಟ ಸಂವಿಧಾನ ರಚನಾ ಸಭೆಯಿಂದ ತಾತ್ಕಾಲಿಕ ಸರ್ಕಾರವನ್ನು ರಚಿಸಲಾಯಿತು. ವೈಸರಾಯ್‌ರವರ ಕಾರ್ಯಕಾರಿ ಮಂಡಳಿಯು ತಾತ್ಕಾಲಿಕ ಸರ್ಕಾರದ ಕಾರ್ಯಾಂಗವಾಗಿತ್ತು. ವೈಸರಾಯ್‌ರವರು ತಾತ್ಕಾಲಿಕ ಸರ್ಕಾರದ ಮುಖ್ಯಸ್ಥರಾಗಿದ್ದರೂ, ವೈಸರಾಯ್‌ರವರ ಕಾರ್ಯಕಾರಿ ಮಂಡಳಿಯು ಮಂತ್ರಿ ಮಂಡಲವಾಗಿ ಪರಿವರ್ತನೆ ಹೊಂದಿತು. ಪ್ರಧಾನ ಮಂತ್ರಿಯ ಅಧಿಕಾರಗಳನ್ನು ಕಾರ್ಯಕಾರಿ ಮಂಡಳಿಯ ಉಪಾಧ್ಯಕ್ಷರಿಗೆ ನೀಡಲಾಯಿತು. ಪಂಡಿತ್ ಜವಹಾರ್ ಲಾಲ್ ನೆಹರೂರವರನ್ನು ಕಾರ್ಯಕಾರಿ ಮಂಡಳಿಯ ಉಪಾದ್ಯಕ್ಷನ್ನಾಗಿ ನೇಮಕ ಮಾಡಲಾಯಿತು. ಕಾರ್ಯಕಾರಿ ಮಂಡಳಿಯ ವೈಸರಾಯ್ ಕೇವಲ ಅಲಂಕಾರ ಮೂರ್ತಿ (ನಾಮ ಮಾತ್ರ ಕಾರ್ಯಾಂಗ)ಯ ಸ್ಥಾನವನ್ನು ಹೊಂದಿದ್ದು, ಬ್ರಿಟಿಷ್ ಭಾರತ ಸೇನೆಯ ವರಿಷ್ಟನಾಗಿದ್ದನು, ವೈಸರಾಯ್ ಒಬ್ಬರನ್ನು ಹೊರತುಪಡಿಸಿ ಕಾರ್ಯಕಾರಿ ಮಂಡಳಿಯ ಎಲ್ಲಾ ಸದಸ್ಯರು ಭಾರತೀಯರಾಗಿದ್ದರು. ತಾತ್ಕಾಲಿಕ ಸರ್ಕಾರದ ಸದಸ್ಯರು ವೈಸರಾಯ್‌ರವರ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದರು. ವೈಸರಾಯ್‌ರವರು ಕಾರ್ಯಕಾರಿ ಮಂಡಳೀಯ ಅಧ್ಯಕ್ಷರಾಗಿದ್ದರು. ಜವಹಾರ್ ಲಾಲ್ ನೆಹರೂರವರನ್ನು ಕಾರ್ಯಕಾರಿ ಮಂಡಳಿಯ ಉಪಾದ್ಯಕ್ಷನ್ನಾಗಿ ನೇಮಕ ಮಾಡಲಾಯಿತು.

## ಕಾರ್ಯಕಾರಿ ಮಂಡಳಿಯ ಸದಸ್ಯರು & ಅವರು ನಿರ್ವಹಿಸುತ್ತಿದ್ದ ಖಾತಗಳ ವಿವರಗಳು :

| ಕ್ರ. ಸಂ | ಸದಸ್ಯರು | ಖಾತೆಗಳು |
|---|---|---|
| 1 | ಜವಹಾರ್ ಲಾಲ್ ನೆಹರೂ | ವಿದೇಶಾಂಗ ವ್ಯವಹಾರಗಳು & ಕಾಮನ್‌ವೆಲ್ತ್ ಸಂಬಂಧಗಳು |
| 2 | ಸರ್ಧಾರ್ ವಲ್ಲಭ ಬಾಯಿ ಪಟೇಲ್ | ಗೃಹ, ಮಾಹಿತಿ & ಪ್ರಚಾರ |
| 3 | ಡಾ// ಬಾಬು ರಾಜೇಂದ್ರ ಪ್ರಸಾದ್ | ಆಹಾರ ಕೃಷಿ |
| 4 | ಜಾನ್ ಮೆಥಾಯ್ | ಕೈಗಾರಿಕೆ & ಪೂರೈಕೆ |
| 5 | ಬಾನು ಜಗಜೀವನರಾಂ | ಕಾರ್ಮಿಕ |
| 6 | ಸರ್ದಾರ್ ಬಲದೇವ್ ಸಿಂಗ್ | ರಕ್ಷಣೆ |

| | | |
|---|---|---|
| 7 | ಸಿ. ಹೆಚ್. ಬಾಬ | ಗಣಿ & ಶಕ್ತಿ |
| 8 | ಲಿಯಾಖತ್ ಅಲಿಖಾನ್ | ಹಣಕಾಸು |
| 9 | ಅಬ್ದುಲ್ ರಾಖ್ ನಿಶರ್ | ಅಂಚೆ & ವಿಮಾನಯಾನ |
| 10 | ಅಸಫ್ ಆಲಿ | ರೈಲ್ವೆ & ಸಾರಿಗೆ |
| 11 | ಸಿ. ರಾಜಗೊಪಾಲಚಾರಿ | ಶಿಕ್ಷಣ & ಕಲೆ |
| 12 | ಚೌಂದ್ರಿಗರ್ | ವಾಣಿಜ್ಯ |
| 13 | ಘಜ್ನಫರ್ ಆಲಿಖಾನ್ | ಆರೋಗ್ಯ |
| 14 | ಜೋಗಿಂದರ್ನಾಥ್ ಮಂಡಲ್ | ಕಾನೂನು |

# ಭಾರತ ಸ್ವಾತಂತ್ರ್ಯ ಕಾಯ್ದೆ – 1947 :

ಜೂನ್ 30, 1948ರ ಹೊತ್ತಿಗೆ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಕೊನೆಗೊಂಡು, ನಂತರ ಅಧಿಕಾರವನ್ನು ಭಾರತೀಯರಿಗೆ ಹಸ್ತಾಂತರಿಸಲಾಯಿತು ಎಂಬುದಾಗಿ 1947ನೇ ಫೆಬ್ರವರಿ 20ರಂದು ಬ್ರಿಟನ್ನಿನ ಪ್ರಧಾನಿ ಕ್ಲೆಮೆಂಟ್ ಅಟ್ಲೆ ಘೋಷಿಸಿದನು.




## ಭಾರತ ಸ್ವಾತಂತ್ರ್ಯ ಕಾಯ್ದೆಯ ಲಕ್ಷಣಗಳು :

- ಭಾರತವನ್ನು ವಿಭಜಿಸಿ ಭಾರತ– ಪಾಕಿಸ್ತಾನ ಎಂಬ ಎರಡು ಸ್ವತಂತ್ರ ಡೋಮಿನಿಯನ್‌ಗಳನ್ನು ರಚಿಸಲು ಅವಕಾಶ ನೀಡಲಾಯಿತು. ಈ ಎರಡೂ ರಾಜ್ಯಗಳಿಗೆ ಬ್ರಿಟಿಷ್ ಕಾಮನ್‌ವೆಲ್ತ್‌ನಿಂದ ಹೊರನಡೆಯುವ ಹಕ್ಕನ್ನು ನೀಡಲಾಯಿತು.
- ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ಕೊನೆಗಾಣಿಸಲಾಯಿತು & 1947 ಆಗಸ್ಟ್ 15ರಂದು ಭಾರತ ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವೆಂದು ಘೋಷಿಸಲಾಯಿತು.
- 1947 ಆಗಸ್ಟ್ 15ರಿಂದ ಭಾರತದ ದೇಶೀಯ ಸಂಸ್ಥೆಗಳ ಮೇಲಿನ ಬ್ರಿಟಿಷ್ ಸಾರ್ವಭೌಮತ್ವಕ್ಕೆ ಮಂಗಳ ಹಾಡಲಾಯಿತು.
- ಭಾರತದ ಗವರ್ನರ್ ಜನರಲ್ & ಪ್ರಾಂತೀಯ ಗವರ್ನರ್‌ಗಳನ್ನು ರಾಜ್ಯಗಳ ಸಂವಿಧಾನಾತ್ಮಕ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಎಲ್ಲ ವಿಷಯಗಳಲ್ಲಿಯೂ ಸಂಬಂಧಪಟ್ಟ ಮಂತ್ರಿಮಂಡಲದ

GNANADHARE IAS KAS ACADEMY

ಸಲಹೆಯ ಮೇರೆಗೆ ಗವರ್ನರ್ ಜನರಲ್ & ಪ್ರಾಂತೀಯ ಗವರ್ನರ್‌ಗಳು ಕಾರ್ಯನಿರ್ವಹಿಸುವಂತೆ ಮಾಡಲಾಯಿತು.

# ಸಂವಿಧಾನದ ರಚನೆ :

ಸಂವಿಧಾನ ರಚನ ಸಭೆಯ ಸ್ಥಾಪನೆಯ ಬೇಡಿಕೆಯನ್ನು 1940 ಆಗಸ್ಟ್ ಕೊಡುಗೆಯಲ್ಲಿ ಬ್ರಿಟಿಷ್ ಸರ್ಕಾರ ಒಪ್ಪಿಕೊಂಡಿತು. ಎಂ.ಎನ್ ರಾಯ್‌ರವರು 1934ರಲ್ಲಿ ಪ್ರಥಮ ಬಾರಿಗೆ ಭಾರತಕ್ಕೆ ಸಂವಿಧಾನ ರಚನಾ ಸಮಿತಿಯ ಅಗತ್ಯವನ್ನ ಪ್ರತಿಪಾದಿಸಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ 1935ರಲ್ಲಿ ಪ್ರಥಮವಾಗಿ ಸಂವಿಧಾನ ರಚನಾ ಸಮಿತಿಯ ರಚನೆಗೆ ಅಧಿಕೃತ ಬೇಡಿಕೆಯನ್ನು ಮುಂದಿಟ್ಟಿತು.

## ಸಂವಿಧಾನ ರಚನಾ ಸಭೆಯ ರಚನೆ :

ಕ್ಯಾಬಿನೆಟ್ ನಿಯೊಗದ ಶಿಫಾರಸ್ಸಿನ ಅನುಗುಣವಾಗಿ ಸಂವಿಧಾನ ರಚನಾ ಸಮಿತಿಯ ಸ್ಥಾಪನೆಗೆ 1946ರ ಜುಲೈ ತಿಂಗಳಲ್ಲಿ ಚುನಾವಣೆಗಳನ್ನು ಸ್ಥಾಪಿಸಲಾಯಿತು.

- ಸಂವಿಧಾನ ರಚನಾ ಸಭೆಯ ಕೆಲವು ಸದಸ್ಯರು ಪ್ರಾಂತೀಯ ಶಾಸನ ಸಭೆಗಳ ಸದಸ್ಯರಿಂದ ಚುನಾಯಿತರಾದರು. ಇನ್ನು ಕೆಲವು ಸದಸ್ಯರು ದೇಶಿಯ ಸಂಸ್ಥಾನಗಳಿಂದ ಚುನಾಯಿತರಾದರು ಒಟ್ಟು ಸಂವಿಧಾನ ರಚನಾ ಸಭೆ 389 ಸದಸ್ಯರುಗಳನ್ನು ಹೊಂದಿದೆ

| | |
|---|---|
| ಬ್ರಿಟಿಷ್ ಭಾರತದಿಂದ ಚುನಾಯಿತರು | 296 |
| ದೇಶೀಯ ಸಂಸ್ಥಾನಗಳಿಂದ ನಾಮಕರಣ | 93 |
| ಒಟ್ಟು | 389 |

- ಭಾರತಕ್ಕೆ ಸಂವಿಧಾನ ರಚನಾ ಸಮಿತಿಯ ಅವಶ್ಯಕತೆ ಇದೆ ಎಂದು ಎಂದು ಮೊದಲು ಪ್ರತಿಪಾದಿಸಿದರು – ಬಿ.ಎನ್ ರಾಯ್
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯ ನಿರ್ವಾಹಕ ಸಮಿತಿ, ಸಂವಿಧಾನ ರಚನಾ ಸಭೆಯ ಸ್ಥಾಪನೆಗೆ ಕರೆ ನೀಡಿದ ವರ್ಷ – 1939.
- ಸಂವಿಧಾನ ರಚನಾ ಸಭೆ ಸ್ಥಾಪನೆಗೆ ಶಿಫಾರಸ್ಸು ಮಾಡಿದ ನಿಯೋಗ – ಕ್ಯಾಬಿನೆಟ್ ನಿಯೋಗ (1946).

- ಸಂವಿಧಾನ ರಚನಾ ಸಭೆಗೆ ಸದಸ್ಯರನ್ನು ಆಯ್ಕೆ ಮಾಡುವ ವಿಧಾನ – ಪರೋಕ್ಷ ಚುನಾವಣೆ.

- **ಸಂವಿಧಾನ ರಚನಾ ಸಮಿತಿಯಲ್ಲಿದ್ದ ವಿವಿಧ ವರ್ಗಗಳ ಪ್ರತಿನಿಧಿಗಳು**

| ವರ್ಗಗಳು | ಪ್ರತಿನಿಧಿಗಳು |
|---|---|
| ಆಂಗ್ಲೋ ಇಂಡಿಯನ್ | ಫ್ರಾಂಕ್ ಆಂಥೋನಿ |
| ಕಮ್ಯೂನಿಸ್ಟ್ | ಸೋಮನಾಥ ಲಹರಿ |
| ಪರಿಶಿಷ್ಟ ಜಾತಿ | ಡಾ. ಬಿ.ಆರ್. ಅಂಬೇಡ್ಕರ್ |
| ಗೋರ್ಖ ಸಮುದಾಯ | ಹರಿಬಹದ್ದೂರ್ ಬುರಾ |
| ಕ್ರೈಸ್ತವರ್ಗ | ಹೆಚ್. ಸಿ. ಮುಖರ್ಜಿ, ರಾಜಕುಮಾರಿ ಅಮೃತ್‌ಕೌರ್ ಜಾನ್ ಮಥಾಯ್ |
| ಪಾರ್ಸಿ ವರ್ಗ | ಹೆಚ್.ಸಿ ಮೋದಿ, ಮಿನೋಸಾನಿ, ಆರ್.ಹೆಚ್. ಸಿದ್ವಾ |
| ಮುಸ್ಲಿಂ ವರ್ಗ | ಎಂ. ಇಸ್ಮಾಯಿಲ್ ಖಾನ್, ಬೇಗಂ ಎ. ರಾಸುಲ್ |
| ಸಿಖ್ಖರ ವರ್ಗ | ಬಲದೇವಸಿಂಗ್, ಹುಕುಮ್ ಸಿಂಗ್, ಉಜ್ವಲಸಿಂಗ್. |

- **ಸಂವಿಧಾನ ರಚನಾ ಸಭೆಯಲ್ಲಿ ಪಕ್ಷವಾರು ಪ್ರತಿನಿಧಿಗಳು.**

| | |
|---|---|
| ಕಾಂಗ್ರೆಸ್ | 211 |
| ಮುಸ್ಲಿಂ ಲೀಗ್ | 73 |

- **ಸಂವಿಧಾನ ರಚನಾ ಸಭೆಗೆ ಆಯ್ಕೆಯಾದ ಮಹಿಳೆಯರ ಸಂಖ್ಯೆ – 15**

| | ಮುಖ್ಯಸ್ಥರು |
|---|---|
| 1 | ವಿಜಯಲಕ್ಷ್ಮಿ ಪಂಡಿತ |
| 2 | ಶ್ರೀಮತಿ ಹನ್ಸ್‌ಮೆನನ್ |
| 3 | ಸುಚೇತ ಕೃಪಾಲಿನಿ |
| 4 | ರಾಜಕುಮಾರಿ ಅಮೃತ್ ಕೌರ್ |
| 5 | ಸರೋಜಿನಿ ನಾಯ್ಡು |

- **ಸಂವಿಧಾನ ರಚನಾ ಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಕನ್ನಡಿಗರು**

GNANADHARE IAS KAS ACADEMY

- ಸಂವಿಧಾನ ರಚನಾ ಸಭೆಗೆ ಮೈಸೂರನ್ನು ಪ್ರತಿನಿಧಿಸಿದ ಪ್ರಮುಖರು – ಕೆ.ಚೆಂಗಲ್ ರಾಯ್ ರೆಡ್ಡಿ, ಟಿ. ಸಿದ್ದಲಿಂಗಯ್ಯ, ಎಚ್.ಆರ್. ಗುರುದೇವ ರೆಡ್ಡಿ, ಎಸ್.ವಿ. ಕೃಷ್ಣಮೂರ್ತಿ ರಾವ್, ಕೆ. ಹನುಮಂತಯ್ಯ, ಎಚ್. ಸಿದ್ದವೀರಪ್ಪ, ಟಿ. ಚೆನ್ನಯ್ಯ.
- ಸಂವಿಧಾನ ರಚನ ಸಭೆಯಲ್ಲಿ ಕೂರ್ಗ್ ಪ್ರಾಂತ್ಯವನ್ನು ಪ್ರತಿನಿಧಿಸಿದವರು – ಕೆ.ಎಂ. ಪುನ್ನಚ್ಚ
- ಸಂವಿಧಾನ ರಚನಾ ಸಭೆಯಲಲಿ ಬಾಂಬೆ ಪ್ರಾಂತ್ಯವನ್ನು ಪ್ರತಿನಿಧಿಸಿದವರು – ಎಸ್.ನಿಜಲಿಂಗಪ್ಪ, ಆರ್. ದಿವಾಕರ್

- ಸಂವಿಧಾನ ರಚನಾಸಭೆಯ ಮೊದಲ ಅಧಿವೇಶನ ನಡೆದ ವರ್ಷ – ಡಿಸೆಂಬರ್ 9, 1946
- ಸಂವಿಧಾನ ರಚನಾ ಸಮಿತಿ ಹಂಗಾಮಿ ಅಧ್ಯಕ್ಷರಾದವರು – ಸಚ್ಚಿದಾನಂದ ಸಿನ್ಹಾ.
- ಡಿಸೆಂಬರ್ 11, 1946ರಂದು ಸಂವಿಧಾನ ರಚನಾ ಸಮಿತಿಯ ಶಾಶ್ವತ ಅಧ್ಯಕ್ಷರಾದವರು – ಡಾ. ರಾಜೇಂದ್ರ ಪ್ರಸಾದ್
- ಸಂವಿಧಾನ ರಚನಾ ಸಮಿತಿಯ ಸಂವಿಧಾನಿಕ ಸಲಹೆಗಾರರನ್ನಾಗಿ ಬಿ.ಎನ್ ರಾಯ್ ಅವರನ್ನು ನೇಮಿಸಲಾಯಿತು
- ಡಿಸೆಂಬರ್ 13 1946ರಂದು ಪಂಡಿತ್ ಜವಹಾರ್ ಲಾಲ್ ನೆಹರೂ ರವರು ಮಂಡಿಸಿದರು ಈ ನಿರ್ಣಯವನ್ನು ಜನವರಿ 22 1947ರಂದು ಆಳವಡಿಸಲಾಯಿತು.
- ಸಂವಿಧಾನ ರಚನೆಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಲು 22 ಸಮಿತಿಗಳನ್ನು ರಚಿಸಲಾಯಿತು ಅದರಲ್ಲಿ ಪ್ರಮುಖವಾದ ಸಮಿತಿ ಕರಡು ಸಮಿತಿ.
- ಆಗಸ್ಟ್ 29 1947ರಂದು ಡಾ// ಬಿ.ಆರ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಕರಡು ಸಮಿತಿ ರಚಿಸಲಾಯಿತು.
- ಡಾ// ಬಿ.ಆರ್ ಅಂಬೇಡ್ಕರ್‌ರವರನ್ನು ಸಂವಿಧಾನ ಶಿಲ್ಪಿ ಎಂದು ಕರೆಯುತ್ತಾರೆ.

# ಸಂವಿಧಾನ ಕರಡು ಸಮಿತಿ :



**7 ಜನ ಸದಸ್ಯರನ್ನು ಒಳಗೊಂಡ ಸಮಿತಿ**

| | | |
|---|---|---|
| 1 | ಡಾ. ಬಿ.ಆರ್. ಅಂಬೇಡ್ಕರ್ | ಅಧ್ಯಕ್ಷರು |
| 2 | ಎನ್. ಗೋಪಾಲಸ್ವಾಮಿ | ಅಧ್ಯಕ್ಷರು |
| 3 | ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ | ಅಧ್ಯಕ್ಷರು |
| 4 | ಕೆ.ಎಂ. ಮುನ್ಷಿ | ಅಧ್ಯಕ್ಷರು |
| 5 | ಮಹಮದ್ ಸಾದುಲ್ಲಾ | ಅಧ್ಯಕ್ಷರು |
| 6 | ಬಿ.ಎಲ್. ಮಿತ್ತರ್ (ಇವರ ನಿಧನದ ಬಳಿಕ ಎನ್. ಮಾಧವರಾವ್ ನೇಮಕ) | ಅಧ್ಯಕ್ಷರು |
| 7 | ಡಿ.ಪಿ, ಖೇತಾನ್ (ಇವರ ನಿಧನದ ಬಳಿಕ ಟಿ.ಟಿ. ಕೃಷ್ಣರಾವ್ ನೇಮಕ) | ಅಧ್ಯಕ್ಷರು |

- ಸಂವಿಧಾನ ಸಲಹೆಗಾರ ಮತ್ತು ಕರಡು ಸಂವಿಧಾನವನ್ನು ಸಿದ್ದಪಡಿಸುವ ಜವಾಬ್ದಾರಿ ಹೊಂದಿದ್ದವರು – ಬಿ.ಎನ್. ರಾವ್
- ಪೂರ್ಣ ಪರಿಶೀಲನೆಯ ನಂತರ ಕರಡು ಸಂವಿಧಾನ ಸಿದ್ಧವಾದದ್ದು – ಫೆಬ್ರವರಿ 1948
- "ಸಂವಿಧಾನ ಶಿಲ್ಪಿ" ಮತ್ತು "ಪಿತಾಮಹ" ಹಾಗೂ "ಆಧುನಿಕ ಮನು" ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು ಕರೆದವರು – ಎಂ.ವಿ. ಪೈಲಿ

- ಜವಾಹರ್ ಲಾಲ್ ನೆಹರೂ, ಸರ್ದಾರ್ ವಲ್ಲಭಬಾಯಿ ಪಟೇಲ್, ಆಜಾದ್ ಮತ್ತು ರಾಜೇಂದ್ರ ಪ್ರಸಾದ್‌ರವರನ್ನು ಈ ಕೆಳಗಿನ ಹೆಸರುಗಳಿಂದ ಕರೆಯುತ್ತಿದ್ದರು – ಸಂವಿಧಾನದ ಶಿಲ್ಪಿಗಳು ಮತ್ತು ಕಾಂಗ್ರೆಸ್ ಆಲಿಗಾರ್ಕಿ
- ನೆಹರು ಮತ್ತು ವಲ್ಲಭಬಾಯಿ ಪಟೇಲ್‌ರನ್ನು ಸಂವಿಧಾನ ಪಿತಾಮಹರು ಹಾಗೂ ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು "ಸಂವಿಧಾನದ ಮಾತೆ" ಎಂದು ಕರೆದವರು.
- ಸಂವಿಧಾನ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಲು ಸಂವಿಧಾನ ರಚನಾ ಸಭೆಯಲ್ಲಿ ನೇಮಕಗೊಂಡ ಸಮಿತಿಗಳು.

- **ಸಲಹಾ ಸಮಿತಿಯ ಉಪಸಮಿತಿಗಳು :**

| | |
|---|---|
| 1 | ಮೂಲಭೂತ ಹಕ್ಕುಗಳ ಸಮಿತಿ |
| 2 | ಅಲ್ಪ ಸಂಖ್ಯಾತರ ಸಮಿತಿ |
| 3 | ಈಶಾನ್ಯ ಗಡಿ ಸಮಿತಿ |
| 4 | ವಾಯುವ್ಯ ಗಡಿ ಸಮಿತಿ |
| 5 | Committee on excluded & partially excluded Areas. |

- **ಸಂವಿಧಾನ ರಚನೆಯ ಅಂತಿಮ ರೂಪ ಚಿತ್ರಣ**

| | |
|---|---|
| ಕರೆದ ಅಧಿವೇಶನಗಳು | 12 |
| ತೆಗೆದುಕೊಂಡ ಅವಧಿ | 2 ವರ್ಷ 11 ತಿಂಗಳು 18 ದಿವಸಗಳು |
| ಚರ್ಚಿಸಲ್ಪಟ್ಟ ತಿದ್ದುಪಡಿಗಳು | 2473 |
| ಕರಡು ಸಂವಿಧಾನ ಪರಿಶೀಲನೆ | 114 ದಿನಗಳು |
| ಖರ್ಚು ಮಾಡಿದ ಹಣ | 6.4 ಕೋಟಿ. |

- ಸಂವಿಧಾನ ರಚನಾ ಸಭೆಯು ನವೆಂಬರ್ 26 1949 ಅಂಗೀಕರಿಸಿತು. ಆದರೆ ಸಂವಿಧಾನವು ಜನವರಿ 26 1950 ರಂದು ಜಾರಿಗೆ ಬಂದಿತು. ಜನವರಿ 26 ಗಣರಾಜ್ಯ ದಿನವನ್ನಾಗಿ ಆಚರಿಸುತ್ತಿದ್ದೇವೆ.



GNANADHARE IAS KAS ACADEMY

- **ನವೆಂಬರ್ 26ನ್ನು ಸಂವಿಧಾನ ದಿನವನ್ನಾಗಿ ಆಚರಿಸುತ್ತಿದ್ದೇವೆ.**

ನಮ್ಮ ಸಂವಿಧಾನವನ್ನು ಅನುಷ್ಠಾನಗೊಳಿಸಲು ಜನವರಿ 26ನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಏಕೆಂದರೆ ಜನವರಿ 26 ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿದ ದಿನವಾಗಿದೆ. 1930 ರ ಜನವರಿ 26ರನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ ಪೂರ್ಣ ಸ್ವರಾಜ್ ದಿನವನ್ನಾಗಿ ಆಚರಿಸಿತು. ಅದರ ನೆನಪಿಗಾಗಿ ಭಾರತ ಸಂವಿಧಾನವನ್ನು ಅನುಷ್ಠಾಗೊಳಿಸಲು ಜನವರಿ 26ನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆದರೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಡಿಸೆಂಬರ್ 31, 1929ರಲ್ಲಿ ನಡೆದ ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯವನ್ನು ಪಡೆಯುವ ಗೊತ್ತುವಳಿಯನ್ನು ಅಂಗೀಕರಿಸಿತ್ತು.




- ಸಂವಿಧಾನ ಕರಡು ಪ್ರತಿಯ ಅಂಗೀಕಾರ – ನವೆಂಬರ್ 26, 1949
- ಸಂವಿಧಾನ ಜಾರಿಗೆ ಬರಲು ಅನ್ವಯವಾಗುವ ವಿಧಿ – 394ನೇ ವಿಧಿ
- ಸಂವಿಧಾನದ 394ನೇ ವಿಧಿ ಅನ್ವಯ 5, 6, 7, 8, 9, 60, 324, 367, 379, 380, 388, 391, 392, 392, 393 & 394ನೇ ವಿಧಿಗಳು ಸೇರಿದಂತೆ ಒಟ್ಟು 16 ವಿಧಿಗಳು ಮೊದಲು ಜಾರಿಗೆ ಬಂದದ್ದು.
- ರಾಷ್ಟ್ರ ಬಾವುಟವನ್ನು ಅಂಗೀಕರಿಸಿದ ವರ್ಷ – ಜುಲೈ 22, 1947
- ಭಾರತದ ಸಂವಿಧಾನ, ಭಾರತೀಯರಿಂದಲೇ ರಚಿತವಾದದ್ದರಿಂದ ಇನ್ನೂ ಜಾರಿಯಲ್ಲಿದೆ" ಎಂದವರು – ಗ್ರಾನವಿಲ್ಲೆ ಆಸ್ಟಿನ್.
- ಸಂವಿಧಾನ ಜಾರಿಗೆ ಬಂದದ್ದು – ಜನವರಿ 26, 1950
- ಸಂವಿಧಾನ ರಚನಾ ಸಭೆಯು ಒಟ್ಟು 12 ಬಾರಿ ಸಭೆ ಸೇರಿತು

GNANADHARE IAS KAS AC

## ಸಂವಿಧಾನ ಸಭೆ ಸಮಿತಿಗಳು (Committees of Constituent Assembly):

| | ಸಮಿತಿಗಳು | ಅಧ್ಯಕ್ಷರು |
|---|---|---|
| 1 | ಕೇಂದ್ರ ಅಧಿಕಾರಿಗಳ ಸಮಿತಿ (The Union Powers Committee) | ಜವಾಹರ್ ಲಾಲ್ ನೆಹರೂ |
| 2 | Minorities & Fundamental Right Committee (ಅಲ್ಪಸಂಖ್ಯಾತರ & ಮೂಲಭೂತ ಹಕ್ಕುಗಳ ಸಮಿತಿ) | ಸರ್ದಾರ್ ವಲ್ಲಭಬಾಯಿ ಪಟೇಲ್ |
| 3 | Provincial Constitution Committee (ಪ್ರಾಂತೀಯ ಸಂವಿಧಾನ ಸಮಿತಿ) | ಸರ್ದಾರ್ ವಲ್ಲಭಬಾಯಿ ಪಟೇಲ್ |
| 4 | Union Constitution Committee (ಕೇಂದ್ರ ಸಂವಿಧಾನ ಸಮಿತಿ) | ಜವಾಹರ್ ಲಾಲ್ ನೆಹರೂ |
| 5 | Steering Committee (ಸ್ಟೀರಿಂಗ್ ಸಮಿತಿ) | ಕೆ.ಎಂ. ಮುನ್ಷಿ |
| 6 | Drafting Committee (ಕರಡು ಸಮಿತಿ) | ಡಾ. ಬಿ.ಆರ್. ಅಂಬೇಡ್ಕರ್ |
| 7 | Flag Committee (ಬಾವುಟ ಸಮಿತಿ) | ಜೆ.ಬಿ. ಕೃಪಲಾನಿ |
| 8 | Rules of Procedure Committee (ಕಾರ್ಯ ವಿಧಾನ ನಿಯಮಗಳ ಸಮಿತಿ) | ಡಾ. ರಾಜೇಂದ್ರ ಪ್ರಸಾದ್ |

GNANADHARE IAS KAS ACADEMY

# ಸಂವಿಧಾನದ ಲಕ್ಷಣಗಳು :

## ಭಾರತದ ಸಂವಿಧಾನ ಪ್ರಮುಖ ಲಕ್ಷಣಗಳು :

1. ಲಿಖಿತ & ಬೃಹತ್ ಸಂವಿಧಾನ
2. ಮೂಲಭೂತ ಹಕ್ಕುಗಳು
3. ಮೂಲಭೂತ ಕರ್ತವ್ಯಗಳು
4. ರಾಜ್ಯ ನಿರ್ದೇಶಕ ತತ್ವಗಳು
5. ವಿವಿಧ ಸಂವಿಧಾನಗಳ ಎರವಲು
6. ತುರ್ತುಪರಿಸ್ಥಿತಿ
7. ಸಂಸದಿಯ ಪದ್ದತಿ
8. ಅಖಿಲ ಭಾರತ ಸೇವೆಗಳು
9. ಸಾರ್ವಜನಿಕ ವಯಸ್ಕ ಮತದಾನ ಪದ್ದತಿ
10. ಭಾಗಶಃ ನಮ್ಯ & ಅನಮ್ಯ
11. ಏಕ ಪೌರತ್ವ
12. ಸ್ವಾತಂತ್ರ್ಯ & ಏಕೀಕೃತ ನ್ಯಾಯಾಂಗ ವ್ಯವಸ್ಥೆ
13. ಪಂಚಾಯತ್ ರಾಜ್ ವ್ಯವಸ್ಥೆ & ನಗರ ಪಾಲಿಕೆ ವ್ಯವಸ್ಥೆ
14. ನ್ಯಾಯಿಕ ವಿಮರ್ಶೆ
15. ಗಣರಾಜ್ಯ
16. ಪ್ರಜಾಪ್ರಭುತ್ವ
17. ಸಂಯುಕ್ತ ಪದ್ದತಿ

GNANADHARE IAS KAS ACADEMY

## ಭಾರತದ ಸಂವಿಧಾನದ ಪ್ರಮುಖ ಲಕ್ಷಣಗಳ ವಿವರಣೆ :

### 1. ಲಿಖಿತ & ಬೃಹತ್ ಸಂವಿಧಾನ :

ಭಾರತ ಸಂವಿಧಾನವು ಲಿಖಿತ ರೂಪ & ಬೃಹತ್ ಗಾತ್ರದ ಸಂವಿಧಾನ ಹೊಂದಿದೆ. 1950 ಜನವರಿ 26ರಂದು ಜಾರಿಗೆ ಬಂದ ಸಂವಿಧಾನವು ಕೆಳಗಿನ ಅಂಶಗಳನ್ನು ಹೊಂದಿದೆ.

| | |
|---|---|
| **ಮೂಲ ಪರಿವಿಡಿ** | 22 ಭಾಗಗಳು<br>8 ಅನುಸೂಚಿಗಳು<br>395 ವಿಧಿಗಳು |
| **ಪ್ರಸ್ತುತ ಪರಿವಿಡಿ** | 22 ಭಾಗಗಳು<br>12 ಅನುಸೂಚಿಗಳು<br>450 ವಿಧಿಗಳು |

### 2. ಮೂಲಭೂತ ಹಕ್ಕುಗಳು :

ಮೂಲಭೂತ ಹಕ್ಕುಗಳನ್ನು ಸಂವಿಧಾನದ 3ನೇ ಭಾಗದಲ್ಲಿ 12–35ನೇ ವಿಧಿಗಳವರೆಗೆ ಕಾಣುತ್ತೇವೆ. ಮೂಲಭೂತ ಹಕ್ಕುಗಳನ್ನು ಅಮೆರಿಕಾದಿಂದ ಎರವಲು ಪಡೆಯಲಾಗಿದೆ. ಭಾರತ ಸಂವಿಧಾನವು ತನ್ನ ಪ್ರಜೆಗಳಿಗೆ ಸ್ವತಂತ್ರ್ಯ ಹಕ್ಕು, ಸಮಾನತೆಯ ಹಕ್ಕು, ಶೋಷಣೆಯ ವಿರುದ್ಧ ಹಕ್ಕು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಕ್ಕು, ಧಾರ್ಮಿಕ ಹಕ್ಕು, ಸಂವಿಧಾನದ ಪರಿಹಾರತ್ಮಕ ಹಕ್ಕು ಈ ರೀತಿ 6 ಮೂಲಭೂತ ಹಕ್ಕುಗಳನ್ನು ನೀಡಿದೆ.

ಸರ್ವೋಚ್ಚ ನ್ಯಾಯಾಲಯವನ್ನು ಮೂಲಭೂತ ಹಕ್ಕುಗಳ ರಕ್ಷಕ ಎಂದು ಕರೆಯುತ್ತೇವೆ.

### 3. ಮೂಲಭೂತ ಕರ್ತವ್ಯಗಳು :

ಸಂವಿಧಾನದ 42ನೇ ತಿದ್ದುಪಡಿಯ ಮೂಲಕ 1976ರಲ್ಲಿ ಮೂಲಭೂತ ಕರ್ತವ್ಯಗಳನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ. ಸಂವಿಧಾನದ 4ಎ ಭಾಗ ಮತ್ತು 51ಎ– 51ಕೆ ವಿಧಿಗಳವರೆಗೆ ಮೂಲಭೂತ ಕರ್ತವ್ಯಗಳನ್ನು ಹೊಂದಿದೆ. ಮೊದಲು 10 ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು.

86ನೇ ತಿದ್ದುಪಡಿ ಮೂಲಕ 2002ರಲ್ಲಿ ಮತ್ತೊಂದು ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. (ಪ್ರಸ್ತುತ 11 ಮೂಲಭೂತ ಕರ್ತವ್ಯಗಳಿವೆ).

**4. ರಾಜ್ಯ ನಿರ್ದೇಶಕ ತತ್ವಗಳು :** ಸಂವಿಧಾನದ 4ನೇ ಭಾಗದಲ್ಲಿ ನಮೂದಿಸ್ಪಟ್ಟಿರುವ 36–51ನೇ ವಿಧಿಗಳು ರಾಜ್ಯ ನಿರ್ದೇಶಕ ತತ್ವಗಳ ಬಗ್ಗೆ ತಿಳಿಸುತ್ತದೆ. ಇವುಗಳ ಕಾರ್ಯಾಚರಣೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸದಂತೆ ಮಾಡಲಾಗಿದೆ.



GNANADHARE IAS KAS ACADEMY

ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಐರ್ಲೆಂಡ್ ದೇಶದಿಂದ ಎರವಲು ಪಡೆಯಲಾಗಿದೆ.

ಡಾ. ಬಿ.ಆರ್. ಅಂಬೇಡ್ಕರ್ : ರಾಜ್ಯ ನೀತಿ ನಿರ್ದೇಶಕ ತತ್ವಗಳು ಸರ್ಕಾರ ಹೇಗೆ ಕಾರ್ಯ ಪ್ರವೃತ್ತವಾಗಬೇಕು ಎಂಬುವುದಕ್ಕೆ ಮಾರ್ಗಸೂಚಿಗಳಾಗಿದೆ ಎಂದು ಅಭಿಪ್ರಾಯ ಸೂಚಿಸಿದರು.

## 5.ಸಂವಿಧಾನದ ಮೂಲಗಳು/ಎರವಲುಗಳು (Sources of our Consstitution)

| ವಿಷಯಗಳು | ದೇಶಗಳು |
| --- | --- |
| • ಮೂಲಭೂತ ಹಕ್ಕುಗಳು<br>ನ್ಯಾಯಿಕ ಸ್ವಾತಂತ್ರ್ಯ<br>• ಉಪರಾಷ್ಟ್ರಪತಿಯ ಕಾರ್ಯಗಳು<br>• ಸರ್ವೋಚ್ಚ ನ್ಯಾಯಲಯದ ಸ್ವರೂಪ & ಕಾರ್ಯಗಳು<br>• ಪ್ರಸ್ತಾವನೆ<br>• ಸರ್ವೋಚ್ಚ ನ್ಯಾಯಲಯ & ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಪದಚ್ಯುತಿ | ಅಮೆರಿಕಾ ಸಂವಿಧಾನ |
| • ರಾಜ್ಯ ನಿರ್ದೇಶಕರ ತತ್ವಗಳು<br>• ರಾಜ್ಯಸಭೆಯ ಸದಸ್ಯರುಗಳ ನಾಮಕರಣ ಪ್ರಕ್ರಿಯೆ<br>• ರಾಷ್ಟ್ರಪತಿ ಚುನಾವಣೆ | ಐರ್‌ಲ್ಯಾಂಡ್ ಸಂವಿಧಾನ |
| • ಸಂಸದೀಯ ಪದ್ಧತಿ<br>• ಕಾನೂನಿನ ಅಧಿಪತ್ಯ<br>• ಲೊಕಸಭಾ ಸದಸ್ಯರ ಜವಾಬ್ದಾರಿಗಳು & ಮಂತ್ರಿಮಂಡಲ ಜವಾಬ್ದಾರಿಗಳು<br>• ಸಭಾಪತಿ ಸ್ಥಾನಮಾನ<br>• ಕಾನೂನು ಮಾಡುವ ವಿಧಾನಗಳು<br>• ಏಕಪೌರತ್ವ ಪದ್ಧತಿ | ಬ್ರಿಟಿಷ್ ಸಂವಿಧಾನ |
| • ಒಕ್ಕೂಟ ವ್ಯವಸ್ಥೆ ಮಾದರಿ<br>• ಶೇಷಾಧಿಕಾರಿಗಳನ್ನು ಕೇಂದ್ರ ಸರ್ಕಾರಕ್ಕೆ ನೀಡುವುದು | ಕೆನಡಾ ಸಂವಿಧಾನ |

GNANADHARE IAS KAS ACADEMY

| | |
|---|---|
| • ರಾಜ್ಯಪಾಲರ ನೇಮಕ | |
| • ಸಮವರ್ತಿಪಟ್ಟಿ<br>• ಸಂಸತ್ತಿನ ಜಂಟಿ ಅಧಿವೇಶನ<br>• ವ್ಯಾಪಾರ ಸ್ವಾತಂತ್ರ್ಯ | ಆಸ್ಟ್ರೇಲಿಯಾ |
| • ಸಂವಿಧಾನದ ತಿದ್ದುಪಡಿ ಕಾನೂನು<br>• ರಾಜ್ಯಸಭಾ ಸದಸ್ಯರ ಚುನಾವಣೆ | ದಕ್ಷಿಣ ಆಫ್ರಿಕ |
| • ತುರ್ತು ಪರಿಸ್ಥಿತಿಉ ಉಪಬಂಧುಗಳು | ಜರ್ಮನಿ |
| • ಮೂಲಭೂತ ಕರ್ತವ್ಯಗಳು | ಯು.ಎಸ್.ಎಸ್.ಆರ್ (ರಷ್ಯಾ) |
| • ಗಣರಾಜ್ಯ<br>• ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ | ಫ್ರೆಂಚ್ |
| • ಒಕ್ಕೂಟ ಪದ್ದತಿ<br>• ಸಾರ್ವಜನಿಕ ಸೇವಾ ಆಯೋಗಗಳು<br>• ತುರ್ತು ಪರಿಸ್ಥಿತಿಯ ಪೂರ್ವ ಸಿದ್ದತೆ & ಆಡಳಿತ ವಿವರಗಳು | 1935ರ ಭಾರತ ಸರ್ಕಾರದ ಕಾನೂನು |
| • ಕಾನೂನು ರಚನೆ ಕಾರ್ಯ ವಿಧಾನಗಳು | ಜಪಾನ್ |

## 6. ತುರ್ತು ಪರಿಸ್ಥಿಗಳು :

ಸಂವಿಧಾನದ 18ನೇ ಭಾಗದಲ್ಲಿರುವ 352ರಿಂದ 360ನೇ ವಿಧಿಗಳು ತುರ್ತು ಪರಿಸ್ಥಿತಿಗಳ ಬಗ್ಗೆ ತಿಳಿಸುತ್ತವೆ. ರಾಷ್ಟ್ರಾಧ್ಯಕ್ಷರು ವಿದೇಶೀ ಆಕ್ರಮಣ, ಸಶಸ್ತ್ರ ಬಂಡಾಯ, ಯುದ್ಧ & ಸಂವಿಧಾನಾತ್ಮಕ ಯಂತ್ರವು ಕುಸಿದು ಬಿದ್ದ ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸುವರು.

| | | |
|---|---|---|
| 1 | 352ನೇ ವಿಧಿ | ರಾಷ್ಟ್ರ ತುರ್ತು ಪರಿಸ್ಥಿತಿ |
| 2 | 356ನೇ ವಿಧಿ | ರಾಜ್ಯ ತುರ್ತು ಪರಿಸ್ಥಿತಿ |
| 3 | 360ನೇ ವಿಧಿ | ಹಣಕಾಸು ತುರ್ತು ಪರಿಸ್ಥಿತಿ |



GNANADHARE IAS KAS ACADEMY

## 7. ಸಂಸದೀಯ ಪದ್ಧತಿ :

ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತೀಯರು ಕ್ಯಾಬಿನೆಟ್ ಪದ್ಧತಿಯ ಬಗ್ಗೆ ಅನುಭವ ಪಡೆದಿರುವುದರಿಂದಲೂ & ಇದು ಹೊಂದಿಕೊಳ್ಳುವ ವ್ಯವಸ್ಥೆಯಾಗಿರುವುದರಿಂದಲೂ ಅಳವಡಿಸಿಕೊಳ್ಳಲಾಯಿತು. ಸಂಸದೀಯ ಪದ್ಧತಿಯು ಶಾಸಕಾಂಗ & ಕಾರ್ಯಾಂಗದ ನಡುವೆ ಸಹಕಾರ & ಸಮನ್ವಯ ತತ್ವವನ್ನು ಆಧರಿಸಿದೆ. ಕೇಂದ್ರ & ರಾಜ್ಯಗಳಲ್ಲಿ ಕಾರ್ಯಾಂಗವೂ ಶಾಸಕಾಂಗಕ್ಕೆ ಹೊಣೆಯಾಗಿರುತ್ತದೆ. 1973ರಲ್ಲಿ ಸರ್ವೋಚ್ಚ ಪದ್ಧತಿ ಸಂವಿಧಾನದ ಮೂಲ ಲಕ್ಷಣ ಎಂದು ಪರಿಗಣಿಸಿದೆ.

## 8. ಸಂಯುಕ್ತ ಪದ್ಧತಿ :

1935 ಭಾರತ ಸರ್ಕಾರದ ಕಾಯ್ದೆಯನ್ವಯ ಆಳವಡಿಸಿಕೊಳ್ಳಲಾಯಿತು. ಸಂವಿಧಾನದ ಅನುಸೂಚಿಯಲ್ಲಿ ನಮೂದಿಸಲ್ಪಟ್ಟ ಮಾದರಿಯಲ್ಲಿ ಕೇಂದ್ರ & ರಾಜ್ಯ ಸರ್ಕಾರಗಳ ನಡುವೆ ಅಧಿಕಾರ ಹಂಚಲ್ಪಟ್ಟಿದೆ. ಸಂವಿಧಾನದಲ್ಲಿ ಸಂಯುಕ್ತ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದ್ದರೂ ಕೇಂದ್ರ ಸರ್ಕಾರ ಹೆಚ್ಚು ಅಧಿಕಾರವನ್ನು ಪಡೆದಿದೆ. ಸಂವಿಧಾನದ 1ನೇ ವಿಧಿಯನ್ವಯ ಭಾರತ ರಾಜ್ಯಗಳ ಒಕ್ಕೂಟವಾಗಿದ್ದು, ಸಂಯುಕ್ತ ಪದ್ಧತಿಯ ಅಳವಡಿಕೆಗೆ ನಿದರ್ಶನವಾಗಿದೆ.

## 9. ಸಾರ್ವಜನಿಕ ವಯಸ್ಕ ಮತದಾನ ಪದ್ಧತಿ :

ಭಾರತದಲ್ಲಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಚಾಲ್ತಿಯಲ್ಲಿದೆ. ಸಂವಿಧಾನದ 15ನೇ ಭಾಗದಲ್ಲಿ ನಮೂದಿಸಲ್ಪಟ್ಟಿರುವ ಚುನಾವಣೆಗಳಿಗೆ ಸಂಬಂಧಿಸಿದಂತೆ ವಿಷಯ ವ್ಯಾಪ್ತಿಯಲ್ಲಿ ತಿಳಿಸಲಾಗಿದೆ. 1989ರಲ್ಲಿ 61ನೇ ತಿದ್ದುಪಡಿ ಮೂಲಕ ಮತದಾನದ ವಯಸ್ಸನ್ನು 21ರಿಂದ 18ಕ್ಕೆ ಇಳಿಸಲಾಯಿತು. ಜಾತಿ, ಮತ, ಲಿಂಗ, ಭಾಷೆ, ಸಾಮಾಜಿಕ ಸ್ಥಾನಮಾನ ಮುಂತಾದವುಗಳ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೇ 18 ವರ್ಷ ಮೇಲ್ಪಟ್ಟ ಎಲ್ಲಾ ಪ್ರಜೆಗಳಿಗೆ ಮತದಾನದ ಹಕ್ಕು ನೀಡಿದೆ.

## 10. ಭಾಗಶಃ ನಮ್ಯ & ಅನಮ್ಯ :

ಸಂವಿಧಾನವು ಕೆಲವು ವಿಷಯಗಳನ್ನು ಸಂಸತ್ತಿನ ಸರಳ ಬಹುಮತದ ಮೂಲಕ ತಿದ್ದುಪಡಿ ಮಾಡಬಹುದಾಗಿರುವುದರಿಂದ ಇದು ಭಾಗಶಃ ನಮ್ಯ ಸಂವಿಧಾನವಾಗಿದೆ. ಹಾಗೆಯೇ ಸಂವಿಧಾನವು ಕೆಲವು ವಿಷಯಗಳನ್ನು 368ನೇ ವಿಧಿಯನ್ವಯ, ಸಂಸತ್ತಿನ ವಿಶೇಷ ಬಹುಮತ & ರಾಜ್ಯ ಶಾಸಕಾಂಗಗಳ 1/2ದಷ್ಟು ಅನುಮೋದನೆ ಮೂಲಕ ತಿದ್ದುಪಡಿ ಮಾಡಲು ಅವಕಾಶವಿದೆ. ಆದ್ದರಿಂದ ಇದು ಭಾಗಶಃ ಅನಮ್ಯ ಸಂವಿಧಾನವಾಗಿದೆ.

## 11. ಏಕಪೌರತ್ವ :

ಭಾರತದಲ್ಲಿ ಏಕಪೌರತ್ವಕ್ಕೆ ಅವಕಾಶ ಮಾಡಿಕೊಡಲಾಗಿದೆ. ಪೌರತ್ವವನ್ನು ಬ್ರಿಟನ್ ಸರ್ಕಾರದಿಂದ ಎರವಲು ಪಡೆಯಲಾಗಿದೆ. ಸಂವಿಧಾನದ ಎರಡನೇ ಭಾಗದಲ್ಲಿ ನಮೂದಿಸಲ್ಪಟ್ಟಿರುವ 5ರಿಂದ 11ನೇ ವಿಧಿಗಳು ಪೌರತ್ವದ ಬಗ್ಗೆ ತಿಳಿಸುತ್ತವೆ. ಡಿಸೆಂಬರ್ 30, 1955ರಲ್ಲಿ ಪೌರತ್ವ ಕಾಯ್ದೆಯನ್ನು ಜಾರಿಗೆ ತರಲಾಯಿತು.

## 12. ಸ್ವತಂತ್ರ್ಯ & ಏಕೀಕೃತ ನ್ಯಾಯಾಂಗ ವ್ಯವಸ್ಥೆ:

ಭಾರತ ಸಂವಿಧಾನವು ಸ್ವತಂತ್ರ & ಏಕೀಕೃತ ನ್ಯಾಯಾಂಗ ವ್ಯವಸ್ಥೆ ಹೊಂದಿದೆ.

ಸ್ವತಂತ್ರ್ಯ ನ್ಯಾಯಾಲಯ

↓

ಉಚ್ಚ ನ್ಯಾಯಾಲಯ

↓

ಅಧೀನ ನ್ಯಾಯಾಲಯ

↓ ↓

ಸಿವಿಲ್ ನ್ಯಾಯಾಲಯ ಕ್ರಿಮಿನಲ್ ನ್ಯಾಯಾಲಯ

ಸರ್ವೋಚ್ಚ ನ್ಯಾಯಾಲಯವು ಫೆಡರಲ್ ನ್ಯಾಯಾಂಗವಾಗಿದ್ದು, ನಾಗರಿಕ ಮೂಲಭೂತ ಹಕ್ಕುಗಳ ಸಂರಕ್ಷಕವಾಗಿದೆ. ಅಲ್ಲದೇ ಸಂವಿಧಾನದ ಮೂಲರಚನೆಗೆ ದಕ್ಕೆ ಬಾರದಂತೆ ರಕ್ಷಿಸುವ ಕೆಲಸವನ್ನು ಮಾಡುತ್ತದೆ. ಸಂವಿಧಾನವು ಸರ್ವೋಚ್ಚ ನ್ಯಾಯಾಲಯವು ಸ್ವತಂತ್ರ್ಯವಾಗಿ ಕಾರ್ಯ ನಿರ್ವಹಿಸಲು ಹಲವಾರು ಅಧಿಕಾರವನ್ನು ನೀಡಿದೆ.

GNANADHARE IAS KAS ACADEMY

## 13. ಪಂಚಾಯತ್ ರಾಜ್ ಸಂಸ್ಥೆ & ನಗರ ಪಾಲಿಕೆ ಸಂಸ್ಥೆ :

ಸಂವಿಧಾನದ 73ನೇ ತಿದ್ದುಪಡಿಯನ್ವಯ, ಹೊಸ ಪಂಚಾಯತ್‌ರಾಜ್ ಪದ್ಧತಿಯನ್ನು 24/4/1993ರಿಂದ ಜಾರಿಗೆ ತರಲಾಯಿತು. ಸಂವಿಧಾನದ 9ನೇ ಭಾಗ & 11ನೇ ಅನುಸೂಚಿ ಸೇರಿಸಿ, 243ರಿಂದ 243(ಓ)ವರೆಗೆ 16 ಹೊಸ ವಿಧಿಗಳನ್ನು ಸೇರಿಸಲಾಯಿತು.

ಸಂವಿಧಾನದ 74ನೇ ತಿದ್ದಿಪಡಿಯನ್ವಯ, ನಗರಪಾಲಿಕೆ ಕಾಯ್ದೆಯನ್ನು 1993ರಿಂದ ಜಾರಿಗೆ ತರಲಾಯಿತು. ಸಂವಿಧಾನದ 9ಎ ಭಾಗ & 12ನೇ ಅನುಸೂಚಿ ಸೇರಿಸಿ, 243(ಪಿ) ಯಿಂದ 243(ಝಡ್‌ಜಿ) ವರೆಗೆ ಹೊಸ ವಿಧಿಗಳನ್ನು ಸೇರಿಸಲಾಯಿತು.

## 14. ನ್ಯಾಯಿಕ ವಿಮರ್ಶೆ :

ನ್ಯಾಯಿಕ ವಿಮರ್ಶೆಯು ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ. ನ್ಯಾಯಾಂಗವು ಶಾಸಕಾಂಗ & ಕಾರ್ಯಾಂಗವು ಅಧಿಕಾರ ಹಾಗೂ ಕಾರ್ಯಗಳ ಸಂವಿಧಾನ ಬದ್ಧತೆಯನ್ನು ವಿಮರ್ಶಿಸುವ ಅಧಿಕಾರ ಹೊಂದಿದೆ.

## 15. ಗಣರಾಜ್ಯ :

ಭಾರತದ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡುವುದರಿಂದ ಭಾರತ ಒಂದು ಗಣರಾಜ್ಯವಾಗಿದೆ.

## 16. ಪ್ರಜಾಪ್ರಭುತ್ವ :

ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಭಾರತ ದೇಶದಲ್ಲಿ ಸಾರ್ವತ್ರಿಕ ವಯಸ್ಕರ ಮತದಾನದ ಮೂಲಕ ಚುನಾಯಿತರಾದ ಜನಪ್ರತಿನಿಧಿಗಳು ಪ್ರಜೆಗಳ ಪರವಾಗಿ ರಾಜ್ಯಾಡಳಿತದಲ್ಲಿ ಭಾಗವಹಿಸುತ್ತಾರೆ (326 ವಿಧಿ)

## 17. ಸಂಸಧಿಯ ಸರ್ಕಾರ ಪದ್ಧತಿ :

ಭಾರತ ಸಂವಿಧಾನವು ಕೇಂದ್ರ ಹಾಗೂ ರಾಜ್ಯಗಳಲ್ಲಿ ಸಂಸದೀಯ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಕೇಂದ್ರ ಹಾಗೂ ರಾಜ್ಯಗಳಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಹೊಣೆಯಾಗಿರುತ್ತದೆ. ಕಾರ್ಯಾಂಗವು ಶಾಸಕಾಂಗದ ವಿಶ್ವಾಸವನ್ನು ಹೊಂದಿರುವವರೆಗೆ ಮಾತ್ರ ಅಧಿಕಾರದಲ್ಲಿ ಮುಂದುವರೆಯುತ್ತದೆ. ಶಾಸಕಾಂಗದ ವಿಶ್ವಾಸವನ್ನು ಕಳೆದುಕೊಂಡ ತಕ್ಷಣ ಅಧಿಕಾರವನ್ನು ಕಳೆದುಕೊಳ್ಳುತ್ತದೆ.

# ಭಾರತದ ಸಂವಿಧಾನ

## ಪ್ರಸ್ತಾವನೆ

- ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ವ್ಯವಸ್ಥೆಗೊಳಿಸಲು & ಅದರ ಎಲ್ಲಾ ಪೌರರಿಗೆ
- ಸಾಮಾಜಿಕ, ಆರ್ಥಿಕ & ರಾಜಕೀಯ ನ್ಯಾಯ ;
- ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ & ಉಪಾಸನಾ ಸ್ವಾತಂತ್ರ್ಯ ;
- ಸ್ಥಾನಮಾನ & ಅವಕಾಶಗಳಲ್ಲಿ ಸಮಾನತೆ
- ಎಲ್ಲರಿಗೂ ದೊರೆಯುವಂತೆ ಮಾಡುವುದಕ್ಕೆ, ವ್ಯಕ್ತಿ ಗೌರವ, ರಾಷ್ಟ್ರದ ಏಕತೆ & ಸಮಗ್ರತೆಯನ್ನು ರಕ್ಷಿಸಿ, ಭ್ರಾತೃತ್ವ ಭಾವನೆಗಳನ್ನು ಎಲ್ಲೆಲ್ಲೂ ವೃದ್ಧಿಗೊಳಿಸುವುದಕ್ಕಾಗಿ ದೃಢ ಸಂಕಲ್ಪ ಮಾಡಿ
- ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ನವೆಂಬರ್ 26, 1949ರಂದು ಈ ಸಂವಿಧಾನವನ್ನು ಅಂಗೀಕರಿಸಿ, ಕಾನೂನು ರೂಪದಲ್ಲಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ.

- ಪ್ರಸ್ತಾವನೆ ಸಂವಿಧಾನದ ತಾತ್ವಿಕ ತಳಹದಿಯನ್ನು ಬಿಂಬಿಸುವ ಸಂವಿಧಾನದ ಆತ್ಮವೆನಿಸಿದೆ. ಇದು ಸಂವಿಧಾನದ ಮೂಲ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಪ್ರತಿಬಿಂಬಿಸುತ್ತವೆ. ಅಲ್ಲದೇ ದೇಶದ ಗುರಿ & ಭವಿಷ್ಯ ನಿರ್ಧರಿಸುವಂತಾಗಿರುತ್ತದೆ. ಆದ್ದರಿಂದಲೇ ಪ್ರಸ್ತಾವನೆಯನ್ನು "ಸಂವಿಧಾನದ ಮುನ್ನುಡಿ, ಕೈಗನ್ನಡಿ, ಜಾತಕ ಒಡವೆ" ಎನ್ನುವರು.
- ಭಾರತೀಯ ಪ್ರಜೆಗಳಾದ ನಾವು ಭಾರತವನ್ನು (ಸಸಜಪಗ) ಸಾರ್ವಭೌಮ, ಸಮಾಜವಾದ, ಜಾತ್ಯತೀತ, ಪ್ರಜಾಸತ್ತಾತ್ಮಕ, ಗಣಾರಾಜ್ಯವನ್ನಾಗಿಸಿ ಎಲ್ಲಾ ಪೌರರಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ.
- ಪ್ರಸ್ತಾವನೆಯನ್ನು ಸಂವಿಧಾನದ ಜಾತಕ, ಒಡವೆ, ಕೈಗನ್ನಡಿ ಎಂದು ಕರೆದವರು ಕೆ.ಎಂ. ಮುನ್ಷಿ
- ಪ್ರಸ್ತಾವನೆ ಸಂವಿಧಾನದ ಸತ್ಯ, ಸಂವಿಧಾನದ ಯೋಗ್ಯತೆಯನ್ನು ಅಳೆಯುವ ಅಳತೆಗೋಲು" ಎಂದವರು – ಠಾಕೂರ್‌ದಾಸ್ ಭಾರ್ಗವ

GNANADHARE IAS KAS ACADEMY

- ಭಾರತದ ಸಂವಿಧಾನದ ಅತಿಮುಖ್ಯ ಭಾಗವೆಂದರೆ, ಪ್ರಸ್ತಾವನೆ ಇದು ಸಂವಿಧಾನದ ಹೃದಯ ಭಾಗವಿದ್ದಂತೆ & ಸಂವಿಧಾನದ ಒಡವೆ & ಬಹು ವೈಭವದ, ಬಹು ಸೊಗಸಾದ ಗದ್ಯ ಕಾವ್ಯವಿದ್ದಂತೆ – ಪಂಡಿತ ಭಾರ್ಗವ
- **1960ರ ಬೆರು ಬಾರಿ ಪ್ರಕರಣದಲ್ಲಿ** – ಸುಪ್ರಿಂ ಕೋರ್ಟ್ ಪ್ರಸ್ತಾವನೆಯನ್ನು ಸಂವಿಧಾನದ ಭಾಗವೆಂದು ಪರಿಗಣಿಸಿಲ್ಲ, ಅದ್ದರಿಂದ ಪ್ರಸ್ತಾವನೆಯನ್ನು ತಿದ್ದುಪಡಿ ಮಾಡುವಂತಿಲ್ಲವೆಂದು ತೀರ್ಪು ನೀಡಿತ್ತು.
- 1973ರ ಕೇಶವಾನಂದ ಭಾರತಿ ಸ್ಟೇಟ್ ಆಫ್ ಕೇರಳಾ ಪ್ರಕರಣ – ಪ್ರಸ್ತಾವನೆಯು ಸಂವಿಧಾನದ ಒಂದು ಭಾಗ ಅದನ್ನು ತಿದ್ದುಪಡಿ ಮಾಡಬಹುದು ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿತ್ತು. ಈ ದಿಸೆಯಲ್ಲಿ ತಾನು ಬೆರು ಬಾರಿ ಒಕ್ಕೂಟ ಪ್ರಕರಣದಲ್ಲಿ ನೀಡಿದ ಅಭಿಪ್ರಾಯ ತಪ್ಪು ಎಂದು ನಿಲುವು ತಾಳಿತು. ಅಲ್ಲದೇ ಸರ್ವೋಚ್ಚ ನ್ಯಾಯಾಲಯವು ಪ್ರಸ್ತಾವನೆಯಲ್ಲಿ ಅಡಕವಾಗಿರುವ ಸಂವಿಧಾನದ ಮೂಲ ರಚನೆಗಳಿಗೆ ಧಕ್ಕೆಯಾಗದಂತೆ ತಿದ್ದುಪಡಿ ಮಾಡಬಹುದೆಂದು ತೀರ್ಪು ನೀಡಿತು.
- ಎಲ್ಐಸಿ ಆಫ್ ಇಂಡಿಯಾ ಪ್ರಕರಣ 1995 – ಸರ್ವೋಚ್ಚ ನ್ಯಾಯಾಲಯವು ಪ್ರಸ್ತಾವನೆಯು ಸಂವಿಧಾನದ ಒಂದು ಅವಿಭಾಜ್ಯ ಅಂಗವೆಂದು ತೀರ್ಪು ನೀಡಿತು.
- ಭಾರತದ ರಾಜಕೀಯ ಪದ್ದತಿಯ 4 ಆಧಾರ ಸ್ಥಂಭಗಳು
    1. ನ್ಯಾಯ
    2. ಸ್ವಾತಂತ್ರ್ಯತೆ
    3. ಸಮಾನತೆ
    4. ಭಾತೃತ್ವ
- ಪ್ರಸ್ತಾವನೆಗಳು ಸರ್ಕಾರವು ಹೇಗೆ ಕಾರ್ಯ ಪ್ರವೃತ್ತವಾಗಬೇಕು ಎಂಬುದರ ದಿಕ್ಸೂಚಿಗಳಾಗಿವೆ ಎಂದವರು – ಡಾ. ಬಿ.ಆರ್. ಅಂಬೇಡ್ಕರ್
- ಪ್ರಸ್ತವನೆಯನ್ನು 1976ರ 42 ತಿದ್ದುಪಡಿ ಕಾಯ್ದೆಯ ಮೂಲಕ ಇಲ್ಲಿಯವರೆಗೆ ಒಂದು ಬಾರಿ ಮಾತ್ರ ತಿದ್ದುಪಡಿ ಮಾಡಲಾಗಿದೆ. **ಈ ಕಾಯ್ದೆ ಮೂಲಕ ಸಮಾಜವಾದ, ಜಾತ್ಯತೀತ & ಸಮಗ್ರತೆ ಎಂಬ ಮೂರು ಪದಗಳನ್ನು ಪ್ರಸ್ತಾವನೆಗೆ ಸೇರ್ಪಡೆ ಮಾಡಲಾಗಿದೆ.**

GNANADHARE IAS KAS ACADEMY

## ಪ್ರಸ್ತಾವನೆ ಒಳಗೊಂಡಿರುವ ಸಂಕೇತ ಪದಗಳು

1. ಸಾರ್ವಭೌಮತ್ವ
2. ಸಮಾಜವಾದ
3. ಜಾತ್ಯತೀತ
4. ಪ್ರಜಾಸತ್ತಾತ್ಮಕ
5. ಗಣರಾಜ್ಯ
6. ನ್ಯಾಯ
7. ಸ್ವಾತಂತ್ರ್ಯ
8. ಸಮಾನತೆ
9. ಭ್ರಾತೃತ್ವ

# ಒಕ್ಕೂಟ ಮತ್ತು ಅದರ ಭೂ ಪ್ರದೇಶ (ಭಾಗ –1):

ಸಂವಿಧಾನದ ಮೊದಲನೇ ಭಾಗದಲ್ಲಿ 1–4ನೇ ವಿಧಿಯವರೆಗೂ ಒಕ್ಕೂಟ & ಭೂ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿವರಣೆ ಕಾಣುತ್ತವೆ.

**ಸಂವಿಧಾನದ 1ನೇ ವಿಧಿ** : ಭಾರತವನ್ನು ಒಂದು ರಾಜ್ಯಗಳ ಒಕ್ಕೂಟ ಎಂದು ವಿವರಿಸುತ್ತದೆ.

ಸಂವಿಧಾನದ 1ನೇ ವಿಧಿಯ ಪ್ರಕಾರ ಭಾರತದ ಒಕ್ಕೂಟವನ್ನು 3 ಭಾಗಗಳಾಗಿ ವರ್ಗೀಕರಿಸಬಹುದು.

1. ರಾಜ್ಯಗಳು
2. ಕೇಂದ್ರಾಡಳಿತ ಪ್ರದೇಶಗಳು
3. ಭಾರತ ಸರ್ಕಾರದಿಂದ ಯಾವುದೇ ಸಂದರ್ಭದಲ್ಲಿ ವಶಪಡಿಸಿಕೊಳ್ಳಬಹುದಾದ ಭೂ ಪ್ರದೇಶಗಳು

GNANADHARE IAS KAS ACADEMY

## ಭಾರತದ ಒಕ್ಕೂಟವು ಪ್ರಸ್ತುತ 29 ರಾಜ್ಯಗಳು 7 ಕೇಂದ್ರಾಡಳಿತ ಪ್ರದೇಶಗಳನ್ನು ಹೊಂದಿದೆ.




| ಕ್ರ.ಸಂ | ರಾಜ್ಯಗಳು | ರಾಜಧಾನಿಗಳು |
|---|---|---|
| 1 | ಉತ್ತರ ಪ್ರದೇಶ | ಲಕ್ನೋ |
| 2 | ಮಹಾರಾಷ್ಟ್ರ | ಮುಂಬೈ |
| 3 | ಆಂಧ್ರ ಪ್ರದೇಶ | ಅಮರಾವತಿ |
| 4 | ತಮಿಳುನಾಡು | ಚೆನ್ನೈ |
| 5 | ಬಿಹಾರ | ಪಾಟ್ನಾ |
| 6 | ಪಶ್ಚಿಮ ಬಂಗಾಳ | ಕೊಲ್ಕತ್ತಾ |
| 7 | ಕರ್ನಾಟಕ | ಬೆಂಗಳೂರು |
| 8 | ಮಧ್ಯ ಪ್ರದೇಶ | ಭೂಪಾಲ್ |
| 9 | ಗುಜರಾತ್ | ಗಾಂಧಿ ನಗರ |
| 10 | ಒರಿಸ್ಸಾ | ಭುವನೇಶ್ವರ |
| 11 | ರಾಜಸ್ತಾನ | ಜೈಪುರ |
| 12 | ಕೇರಳ | ತಿರುವನಂತ ಪುರ |
| 13 | ಪಂಜಾಬ್ | ಚಂಡೀಗಡ |
| 14 | ಅಸ್ಸಾಂ | ಡಿಸ್ಪೂರ್ |
| 15 | ಜಾರ್ಖಂಡ್ | ರಾಂಚಿ |
| 16 | ಹರಿಯಾಣ | ಚಂಡೀಗಡ |
| 17 | ಛತ್ತಿಸ್‌ಘಡ | ರಾಯ್‌ಪುರ್ |
| 18 | ಜಮ್ಮು & ಕಾಶ್ಮೀರ | ಶ್ರೀನಗರ |
| 19 | ಉತ್ತರಾಂಚಲ | ಡೆಹ್ರಡೂನ್ |
| 20 | ಹಿಮಾಚಲ ಪ್ರದೇಶ | ಶಿಮ್ಲಾ |
| 21 | ಅರುಣಾಚಲ ಪ್ರದೇಶ | ಇಟಾ ನಗರ |
| 22 | ಗೋವಾ | ಪಣಜಿ |
| 23 | ಮಣಿಪುರ | ಇಂಫಾಲ್ |
| 24 | ಮೇಘಾಲಯ | ಶಿಲ್ಲಾಂಗ್ |
| 25 | ಮಿಜೋರಾಂ | ಐಜ್ವಾಲ್ |
| 26 | ನಾಗಾಲ್ಯಾಂಡ್ | ಕೊಹಿಮಾ |
| 27 | ಸಿಕ್ಕಿಂ | ಗ್ಯಾಂಗ್‌ಟಾಕ್ |

| | | |
|---|---|---|
| 28 | ತ್ರಿಪುರ | ಅಗರ್‌ತಲ |
| 29 | ತೆಲಂಗಾಣ | ಹೈದರಾಬಾದ್ |

| | **ಕೇಂದ್ರಾಡಳಿತ ಪ್ರದೇಶಗಳು** | |
|---|---|---|
| 1 | ದೆಹಲಿ | ದೆಹಲಿ |
| 2 | ಪಾಂಡಿಚೇರಿ | ಪಾಂಡಿಚೇರಿ |
| 3 | ಅಂಡಮಾನ್ & ನಿಕೋಬಾರ್ | ಪೋರ್ಟ್‌ಬ್ಲೇರ್ |
| 4 | ದಾದ್ರ & ನಗರ ಹಾವೇಲಿ | ಸಿಲ್ವಾಸ್ |
| 5 | ದಿಯು & ದಮನ್ | ಡಮನ್ |
| 6 | ಲಕ್ಷದ್ವೀಪ | ಕವರತ್ತಿ |
| 7 | ಚಂಡೀಗಢ | ಚಂಡೀಗಢ |

- ಭಾರತದ ಒಕ್ಕೂಟದಲ್ಲಿ ದೇಶಿಯ ಸಂಸ್ಥಾನಗಳನ್ನು ವಿಲೀನಗೊಳಿಸಲು ನೇತೃತ್ವ ವಹಿಸಿದರು – ಸರ್ದಾರ್ ವಲ್ಲಭಬಾಯಿ ಪಟೇಲರು
- ದೇಶಿಯ ಸಂಸ್ಥಾನಗಳನ್ನು ವಿಲೀನಗೊಳಿಸಲು ಸರ್ದಾರ್ ವಲ್ಲಭಬಾಯಿ ಪಟೇಲರಿಗೆ ಸಹಾಯ ಮತ್ತು ಸಲಹೆಗಾರರಾಗಿದ್ದವರು – ವಿ.ಪಿ.ಮೆನನ್
- 552 ದೇಶಿಯ ಸಂಸ್ಥಾನಗಳ ಪೈಕಿ 549 ಸಂಸ್ಥಾನಗಳು ಭಾರತವನ್ನು ಸೇರಿದವು.
- ಸ್ವತಂತ್ರ್ಯ ರಾಜ್ಯ/ರಾಷ್ಟ್ರಗಳಾಗಿ ಉಳಿಯಲು ಇಚ್ಛಿಸಿದ ದೇಶೀಯ ಸಂಸ್ಥಾನಗಳು.
  - ಹೈದಾರಾಬಾದ್
  - ಜುನಾಗಢ
  - ಜಮ್ಮು & ಕಾಶ್ಮೀರ

GNANADHARE IAS KAS ACADEMY

ಹೈದಾರಾಬಾದ್‌ನ್ನು ಸರ್ದಾರ್ ವಲ್ಲಭ ಬಾಯಿ ಪಟೇಲರು ಪೋಲೋ ಕಾರ್ಯಾಚರಣೆಯ ಮೂಲಕ 1948 ಸೆಪ್ಟಂಬರ್ 17ರಂದು ಭಾರತ ಒಕ್ಕೂಟಕ್ಕೆ ವಿಲೀನಗೊಳಿಸಿದರು.

- ಜುನಾಗಢವನ್ನು ಮತಗಣನೆಯ ಆಧಾರದ ಮೇಲೆ ಭಾರತ ಒಕ್ಕೂಟಕ್ಕೆ ಸೇರಿಸಿದರು.
- ಜಮ್ಮು & ಕಾಶ್ಮೀರವನ್ನು ರಾಜ ಹರಿಸಿಂಗ್ ಸಹಿ ಹಾಕುವ ಮೂಲಕ ಭಾರತೀಯ ಒಕ್ಕೂಟಕ್ಕೆ ಈ ಪ್ರದೇಶವನ್ನು ಸೇರಿಸಿದರು.

**ಹೈದರಾಬಾದ್– ಕರ್ನಾಟಕದ ರಾಜ್ಯಗಳು**

1. ಕ – ಕಲ್ಬುರ್ಗಿ
2. ಬೀ – ಬೀದರ್
3. ರಾ – ರಾಯಚೂರು
4. ಯ – ಯಾದಗಿರಿ
5. ಕೊ – ಕೊಪ್ಪಳ
6. ಬಾ – ಬಾಗಲಕೋಟೆ

## 1950ರಲ್ಲಿದ್ದ ಭಾರತದ 29 ರಾಜ್ಯಗಳನ್ನು ಕೆಳಕಂಡಂತೆ 4 ವರ್ಗಗಳಾಗಿ ಕೇಂದ್ರ ಸರ್ಕಾರ ವಿಂಗಡಿಸಿತ್ತು.

| ರಾಜ್ಯಗಳು/ವರ್ಗ | ರಾಜ್ಯಗಳ ಹೆಸರು | ಆಡಳಿತಾಧಿಕಾರಿ |
|---|---|---|
| 'ಎ' ವರ್ಗ ರಾಜ್ಯಗಳು | ಅಸ್ಸಾಂ, ಬಿಹಾರ, ಮಧ್ಯಪ್ರದೇಶ, ಮುಂಬೈ, ಮುದ್ರಾಸ್, ಒರಿಸ್ಸಾ, ಪಂಜಾಬ್, ಯೂನೈಟೆಡ್ ಪ್ರೋವಿಷನ್ & ಪಶ್ಚಿಮ ಬಂಗಾಳ | ರಾಜ್ಯಪಾಲ (ಬ್ರಿಟಿಷ್–ಇಂಡಿಯಾ ಪ್ರಾಂತ್ಯಗಳು) |
| 'ಬಿ' ವರ್ಗ ರಾಜ್ಯಗಳು | ಹೈದ್ರಾಬಾದ್, ಜಮ್ಮು & ಕಾಶ್ಮೀರ, ತ್ರವನಕೊರ್–ಕೊಚ್ಚಿನ್, ಮೈಸೂರು, ಪೆಪ್ಸು, ರಾಜಸ್ತಾನ್, ವಿಂಧ್ಯ ಪ್ರದೇಶ, ಮಧ್ಯಭಾರತ | ರಾಜ ಪ್ರಮುಖರು (ದೇಶೀಯ ಸಂಸ್ಥಾನ ಪ್ರಾಂತ್ಯಗಳು) |
| 'ಸಿ' ವರ್ಗ ರಾಜ್ಯಗಳು | ಅಜ್ಮೀರ್, ಭೂಪಾಲ್, ಬಿಲಾಸ್‌ಪುರ, ಕೊಚ್‌ಬೆಹಾರ್, ಕೊಡಗು, ದೆಹಲಿ, ಕಚ್, ಮಣಿಪುರ, ತ್ರಿಪುರ, ಹಿಮಾಚಲ ಪ್ರದೇಶ | ಉಪರಾಜ್ಯಪಾಲ ಮೂಲಕ ರಾಷ್ಟ್ರಪತಿ ಆಡಳಿತ |
| 'ಡಿ' ವರ್ಗ ರಾಜ್ಯಗಳು | ಅಂಡಮಾನ್ & ನಿಕೋಬಾರ್ ದ್ವೀಪಗಳು | ಉಪರಾಜ್ಯಪಾಲ ಮೂಲಕ ರಾಷ್ಟ್ರಪತಿ ಆಡಳಿತ ಶಾಸಕಾಂಗ/ಮಂತ್ರಿಮಂಡಲ ಸ್ಥಾಪನೆ ಅವಕಾಶವಿರಲಿಲ್ಲ. |

GNANADHARE IAS KAS ACADEMY

## ಭಾಷಾವಾರು ರಾಜ್ಯಗಳ ರಚನೆ :

- 1928ರಲ್ಲಿ ಬಹುಭಾಷಾ ಪ್ರಾಂತ್ಯಗಳನ್ನು ಭಾಷೆಯ ಆಧಾರದ ಮೇಲೆ ಪುನರ್ ರಚಿಸಬೇಕೆಂದು ಶಿಫಾರಸ್ಸು ಮಾಡಿದವರು – ಮೋತಿಲಾಲ್ ನೆಹರು.

## ಭಾಷಾವಾರು ಪ್ರಾಂತ್ಯಗಳ ಆಯೋಗಗಳು :

### ಎಸ್.ಕೆ.ಧಾರಾ ಆಯೋಗ

- ಅಧ್ಯಕ್ಷರು : ಎಸ್.ಕೆ. ಧಾರ್
- ಭಾಷೆಗಳ ಆದಾರದ ಮೇಲೆ ರಾಜ್ಯಗಳನ್ನು ರಚಿಸಬೇಕು ಎಂಬ ಬೇಡಿಕೆಯನ್ನು ಪರಿಶೀಲಿಸಲು ಭಾರತ ಸರ್ಕಾರ ಎಸ್. ಕೆ. ಧಾರ್ ನೇತೃತ್ವದಲ್ಲಿ 1946ರಲ್ಲಿ ಭಾಷಾವಾರು ಪ್ರಾಂತ್ಯಗಳ ಆಯೋಗ ರಚಿಸಿತು.
- ವರದಿ : 1948ರಲ್ಲಿ ಈ ಆಯೋಗವು ಭಾಷೆಗಳ ಆಧಾರದ ಮೇಲೆ ರಾಜ್ಯಗಳನ್ನು ಪುನರ್ರಚಿಸದೆ ಆಡಳಿತದ ಅನುಕೂಲತೆಯನ್ನು ಆಧರಿಸಿ ಪುನರ್ರಚಿಸಬೇಕು ಎಂದು ಶಿಫಾರಸು ನೀಡಿತು.

### ಜೆ.ವಿ.ಪಿ. ಸಮಿತಿ :

- ಡಿಸೆಂಬರ್ 1948 ರಲ್ಲಿ ನೇಮಕ, ಏಪ್ರಿಲ್ 1, 1949 ವರದಿ ಸಲ್ಲಿಕೆ.
- ರಾಜ್ಯಗಳನ್ನು ಭಾಷೆಗಳ ಆಧಾರದ ಮೇಲೆ ಪುನರ್‌ರಚಿಸಲು ಸಕಾಲವಲ್ಲ & ಮುಂದೂಡಲು ಸಲಹೆ ನೀಡಿ ವರದಿ ಸಲ್ಲಿಕೆ.
- ಜವಹಾರ್ ಲಾಲ್ ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ್ & ಪಟ್ಟಾಭಿ ಸೀತಾರಾಮಯ್ಯ ಇವರನ್ನೊಳಗೊಂಡ ಈ ಸಮಿತಿ ಅಧ್ಯಕ್ಷರೇ ಇಲ್ಲದ ಈ ಮೂವರು ಸದಸ್ಯರನ್ನು ಒಳಗೊಂಡ ಜೆ.ವಿ.ಪಿ ಸಮಿತಿ ಎಂದೇ ಜನಪ್ರಿಯವಾಗಿದೆ.
- ಈ ವರದಿಯೂ ಸಹ ರಾಜ್ಯಗಳ ಆಡಳಿತದ ಪ್ರತಿಕೂಲಕ್ಕೆ ಅನುಗುಣವಾಗಿ ರಾಜ್ಯಗಳ ರಚನೆ ಮಾಡಿ ಎಂದರು

GNANADHARE IAS KAS ACADEMY

## ದೇಶದ ಮೊದಲ ಭಾಷಾ ಆಧಾರಿತ ರಾಜ್ಯ ಉದಯ :

- ಆಂಧ್ರಪ್ರದೇಶ ರಾಜ್ಯ ಸ್ಥಾಪನೆಗೆ ಕಾಂಗ್ರೆಸ್ಸಿನ ಪೊಟ್ಟಿ ಶ್ರೀರಾಮುಲು ಅಕ್ಟೋಬರ್ 19, 1952ರಂದು ಉಪವಾಸ ಸತ್ಯಾಗ್ರಹ ಕೈಗೊಂಡು 56 ದಿನಗಳ ನಂತರ ಡಿಸೆಂಬರ್ 15ರಂದು ನಿಧನರಾದರು.
- ಅಕ್ಟೋಬರ್ 1, 1953ರಂದು ದೇಶದ ಮೊಟ್ಟ ಮೊದಲ ಭಾಷಾಧಾರಿತ ರಾಜ್ಯ ಆಂಧ್ರಪ್ರದೇಶ ಅಸ್ತಿತ್ವಕ್ಕೆ ಬಂದಿತು.

## ಡಾ// ಫಜಲ್ ಆಲಿ ಆಯೋಗ :

| | |
|---|---|
| ನೇಮಕ | ಡಿಸೆಂಬರ್, 1953 |
| ಅಧ್ಯಕ್ಷ | ಫಜಲ್ ಅಲಿ |
| ಇತರೆ ಸದಸ್ಯರು | ಕೆ.ಎಂ. ಪಣಿಕ್ಕರ್, ಹೆಚ್.ಎನ್. ಕುಂಜು |
| ಮಾಹಿತಿ ಸಂಗ್ರಹಣೆ | 28,000 ಮೈಲಿ ಪ್ರಯಾಣ<br>10,000 ಜನರ ಸಂದರ್ಶನ<br>1,50,000 ನಿವೇದನ ಪತ್ರಿಕೆ ಸ್ವೀಕಾರ |
| ವರದಿ ಸಲ್ಲಿಕೆ | ಸೆಪ್ಟಂಬರ್ 30, 1955–252 ಪುಟ |
| ಶಿಫಾರಸ್ಸುಗಳು | 1. ಎ.ಬಿ.ಸಿ & ಡಿ ರಾಜ್ಯಗಳನ್ನು ರದ್ದು ಮಾಡುವುದು.<br>2. ಭಾರತ ಒಕ್ಕೂಟವನ್ನು 16 ರಾಜ್ಯಗಳು & 3 ಕೇಂದ್ರಾಡಳಿತ ಪ್ರದೇಶ ರಚನೆ.<br>3. ಭಾಷೆಗಳ ಆದಾರದ ಮೇಲೆ ರಾಜ್ಯಗಳನ್ನು ರಚನೆ ಮಾಡಿ ಆಡಳಿತಕ್ಕೆ ಯಾವುದೇ ತೊಂದರೆಯಾಗದಂತೆ ರಾಜ್ಯಗಳನ್ನು ರಚನೆ ಮಾಡಿ ಎಂದು ಶಿಫಾರಸ್ಸು ಮಾಡಿತು. |

- **ನವೆಂಬರ್ 1, 1956ರಂದು ರಾಜ್ಯಗಳ ಪುನರ್ರಚನಾ ಕಾಯ್ದೆಯನ್ನು ಜಾರಿಗೆ ತಂದು, 14 ರಾಜ್ಯಗಳನ್ನು 6 ಕೇಂದ್ರಾಡಳಿತ ಪ್ರದೇಶಗಳನ್ನು ರಚಿಸಿತು.**

GNANADHARE IAS KAS ACADEMY

## 1956ರ ನಂತರ ರಚಿಸಲ್ಪಟ್ಟ ಹೊಸ ರಾಜ್ಯಗಳು & ಕೇಂದ್ರಾಡಳಿತ ಪ್ರದೇಶಗಳು :

| ವರ್ಷ | ರಾಜ್ಯಗಳ ಹೆಸರು |
|---|---|
| 1956 | 14 ರಾಜ್ಯಗಳ ಅಸ್ತಿತ್ವ |
| 1960 | ಗುಜರಾತ್ (15ನೇ ರಾಜ್ಯ) |
| 1961 | ಪೋರ್ಚುಗೀಸರ ಅಧೀನದಿಂದ ಗೋವಾ ಸ್ವಾತಂತ್ರ್ಯ |
| 1962 | ಫ್ರೆಂಚರ ಅಧೀನದಿಂದ ಪುದುಚೇರಿ ಸ್ವಾತಂತ್ರ್ಯ<br>ಅಂತರಾಷ್ಟ್ರೀಯ ನ್ಯಾಯಾಲಯ ತೀರ್ಪಿನ ನಂತರ ಭಾರತದಲ್ಲಿ ಸೇರ್ಪಡೆ |
| 1963 | ನಾಗಾಲ್ಯಾಂಡ್ (16ನೇ ರಾಜ್ಯ) |
| 1966 | ಹರಿಯಾಣ (17ನೇ ರಾಜ್ಯ) |
| 1971 | ಹಿಮಾಚಲ ಪ್ರದೇಶಕ್ಕೆ ರಾಜ್ಯಸ್ಥಾನ (18ನೇ ಸ್ಥಾನ) |
| 1972 | ಮಣಿಪುರ (19ನೇ ರಾಜ್ಯ)<br>ತ್ರಿಪುರ (20ನೇ ರಾಜ್ಯ) ಮೇಘಾಲಯ (21ನೇ ರಾಜ್ಯ) |
| 1975 | ಸಿಕ್ಕಿಂ (22ನೇ ರಾಜ್ಯ) |
| 1987 | ಮಿಜೋರಾಂ (23ನೇ ರಾಜ್ಯ) ಅರುಣಾಚಲ ಪ್ರದೇಶ (24ನೇ ರಾಜ್ಯ)<br>ಗೋವಾ (25ನೇ ರಾಜ್ಯ) |
| 2000 | ಛತ್ತೀಸ್‌ಗಡ್ (26ನೇ ರಾಜ್ಯ–16 ಜಿಲ್ಲೆಗಳು) |
| 2000 | ಉತ್ತರಾಂಚಲ್ (27ನೇ ರಾಜ್ಯ–13 ಜಿಲ್ಲೆಗಳು) |
| 2000 | ಜಾರ್ಖಂಡ್ (28ನೇ ರಾಜ್ಯ–18 ಜಿಲ್ಲೆಗಳು) |
| 2014 ಜೂನ್ 2 | ತೆಲಂಗಾಣ ರಾಜ್ಯ (ಆಂಧ್ರ ಪ್ರದೇಶದಿಂದ ಬೇರ್ಪಡೆ – 29ನೇ ರಾಜ್ಯ) |

**ಸಂವಿಧಾನದ 2ನೇ ವಿಧಿ** : ಹೊಸ ರಾಜ್ಯಗಳ ಸೇರ್ಪಡೆ & ಸ್ಥಾಪನೆಗಳ ಬಗ್ಗೆ ವಿವರಿಸುತ್ತದೆ.

- ಹೊಸ ರಾಜ್ಯಗಳನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆ ಮಾಡಿಕೊಳ್ಳುವ ಅಥವಾ ಹೊಸ ರಾಜ್ಯಗಳನ್ನು ಸ್ಥಾಪಿಸುವ ಅಧಿಕಾರ ಸಂಸತ್ತಿಗಿದೆ.
- ಸಂವಿಧಾನದ 2ನೇ ವಿಧಿಯ ಪ್ರಕಾರ ಸಂಸತ್ತು ತನ್ನ ಕಾನೂನಿನ ಮೂಲಕ ತನಗೆ ಸರಿಯೆನಿಸುವ ನಿಬಂಧನೆಗಳಿಗೆ ಅನುಗುಣವಾಗಿ ರಾಜ್ಯಗಳನ್ನು ಸ್ಥಾಪಿಸುವ & ಸೇರ್ಪಡೆ ಮಾಡುವ ಅಧಿಕಾರ ಹೊಂದಿದೆ.

GNANADHARE IAS KAS ACADEMY

- ಸಂಸತ್ತು ಈ ವಿಧಿಯಡಿಯಲ್ಲಿ ಈ ಕೆಳಗಿನ ಅಧಿಕಾರ ಹೊಂದಿದೆ. ಭಾರತದ ಒಕ್ಕೂಟಕ್ಕೆ ಹೊಸ ರಾಜ್ಯಗಳನ್ನು ಸೇರಿಸಿಕೊಳ್ಳುವ ಅಧಿಕಾರ & ಈಗಾಗಲೇ ಅಸ್ತಿತ್ವದಲ್ಲಿರುವ ರಾಜ್ಯಗಳನ್ನು ಒಕ್ಕೂಟಕ್ಕೆ ಸೇರಿಸಿಕೊಳ್ಳಬಹುದು.
- ಹೊಸ ರಾಜ್ಯಗಳ ರಚನೆಗೆ ಆ ವಿಷಯವನ್ನು ಲೋಕಸಭಾ & ರಾಜ್ಯಸಭಾ ಎಲ್ಲಾದರೂ ಮಂಡಿಸಬಹುದು.
- ಇದರಲ್ಲಿ ಕೊನೆಗೆ ನಿರ್ಣಯ ತೆಗೆದುಕೊಳ್ಳುವವರು – ಸಂಸತ್ತು

↓

ರಾಷ್ಟ್ರಪತಿ

ಲೋಕಸಭೆ ← → ರಾಜ್ಯಸಭೆ

**ಸಂವಿಧಾನದ 3ನೇ ವಿಧಿ :** ಸಂವಿಧಾನದ 3ನೇ ವಿಧಿಯ ಪ್ರಕಾರ ಸಂಸತ್ತು ರಾಜ್ಯಗಳನ್ನು ಪುನರ್ರಚಿಸುವ ಅಧಿಕಾರ ಹೊಂದಿದೆ. **ಈ ವಿಧಿಯಲ್ಲಿ ಸಂಸತ್ತು ಹೊಂದಿರುವ ಅಧಿಕಾರಗಳೆಂದರೆ :**

- ಯಾವುದೇ ರಾಜ್ಯದ ಹೆಸರನ್ನು ಬದಲಾಯಿಸುವುದು
  - ಉದಾ : 1956 – ಮೈಸೂರು
    ನವೆಂಬರ್ 1 – ಕರ್ನಾಟಕ
- ಯಾವುದೇ ರಾಜ್ಯದ ಎಲ್ಲೇ ಅಥವಾ ಗಡಿಗಳನ್ನು ಬದಲಾಯಿಸುವುದು
- ಯಾವುದೇ ರಾಜ್ಯದ ಭೂ ಪ್ರದೇಶವನ್ನು ಕಡಿಮೆ ಮಾಡುವುದು
- ಯಾವುದೇ ರಾಜ್ಯದ ಭೂ ಪ್ರದೇಶವನ್ನು ಹೆಚ್ಚಿಸುವುದು
- ಒಂದು ರಾಜ್ಯದ ಭೂ ಪ್ರದೇಶವನ್ನು ಬೇರ್ಪಡಿಸುವ ಮೂಲಕ ಅಥವಾ ಒಟ್ಟುಗೂಡಿಸುವ ಮೂಲಕ ಹೊಸ ರಾಜ್ಯವನ್ನು ರಚಿಸುವ ಅಧಿಕಾರ ಹೊಂದಿರುತ್ತದೆ.
- ಇದನ್ನು "ಸರಳ & ಬಹುಮತದ ಮುಖಾಂತರ" ಮಾಡುತ್ತಾರೆ.

GNANADHARE IAS KAS ACADEMY

**ರಾಜ್ಯಗಳ ಪುನರ್ರಚನೆಗೆ ಸಂಬಂಧಪಟ್ಟಂತೆ ರಾಷ್ಟ್ರಾಧ್ಯಕ್ಷರ ಶಿಫಾರಸ್ಸಿನ ಮೇರೆಗೆ ಸಂಸತ್ತಿನಲ್ಲಿ ಮಂಡಿಸಬೇಕು.**

ಸಂಸತ್ತಿನಲ್ಲಿ ಮಂಡಿಸಲು ಶಿಫಾರಸು ಮಾಡುವುದಕ್ಕಿಂತ ಮುಂಚಿತವಾಗಿ ಮಸೂದೆಯ ಬಗ್ಗೆ ಒಂದು ನಿರ್ದಿಷ್ಟ ಕಾಲಾವಧಿಯ ಒಳಗಾಗಿ ರಾಜ್ಯಶಾಸಕಾಂಗದ ಅಭಿಪ್ರಾಯ ತೆಗೆದುಕೊಳ್ಳುವಂತೆ ರಾಷ್ಟ್ರಾಧ್ಯಕ್ಷರು ಸೂಚಿಸಬೇಕು. ರಾಜ್ಯ ಶಾಸಕಾಂಗದ ಅಭಿಪ್ರಾಯವನ್ನು ಪರಿಗಣಿಸುವುದು ಅಥವಾ ಬಿಡುವಿದು ಸಂಸತ್ತಿನ ವಿವೇಚನೆಗೆ ಬಿಟ್ಟ ಅಧಿಕಾರವಾಗಿದೆ.

2014ರ ಫೆಬ್ರವರಿ ತಿಂಗಳಲ್ಲಿ ಆಂಧ್ರಪ್ರದೇಶ ಶಾಸನ ಸಭೆಯ ವಿರೋಧದ ನಡುವೆಯೂ ಸಂಸತ್ತು ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಗೆ ಸಂಬಂಧಿಸಿದ ಆಂಧ್ರಪ್ರದೇಶ ಪುನರ್ರಚನಾ ಮಸೂದೆಗೆ ಅನುಮೋದನೆ ನೀಡಿದ್ದನ್ನು ಸ್ಮರಿಸಬಹುದು.

**ಸಂವಿಧಾನದ 4ನೇ ವಿಧಿ :** ಹೊಸ ರಾಜ್ಯಗಳ ಸೇರ್ಪಡೆ/ಸ್ಥಾಪನೆ/ಅಸ್ತಿತ್ವದಲ್ಲಿರುವ ರಾಜ್ಯಗಳ ಗಡಿ ಗಮನಿಸುವುದು/ಹೆಸರು ಬದಲಾವಣೆಯ ಉದ್ದೇಶದಿಂದ ಸಂಸತ್ತಿನಿಂದ ರೂಪಿಸಲ್ಪಟ್ಟ ಕಾನೂನನ್ನು 368 ನೇ ವಿಧಿಯಡಿಯಲ್ಲಿ ಮಾಡಲಾದ ಸಂವಿಧಾನದ ತಿದ್ದುಪಡಿಯೆಂದು ಪರಿಗಣಿಸುವಂತಿಲ್ಲ ಎಂದು ಸಂವಿಧಾನದ 4ನೇ ವಿಧಿ ಸ್ಪಷ್ಟಪಡಿಸುತ್ತದೆ. ಅಂತಹ ಕಾನೂನುಗಳನ್ನು ಸರಳ ಬಹುಮತದ ಮೂಲಕ ಪಾಸು ಮಾಡಬಹುದಾಗಿದೆ.

## ಪೌರತ್ವ :

- ಭಾರತದ ಸಂವಿಧಾನದ 2ನೇ ಭಾಗದಲ್ಲಿ ನಮೂದಿಸಲ್ಪಟ್ಟಿರುವ 5-11ನೇ ವಿಧಿಗಳು ಪೌರತ್ವಕ್ಕೆ ಸಂಬಂಧಿಸಿವೆ.
- ಪೌರತ್ವವನ್ನು ಬ್ರಿಟನ್ ಸರ್ಕಾರದಿಂದ ಎರವಲು ಪಡೆಯಲಾಗಿದೆ. ಪೌರತ್ವ ಕಾಯ್ದೆಯನ್ನು 1986, 1992, 2003 & 2005 ನಲ್ಲಿ ತಿದ್ದುಪಡಿ ಮಾಡಲಾಯಿತು.
- ಪೌರತ್ವ ಕಾಯಿದೆ ಜಾರಿಗೆಯಾದ ವರ್ಷ – 1995
- ಭಾರತವು ಏಕಪೌರತ್ವಕ್ಕೆ ಅವಕಾಶ ಮಾಡಿಕೊಟ್ಟಿದೆ
- ದ್ವಿ-ಪೌರತ್ವವನ್ನು ಹೊಂದಿರುವ ರಾಷ್ಟ್ರಗಳೆಂದರೆ ಅಮೇರಿಕಾ & ಸ್ವಿಜರ್‌ಲ್ಯಾಂಡ್.

GNANADHARE IAS KAS ACADEMY

## ಪೌರತ್ವಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ಅವಕಾಶಗಳು :

### ಸಂವಿಧಾನದ 5ನೇ ವಿಧಿ : ಸಂವಿಧಾನದ ಪ್ರಾರಂಭದಲ್ಲಿ ಪೌರತ್ವ :

- ಭಾರತ ಸಂವಿಧಾನ ಪ್ರಾರಂಭವಾದಾಗ ಭಾರತದ ಭೂಪ್ರದೇಶದಲ್ಲಿ ವಾಸಿಸುವ & ಭಾರತದ ಭೂಪ್ರದೇಶದಲ್ಲಿ ಹುಟ್ಟಿದ
- ತನ್ನ ತಂದೆಯಾಗಲಿ ತಾಯಿಯಾಗಲಿ ಭಾರತದ ಭೂ ಪ್ರದೇಶದಲ್ಲಿ ಹುಟ್ಟಿದ್ದರೆ
- ಭಾರತದ ಸಂವಿಧಾನ ಪ್ರಾರಂಭವಾಗುವ ಆರಂಭದಲ್ಲಿ ಕನಿಷ್ಟ 5 ವರ್ಷ ಭಾರತದ ಪ್ರತಿಯೊಬ್ಬ ಭೂಪ್ರದೇಶದಲ್ಲಿ ವಾಸವಾಗಿರುವ ಭಾರತದ ಪ್ರತಿಯೊಬ್ಬ ವ್ಯಕ್ತಿಯು ಭಾರತದ ನಾಗರಿಕತ್ವವನ್ನು ಪಡೆಯುತ್ತಾನೆ.

### ಸಂವಿಧಾನದ 6ನೇ ವಿಧಿ : ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು :

- ಭಾರತ & ಪಾಕಿಸ್ತಾನ ವಿಭಜನೆಯಾದ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಸೇರಿರುವ ಭೂಪ್ರದೇಶದಿಂದ ಭಾರತದ ಭೂಪ್ರದೇಶದಿಂದ ವಲಸೆ ಬಂದಿರುವ ವ್ಯಕ್ತಿಯು ಭಾರತದ ಪೌರತ್ವವನ್ನು ಪಡೆಯುತ್ತಾನೆ ಎಂದು ಸಂವಿಧಾನದ 6ನೆ ವಿಧಿ ತಿಳಿಸುತ್ತದೆ.

### ಸಂವಿಧಾನದ 7ನೇ ವಿಧಿ : ಪಾಕಿಸ್ತಾನಕ್ಕೆ ವಲಸೆ ಹೋದ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು :

- 1947ನೆ ಇಸವಿ ಮಾರ್ಚ್ 1ರ ನಂತರ ಯಾವುದೇ ವ್ಯಕ್ತಿ ಭಾರತದ ಭೂಪ್ರದೇಶದಿಂದ ಪಾಕಿಸ್ತಾನಕ್ಕೆ ಸೇರುವ ಭೂಪ್ರದೇಶಕ್ಕೆ ವಲಸೆ ಹೋದರೆ ಅವನು ಭಾರತದ ನಾಗರಿಕತ್ವವನ್ನು ಪಡೆಯುವುದಿಲ್ಲ ಎಂದು ಸಂವಿಧಾನದ 7ನೇ ವಿಧಿ ತಿಳಿಸುತ್ತದೆ.

### ಸಂವಿಧಾನದ 8ನೇ ವಿಧಿ : ಭಾರತದ ಹೊರಗೆ ವಾಸಿಸುತ್ತಿರುವ ಭಾರತೀಯ ಕೆಲವು ವ್ಯಕ್ತಿಗಳ ನಾಗರೀಕತ್ವದ ಹಕ್ಕುಗಳು :

- ಯಾವುದೇ ವ್ಯಕ್ತಿಯಾಗಲಿ ಅಥವಾ ಅವನ ತಾಯಿ ಅಥವಾ ತಂದೆಯಾಗಲಿ, ಅಜ್ಜನಾಗಲಿ ಮೂಲತಃ ಭಾರತ ಸರ್ಕಾರ ಕಾಯ್ದೆ 1935ರಲ್ಲಿ ಹೇಳಿರುವಂತೆ ಭಾರತದಲ್ಲಿ ಹುಟ್ಟಿದ್ದು, ಭಾರತದ ಹೊರಗಿನ ಯಾವುದೇ ದೇಶದಲ್ಲಿ ವಾಸಿಸುತ್ತಿದ್ದರೆ, ಆ ದೇಶದಲ್ಲಿನ ರಾಜ ತಾಂತ್ರಿಕ ಪ್ರತಿನಿಧಿಗೆ

ಸಂವಿಧಾನದ ಮುಂಚಿತವಾಗಲಿ ಅಥವಾ ತರುವಾಯ ತಾನು ಭಾರತದ ನಾಗರೀಕನಾಗಬೇಕೆಂದು ಅರ್ಜಿಯನ್ನು ಸಲ್ಲಿಸಿ, ಆ ಪ್ರತಿನಿಧಿಯಿಂದ ತಾನು ಭಾರತದ ನಾಗರೀಕನೆಂದು ನೊಂದಾಯಿಸಿಕೊಂಡಿದ್ದರೆ ಅಂತಹ ವ್ಯಕ್ತಿಯನ್ನು ಭಾರತದ ನಾಗರೀಕನೆಂದು ಪರಿಗಣಿಸಬಹುದೆಂದು ಭಾರತದ ಸಂವಿಧಾನದ 8ನೇ ವಿಧಿ ತಿಳಿಸುತ್ತದೆ.

**ಸಂವಿಧಾನದ 9ನೇ ವಿಧಿ : ಸ್ವಯಿಚ್ಛೆಯಿಂದ ವಿದೇಶಿ ರಾಜ್ಯದ ನಾಗರಿಕತ್ವವನ್ನು ಪಡೆದವರು ಭಾರತದ ನಾಗರಿಕರಲ್ಲ :**

- ಯಾವುದೇ ವ್ಯಕ್ತಿ ಸ್ವಚ್ಛೆಯಿಂದ ವಿದೇಶದ ನಾಗರಿಕತ್ವವನ್ನು ಪಡೆದಿದ್ದರೆ ಅಂತಹವರನ್ನು ಭಾರತದ ನಾಗರಿಕನೆಂದು ಪರಿಗಣಿಸುವುದಿಲ್ಲ ಎಂದು ಭಾರತದ ಸಂವಿಧಾನದ 9ನೇ ವಿಧಿ ತಿಳಿಸುತ್ತದೆ. ಉದಾ : ಎಂ.ಎಫ್. ಹುಸೇನ್ ಕತರ್ ದೇಶದ ಪೌರತ್ವ ಪಡೆದಿದ್ದು ಭಾರತದ ಪೌರತ್ವ ಖಡಿತವಾಗುತ್ತದೆ.

**ಸಂವಿಧಾನದ 10ನೇ ವಿಧಿ : ನಾಗರಿಕತ್ವದ ಹಕ್ಕುಗಳ ಮುಂದುವರಿಕೆ :**

- ಭಾರತದ ಪೌರನಾಗಿರುವ ಅಥವಾ ಪೌರನಾಗಬೇಕೆಂದು ಭಾವಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಸಂಸತ್ತು ಮಾಡುವ ಕಾನೂನಿಗೆ ಒಳಪಟ್ಟು ಭಾರತದ ನಾಗರೀಕತ್ವವನ್ನು ಮುಂದುವರಿಸಬೇಕು ಎಂದು ಭಾರತದ ಸಂವಿಧಾನದ 10ನೇ ವಿಧಿ ತಿಳಿಸುತ್ತದೆ.

**ಸಂವಿಧಾನದ 11ನೇ ವಿಧಿ : ಸಂಸತ್ತು ನಾಗರೀಕತ್ವದ ಹಕ್ಕನ್ನೂ ಕಾನೂನಿನ ಮೂಲಕ ವಿನಿಮಯಿಸುವುದು :**

- ಪೌರತ್ವವನ್ನು ವಜಾಗೊಳಿಸುವ & ಪೌರತ್ವಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತಿಗೆ ಇರುವ ಅಧಿಕಾರವನ್ನು ಕಡಿತಗೊಳಿಸುವಂತಿಲ್ಲ ಎಂದು ಸಂವಿಧಾನದ 11ನೇ ವಿಧಿ ತಿಳಿಸುತ್ತದೆ. ಸಂಸತ್ತು ಕಾಲಕಾಲಕ್ಕೆ ಕಾನೂನಿನ ಮೂಲಕ ಪೌರತ್ವದ ಹಕ್ಕುಗಳಿಗೆ ನಿಯಮಗಳನ್ನು ರೂಪಿಸಲಾಗಿದೆ.

GNANADHARE IAS KAS ACADEMY

## ಪೌರತ್ವ ಕಾಯ್ದೆ – 1955 :

- ಸಂವಿಧಾನದ 11ನೇ ವಿಧಿ ನೀಡಿರುವ ಅಧಿಕಾರದನ್ವಯ, ಸಂಸತ್ತು ಪೌರತ್ವಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 30 1955ರಲ್ಲಿ ಪೌರತ್ವ ಕಾಯ್ದೆಯನ್ನು ಅಂಗೀಕರಿಸಿತು.

### ಪೌರತ್ವವನ್ನು ಪಡೆದುಕೊಳ್ಳುವ ವಿಧಾನಗಳು :

| ಕ್ರ.ಸಂ | ಹೆಸರು | ವಿಷಯ |
|---|---|---|
| 1 | ಜನನ ಮೂಲಕ (By Birth ) | ಜನವರಿ 26, 1950 ರಂದು/ ನಂತರ ಭಾರತದಲ್ಲಿ ಜನಿಸಿದವರು. ಭಾರತದ ಪೌರತ್ವವನ್ನು ಪಡೆದುಕೊಳ್ಳುತ್ತಾರೆ. |
| 2 | ವಂಶಾನು ಪ್ರಾಪ್ತಿ/ಪೀಳಿಗೆಯಿಂದ (By Descent) | ಜನವರಿ 26, 1950 ರಂದು/ ನಂತರ ಭಾರತದ ಹೊರಗೆ ಭಾರತೀಯ ಕುಟುಂಬಗಳಲ್ಲಿ ಜನಿಸಿದರೂ ಭಾರತದ ಪೌರನಾಗುತ್ತಾರೆ. |
| 3 | ನೊಂದಣಿ ಮೂಲಕ (By Registration) | ಭಾರತದ ಪೌರರಲ್ಲದವರು ನೊಂದಣಿ ಮೂಲಕ ಭಾರತದ ಪೌರರಾಗುತ್ತಾರೆ. |
| 4 | ಸ್ವಾಭಾವಿಕ ವಿಧಾನ ಮೂಲಕ (By Naturalisation) | ವಿದೇಶಿಯರು ಭಾರತ ಸರ್ಕಾರದ ಅನುಮತಿ ಪಡೆದು & ಅರ್ಜಿ ಸಲ್ಲಿಸಿ ಭಾರತದ ಪೌರರಾಗುತ್ತಾರೆ. |
| 5 | ಭೂ ಪ್ರದೇಶಗಳ ಸೇರ್ಪಡೆ ಮೂಲಕ (Incorporation of Terriotory) | ವಿದೇಶಕ್ಕೆ ಸೇರಿದ ಯಾವುದಾದರೂ ಭೂ ಪ್ರದೇಶ ಭಾರತದಲ್ಲಿ ವಿಲೀನವಾದರೆ, ಅದರ ಪ್ರಜೆಗಳು ಭಾರತದ ಪೌರರೆಂದು ಭಾರತ ಘೋಷಿಸುವುದು. |

### ಪೌರತ್ವವನ್ನು ಕಳೆದುಕೊಳ್ಳುವ ವಿಧಾನಗಳು :

| ಕ್ರ.ಸಂ | ಹೆಸರು | ವಿಷಯ |
|---|---|---|
| 1 | **ತ್ಯಜಿಸುವುದು (By Renunciation)** | ವಿದೇಶಿ ಪೌರತ್ವವನ್ನು ಪಡೆದ ಭಾರತೀಯ ನಿಗದಿತ ಅರ್ಜಿ ನಮೂನೆಯಲ್ಲಿ ಭಾರತದ ಪೌರತ್ವವನ್ನು ತ್ಯಜಿಸಿದ್ದೇನೆ ಎಂದು ಘೋಷಿಸಬೇಕು |
| 2 | **ರದ್ದು ಮಾಡುವುದು (By Termination)** | ಭಾರತೀಯ ಪೌರನು ಸ್ವಇಚ್ಛೆಯಿಂದ ಬೇರೆ ದೇಶದ ಪೌರತ್ವವನ್ನು ಸ್ವೀಕರಿಸಿದರೆ ಆತನ |

| | | |
|---|---|---|
| | | ಭಾರತೀಯ ಪೌರತ್ವ ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ. ಜನವರಿ 26, 1950 & ಪೌರತ್ವ ಕಾಯ್ದೆ ಜಾರಿಗೆ ಬಂದ ಡಿಸೆಂಬರ್ 30, 1955 ನಡುವೆ ವಿದೇಶಿ ಪೌರತ್ವವನ್ನು ಪಡೆದ ಭಾರತೀಯ ಪೌರತ್ವ ರದ್ದಾಗುತ್ತದೆ. |
| 3 | **ಕಸಿದುಕೊಳ್ಳುವುದು (By Deprivation)** | ಯಾರು ಸುಳ್ಳು/ವಂಚನೆ ಮೂಲಕ ಭಾರತದ ಪೌರತ್ವ ಪಡೆಯುತ್ತಾರೋ/ಪೌರತ್ವವನ್ನು ಪಡೆದ ಮೇಲೆ ಭಾರತೀಯ ಸಂವಿಧಾನಕ್ಕೆ ಅವಿಧೇಯತೆಯನ್ನು ತೋರಿಸುವುದು. ಇತ್ಯಾದಿ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಪೌರತ್ವವನ್ನು ಕಸಿದುಕೊಳ್ಳುತ್ತದೆ. |

# ಮೂಲಭೂತ ಹಕ್ಕುಗಳು (Fundamental Rights)

- ಸಂವಿಧಾನದ 3ನೇ ಭಾಗದ 12–35ನೇ ವಿಧಿಗಳು ಮೂಲಭೂತ ಹಕ್ಕುಗಳ ಬಗ್ಗೆ ಕೂಲಂಕುಷ ವಿವರಣೆ ನೀಡುತ್ತವೆ.
- ಅಮೆರಿಕಾ ಸಂವಿಧಾನದಿಂದ ಮೂಲಭೂತ ಹಕ್ಕುಗಳ ಎರವಲು ಪಡೆಯಲಾಗಿದೆ.
- ಮೂಲಭೂತ ಹಕ್ಕುಗಳಿಗೆ ತೊಂದರೆಯಾದಾಗ ಸುಪ್ರೀಂಕೋರ್ಟ್‌ಗೆ 32ನೇ ವಿಧಿ ಪ್ರಕಾರ & ಹೈಕೋರ್ಟ್ ಗೆ 226ನೇ ವಿಧಿ ಪ್ರಕಾರ ನೇರವಾಗಿ ನ್ಯಾಯಕ್ಕಾಗಿ ಮೊರೆ ಹೋಗಬಹುದು.
- ಕ್ರಿ.ಶ.1215ರಲ್ಲಿ ಮೊಟ್ಟ ಮೊದಲ ಬಾರಿಗೆ ಮೂಲಭೂತ ಹಕ್ಕುಗಳನ್ನು ತನ್ನ ಪ್ರಜೆಗಳಿಗೆ ನೀಡಿದ ಮೊದಲ ದೊರೆ – ಇಂಗ್ಲೇಂಡಿನ ಜಾನ್ ದೊರೆ. ಇದನ್ನು ಮೂಲಭೂತ ಹಕ್ಕುಗಳ ಮ್ಯಾಗ್ನಕಾರ್ಟ್ ಅಥವಾ ಮಹಾಸನ್ನದ್ದು ಎನ್ನಲಾಗುತ್ತದೆ.
- ಮುಲಭೂತ ಹಕ್ಕುಗಳ ಸಂರಕ್ಷಕ ಸುಪ್ರಿಂ ಕೋರ್ಟ್.
- ಮೂಲಭೂತ ಹಕ್ಕುಗಳ ಸಮಿತಿಯ ಅಧ್ಯಕ್ಷರು – ಸರ್ದಾರ್ ವಲ್ಲಭ ಬಾಯಿ ಪಟೇಲರು
- ಮೂಲಭೂತ ಹಕ್ಕುಗಳ ಉಪ ಸಮಿತಿ ಅಧ್ಯಕ್ಷರು – ಅಚಾರ್ಯ ಜೆ ಕೃಪಲಾನಿ
- ಮೂಲಭೂತ ಹಕ್ಕುಗಳ ಉಪ ಸಮಿತಿಯ ಫೆಬ್ರವರಿ 27 1947 ಮೊದಲ ಬಾರಿಗೆ ಸಭೆ ಸೇರಿತು.

- ಮೂಲಭೂತ ಹಕ್ಕುಗಳನ್ನು 1928ರಲ್ಲಿ ಲಿಖಿತ ರೂಪದಲ್ಲಿ ಮೂಲಭೂತ ಹಕ್ಕುಗಳನ್ನು ಮಂಡಿಸಿದವರು – ಜವಹಾರ್ ಲಾಲ್ ನೆಹರು

## ಮೂಲಭೂತ ಹಕ್ಕುಗಳು ಸಂಖ್ಯೆ 6 :

| | |
|---|---|
| 1 | ಸಮಾನತೆ ಹಕ್ಕು |
| 2 | ಸ್ವಾತಂತ್ರ್ಯದ ಹಕ್ಕು |
| 3 | ಶೋಷಣೆ ವಿರುದ್ದ ಹಕ್ಕು |
| 4 | ಧಾರ್ಮಿಕ ಸ್ವಾತಂತ್ರ್ಯ ಹಕ್ಕು |
| 5 | ಸಾಂಸ್ಕೃತಿಕ & ಶಿಕ್ಷಣ ಹಕ್ಕು |
| 6 | ಸಂವಿಧಾನ ಪರಿಹಾರ ಹಕ್ಕು |

- 1978ರಲ್ಲಿ ಸಂವಿಧಾನದ 44ನೇ ತಿದ್ದುಪಡಿ ಮೂಲಕ 31ನೇ ವಿಧಿ ಆಸ್ತಿಯ ಹಕ್ಕನ್ನು ತೆಗೆದುಹಾಕಿ ಕಾನುನು ಬದ್ದ ಪರಿಹಾರ ಹಕ್ಕನ್ನಾಗಿ ಮಾಡಲಾಗಿದೆ. ಇದನ್ನು ಸಂವಿಧಾನದ 12ನೇ ಭಾಗ 300(ಎ) ವಿಧಿಯಲ್ಲಿ ಸೇರಿಸಲಾಗಿದೆ.
- ಮೊದಲಿಗೆ ಮೂಲಭೂತ ಹಕ್ಕುಗಳು 7 ಇದ್ದವು, ಈ ಪ್ರಸ್ತುತ 6 ಇವೆ.

## ಮೂಲಭೂತ ಹಕ್ಕುಗಳು :




GNANADHARE IAS KAS ACADEMY

| ಕ್ರ.ಸಂ | ವಿಧಿಗಳು | ಉಪ ವಿಧಿಗಳು | ವಿಷಯಗಳು |
|---|---|---|---|
| **1** | | | **ಸಮಾನತೆ ಹಕ್ಕು** |
| | 14–18 | | ಸಮಾನ ರಕ್ಷಣೆ ನೀಡುವುದು |
| | 14 | | ಯಾವುದೇ ವ್ಯಕ್ತಿಗೆ ಕಾನೂನಿನ ದೃಷ್ಟಿಯಲ್ಲಿ ರಾಜ್ಯವು ಸಮಾನತೆಯನ್ನು ನಿರಾಕರಿಸಬಾರದು. “ಕಾನೂನಿನ ಮುಂದೆ ಎಲ್ಲರೂ ಸಮಾನರು.” (Equal protection of Laws) America |
| | 15 | 1 | ಧರ್ಮ, ಕುಲ, ಜಾತಿ, ಲಿಂಗ, ಜನ್ಮ ಸ್ಥಳಗಳ ಆಧಾರದ ಮೇಲೆ ರಾಜ್ಯವು ಪಕ್ಷಪಾತ ಮಾಡುವಂತಿಲ್ಲ. |
| | | 2 | ಅಂಗಂಡಿಗಳು, ಸಾರ್ವಜನಿಕ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು & ಸಾರ್ವಜನಿಕ ಮನರಂಜನಾ ಸ್ಥಳಗಳಲ್ಲಿ ಯಾವುದೇ ಪ್ರಜೆಗೆ ಧರ್ಮ, ಕುಲ, ಜಾತಿ, ಲಿಂಗ, ಜನ್ಮ ಸ್ಥಳಗಳ ಆಧಾರದ ಮೇಲೆ ಅಸಮರ್ಥತೆ, ಹೊಣೆ, ನಿರ್ಬಂಧ/ಷರತ್ತಿಗೆ ಒಳಪಡಿಸಬಾರದು. ಇದೇ ರೀತಿಯಾಗಿ ಸಾರ್ವಜನಿಕ ಉಪಯೋಗಕ್ಕೆ ಇರುವ ಬಾವಿಗಳನ್ನು, ಟ್ಯಾಂಕ್‌ಗಳನ್ನು, ಸ್ನಾನದ ಘಟ್ಟಗಳನ್ನು, ರಸ್ತೆಗಳನ್ನು & ಸಾರ್ವಜನಿಕ ವಿರಾಮ ಸ್ಥಳಗಳನ್ನು ಉಪಯೋಗಿಸಲು ನಿರಾಕರಿಸುವಂತಿಲ್ಲ. |
| | | 3 | ಮಹಿಳೆಯರಿಗೆ & ಮಕ್ಕಳಿಗೆ ವಿಶೇಷ ನಿಯಮ ರೂಪಿಸಲು ರಾಜ್ಯಕ್ಕೆ ಅಧಿಕಾರವಿದೆ. |
| | | 4 | ಸಾಮಾಜಿಕ & ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪ್ರಜೆಗಳಿಗೆ ಎಸ್ & ಎಸ್‌ಟಿ ಪ್ರಗತಿಗೆ ರಾಜ್ಯ ವಿಶೇಷ ನಿಯಮ ರೂಪಿಸಬಹುದು. |
| | 16 | 1 | ಸರ್ಕಾರಿ ಸೇವೆಗೆ ಸೇರಲು ಎಲ್ಲಾ ನೌಕರರಿಗೂ ಸಮಾನ ಅವಕಾಶ |
| | | 2 | ಯಾವುದೇ ಪ್ರಜೆಗೆ ಧರ್ಮ, ಕುಲ, ಜಾತಿ, ಲಿಂಗ, ಜನ್ಮ ಸ್ಥಳಗಳ ಆಧಾರದ ಮೇಲೆ ಸರ್ಕಾರಿ ಸೇವೆಗೆ ತಾರತಮ್ಯ ಮಾಡುವಂತಿಲ್ಲ. |
| | | 3 | ರಾಜ್ಯದ/ಸ್ಥಳಿಯ ಸರ್ಕಾರದ ಕೆಲವು ನಿರ್ದಿಷ್ಟ ಸೇವೆಗಳಿಗೆ ನೇಮಕವಾಗಲು ರಾಜ್ಯದಲ್ಲಿನ/ಕೇಂದ್ರಾಡಳಿತ ಪ್ರದೇಶದಲ್ಲಿನ ವಾಸಸ್ಥಳವನ್ನು ಗಣನೆಗೆ ತೆಗೆದುಕೊಳ್ಳುವಂತೆ ಕಾನೂನು ಮಾಡುವ ಅಧಿಕಾರ ಸಂಸತ್ತಿಗಿದೆ. |
| | | 4 | ರಾಜ್ಯದ ಸೇವೆಗಳಲ್ಲಿ ಹಿಂದುಳಿದ ವರ್ಗಗಳ ಪ್ರಜೆಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯತೆಯನ್ನು ಹೊಂದಿಲ್ಲದಿದ್ದರೆ, ಅವರಿಗೆ ಮೀಸಲಾತಿ ನಿಯಮವನ್ನು ರಾಜ್ಯವು ರೂಪಿಸಬಹುದು. |
| | 17 | | ಅಸ್ಪೃಶ್ಯತೆ ಆಚರಣೆಯನ್ನು ಅಳಿಸಿ, ತಡೆಯಬೇಕು. |

GNANADHARE IAS/KAS ACADEMY

| | | | |
|---|---|---|---|
| | | | • 1955ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿ.<br>• 1976ರಲ್ಲಿ ಮೇಲ್ಕಂಡ ಕಾಯ್ದೆಗೆ ತಿದ್ದುಪಡಿ ಮಾಡಿ, "ನಾಗರೀಕ ಹಕ್ಕುಗಳ ರಕ್ಷಣಾ ಕಾಯ್ದೆ" ಎಂದು ಹೆಸರಿಡಲಾಯಿತು.<br>• 1990ರಲ್ಲಿ ಎಸ್ & ಎಸ್‌ಟಿ ಮೇಲಿನ ದೌರ್ಜನ್ಯ ನಿಷೇಧ ಕಾಯ್ದೆ ಜಾರಿ. |
| | **18** | **1** | ಮಿಲಿಟರಿ/ಶೈಕ್ಷಣಿಕ ಬಿರುದುಗಳನ್ನು ಬಿಟ್ಟು ರಾಜ್ಯವು ಇತರ ಬಿರುದುಗಳನ್ನು ನೀಡಬಾರದು. |
| | | **2** | ಭಾರತದ ಪ್ರಜೆ ಯಾವುದೇ ಬಿರುದನ್ನು ವಿದೇಶದಿಂದ ಪಡೆಯಬಾರದು |
| | | **3** | ಭಾರತೀಯಲ್ಲದವರು ಭಾರತದಲ್ಲಿ ಲಾಭದಾಯಕ ಹುದ್ದೆಯಲ್ಲಿದ್ದಾಗ, ರಾಷ್ಟ್ರಪತಿ ಅನುಮತಿ ಇಲ್ಲದೇ ವಿದೇಶದಿಂದ ಬಿರುದು ಪಡೆಯಬಾರದು |
| | | **4** | ಭಾರತದಲ್ಲಿ ಲಾಭದಾಯಕ ಹುದ್ದೆ/ಟ್ರಸ್ಟ್ ಹೊಂದಿರುವ ವ್ಯಕ್ತಿ, ರಾಷ್ಟ್ರಪತಿ ಅನುಮತಿ ಇಲ್ಲದೇ ವಿದೇಶದಿಂದ ಯಾವುದೇ ಬಿರುದು ಸ್ವೀಕರಿಸಬಾರದು. |
| | | | ವಿಶೇಷ ನಿಯಮ: ಬಿರುದುಗಳನ್ನು ಕೊಡಬಾರದೆಂದು ನಿಯಮವಿದ್ದರೂ, ಸಾಮಾಜಿಕ ಸೇವೆ/ಇತರ ಅಮೂಲ್ಯ ಸೇವೆ ಸಲ್ಲಿಸಿದವರಿಗೆ ಭಾರತ ರತ್ನ, ಪದ್ಮ ವಿಭೂಷಣ, ಪದ್ಮಭೂಷಣ, ಪದ್ಮಶ್ರೀಗಳನ್ನು ರಾಷ್ಟ್ರಪತಿ ನೀಡಬಹುದು. ಇವುಗಳನ್ನು ಬಿರುದುಗಳೆಂದು ಪರಿಗಣಿಸುವಂತಿಲ್ಲ. |
| **2** | | | **ಸ್ವಾತಂತ್ರ್ಯದ ಹಕ್ಕು** |
| | **19–22** | | ಸ್ವಾತಂತ್ರ್ಯ ರಕ್ಷಣೆ ಕುರಿತು ವಿವರಣೆ |
| | | **1** | ಎಲ್ಲಾ ಪ್ರಜೆಗಳು ಕೆಳಕಂಡ ಸ್ವಾತಂತ್ರ್ಯಗಳನ್ನು ಅನುಭವಿಸಲು ಹಕ್ಕನ್ನು ಪಡೆದಿದ್ದಾರೆ.<br>1) ವಾಕ್ ಸ್ವಾತಂತ್ರ್ಯ & ಅಭಿಪ್ರಾಯವನ್ನು ವ್ಯಕ್ತಪಡಿಸುವುದು<br>2) ಶಾಂತವಾಗಿ & ಶಸ್ತ್ರ ರಹಿತ ಸಭೆ ಸೇರುವ ಸ್ವಾತಂತ್ರ್ಯ<br>3) ಸಂಘಗಳನ್ನು ಸ್ಥಾಪಿಸುವ ಸ್ವಾತಂತ್ರ್ಯ<br>4) ದೇಶಾದ್ಯಂತ ಸ್ವತಂತ್ರವಾಗಿ ಚಲಿಸುವ ಸ್ವಾತಂತ್ರ್ಯ<br>5) ಭಾರತದ ಯಾವುದೇ ಭಾಗದಲ್ಲಾದರೂ ವಾಸಿಸುವ & ನೆಲೆಸುವ ಸ್ವಾತಂತ್ರ್ಯ ನೀಡುವುದು.<br>6) ಯಾವುದೇ ಉದ್ಯೋಗ, ವ್ಯಾಪಾರ ಮಾಡುವ ಸ್ವಾತಂತ್ರ್ಯ. |
| | **20** | | ಅಪರಾಧಿಗೆ ನಿರಂಕುಶ & ಹೆಚ್ಚು ವಿರುದ್ಧ ರಕ್ಷಣೆ |
| | | **1** | ಅಪರಾಧಿಗೆ ಅಪರಾಧ ಮಾಡಿದ ಸಮಯದಲ್ಲಿದ್ದ ಕಾನೂನು ಅನ್ವಯ ಶಿಕ್ಷೆ |

GNANADHARE IAS KAS ACADEMY

| | | | |
|---|---|---|---|
| | | | ಕೊಡಬೇಕು. |
| | | 2 | ಒಂದೇ ಅಪರಾಧಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಶಿಕ್ಷೆ ನೀಡಬಾರದು. |
| | | 3 | ಅಪರಾಧ ಮಾಡಿದ ವ್ಯಕ್ತಿಯನ್ನು ತನ್ನ ವಿರುದ್ಧ ತಾನೇ ಸಾಕ್ಷಿ ನೀಡುವಂತೆ ಒತ್ತಾಯಿಸಬಾರದು. |
| | **21** | | ಯಾವುದೇ ವ್ಯಕ್ತಿಯ ಜೀವ/ವೈಯುಕ್ತಿಕ ಸ್ವಾತಂತ್ರ್ಯವನ್ನು ಕಾನೂನು ರೂಪಿಸಿದ ವಿಧಾನ ಬಾಹಿರ ಕಸಿದುಕೊಳ್ಳಬಹುದು. |
| | | ಎ | 6–14 ವರ್ಷದೊಳಗಿನ ಮಕ್ಕಳ ವಿದ್ಯಾಭ್ಯಾಸ ಹಕ್ಕು ಅಕ್ರಮ ಬಂಧನ & ಸೆರೆಮನೆವಾಸ ವಿರುದ್ಧ ರಕ್ಷಣೆ. |
| | **22** | | ಅಕ್ರಮ ಬಂಧನ & ಸೆರೆವಾಸ ವಿರುದ್ಧ ರಕ್ಷಣೆ |
| | | 1 | ಜಾಗ್ರತೆಯ ಕಾರಣಗಳನ್ನು ತಿಳಿಸದೆ, ಬಂಧಿಸಿದ ವ್ಯಕ್ತಿಯನ್ನು ಬಂಧನದಲ್ಲಿಡಬಾರದು & ಆ ವ್ಯಕ್ತಿಯು ತನಗೆ ಬೇಕಾದ ವಕೀಲರ ಸಲಹೆ ಪಡೆದು ರಕ್ಷಿಸಿಕೊಳ್ಳವುದನ್ನು ನಿರಾಕರಿಸಬಾರದು. |
| | | 2 | ಬಂಧಿಸಿದ ವ್ಯಕ್ತಿಯನ್ನು 24 ಗಂಟೆಯೊಳಗೆ ಹತ್ತಿರದ ನ್ಯಾಯಾಧೀಶರಾಧ ಮುಂದೆ ಹಾಜರುಪಡಿಸಬೇಕು & ನ್ಯಾಯಾಧೀಶರ ಅಪ್ಪಣೆ ಇಲ್ಲದೆ 1 ದಿನಕ್ಕಿಂತ ಹೆಚ್ಚು ಕಾಲ ಬಂಧನದಲ್ಲಿಡಬಾರದು. |
| | | 3 | ಈ ರಕ್ಷಣೆ ವಿದೇಶಿ ಶತ್ರುವಿಗೆ/ಮುನ್ನೆಚ್ಚರಿಕೆ ಬಂಧನ ಕಾಯ್ದೆ ಅನ್ವಯ ಬಂಧಿಸಲ್ಪಟ್ಟವರಿಗೆ ಅನ್ವಯಿಸುವುದಿಲ್ಲ. |
| | | 4 | ಮುನ್ನೆಚ್ಚರಿಕೆ ಬಂಧನ ಕಾಯ್ದೆ ಅನ್ವಯ, ಸಲಹಾ ಮಂಡಲಿಯ ಅನುಮತಿಯಿಲ್ಲದೇ ಯಾರನ್ನು ತಿಂಗಳಿಗೆ ಹೆಚ್ಚು ಕಾಲ ಬಂಧನದಲ್ಲಿಡಬಾರದು. |
| | | 5 | ಮುನ್ನೆಚ್ಚರಿಕೆ ಬಂಧನ ಕಾಯ್ದೆ ಅನ್ವಯ ಯಾವುದೇ ವ್ಯಕ್ತಿಯನ್ನು ಬಂಧನದಲ್ಲಿಟ್ಟಾಗ ಬಂಧನದ ಕಾರಣಗಳನ್ನು ಅಧಿಕಾರಗಳು ತಿಳಿಸಿ ಅವನ ರಕ್ಷಣೆಗೆ ಜಾಗೃತ ಅವಕಾಶ ಕಲ್ಪಿಸಿಕೊಡುವುದು |
| | | 6 | ಬಂಧನದ ಕಾರಣಗಳನ್ನು ತಿಳಿಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿದುದ್ದವೆಂದು ಮನವರಿಕೆ |
| | | 7 | ಬಂಧನದ ಗರಿಷ್ಠ ಅವಧಿಯನ್ನು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದು. |
| 3 | | | **ಶೋಷಣೆ ವಿರುದ್ಧ ಹಕ್ಕು** |
| | **23–24** | | ವೈಯುಕ್ತಿಕ ತಾರತಮ್ಯ ತಪ್ಪಿಸಿ, ರಕ್ಷಣೆ ನೀಡುವುದು |

GNANADHARE IAS KAS ACADEMY

| | | | |
|---|---|---|---|
| | 23 | 1 | (1) Traffic in Human beings Begur & ರೀತಿಯ ಬಲವಂತ ದುಡಿಮೆಗಳನ್ನು ನಿಷೇಧಿಸಲಾಗಿದೆ. ಹಾಗೆಯೇ ಅನೈತಿಕ/ಇತರ ಉದ್ದೇಶಗಳಿಗಾಗಿ ಮಹಿಳೆಯರು, ಮಕ್ಕಳು & ಬಲಹೀನರನ್ನು ಶೋಷಣೆ ಮಾಡುವಂತಿಲ್ಲ. “ಬಡವರಿಂದ ಪುಕ್ಕಟ ದುಡಿಮೆ” Begar ಇದೇ “ಗುಲಾಮಗಿರಿ” ಪದ ಬಳಸುವುದಕ್ಕೆ ಬದಲಾಗಿ Traffic in Human beings Begur ಪದಗಳನ್ನು ಬಳಸಲಾಗಿದೆ. |
| | | 2 | ಸಾರ್ವಜನಿಕ ಉದ್ದೇಶಕ್ಕಾಗಿ ಯಾವ ಭೇದ ಭಾವನೆ ಇಲ್ಲದೇ ರಾಜ್ಯವು ಕಡ್ಡಾಯ ಸೇವೆಯನ್ನು ಜಾರಿಗೆ ತರಬಹುದು. |
| | 24 | | 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆ, ಗಣಿ/ಅಪಾಯ ಉಂಟು ಮಾಡುವ ಕೆಲಸದಲ್ಲಿ ನೇಮಿಸಬಾರದು |
| 4 | | | **ಧಾರ್ಮಿಕ ಸ್ವಾತಂತ್ರ್ಯ ಹಕ್ಕು** |
| | 25–28 | | ಆತ್ಮ ಸಾಕ್ಷಿಗೆ ಸರಿ ಎನಿಸುವ ಧರ್ಮಪಾಲನೆ |
| | 25 | 1 | ಸಮಾನವಾಗಿ ಎಲ್ಲಾ ವ್ಯಕ್ತಿಗಳೂ ಆತ್ಮಸಾಕ್ಷಿ ಸ್ವಾತಂತ್ರ್ಯ ಹೊಂದಲು & ಸ್ವತಂತ್ರವಾಗಿ ಧರ್ಮವನ್ನು ಅನುಸರಿಸುವ, ಆಚರಿಸುವ & ಪ್ರಚಾರ ಮಾಡುವ ಹಕ್ಕು. |
| | | 2 | ಕಾನೂನಿನ ಕಾರ್ಯಗತಕ್ಕೆ ಧಾರ್ಮಿಕ ಸ್ವಾತಂತ್ರ್ಯ ದಕ್ಕೆ ತರಬಾರದು |
| | | 2 ಬಿ | ಹಿಂದೂಗಳು ಎಂದರೆ, ಸಿಖ್ಖರು ಜೈನರು, ಬೌದ್ಧರನ್ನು ಒಳಗೊಂಡಿರುತ್ತದೆ. |
| | 26 | | ಸಾರ್ವಜನಿಕ ಶಿಸ್ತು, ನೀತಿ & ನೈರ್ಮಲ್ಯಕ್ಕೆ ಒಳಪಟ್ಟು, ಪ್ರತಿಯೊಂದು ಧಾರ್ಮಿಕ ಸಂಸ್ಥೆ ಕೆಳಕಂಡ ವ್ಯವಹಾರಗಳನ್ನು ನಡೆಸಲು ಹಕ್ಕನ್ನು ಪಡೆದಿದೆ. |
| | | ಎ | ಧಾರ್ಮಿಕ & ಚಾರಿಟಬಲ್ ಉದ್ದೇಶಗಳಿಗೆ ಸಂಸ್ಥೆಗಳನ್ನು ಸ್ಥಾಪಿಸುವುದು. |
| | | ಬಿ | ತಮ್ಮ ಧರ್ಮದ ವಿಷಯಗಳನ್ನು ಮೇಲ್ವಿಚಾರಣೆ ಮಾಡುವುದು |
| | | ಸಿ | ಚರ & ಸ್ಥಿರ ಆಸ್ತಿಯನ್ನು ಇಟ್ಟುಕೊಳ್ಳುವುದು & ಸಂಪಾದಿಸುವುದು |

GNANADHARE IAS KAS ACADEMY

| | | | |
|---|---|---|---|
| | | ಡಿ | ಆಸ್ತಿಯನ್ನು ಕಾನೂನಿಗೆ ಅನುಸಾರ ನಿರ್ವಹಿಸುವುದು |
| | 27 | | ಒಂದು ನಿರ್ದಿಷ್ಟ ಧರ್ಮ ಪೋಷಣೆಗಾಗಿ ತೆರಿಗೆ ಪಾವತಿ ಸ್ವಾತಂತ್ರ್ಯ |
| | 28 | 1 | ರಾಜ್ಯದಿಂದ ಪೂರ್ಣ ಧನಸಹಾಯ ಪಡೆಯುವ ಯಾವುದೇ ವಿದ್ಯಾಸಂಸ್ಥೆ, ಧಾರ್ಮಿಕ ವಿಷಯಗಳನ್ನು ಬೋಧಿಸಬಾರದು |
| | | 2 | ಧಾರ್ಮಿಕ ದತ್ತಿ ಸಹಾಯದಿಂದ ಸ್ಥಾಪಿತವಾಗಿರುವ ವಿದ್ಯಾಸಂಸ್ಥೆಗೆ ಈ ನಿರ್ಬಂಧ ಅನ್ವಯಿಸುವುದಿಲ್ಲ. |
| | | 3 | ಯಾವುದೇ ವಿದ್ಯಾಸಂಸ್ಥೆಯಲ್ಲಿ ಧಾರ್ಮಿಕ ವಿಷಯವನ್ನು ಬೋಧನೆ ಮಾಡಲು & ಧಾರ್ಮಿಕ ಪೂಜೆ ಮಾಡಲು ಅವಕಾಶವಿದ್ದರೆ, ವಿದ್ಯಾರ್ಥಿ ಅನುಮತಿ ಅಗತ್ಯ. |
| **5** | | | **ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸ ಹಕ್ಕು** |
| | 29–30 | | ಸಾಂಸ್ಕೃತಿಕ, ಧಾರ್ಮಿಕ & ಅಲ್ಪ ಸಂಖ್ಯಾತರ ಹಿತರಕ್ಷಣೆ |
| | 29 | 1 | ದೇಶದ ಯಾವುದೇ ಭಾಗದಲ್ಲಿ ನೆಲೆಸಿರುವ ಯವುದೇ ವರ್ಗದ ಪ್ರಜೆಗಳು, ಭಾಷೆ, ಲಿಪಿ, ಸಂಸ್ಕೃತಿಯನ್ನು ರಕ್ಷಿಸುವ ಹಕ್ಕನ್ನು ಪಡೆದಿರುವುದು. |
| | | 2 | ರಾಜ್ಯದಿಂದ ಧನ ಸಹಾಯ/ಅನುದಾನ ಪಡೆಯುತ್ತಿರುವ ಯಾವುದೇ ವಿದ್ಯಾಸಂಸ್ಥೆ, ಧರ್ಮ, ಕುಲ, ಜಾತಿ, ಭಾಷೆ ಆಧಾರದ ಮೇಲೆ ಯಾವ ಪೌರನಿಗೂ ಪ್ರವೇಶವನ್ನು ನಿರಾಕರಿಸುವಂತಿಲ್ಲ. |
| | 30 | 1 | ಧಾರ್ಮಿಕ/ಭಾಷಾ ಅಲ್ಪಸಂಖ್ಯಾತರು ತಮ್ಮದೇ ಆದ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಆಡಳಿತವನ್ನು ನಡೆಸುವ ಹಕ್ಕನ್ನು ಪಡೆದಿದ್ದಾರೆ. |
| | | 2 | ವಿದ್ಯಾಸಂಸ್ಥೆಗಳಿಗೆ ರಾಜ್ಯವೂ ಧನ ಸಹಾಯ ನೀಡುವಾಗ, ಅಲ್ಪ ಸಂಖ್ಯಾತರ ನಿರ್ವಹಣೆಯಲ್ಲಿರುವ ಕಾರ್ಯದ ಮೇಲೆ ತಾರತಮ್ಯ ತೋರಬಾರದು. |
| | | | ಅಲ್ಪಸಂಖ್ಯಾತರ ಅರ್ಥ : ಒಂದು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪ್ರತ್ಯೇಕ ಭಾಷೆ, & ಧರ್ಮವನ್ನು ಹೊಂದಿರುವ ಪ್ರಜೆಗಳು ಶೇ.50ಕ್ಕಿಂತ ಕಡಿಮೆ ಇದ್ದರೆ, ಅವರು ಆ ರಾಜ್ಯದ ಅಲ್ಪಸಂಖ್ಯಾತರು.<br>ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಅಯೋಗ – 1983 (ಗೋಡಾವಾಲ ನೇತೃತ್ವ) |



GNANADHARE IAS KAS ACADEMY

| | | | |
|---|---|---|---|
| | **31** | | ಸ್ವತ್ತಿನ ಹಕ್ಕು ರದ್ದುಗೊಳಿಸಲಾಗಿದೆ. |
| **6** | | | **ಸಂವಿಧಾನ ಪರಿಹಾರ ಹಕ್ಕು** |
| | **32** | | ಡಾ. ಬಿ.ಆರ್. ಅಂಬೇಡ್ಕರ್ 32ನೇ ವಿಧಿಯನ್ನು ಸಂವಿಧಾನದ ಆತ್ಮ & ಹೃದಯ ಎಂದು ಕರೆದರು.<br>"ಮೂಲಭೂತ ಹಕ್ಕುಗಳ ರಕ್ಷಕ & ಗ್ಯಾರಂಟರ್" ಎಂದು ಕರೆಯುವುದು – ಸುಂಪ್ರೀಕೋರ್ಟ್.<br>ಸಂವಿಧಾನದ 226ನೇ ವಿಧಿ ಅನ್ವಯ :<br>ಹೈಕೋರ್ಟ್‌ಗಳು ಕೂಡ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಹಾಗೂ ಇತರ ವಿಷಯಗಳ ಬಗ್ಗೆ ಪರಿಹಾರಗಳನ್ನು ಸೂಚಿಸಲು ರಿಟ್ ಅರ್ಜಿಗಳನ್ನು ಸ್ವೀಕರಿಸಬಹುದು.<br>ಈ ವಿಧಿಯ 4 ಮುಖ್ಯ ಅಂಶಗಳು :<br>1. ತನ್ನ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಅರಿವಾದಾಗ ನೇರವಾಗಿ ಸುಪ್ರೀಂಕೋರ್ಟ್‌ಗೆ ಹೋಗಬಹುದು.<br>2. ಸುಪ್ರೀಂಕೋರ್ಟ್‌ಗೆ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಮಾಡುವ ಅಧಿಕಾರವಿರುವುದರಿಂದ ನಿರ್ದೇಶನ, ಆಜ್ಞೆಯನ್ನು ನೀಡುವುದರ ಜೊತೆಗೆ ವಿವಿಧ ರಿಟ್ ಅರ್ಜಿಗಳ ಸ್ವೀಕಾರ ಅಧಿಕಾರಾವಿದೆ.<br>3. ಸುಪ್ರೀಂಕೋರ್ಟ್‌ಗೆ ನೀಡಿರುವ ಮೇಲಿನ ಅಧಿಕಾರಗಳನ್ನು ಇತರ ಯಾವುದೇ ನ್ಯಾಯಾಲಯ ತನ್ನ ಪರಿಮಿತಿಯೊಳಗೆ ಚಲಾಯಿಸದಂತೆ ಸಂಸತ್ತು ಅಧಿಕಾರ ನೀಡಬಹುದು.<br>4. ಸಂವಿಧಾನದಲ್ಲಿ ಅಳವಡಿಸಿರುವ 359ನೇ ವಿಧಿಯನ್ವಯ ಮಾತ್ರ ಸಂವಿಧಾನ ಪರಿಹಾರ ಹಕ್ಕನ್ನು ಸಸ್ಪೆಂಡ್ ಮಾಡಬಹುದು. (ತುರ್ತು ಪರಿಸ್ಥಿತಿ ಸಂದರ್ಭದಲ್ಲಿ)<br>ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ರಿಟ್‌ಗಳು :<br>1) ಹೇಬಿಯಸ್ ಕಾರ್ಪಸ್<br>2) ಮ್ಯಾಂಡಮಸ್<br>3) ಪ್ರೊಹಿಬಿಯಸ್<br>4) ಸರ್ಷಿಯಾರರಿ<br>5) ಕೋವಾರಂಟ್ |

## ಬಂಧಿ ಪ್ರತ್ಯಕ್ಷೀಕರಣ (Habeas Corpus):

- ವ್ಯಕ್ತಿಯೊಬ್ಬನನ್ನು ಮತ್ತೊಬ್ಬ ವ್ಯಕ್ತಿ/ಪೋಲಿಸ್/ಕೇಂದ್ರ/ರಾಜ್ಯ ಸರ್ಕಾರ ಅಕ್ರಮ ಬಂಧನದಲ್ಲಿಟ್ಟಾಗ, ಬಂಧಿತ ವ್ಯಕ್ತಿಯನ್ನು 24 ಗಂಟೆಯೊಳಗೆ ಬಿಡುಗಡೆ ಮಾಡುವಂತೆ ನ್ಯಾಯಾಲಯ ಆದೇಶ ಹೊರಡಿಸುವುದು.
- ಕ್ರಿಮಿನಲ್ ಅಪರಾಧಕ್ಕಾಗಿ ನ್ಯಾಯಲಯವು ವ್ಯಕ್ತಿಯೊಬ್ಬನನ್ನು ಬಂಧನದಲ್ಲಿಟ್ಟಾಗ ಅವನನ್ನು ಬಿಡುಗಡೆ ಮಾಡುವಂತೆ ರಿಟ್ ಅರ್ಜಿಯನ್ನು ಸಲ್ಲಿಸುವಂತಿಲ್ಲ.

## ಪರಮಾದೇಶ (Mandomus) :

ಮೂಲಭೂತ ಹಕ್ಕುಗಳ ರಕ್ಷಣೆಗಾಗಿ, ಸಾರ್ವಜನಿಕ ಅಧಿಕಾರಿ ತನ್ನ ಕರ್ತವ್ಯವನ್ನು ನೆರವೇರಿಸಲು ನಿರಾಕರಿಸಿದಾಗ, ಕರ್ತವ್ಯ ನೆರವೇರಿಸುವಂತೆ ಹೈಕೋರ್ಟ್/ಸುಪ್ರಿಂ ಕೋರ್ಟ್ ಆದೇಶ ನೀಡುವುದು.

ಈ ರಿಟ್ ಅರ್ಜಿಯನ್ನು ರಾಷ್ಟ್ರಪತಿ, ರಾಜ್ಯಪಾಲರು & ಖಾಸಗಿ ವ್ಯಕ್ತಿಗಳ ವಿರುದ್ದ ಸಲ್ಲಿಸುವಂತಿಲ್ಲ.

## ಪ್ರತಿಬಂಧಕಾಜ್ಞೆ (Prohibition) :

ಕೆಳಗಿನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಪ್ರಕೃತಿ ನಿಯಮಕ್ಕೆ ವಿರುದ್ದವಾಗಿ, ತೀರ್ಪು ನೀಡದಂತೆ ತಡೆಯಲು, ಸುಪ್ರಿಂಕೋರ್ಟ್ ಅಥವಾ ಹೈಕೋರ್ಟ್ ರಿಟ್ ಹೊರಡಿಸುವುದು.

## ಸರ್ಷಿಯಾರರಿ (Certiorari) :

ಕೆಳಗಿನ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿ ಮೀರಿ ತೀರ್ಪು ನೀಡಿದ್ದಾದರೆ ಅಂತಹ ತೀರ್ಪನ್ನು ರದ್ದುಪಡಿಸಿ, ಅಂತಹ ಮೊಕದ್ದಮೆಯನ್ನು ಕಳುಹಿಸಬೇಕೆಂದು/ವರ್ಗಾಹಿಸಬೇಕೆಂದು ಸುಪ್ರೀಂಕೋರ್ಟ್ ಕೆಳಗಿನ ನ್ಯಾಯಾಲಯಕ್ಕೆ ನೀಡುವ ರಿಟ್.

## ಕೋ–ವಾರೆಂಟ್ (Quo-warrant) :

ಅರ್ಹತೆಯಿಲ್ಲದೆ ಅಕ್ರಮವಾಗಿ ಸರ್ಕಾರದ/ಸಾರ್ವಜನಿಕ ಹುದ್ದೆಗಳನ್ನು ಹೊಂದಿದ್ದರೂ ಅಂತಹ ವ್ಯಕ್ತಿಗಳ ವಿರುದ್ದ ನ್ಯಾಯಾಲಯದಲ್ಲಿ ರಿಟ್ ಮೂಲಕ ಪ್ರಶ್ನಿಸಬಹುದು.

## ಮೂಲಭೂತ ಹಕ್ಕುಗಳ ಲಕ್ಷಣಗಳು :

1. **ನ್ಯಾಯರಕ್ಷಿತ ಹಕ್ಕುಗಳಾಗಿವೆ :** ಮೂಲಭೂತ ಹಕ್ಕುಗಳಿಗೆ ಕಾನೂನಿಂದ ರಕ್ಷಣೆ ಇದೆ. ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ಹೈಕೋರ್ಟ್ & ಸುಪ್ರಿಂಕೋರ್ಟ್‌ಗಳಲ್ಲಿ ರಿಟ್‌ಗಳ ಮೂಲಕ ರಕ್ಷಣೆ ಪಡೆಯಬಹುದು. ಇವು ಸಾಮಾನ್ಯ ಕಾನೂನುಗಳಿಗಿಂತ ಶ್ರೇಷ್ಠವಾದವು. ಇಂತಹ ಮೂಲಭೂತ ಹಕ್ಕುಗಳ ಬಗ್ಗೆ ಡಿ.ಡಿ.ಬಸು ಹೀಗೆ ಹೇಳುತ್ತಾರೆ. ಲಿಖಿತ ಸಂವಿಧಾನದಲ್ಲಿ ನಮೂದಿಸಿ ರಕ್ಷಿಸಲ್ಪಡುವ ಹಕ್ಕುಗಳನ್ನು ಮೂಲಭೂತ ಹಕ್ಕುಗಳು ಎಂದು ಕರೆಯಬಹುದು ಎಂದು ಹೇಳಿದ್ದಾರೆ. ಭಾರತದ ಸುಪ್ರಿಂಕೋರ್ಟ್ 1967ರಲ್ಲಿ ನೀಡಿದ ಗೋಲ್ಕನಾಥ್ ಮೊಕದ್ದಮೆಯಲ್ಲಿ ಮೂಲಭೂತ ಹಕ್ಕುಗಳು ಸ್ವಾಭಾವಿಕ ಹಕ್ಕುಗಳಿಂದ ಉಂಟಾಗಿದೆ ಎಂದು ತಿಳಿಸಿತು.
2. **ಸ್ವಾಭಾವಿಕವಾಗಿ ಅನ್ವಯವಾಗುವಂತಹವು :** ಭಾರತದ ಸಂವಿಧಾನವು ಮೂಲಭೂತ ಹಕ್ಕುಗಳನ್ನು ಯಾವುದೇ ಲಿಂಗ, ಜಾತಿ, ಜನಾಂಗದ ತಾರತಮ್ಯವಿಲ್ಲದೇ ಎಲ್ಲರಿಗೂ ಅನ್ವಯವಾಗುವಂತೆ ಮಾಡಿದೆ.
3. **ರಾಜಕೀಯ ಪ್ರಜಾಪ್ರಭುತ್ವ ತತ್ವವನ್ನು ಉತ್ತೇಜಿಸುವುದು :** ಮೂಲಭೂತ ಹಕ್ಕುಗಳು ಪ್ರಜಾಪ್ರಭುತ್ವದ ಧ್ಯೇಯಗಳನ್ನು ಉತ್ತೇಜಿಸುತ್ತದೆ. ಈ ಮೂಲಕ ಪ್ರತಿಯೊಬ್ಬ ವ್ಯಕ್ತಿಯು ಮುಕ್ತವಾಗಿ ಜೀವಿಸಲು ಅವಕಾಶ ಕಲ್ಪಿಸಿವೆ. ಹಾಗೂ ರಾಜಕೀಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿರುವುದರಿಂದ ರಾಜಕೀಯ ಪ್ರಜಾಪ್ರಭುತ್ವ ತತ್ವವನ್ನು ಆಧರಿಸಿದೆ.
4. ವ್ಯಕ್ತಿಯ ಮೂಲಭೂತ ಹಕ್ಕುಗಳಿಗೆ, ಇತರೆ ವ್ಯಕ್ತಿ/ಸಂಸ್ಥೆ/ಸರ್ಕಾರದಿಂದ ಚ್ಯುತಿ ಉಂಟಾದರೆ ಸರ್ವೋಚ್ಚ ನ್ಯಾಯಾಲಯಗಳಿಗೆ ಮೊರೆ ಹೋಗಬಹುದು.
5. ಯಾವುದೇ ತಾರತಮ್ಯ ಇಲ್ಲದೇ, ಎಲ್ಲಾ ಪೌರರು ಮೂಲಭೂತ ಹಕ್ಕುಗಳನ್ನು ಅನುಭವಿಸಬಹುದು.
6. ಸಂವಿಧಾನವು ಪ್ರತಿಯೊಂದು ಮೂಲಭೂತ ಹಕ್ಕಿಗೆ ಕೆಲವು ನಿರ್ಬಂಧಗಳನ್ನು ವಿಧಿಸಿದೆ.
7. ಮೂಲಭೂತ ಹಕ್ಕುಗಳನ್ನು ತುರ್ತು ಪರಿಸ್ಥಿತಿಯ ಘೋಷಣೆಯ ಸಂದರ್ಭದಲ್ಲಿ ತಾತ್ಕಲಿಕವಾಗಿ ಮೊಟಕುಗೊಳಿಸುವ ಅಧಿಕಾರ ರಾಷ್ಟ್ರಪತಿಗಿದೆ.
8. ಮೂಲಭೂತ ಹಕ್ಕುಗಳು ಅಪರಿಮಿತ ಸ್ವರೂಪದ ಹಕ್ಕುಗಳಲ್ಲ, ಇವು ರಾಜ್ಯದ ಹಿತ ದೃಷ್ಟಿಯಿಂದ ಸರ್ಕಾರವು ಸೂಕ್ತ ನಿರ್ಬಂಧಗಳನನು ಹೇರಬಲ್ಲದು.
9. ಕೆಲವು ಮೂಲಭೂತ ಹಕ್ಕುಗಳು ದೇಶದಲ್ಲಿರುವ ಎಲ್ಲಾ ಪ್ರಜೆಗಳಿಗೂ ಅನ್ವಯಿಸಿದರೆ ಮತ್ತೆ ಕೆಲವು ಭಾರತದ ಪ್ರಜೆಗಳಿಗೆ ಮಾತ್ರ ನೀಡಲಾಗಿದೆ.

10. ಮೂಲಭೂತ ಹಕ್ಕುಗಳನ್ನು ಮೂಲ ಸಂವಿಧಾನದಿಂದ ಬಂದಿರುವುದರಿಂದ ಇವುಗಳನ್ನು ತೆಗೆದುಹಾಕುವಂತಿಲ್ಲ.
11. ಮೂಲಭೂತ ಹಕ್ಕುಗಳು ಜನರಲ್ಲಿ ಮುಕ್ತ & ಸ್ವಾತಂತ್ರ್ಯದ ಮನೋಭಾವನೆಯನ್ನು ಮೂಡಿಸುತ್ತದೆ.
12. ಸಂವಿಧಾನ ನೀಡಿರುವ ಹಕ್ಕುಗಳು ಸಕಾರಾತ್ಮಕ & ನಕಾರಾತ್ಮಕ ಸ್ವರೂಪದವುಗಳಾಗಿವೆ.

## ಮೂಲಭೂತ ಹಕ್ಕುಗಳ ಪ್ರಮುಖ ಅಂಶಗಳು:

1. ಪೌರರು & ವಿದೇಶಿಯರನ್ನು ಪ್ರತ್ಯೇಕಿಸುತ್ತದೆ.
2. ಅಲಿಖಿತ ಹಕ್ಕುಗಳಿಗೆ ಅವಕಾಶವಿಲ್ಲ.
3. ಮೂಲಭೂತ ಹಕ್ಕುಗಳನ್ನು ರದ್ದು ಮಾಡಬಹುದು
4. ವಿಸ್ತಾರವಾದ ನಿರೂಪಣೆ
5. ನ್ಯಾಯ ರಕ್ಷಿತವಾದುದು.
6. ಪರಿಮಿತ ಸ್ವಭಾವ
7. ಕ್ರಿಯಾತ್ಮಕ & ನಿಷೇಧಾತ್ಮಕ ಸ್ವರೂಪವಾದುದು.
8. ಮೂಲಭೂತ ಹಕ್ಕುಗಳನ್ನು ತಿದ್ದುಪಡಿ ಮಾಡಬಹುದು

## ವಿದೇಶಿಗರಿಗೆ ಸಂಬಂಧವಿಲ್ಲದ, ಅವರಿಗೆ ನೀಡಲಾಗದ Article :

15, 16, 19, 29, 30

## ವಿದೇಶಿಗರಿಗೂ, ಪೌರರಿಗೂ ಅನ್ವಯವಾಗುವ Article :

14, 20, 21, 22, 23, 24, 25, 26, 27, 28

GNANADHARE IAS KAS ACADEMY

# ರಾಜ್ಯ ನಿರ್ದೇಶಕ ತತ್ವಗಳು :

- ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವ, ಕಲ್ಯಾಣ ರಾಜ್ಯ ಹಾಗೂ ಸಮಾಜವಾದವನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಸಂವಿಧಾನವು ರಾಜ್ಯಕ್ಕೆ ಸೂಕ್ತ ಮಾಗದರ್ಶಿ ಸೂತ್ರಗಳನ್ನು ನೀಡಿದೆ. ಇವುಗಳನ್ನು ರಾಜ್ಯ ನಿರ್ದೇಶಕ ತತ್ವಗಳೆನ್ನುವರು.
- ಭಾರತ ಸಂವಿಧಾನದ 4ನೇ ಭಾಗದಲ್ಲಿರುವ 36ರಿಂದ 51ರವರೆಗೆ ರಾಜ್ಯ ನಿರ್ದೇಶಕ ತತ್ವಗಳ ವಿವರಣೆ ಇದೆ.
- ರಾಜ್ಯ ನಿರ್ದೇಶಕ ತತ್ವಗಳನ್ನು ಐರ್ಲೆಂಡ್ ಸಂವಿಧಾನದಿಂದ ಎರವಲು ಪಡೆಯಲಾಗಿದೆ.

## ರಾಜ್ಯ ನಿರ್ದೇಶಕ ತತ್ವಗಳು

| ವಿಧಿಗಳು | ವಿಷಯ ವಿಶ್ಲೇಷಣೆ |
|---|---|
| 36 | ರಾಜ್ಯ ಎಂಬ ಪದವನ್ನು 3ನೇ ಭಾಗದಲ್ಲಿ ಬಳಸಿರುವ ವಿಶಾಲಾರ್ಥದಲ್ಲಿ 4ನೇ ಭಾಗದಲ್ಲೂ ಬಳಸಲಾಗಿದೆ. ಕೇಂದ್ರ/ಸ್ಥಳಿಯ ಪ್ರಾಧಿಕಾರಗಳು ಆರ್ಥಿಕ & ಸಾಮಾಜಿಕ ನ್ಯಾಯಗಳನ್ನು ಪ್ರಜೆಗಳಿಗೆ ದೊರಕಿಸಿಕೊಡಲು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ. |
| 37 | ರಾಜ್ಯವೂ ಕಾನೂನುಗಳನ್ನು ರೂಪಿಸುವಾಗ ಈ ತತ್ವಗಳನ್ನು ಅಳವಡಿಸಬೇಕು |
| 38 | 1. ರಾಜ್ಯವು ಪ್ರಜೆಗಳ ಕಲ್ಯಾಣವನ್ನು ಸಾಧಿಸಲು ಪ್ರಯತ್ನಿಸಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಉಂಟಾಗುವಂತೆ ಮಾಡುವುದು.<br>2. ಆದಾಯ ಅಸಮಾನತೆಯನ್ನು ಕಡಿಮೆ ಮಾಡಿ, ವ್ಯಕ್ತಿಗಳ, ವಿವಿಧ ಪ್ರದೇಶಗಳಲ್ಲಿ ವಾಸಿಸುವ/ವಿವಿಧ ಹುದ್ದೆಗಳಲ್ಲಿರುವ ವ್ಯಕ್ತಿಗಳ ಸ್ಥಾನ, ಸೌಲಭ್ಯ, ಅವಕಾಶ ಅಸಮಾನತೆ ತೆಗೆದುಹಾಕುವುದು. |
| 39 | 1. ಪುರುಷರು & ಮಹಿಳೆಯರಿಗೆ ಸಮಾನವಾಗಿ, ಜೀವನಕ್ಕೆ ಅಗತ್ಯ ಸಾಧನೆಗಳನ್ನು ಒದಗಿಸುವುದು.<br>2. ಸಮಾಜದ ಮೆಟಿರೀಯಲ್ ರಿಸೋರ್, ಒಡೆತನ & ನಿಯಂತ್ರಣಗಳನ್ನು ಸಾರ್ವಜನಿಕ ಹಿತಾದೃಷ್ಟಿಯಿಂದ ವಿರತಣೆ ಮಾಡುವುದು<br>3. ಸಂಪತ್ತು & ಉತ್ಪಾದನಾ ಸಾಧನಗಳು ಕೆಲವರಿಗಷ್ಟೆ ಕೇಂದ್ರಿಕೃತವಾಗದಂತೆ ಆರ್ಥಿಕ ಪದ್ಧತಿಯನ್ನು ಅನುಸರಿಸುವುದು.<br>4. ಪುರುಷರು & ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡುವುದು<br>5. ಕಾರ್ಮಿಕರ & ಮಕ್ಕಳ ಆರೋಗ್ಯ ಹಾಗೂ ಶಕ್ತಿಯನ್ನು ದುರುಪಯೋಗ ಪಡಿಸಬಾರದು.<br>6. ಮಕ್ಕಳು ಆರೋಗ್ಯವಾಗಿ ಬೆಳೆಯಲು ಅವಕಾಶಗಳನ್ನು & ಸೌಲಭ್ಯಗಳನ್ನು ನೀಡಿ, |

GNANADHARE IAS ACADEMY

| | |
|---|---|
| | ಅವರ ಸ್ವಾತಂತ್ರ್ಯ & ವ್ಯಕ್ತಿತ್ವ ಬೆಳವಣಿಗೆಗೆ ಪರಿಸ್ಥಿತಿಗಳನ್ನು ಉಂಟು ಮಾಡಬೇಕು. ಮಕ್ಕಳು & ಯುವಕರ ಶೋಷಣೆ ವಿರುದ್ದ ರಕ್ಷಣೆ |
| 40 | ಗ್ರಾಮ ಪಂಚಾಯಿತಿಗಳ ಸ್ಥಾಪನೆ |
| 41 | ನಿರುದ್ಯೋಗಿಗಳಿಗೆ, ವೃದ್ದರಿಗೆ, ಕಾಯಿಲೆಗಳಿಂದ ನರಳುವವರಿಗೆ & ಅಂಗವಿಕಲರಿಗೆ ಹಣ ಸಹಾಯ |
| 42 | ಕಾರ್ಮಿಕರಿಗೆ, ಕೆಲಸಕ್ಕೆ ಬೇಕಾಗುವ ಅಗತ್ಯ & ಮಾನವೀಯತೆ ಪರಿಸ್ಥಿತಿಗಳನ್ನು & ಹೆರಿಗೆ ಸೌಲಭ್ಯಗಳನ್ನು ಕಲ್ಪಿಸುವುದು |
| 43 | ಎಲ್ಲಾ ರೀತಿಯ ಕಾರ್ಮಿಕರಿಗೆ ಉತ್ತಮ ಜೀವನವನ್ನು ನಡೆಸಲು, ವಿರಾಮ & ಸಾಮಾಜಿಕ & ಸಾಂಸ್ಕೃತಿಗೆ ಅವಕಾಶಗಳನ್ನು ಅನುಭವಿಸಲು ಸೂಕ್ತ ಕ್ರಮ.<br>1. ಕಾರ್ಖಾನೆ ಆಡಳಿತದಲ್ಲಿ ಕಾರ್ಮಿಕರ ಪಾಲ್ಗೊಳ್ಳುವಿಕೆ. |
| 44 | ಏಕರೂಪ ನಾಗರಿಕ ಸಂಹಿತೆ |
| 45 | ಸಂವಿಧಾನ ಜಾರಿಗೆ ಬಂದ ಹತ್ತು ವರ್ಷಗಳಲ್ಲಿ 14 ವರ್ಷ ವಯಸ್ಸಿನವರಿಗೆ ಎಲ್ಲಾ ಮಕ್ಕಳಿಗೂ ಉಚಿತ & ಕಡ್ಡಾಯ ಶಿಕ್ಷಣ ನೀಡುವುದು |
| 46 | ಹಿಂದುಳಿದವರ SC & ST ಜನರ ವಿದ್ಯಾಭ್ಯಾಸ & ಆರ್ಥಿಕ ಹಿತಾಸಕ್ತಿಗಳನ್ನು ಅಭಿವೃದ್ದಿಗೊಳಿಸಿ, ಈ ವರ್ಗಗಳ ಜನರನ್ನು ಸಾಮಾಜಿಕ ಅನ್ಯಾಯ & ಎಲ್ಲಾ ರೀತಿಯ ಶೋಷಣೆಗಳಿಂದ ರಕ್ಷಣೆ. |
| 47 | ಆರೋಗ್ಯಕ್ಕೆ ಮಾರಕವಾದ ಡ್ರಿಂಕ್ಸ್ & ಡ್ರಗ್ಸ್ ನಿಷೇಧಿಸಿ, "ಪಾನ ನಿರೋಧಕ" ವನ್ನು ಜಾರಿಗೆ ತರುವುದು.<br>(ಪೌಷ್ಠಿಕತೆಯ ಮಟ್ಟ & ಜೀವನ ಮಟ್ಟವನ್ನು ಹೆಚ್ಚಿಸುವುದು) |
| 48 | ಕೃಷಿ & ಪಶು ಸಂಗೋಪನೆಗಳನ್ನು ಆಧುನಿಕ & ವೈಜ್ಞಾನಿಕ ಮಾರ್ಗಗಳ ಮೂಲಕ ಅಭಿವೃದ್ದಿಗೊಳಿಸಲು ಕ್ರಮ, ಗೋಹತ್ಯೆ ನಿಷೇಧ & ತಳಿ ಅಭಿವೃದ್ಧಿ.<br>1. ದೇಶದ ಅರಣ್ಯಗಳನ್ನು & ವನ್ಯ ಮೃಗಗಳನ್ನು ಸಂರಕ್ಷಿಸಬೇಕೆಂದು ತಿಳಿಸುತ್ತದೆ. |
| 49 | ಸ್ಮಾರಕ & ಐತಿಹಾಸಿಕ ಸ್ಥಳಗಳನ್ನು ರಾಜ್ಯವು ರಕ್ಷಿಸುವುದು |
| 50 | ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಬೇಕೆಂದು ತಿಳಿಸುತ್ತದೆ |
| 51 | ಭಾರತದ ವಿದೇಶ ವ್ಯವಹಾರಗಳ ಬಗ್ಗೆ ತಿಳಿಸಿ, ಭಾರತವು ಅಂತರರಾಷ್ಟ್ರೀಯ ಶಾಂತಿ & ಭದ್ರತೆ ಪ್ರೋತ್ಸಾಹ ನೀಡುವುದು. |
| | ಸಂವಿಧಾನದ 4ನೇ ಭಾಗದಲ್ಲಿ ಅಡಕವಾಗಿರುವ 3 ಬಗೆಯ ಸಿದ್ಧಾಂತಗಳು<br>1. ಸಮಾಜವಾದಿ<br>2. ಉದಾರವಾದಿ<br>3. ಗಾಂಧೀಜಿ ಸಿದ್ಧಾಂತಗಳು |

GNANADHARE IAS KAS ACADEMY

## ಗಾಂಧೀಜಿ ಸಿದ್ಧಾಂತದ ಪ್ರಮುಖ ಅಂಶಗಳು :

1. ಗ್ರಾಮ ಪಂಚಾಯಿತಿ ಸ್ಥಾಪಿಸುವುದು (40ನೇ ವಿಧಿ)
2. ಗ್ರಾಮೀಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು (43ನೇ ವಿಧಿ)
3. ಎಎಸ್‌ಸಿ, ಎಸ್‌ಟಿ & ಇತರೆ ದುರ್ಬಲ ವರ್ಗಗಳ ಶೈಕ್ಷಣಿಕ & ಆರ್ಥಿಕ ಹಿತಾಸಕ್ತಿಯನ್ನು ಪ್ರೋತ್ಸಾಹಿಸಿ, ಶೋಷಣೆಯಿಂದ ಮುಕ್ತಗೊಳಿಸುವುದು (46ನೇ ವಿಧಿ)
4. ಮಾದಕ ದ್ರವ್ಯ & ಉದ್ದೀಪನ ವಸ್ತುಗಳ ನಿಷೇಧ (47ನೇ ವಿಧಿ)
5. ಗೋಹತ್ಯೆ ನಿಷೇಧ & ವೈಜ್ಞಾನಿಕ ಅಭಿವೃದ್ಧಿ (48ನೆ ವಿಧಿ)

## ವ್ಯತ್ಯಾಸಗಳು :

| | ರಾಜ್ಯ ನಿರ್ದೇಶಕ ತತ್ವಗಳು | | ಮೂಲಭೂತ ಹಕ್ಕುಗಳು |
|---|---|---|---|
| 1 | ಇವು ಆಂತರಿಕ ಹಗೂ ಬಾಹ್ಯ ಸರ್ಕಾರವು ಉತ್ತಮವಾಗಿ ಕಾರ್ಯಕ್ರಮ ರೂಪಿಸಲು ನಿರ್ದೇಶಿಸಲು ಮಾರ್ಗಸೂಚಿಗಳಾಗಿವೆ | 1 | ಇವು ವೈಯುಕ್ತಿಕ ಬೆಳವಣಿಗೆಗೆ ಅವಶ್ಯಕವಾಗಿದೆ, ಇವುಗಳು ವ್ಯಕ್ತಿಯ ವೈಯುಕ್ತಿಕ ಹಿತಾಸಕ್ತಿ ಕಾಪಾಡಲು ಹೆಚ್ಚು ಒತ್ತು ನೀಡುತ್ತದೆ. |
| 2 | ಇವುಗಳಿಗೆ ನ್ಯಾಯಾಲಯದಲ್ಲಿ ರಕ್ಷಣೆ ಇಲ್ಲ | 2 | ಇವುಗಳಿಗೆ ನ್ಯಾಯಾಲಯದಲ್ಲಿ ರಕ್ಷಣೆ ಇದೆ. |
| 3 | ಇವು ನೈತಿಕ ನೆಲೆಯಿಂದ ರೂಪಿತವಾಗಿದೆ | 3 | ಇವು ಕಾನೂನು ನೆಲೆಯಿಂದ ರೂಪಿತವಾಗಿದೆ |
| 4 | 4ನೇಯ ಭಾಗ (36–51) | 4 | 3ನೇಯ ಭಾಗ (12–35) |
| 5 | ಸರ್ಕಾರದ ನಿರ್ದೇಶಕ ಗುರಿಗಳು | 5 | ಸರ್ಕಾರದ ಸಾಧನಗಳು |
| 6 | ಆರ್ಥಿಕ & ಸಾಮಾಜಿಕ ಪ್ರಭುತ್ವ | 6 | ರಾಜಕೀಯ ಪ್ರಭುತ್ವಕ್ಕೆ ಸಹಾಯಕ |
| 7 | ರಾಜ್ಯ ನಿರ್ದೇಶಕ ತತ್ವಗಳನ್ನು ರಾಜ್ಯವು ಕಾರ್ಯಗತಗೊಳಿದಿದ್ದಾಗಿ, ಅದರ ವಿರುದ್ಧ ನ್ಯಾಯಲಯಕ್ಕೆ ಹೋಗಲು ಅವಕಾಶವಿಲ್ಲ | 7 | ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ 32ನೇ ವಿಧಿಯನ್ವಯ ಸುಪ್ರಿಂಕೋರ್ಟ್‌ಗೆ ಹೋಗಬಹುದು |
| 8 | ಇವು ಸಕರಾತ್ಮಕವಾಗಿದ್ದು ಕೆಲವು ಕರ್ತವ್ಯಗಳನ್ನು ಮಾಡಲೇಬೇಕೆಂದು ನಿರ್ದೇಶನ ನೀಡುತ್ತದೆ | 8 | ಇವು ನಿಷೇಧಾತ್ಮಕವಾಗಿದ್ದು ಸರ್ಕಾರವು ಕೆಲವು ಕರ್ತವ್ಯಗಳನ್ನು ಮಾಡದಂತೆ ನಿರ್ದೇಶನ ನೀಡುತ್ತದೆ. |
| 9 | ಇವು ಮೂಲಭೂತ ಹಕ್ಕುಗಳಿಗಿಂತ ಕೆಳಮಟ್ಟದವು | 9 | ಇವು ರಾಜ್ಯ ನಿರ್ದೇಶಕ ತತ್ವಗಳಿಗಿಂತ ಮೇಲ್ಮಟ್ಟದವು |
| 10 | ಇಡೀ ಸಮಾಜಕ್ಕೆ ಅನ್ವಯ | 10 | ವ್ಯಕ್ತಿಗಳಿಗೆ ಸಂಬಂಧಿಸಿದೆ. |

GNANADHARE IAS KAS ACADEMY

## ರಾಜ್ಯ ನಿರ್ದೇಶಕ ತತ್ವದ ಲಕ್ಷಣಗಳು:

1. **ನ್ಯಾಯರಕ್ಷಿತವಲ್ಲ :** ರಾಜ್ಯ ನಿರ್ದೇಶಕ ತತ್ವಗಳನ್ನು ಸರ್ಕಾರವು ಜಾರಿಗೊಳಿಸದಿದ್ದರೆ ಯಾವುದೇ ನ್ಯಾಯಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ.
2. **ರಾಜಕೀಯ ರಹಿತತೆಯಿಂದ ಕೂಡಿದೆ :** ರಾಜ್ಯ ನಿರ್ದೇಶಕ ತತ್ವಗಳು ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಅನುಷ್ಠಾನಕ್ಕೆ ತರಬಹುದು. ಇವು ಎಲ್ಲಾ ಪಕ್ಷಗಳು ಕೂಡ ಅಳವಡಿಸಿಕೊಳ್ಳಬಹುದಾದಂತಹ ರಾಜಕೀಯ ರಹಿತವಾದಂತಹ ತತ್ವಗಳಾಗಿವೆ.
3. ಸಾಮಾನ್ಯ ಕಾನೂನು, ಆಜ್ಞೆಗಳ ಮೂಲಕ ಈ ರಾಜ್ಯ ನಿರ್ದೇಶಕ ತತ್ವಗಳನ್ನು ಜಾರಿಗೊಳಿಸಬಹುದು.
4. ರಾಜ್ಯ ನಿರ್ದೇಶಕ ತತ್ವಗಳು ನಾಗರೀಕರ ಸಾಮಾಜಿಕ & ಆರ್ಥಿಕ ಸ್ಥಿತಿಗಳನ್ನು ಸುಧಾರಿಸುವಂತೆ ಮಾಡಿ ಜೀವನ ಮಟ್ಟವನ್ನು ಉತ್ತಮಗೊಳಿಸಬಹುದು.
5. ಸಾಮಾಜಿಕ & ಆರ್ಥಿಕ ಪ್ರಜಾ ಪ್ರಭುತ್ವವನ್ನು ಸ್ಥಾಪಿಸುವ ಮೂಲಕ ಕಲ್ಯಾಣ ರಾಜ್ಯವನ್ನು ಸ್ಥಾಪಿಸುತ್ತದೆ.

## ರಾಜ್ಯ ನಿರ್ದೇಶಕ ತತ್ವಗಳ ವರ್ಗೀಕರಣ :

ರಾಜ್ಯ ನಿರ್ದೇಶಕ ತತ್ವವು ಹೊಂದಿರುವ ಹಿನ್ನೆಲೆಯ ಆಧಾರವಾಗಿ ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

### 1. ಗಾಂಧಿತತ್ವಗಳು :

- ಪಂಚಾಯತ್‌ರಾಜ್ ಸ್ಥಾಪನೆ (40ನೇ ವಿಧಿ)
- ಮಧ್ಯಪಾನ & ಮಾದಕ ವಸ್ತುಗಳ ನಿಷೇಧ (47ನೇ ವಿಧಿ)
- ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳ ಉತ್ತೇಜನ. (43ನೇ ವಿಧಿ)
- ದುರ್ಬಲ ವರ್ಗದವರ ಶೈಕ್ಷಣಿಕ & ಆರ್ಥಿಕ ರಕ್ಷಣೆ & ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. (46ನೇ ವಿಧಿ)
- ಪಶು ಸಂಗೋಪನೆಯನ್ನು ವೃದ್ಧಿಗೊಳಿಸುವುದು. ಗೋ ಹತ್ಯೆ ನಿಷೇಧ ವೈಜ್ಞಾನಿಕ ಕ್ರಮದಲ್ಲಿ ಕೃಷಿ ಅಭಿವೃದ್ಧಿಗೊಳಿಸಿವುದು (48ನೇ ವಿಧಿ)



GNANADHARE IAS KAS ACADEMY

### 2. ಸಮಾಜವಾದಿ ತತ್ವಗಳು :

- ಸಮಾನ ಕೆಲಸಕ್ಕೆ ಸಮಾನ ವೇತನ (39ನೇ ವಿಧಿ)
- ಕಾರ್ಮಿಕರ ಯೋಗಕ್ಷೇಮ ರಕ್ಷಿಸುವುದು (43ನೇ ವಿಧಿ)
- ವೃದ್ಧರಿಗೆ, ರೋಗಿಗಳಿಗೆ ಸಹಾಯ ಧನ ನೀಡುವುದು (41ನೇ ವಿಧಿ)
- ದೇಶದ ಸಂಪತ್ತನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳುವುದು (38ನೇ ವಿಧಿ)
- ಕಾರ್ಖಾನೆಯಲ್ಲಿ ಕೆಲಸ ಮಾಡಲು ಯೋಗ್ಯವಾದ ವಾತಾವರಣವನ್ನು ನಿರ್ಮಾಣ ಮಾಡುವುದು (42ನೇ ವಿಧಿ)
- ಜೀವನೋಪಾಯಕ್ಕಾಗಿ ಬೇಕಾದ ಸೌಲಭ್ಯಗಳನ್ನು ಒದಗಿಸುವುದು (43ನೇ ವಿಧಿ)
- ಪ್ರಜಾಕಲ್ಯಾಣಕ್ಕಾಗಿ ಸಮಾಜವನ್ನು ವ್ಯವಸ್ಥೆಗೋಳಿಸುವುದು (38ನೇ ವಿಧಿ)

### 3. ಉದಾರವಾದಿ ತತ್ವಗಳು :

- ದೇಶಾದ್ಯಾಂತ ಒಂದೇ ರೀತಿ ಸಿವಿಲ್ ಕೋಡ್‌ನ್ನು ಜಾರಿಗೆ ತರುವುದು. (44ನೇ ವಿಧಿ)
- ಮಕ್ಕಳಿಗೆ ಉಚಿತ & ಕಡ್ಡಾಯ ಶಿಕ್ಷಣ (45ನೇ ವಿಧಿ)
- ಸ್ಮಾರಕ & ಐತಿಹಾಸಿಕ ಸ್ಥಳಗಳನ್ನು ರಕ್ಷಣೆ ಮಾಡುವುದು (49ನೇ ವಿಧಿ)
- ದೇಶದ ಅರಣ್ಯ & ವನ್ಯಮೃಗಗಳನ್ನು ರಕ್ಷಿಸುವುದು (49 ಎ ವಿಧಿ)
- ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು (50ನೇ ವಿಧಿ)
- ಅಂತರಾಷ್ಟ್ರೀಯ ಸಂಬಂಧ ಹಾಗೂ ಅಂತರರಾಷ್ಟ್ರೀಯ ವಿವಾದಗಳನ್ನು ಶಾಂತಿ ಮಾರ್ಗದ ಮೂಲಕ ಬಗೆಹರಿಸುವುದು (51ನೇ ವಿಧಿ)

GNANADHARE IAS KAS ACADEMY

# ಕೇಂದ್ರ ಸರ್ಕಾರದ ಅಂಗಗಳು, ರಚನೆ ಮತ್ತು ಕರ್ತವ್ಯಗಳು :

## ಕೇಂದ್ರ ಸರ್ಕಾರ

### ಶಾಸಕಾಂಗ

**ರಚನೆ**

ರಾಷ್ಟ್ರಪತಿ, ಉಪರಾಷ್ಟ್ರಪತಿ ಲೋಕಸಭೆ & ರಾಜ್ಯ ಸಭೆ ಎಂಬ ಎರಡು ಸದನಗಳನ್ನು ಒಳಗೊಂಡಿರುತ್ತದೆ

**ಕರ್ತವ್ಯ**

ಶಾಸನ ರಚಿಸುವುದು

### ಕಾರ್ಯಾಂಗ

**ರಚನೆ**

ರಾಷ್ಟ್ರಪತಿ, ಉಪರಾಷ್ಟ್ರಪತಿ ಪ್ರಧಾನಮಂತ್ರಿ & ಮಂತ್ರಿ ಮಂಡಲವನ್ನು ಒಳಗೊಂಡಿರುತ್ತದೆ

**ಕರ್ತವ್ಯ**

ಶಾಸನಗಳನ್ನು ಜಾರಿಗೆ ತರುವುದು

### ನ್ಯಾಯಾಂಗ

**ರಚನೆ**

ಸರ್ವೋಚ್ಚ ನ್ಯಾಯಲಯವನ್ನು ಒಳಗೊಂಡಿರುತ್ತದೆ.

**ಕರ್ತವ್ಯ**

ನ್ಯಾಯ ನೀಡುವುದು

GNANADHARE IAS KAS ACADEMY

# ರಾಷ್ಟ್ರಪತಿ/ರಾಷ್ಟ್ರಾಧ್ಯಕ್ಷರು (President):

- ಸಂವಿಧಾನದ 52ನೇ ವಿಧಿ, ರಾಷ್ಟ್ರಾಧ್ಯಕ್ಷ ಪದವಿಗೆ ಅವಕಾಶ ನೀಡಿದೆ.
- ಸಂವಿಧಾನದಲ್ಲಿ "ಅಧ್ಯಕ್ಷ" ಎಂಬ ನಾಮಾಂಕಿತ ಸೂಚಿಸಿದವರು – ಕೆ.ಎಂ. ಪಣಿಕ್ಕರ್
- ರಾಷ್ಟ್ರಾಧ್ಯಕ್ಷರನ್ನು "ರಾಷ್ಟ್ರಪತಿ" ಎಂದು ಕರೆದವರು – ಶ್ಯಾಮಪ್ರಸಾದ್
- "Table of Precedence" ನಲ್ಲಿ ಮೊದಲ ಸ್ಥಾನವನ್ನು ರಾಷ್ಟ್ರಪತಿ ಹೊಂದಿದ್ದಾರೆ.

## ರಾಷ್ಟ್ರಪತಿ ಪದವಿಯ ಚುನಾವಣಾ ವಿಧಾನ :

ನೆಹರೂ–ಅಂಬೇಡ್ಕರ್ ಸೂತ್ರವನ್ನು ಅಂಗೀಕರಿಸಿ, ರಾಷ್ಟ್ರಪತಿಯನ್ನು ಪರೋಕ್ಷವಾಗಿ ಚುನಾಯಿಸಬೇಕೆಂದು ನಿರ್ಧರಿಸಲಾಯಿತು.

| ಅನುಚ್ಛೇದಗಳು | ವಿವರಣೆ |
|---|---|
| 52ನೇ ಅನುಚ್ಛೇದ | ಭಾರತದಲ್ಲಿ ರಾಷ್ಟ್ರಪತಿಯ ಸ್ಥಾನ ಅಸ್ತಿತ್ವದ ಬಗ್ಗೆ ವಿವರಿಸುತ್ತದೆ. |
| 53ನೇ ಅನುಚ್ಛೇದ | **ಒಕ್ಕೂಟದ ಕಾರ್ಯಾಂಗ ಅಧಿಕಾರ :**<br>**53(1)ನೇ ಉಪವಿಧಿ :** ಒಕ್ಕೂಟದ ಸಮಸ್ತ ಕಾರ್ಯಾಂಗಾಧಿಕಾರವು ರಾಷ್ಟ್ರಪತಿಯವರ ಹೆಸರಿನಲ್ಲಿದ್ದು, ಸಂವಿಧಾನಕ್ಕನುಸಾರವಾಗಿ ಅವರು ನೇರವಾಗಿ ಅಥವಾ ತಮ್ಮ ಅಧೀನ ಅಧಿಕಾರಿಗಳ ಮುಖಾಂತರ ಚಲಾಯಿಸಬಹುದು.<br>**53(2)ನೇ ಉಪವಿಧಿ :** ರಾಷ್ಟ್ರಪತಿಯು ಒಕ್ಕೂಟದ ರಕ್ಷಣಾ ಬಲಗಳ ಮಹಾದಂಡನಾಯಕರಾಗಿರುವರು. |
| 54ನೇ ಅನುಚ್ಛೇದ | ಭಾರತದ ರಾಷ್ಟ್ರಪತಿಯು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು ಹಾಗೂ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳ ಚುನಾಯಿತ ಸದಸ್ಯರಿಂದ ಕೂಡಿದ ಚುನಾಯಿತ ಗಣದಿಂದ ಚುನಾಯಿತಗೊಳ್ಳುವರು. |
| 55ನೇ ಅನುಚ್ಛೇದ | ರಾಷ್ಟ್ರಪತಿಯ ಚುನಾವಣೆಯಲ್ಲಿ ಬೇರೆ ಬೇರೆ ರಾಜ್ಯಗಳ ಪ್ರಾತಿನಿಧ್ಯ ಪ್ರಮಾಣದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಏಕರೂಪತೆಯನ್ನು ಸಾಧಿಸಲು ಥಾಮಸ್ ಹೇರ್‌ರವರ ಪ್ರತಿಪಾದಿಸಿದ ಏಕಮತವನ್ನು ವರ್ಗಾಯಿಸುವ ಪ್ರಮಾಣಾನುಗುಣ ಪ್ರಾತಿನಿಧ್ಯ ಪದ್ಧತಿ ವಿಧಾನವನ್ನು ಅನುಸರಿಸಲಾಗುತ್ತದೆ.<br><br>ಆಯಾ ರಾಜ್ಯದ ಜನಸಂಖ್ಯೆಯಲ್ಲಿ ವಿಧಾನಸಭೆಯ ಒಟ್ಟು ಚುನಾಯಿತ ಸದಸ್ಯರ ಸಂಖ್ಯೆಯಿಂದ ಭಾಗಿಸಬೇಕು. ಬರುವ ಭಾಗಲಬ್ಧವನ್ನು ಮತ್ತೆ 1000ದಿಂದ ಭಾಗಿಸಬೇಕು. |



GNANADHARE IAS KAS ACADEMY

GNANADHARE IAS KAS ACADEMY

| | |
|---|---|
| | ಆಗ ವಿಧಾನ ಸಭೆಯ ಚುನಾಯಿತ ಸದಸ್ಯರೊಬ್ಬರ ಮತ ಮೌಲ್ಯ ದೊರೆಯುತ್ತದೆ.<br><br>**ವಿಧಾನ ಸಭೆ ಸದಸ್ಯನ ಮತ ಮೌಲ್ಯ** = **ರಾಜ್ಯದ ಒಟ್ಟು ಜನಸಂಖ್ಯೆ** / **ರಾಜ್ಯದ ವಿಧಾನ ಸಭೆಯ ಚುನಾಯಿತ ಸದಸ್ಯರ ಸಂಖ್ಯೆ** * **1/1000**<br><br>ಎಲ್ಲಾ ರಾಜ್ಯಗಳ ವಿಧಾನಸಭೆಗಳ ಸದಸ್ಯರ ಒಟ್ಟು ಮತಗಳ ಸಂಖ್ಯೆಯನ್ನು ಸಂಸತ್ತಿನ ಒಟ್ಟು ಚುನಾಯಿತ ಸದಸ್ಯರ ಸಂಖ್ಯೆಯಿಂದ ಭಾಗಿಸಿದರೆ, ಸಂಸತ್ತಿನ ಸದಸ್ಯರೊಬ್ಬರ ಮೌಲ್ಯ ದೊರೆಯುತ್ತದೆ.<br><br>**ಸಂಸತ್ ಸದಸ್ಯನ ಮತ ಮೌಲ್ಯ** = **ಎಲ್ಲಾ ರಾಜ್ಯಗಳ ವಿಧಾನಸಭೆಗಳ ಸದಸ್ಯರ ಒಟ್ಟು ಮತಗಳ ಸಂಖ್ಯೆ** / **ಸಂಸತ್ತಿನ ಚುನಾಯಿತ ಸದಸ್ಯರ ಸಂಖ್ಯೆ**<br><br>ಥಾಮಸ್ ಹೇರ್ ಪ್ರತಿ ಪಾದಿಸಿದ, 'ಏಕಮತ ವರ್ಗಾಯಿಸುವ ಪ್ರಮಾಣಾನುಗುಣ" ಪದ್ಧತಿ ಜಾರಿಯಲ್ಲಿದೆ. ಇದರನ್ವಯ ಸಂಸತ್ತಿನ & ವಿಧಾನಸಭೆಗಳ ಸದಸ್ಯರು ತಮ್ಮ ಮತಗಳನ್ನು ಚಲಾಯಿಸುವಾಗ ಅಭ್ಯರ್ಥಿಗಳ ಹೆಸರಿನ ಮುಂದೆ ಆದ್ಯತೆಯನ್ನು ನೀಡಬೇಕು. ಯಾವ ಆಭ್ಯರ್ಥಿಗೆ ಮೊದಲ ಎಣಿಕೆಯಲ್ಲಿ ನಿರ್ಧಿಷ್ಟ ಮತಗಳು ಬರುತ್ತವೆಯೋ ಅವರು ಚುನಾಯಿತರಾಗುತ್ತಾರೆ.<br><br>**ಎಲೆಕ್ಟೋರಾಲ್ ಕೊಟಾ** = **ಚಲಾಯಿಸಿದ ಒಟ್ಟು ಮತಗಳ ಸಂಖ್ಯೆ** / **ಚುನಾಯಿಸಬೇಕಾದ ಆಭ್ಯರ್ಥಿ ಸಂಖ್ಯೆ+1** * **1** |
| 56ನೇ ಅನುಚ್ಛೇದ | **ರಾಷ್ಟ್ರಪತಿಯವರ ಅಧಿಕಾರವಧಿ :**<br><br>1. 56(1) ವಿಧಿ ಪ್ರಕಾರ, ಅಧಿಕಾರವನ್ನು ವಹಿಸಿಕೊಂಡ ದಿನದಿಂದ 5 ವರ್ಷಗಳ ಕಾಲ ರಾಷ್ಟ್ರಪತಿ ತಮ್ಮ ಸ್ಥಾನದಲ್ಲಿರುತ್ತಾರೆಂದು ತಿಳಿಸುತ್ತದೆ.<br>2. 56(1)(ಎ) ವಿಧಿ ಅನ್ವಯ, ಅಧಿಕಾರದ ಅವಧಿ ಮುಗಿಯುವುದಕ್ಕೆ ಮುಂಚೆ ರಾಷ್ಟ್ರಪತಿ ತಮ್ಮ ರಾಜೀನಾಮೆಯನ್ನು ಉಪ ರಾಷ್ಟ್ರಪತಿಗೆ ಸಲ್ಲಿಸಬಹುದು. ಉಪ |

| | |
|---|---|
| | ರಾಷ್ಟ್ರಪತಿ ತಕ್ಷಣ ಅದನ್ನು ಸ್ಪೀಕರ್‌ಗೆ ತಿಳಿಸಬೇಕು.<br>3. 56(1)(ಸಿ) ವಿಧಿ ಅನ್ವಯ, ಅಧಿಕಾರ ಅವಧಿ ಮುಗಿದರೂ, ತಮ್ಮ ಉತ್ತರಾಧಿಕಾರಿ ಪ್ರಮಾಣ ವಚನ ಸ್ವೀಕರಿಸುವವರೆಗೂ ಅಧಿಕಾರದಲ್ಲಿ ಮುಂದುವರೆಯಬಹುದು. |
| 57ನೇ ಅನುಚ್ಛೇದ | ರಾಷ್ಟ್ರಪತಿಯವರು ಈ ಸಂವಿಧಾನದ ಇತರ ಉಪಬಂಧಗಳಿಗೆ ಒಳಪಟ್ಟು ರಾಷ್ಟ್ರಾಧ್ಯಕ್ಷರ ಮರುಚುನಾವಣೆಗೆ ಸ್ಪರ್ಧಿಸಬಹುದು. |
| 58ನೇ ಅನುಚ್ಛೇದ | **ರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹತೆಗಳು :**<br>1. ಭಾರತದ ಪ್ರಜೆಯಾಗಿರಬೇಕು.<br>2. 35 ವರ್ಷಗಳಾಗಿರಬೇಕು<br>3. ಲೊಕಸಭೆಗೆ ಆಯ್ಕೆಯಾಗಲು ಅಗತ್ಯವಿರುವ ಅರ್ಹತೆ ಹೊಂದಿರಬೇಕು.<br>ಕೇಂದ್ರ/ರಾಜ್ಯ ಸರ್ಕಾರ/ಸರ್ಕಾರ ಅಧೀನ ಸಂಸ್ಥೆಗಳಲ್ಲಿ ಲಾಭಧಾಯಕ ಹುದ್ದೆ ಹೊಂದಿರಬಾರದು |
| 59ನೇ ಅನುಚ್ಛೇದ | **ರಾಷ್ಟ್ರಪತಿಯ ಹುದ್ದೆಯ ಷರತ್ತುಗಳು :**<br>59(1)ನೇ ಉಪವಿಧಿ : ಸಂಸತ್ತು & ರಾಜ್ಯ ವಿಧಾನಮಂಡಳದ ಯಾವುದೇ ಸದಸ್ಯನಾಗಿದ್ದರೆ ರಾಷ್ಟ್ರಪತಿಯ ಹುದ್ದೆಯನ್ನು ವಹಿಸಿಕೊಳ್ಳುವ ಮೊದಲು ಶಾಸಕಾಂಗದ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕು.<br>59(2)ನೇ ಉಪವಿಧಿ : ಯಾವುದೇ ಲಾಭಧಾಯಕ ಹುದ್ದೆ ಹೊಂದಿರಬಾರದು<br>59(3)ನೇ ಉಪವಿಧಿ : ಬಾಡಿಗೆ ರಹಿತ ಅಧಿಕೃತ ನಿವಾಸ, ಸಂಸತ್ತು ಆಗಿಂದಾಗ್ಗೆ ನಿರ್ಧರಿಸುವ ವೇತನ, ಭತ್ಯೆಗಳು & ಸೌಲಭ್ಯಗಳನ್ನು ಪಡೆಯುವರು<br>59(4)ನೇ ಉಪವಿಧಿ : ರಾಷ್ಟ್ರಪತಿಯವರ ವೇತನ & ಭತ್ಯೆಗಳನ್ನು ಅಧಿಕಾರದ ಅವಧಿಯಲ್ಲಿ ಮೊಟಕುಗೊಳಿಸುವಂತಿಲ್ಲ |
| 60ನೇ ಅನುಚ್ಛೇದ | **ರಾಷ್ಟ್ರಪತಿಯವರ ಪ್ರಮಾಣ ವಚನ :**<br>ರಾಷ್ಟ್ರಪತಿಯವರು ತಮ್ಮ ಸ್ಥಾನವನ್ನು ವಹಿಸಿಕೊಳ್ಳುವ ಮೊದಲು ಭಾರತದ ಮುಖ್ಯ ನ್ಯಾಯಾಧೀಶರ ಸಮಕ್ಷಮದಲ್ಲಿ ಅಥವಾ ಅವರ ಗೈರುಹಾಜರಿಯಲ್ಲಿ ಸರ್ವೋಚ್ಚ ನ್ಯಾಯಾಧೀಶನ ಸಮಕ್ಷಮದಲ್ಲಿ ಸಂವಿಧಾನದ ಎರಡನೇ ಅನುಸೂಚಿಯಲ್ಲಿನ ನಮೂನೆಯಲ್ಲಿ ಅಧಿಕಾರ ಗೋಪ್ಯತೆಯನ್ನು ಪ್ರಮಾಣ ವಚನವನ್ನು ಸ್ವೀಕರಿಸಿ ಅದಕ್ಕೆ ತನ್ನ ಸಹಿ ಹಾಕಬೇಕು |
| 61ನೇ ಅನುಚ್ಛೇದ | **ರಾಷ್ಟ್ರಪತಿಯವರನ್ನು ಪದಚ್ಯುತಿಗೊಳಿಸುವ ಮಹಾಭಿಯೋಗದ ಕಾರ್ಯವಿಧಾನ :**<br>ಗೌರವಾನ್ವಿತ ಸ್ಥಾನದಲ್ಲಿರುವ ರಾಷ್ಟ್ರಪತಿಯವರು ಸಂವಿಧಾನವನ್ನು ಉಲ್ಲಂಘಿಸಿದರೆ ಸಂಸತ್ತಿನ ಯಾವ ಸದನವಾದರೂ ರಾಷ್ಟ್ರಪತಿ ವಿರುದ್ಧ ದೋಷಾರೋಪಣೆ ಮಾಡಿ 14 ದಿನಗಳ ಮುಂಚಿತ ನೋಟಿಸ್ ನೀಡಬೇಕು. ಈ ನೋಟಿಸ್‌ನ್ನು ಸದನದ ಒಟ್ಟು ಸದಸ್ಯರ ಪೈಕಿ 1/4ರಷ್ಟು ಸಹಿ ಮಾಡಿರಬೇಕು.<br>ದೋಷಾರೋಪಣೆ ನಿರ್ಣಯ ರೂಪದಲ್ಲಿದ್ದು, ಸದನದ ಒಟ್ಟು 2/3ರಷ್ಟು ಸದಸ್ಯರು ಅಂಗೀಕೃತವಾದರೆ ರಾಷ್ಟ್ರಪತಿಯವರು ತಮ್ಮ ಸ್ಥಾನವನ್ನು ತೊರೆಯಬೇಕಾಗುತ್ತದೆ. |

| | |
|---|---|
| | ದೋಷಾರೋಪಣೆ ವಿಚಾರಣೆ ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ರಾಷ್ಟ್ರಪತಿಯವರು ಭಾಗವಹಿಸಿ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಬಹುದು. |
| 62ನೇ ಅನುಚ್ಛೇದ | ಮರಣ, ರಾಜಿನಾಮೆ ಹಾಗೂ ಮಹಾಭಿಯೋಗದಿಂದ ರಾಷ್ಟ್ರಪತಿಯವರ ಸ್ಥಾನ ಖಾಲಿಯಾದರೆ, ಸಾಧ್ಯವಾದಷ್ಟು ಬೇಗನೆ ಅಂದರೆ ಸ್ಥಾನ ಖಾಲಿಯಾದ ದಿನಾಂಕದಿಂದ ಆರು ತಿಂಗಳೊಳಗೆ ರಾಷ್ಟ್ರಪತಿಯ ಚುನಾವಣೆ ನಡೆದು ರಾಷ್ಟ್ರಪತಿಯ ಸ್ಥಾನ ತುಂಬಬೇಕು ಹಾಗೂ ಆಯ್ಕೆಯಾದ ರಾಷ್ಟ್ರಪತಿಯು 5 ವರ್ಷಗಳ ಅವಧಿಯವರೆಗೆ ಅಧಿಕಾರದಲ್ಲಿರಬೇಕು<br>ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಯವರ ಸ್ಥಾನ ಏಕ ಕಾಲದಲ್ಲಿ ರಾಷ್ಟ್ರಪತಿ & ಉಪ ರಾಷ್ಟ್ರಪತಿ ಸ್ಥಾನಗಳು ತೆರವಾದರೆ "ಸರ್ವೋಚ್ಚ ನ್ಯಾಯಲಯದ ಮುಖ್ಯ ನ್ಯಾಯಾಧೀಶರು' ರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸುವಂತೆ ಮಾಡಲಾಯಿತು |
| 361ನೇ ಅನುಚ್ಛೇದ | ಸಂವಿಧಾನದ 361(1)ನೇ ವಿಧಿ ಪ್ರಕಾರ ರಾಷ್ಟ್ರಪತಿ ಚಲಾಯಿಸುವ ಅಧಿಕಾರಗಳನ್ನು & ನಿರ್ವಹಿಸಿದ ಕರ್ತವ್ಯಗಳನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.<br>ಸಂವಿಧಾನದ 362(2) ನೇ ವಿಧಿ ಪ್ರಕಾರ, ರಾಷ್ಟ್ರಪತಿ ಅಧಿಕಾರ ಅವಧಿಯಲ್ಲಿ ಯಾವುದೇ ಕ್ರಿಮಿನಲ್ ಮೊಕದ್ದಮೆ ಕೊಡುವಂತಿಲ್ಲ.<br>ಸಂವಿಧಾನ 361(3)ನೇ ವಿಧಿ ಪ್ರಕಾರ, ಅಧಿಕಾರ ಅವಧಿಯಲ್ಲಿ ಬಂಧಿಸುವುದಾಗಲಿ/ನ್ಯಾಯಾಲಯ ಕ್ರಮ ಕೈಗೊಳ್ಳುವಂತಿಲ್ಲ. |

## ಪ್ರಮಾಣ ವಚನ ಸ್ವೀಕಾರ :

ಸಂವಿಧಾನದ 60ನೇ ವಿಧಿ ಪ್ರಕಾರ, ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದವರಿಗೆ/ ರಾಷ್ಟ್ರಪತಿಯ ಕಾರ್ಯಗಳನ್ನು ನಿರ್ವಹಿಸುವವರಿಗೆ ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಾಧೀಶರು/ಅವರ ಗೈರು ಹಾಜರಿಯಲ್ಲಿ ಹಿರಿಯ ನ್ಯಾಯಾಧೀಶರು ಪ್ರಮಾಣ ವಚನವನ್ನು ಉಪದೇಶಿಸುತ್ತಾರೆ.

## ರಾಷ್ಟ್ರಪತಿಗೆ ನೀಡುವ ಸೌಲಭ್ಯಗಳು :

| | |
|---|---|
| **ಅಧಿಕೃತ ನಿವಾಸ** | ರಾಷ್ಟ್ರಪತಿ ಭವನ |
| **ನಿರ್ಮಿಸಿದವರು** | ಎಡ್ವಿನ್ ಲುಟಿಯೆನ್ಸ್ |
| **ಕೊಠಡಿಗಳು** | 340 |
| **ಪೂರ್ಣವಾದ ವರ್ಷ** | 1929 |
| **ತಗುಲಿದ ವೆಚ್ಚ** | 1.4 ಕೋಟಿ |
| **ಇತರೆ ನಿವಾಸಗಳು** | ಸಿಮ್ಲಾದಲ್ಲಿರುವ–ರಾಜಭವನ<br>ಹೈದರಾಬಾದ್– ರಾಷ್ಟ್ರಪತಿ ನಿಲಯ |
| **ಪ್ರಸ್ತುತ ವೇತನ** | 1,50,000 ರೂ |

- 1998ರಿಂದ ರಾಷ್ಟ್ರಪತಿಯ ವಾರ್ಷಿಕ ಪಿಂಚಣಿ– 3ಲಕ್ಷ ರೂ.
- ರಾಷ್ಟ್ರಪತಿಯ ವೇತನ ಆದಾಯ ತೆರಿಗೆಗೆ ಒಳಪಟ್ಟಿರುತ್ತದೆ.

## ರಾಷ್ಟ್ರಪತಿಯ ಅಧಿಕಾರ ಮತ್ತು ಕರ್ತವ್ಯಗಳು :

1. ಕಾರ್ಯಾಂಗಾಧಿಕಾರಗಳು
2. ಶಾಸನಾಧಿಕಾರಗಳು
3. ತುರ್ತು ಪರಿಸ್ಥಿತಿ ಅಧಿಕಾರಗಳು
4. ಸೈನಿಕ ಅಧಿಕಾರಗಳು
5. ರಾಜತಾಂತ್ರಿಕ ಅಧಿಕಾರಗಳು
6. ನ್ಯಾಯಿಕ ಅಧಿಕಾರಗಳು
7. ಹಣಕಾಸು ಅಧಿಕಾರಗಳು
8. ವಿವೇಚನಾಧಿಕಾರಗಳು

## ಕಾರ್ಯಾಂಗಾಧಿಕಾರಗಳು

| ವಿಧಿಗಳು | ಕಾರ್ಯಾಂಗಾಧಿಕಾರಗಳು |
|---|---|
| 74(1) | ರಾಷ್ಟ್ರಪತಿ ಕರ್ತವ್ಯಗಳನ್ನು ನಿರ್ವಹಿಸುವಾಗ ಸಹಾಯ & ಸಲಹೆ ನೀಡಲು ಪ್ರಧಾನಮಂತ್ರಿ ನೇತೃತ್ವ ಮಂತ್ರಿಮಂಡಲ ಇರಬೇಕು & ರಾಷ್ಟ್ರಪತಿಯು ತಮ್ಮ ಕಾರ್ಯಗಳನ್ನು ನಿರ್ವಹಿಸುವಾಗ ಮಂತ್ರಿಮಂಡಳದ ಸಲಹೆಗೆ ಅನುಸಾರವಾಗಿ ಕಾರ್ಯ ನಿವರ್ಹಿಸತಕ್ಕದ್ದು. |
| 75 | ಸಾರ್ವತ್ರಿಕ ಲೋಕಸಭೆ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ/ಮಿತ್ರ ಪಕ್ಷಗಳ ನಾಯಕನನ್ನು ಪ್ರಧಾನಮಂತ್ರಿಯನ್ನಾಗಿ ರಾಷ್ಟ್ರಪತಿ ನೇಮಿಸುತ್ತಾರೆ & ಪ್ರಧಾನಮಂತ್ರಿಯವರ ಸಲಹೆಯ ಮೇರೆಗೆ ಮಂತ್ರಿಮಂಡಳದ ಸದಸ್ಯರನ್ನು ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ. |
| 76 | ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳುವ ಅರ್ಹತೆಯನ್ನು ಹೊಂದಿದ ವ್ಯಕ್ತಿಯನ್ನು ಭಾರತದ ಅಟಾರ್ನಿ ಜನರಲ್‌ನ್ನಾಗಿ ನೇಮಕ ಮಾಡುತ್ತಾರೆ. |
| 124(2) | ಸುಪ್ರಿಂ ಕೋರ್ಟ್ ನ್ಯಾಯಾಧೀಶರ ನೇಮಕ |
| 77 | ಭಾರತ ಸರ್ಕಾರದ ಕಾರ್ಯಾಂಗದ ಸಮಸ್ತ ಕಾರ್ಯ ನಿರ್ವಹಣೆಯು ರಾಷ್ಟ್ರಪತಿಯವರ ಹೆಸರಿನಲ್ಲಿ ನಡೆಯತಕ್ಕದ್ದು. |
| 148(1) | ಕಂಟ್ರೋಲರ್ & ಆಡಿಟರ್ ಜನರಲ್ ನೇಮಕ |

GNANADHARE IAS KAS ACADEMY

| | |
|---|---|
| 155 | ರಾಜ್ಯಪಾಲರ ನೇಮಕ |
| 217 | ರಾಜ್ಯ ಹೈಕೋರ್ಟ್ ನ್ಯಾಯಾಧೀಶರ ನೇಮಕ ಮಾಡುತ್ತಾರೆ. |
| 280(1) | ಹಣಕಾಸು ಆಯೋಗದ ಅಧ್ಯಕ್ಷ & ಸದಸ್ಯರ ನೇಮಕ ಮಾಡುತ್ತಾರೆ. |
| 316(1) | ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷ & ಸದಸ್ಯರ ನೇಮಕ ಮಾಡುತ್ತಾರೆ. |
| 324(2) | ಪ್ರಧಾನ ಚುನಾವಣಾಧಿಕಾರಿ & ಇತರೆ ಚುನಾವಣಾಧಿಕಾರಿಗಳ ನೇಮಕ ಮಾಡುತ್ತಾರೆ. |
| 338(3) | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ರಾಷ್ಟ್ರಿಯ ಆಯೋಗ ನೇಮಕ ಮಾಡುತ್ತಾರೆ. |
| 339 | ಅನುಸೂಚಿತ ಪ್ರದೇಶಗಳ & ರಾಜ್ಯಗಳ ಪರಿಶಿಷ್ಟ ಬುಡಕಟ್ಟು ಕಲ್ಯಾಣ ಬಗ್ಗೆ ವರದಿ ಸಮಿತಿ ನೇಮಕ ಮಾಡುತ್ತಾರೆ. |
| 340 | ಹಿಂದುಳಿದ ವರ್ಗಗಳ ಅಧ್ಯಯನ ಸಮಿತಿ ನೇಮಕ ಮಾಡುತ್ತಾರೆ. |
| 344(1) | ಅಧಿಕೃತ ಭಾಷಾ ಸಮಿತಿ ನೇಮಕ ಮಾಡುತ್ತಾರೆ. |
| 148 | ಭಾರತದ ಲೆಕ್ಕ ನಿಯಂತ್ರಕ & ಮಹಾ ಲೆಕ್ಕ ಪರಿಶೋಧಕರವರನ್ನು ನೇಮಿಸುತ್ತಾರೆ. |
| 344 | ಅಧಿಕೃತ ಭಾಷಾ ಆಯೋಗಗಳನ್ನು ನೇಮಿಸುವ ಅಧಿಕಾರ ಇರುತ್ತದೆ. |
| 263 | ರಾಜ್ಯ ರಾಜ್ಯಗಳ ಮಧ್ಯ ಸಮನ್ವಯ ಸಾಧಿಸಲು ಅಂತರಾಜ್ಯ ಮಂಡಳಿಯನ್ನು ಸ್ಥಾಪಿಸಬಹುದಾಗಿದೆ. |
| 153 | ರಾಜ್ಯಗಳ ರಾಜ್ಯಪಾಲರನ್ನು ನೇಮಕ ಮಾಡುತ್ತಾರೆ. |
| 53(2) | ರಕ್ಷಣಾ ವಿಭಾಗಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಯವರು ಮೂರು ರಕ್ಷಣಾ ಪಡೆಗಳ ಮಹಾದಂಡನಾಯಕನನ್ನು ನೇಮಿಸುತ್ತಾರೆ. |

## ಶಾಸನೀಯ ಅಧಿಕಾರಗಳು :

| ವಿಧಿಗಳು | ಶಾಸನಾಧಿಕಾರಗಳು |
|---|---|
| 79 | ರಾಷ್ಟ್ರಪತಿಯವರು ಸಂಸತ್ತಿನ ಸದಸ್ಯರಲ್ಲದಿದ್ದರೂ ಕೂಡಾ ಸಂಸತ್ತಿನ ಅವಿಭಾಜ್ಯ ಅಂಗ ಎಂದು ಪರಿಗಣಿಸಲಾಗುತ್ತದೆ. |
| 80 | ಸಾಹಿತ್ಯ, ವಿಜ್ಞಾನ, ಕಲೆ & ಸಮಾಜ ಸೇವೆಗಳಲ್ಲಿ ವಿಶೇಷ ಜ್ಞಾನವನ್ನು ಹೊಂದಿರುವ/ ಗಣನೀಯ ಸೇವೆ ಸಲ್ಲಿಸಿರುವ 12 ಮಂದಿಯನ್ನು ರಾಜ್ಯಸಭೆಗೆ ನಾಮಕರಣ ಮಾಡುವುದು. |
| 85 | ಸಂಸತ್ತಿನ ಅಧಿವೇಶನ ಕರೆಯುವುದು, ಮುಂದೂಡುವುದು & ಲೋಕಸಭೆಯನ್ನು ವಿಸರ್ಜಿಸುವುದು. |
| 86 | ಯಾವುದೇ ಸದನ/ಎರಡು ಸದನಗಳನ್ನು ಕುರಿತು ಭಾಷಣ ಮಾಡಬಹುದು |
| 87 | ಚುನಾವಣೆ ನಂತರ ಹಾಗೂ ಪ್ರತಿವರ್ಷ ಎರಡು ಸದನಗಳ ಜಂಟಿ ಅಧಿವೇಶನ ಕುರಿತು ಮಾತನಾಡುವ & ಅಧಿವೇಶನದ ನಂತರ ಕಾರಣಗಳನ್ನು ಸಂಸತ್ತಿಗೆ ತಿಳಿಸುವ |

| | |
|---|---|
| | ಅಧಿಕಾರ. |
| 108 | ಯಾವುದಾದರೊಂದು ವಿಧೇಯಕಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಉಭಯ ಸದನಗಳ ನಡುವೆ ಭಿನ್ನಾಭಿಪ್ರಾಯ ತಲೆದೋರಿದರೆ ರಾಷ್ಟ್ರಪತಿಯು ಬಿಕ್ಕಟ್ಟನ್ನು ಬಗೆಹರಿಸಲು ಸಂಸತ್ತಿನ ಉಭಯ ಸದನಗಳ ಜಂಟೀ ಅಧಿವೇಶನವನ್ನು ಕರೆಯುವರು. |
| 111 | ಸಂಸತ್ತು ಅಂಗೀಕರಿಸಿದ ಮಸೂದೆಗೆ ಅಂಕಿತ |
| 123 | ಸಂಸತ್ತು ಅಧಿವೇಶನದಲ್ಲಿ ಇಲ್ಲದಿದ್ದಾಗ, ಅಗತ್ಯವೆಂದು ಕಂಡು ಬಂದಲ್ಲಿ, ಸುಗ್ರೀವಾಜ್ಞೆಗಳನ್ನು ಘೋಷಿಸುವುದು. |
| 331 | ಲೋಕಸಭೆಯಲ್ಲಿ ಆಂಗ್ಲೋ–ಇಂಡಿಯನ್ ಜನಾಂಗಕ್ಕೆ ಸಾಕಷ್ಟು ಪ್ರತಿನಿಧ್ಯ ಇಲ್ಲವೆಂದು ಕಂಡು ಬಂದರೆ, ಈ ವಿಧಿಯ ಅನ್ವಯ 2 ಆಂಗ್ಲೋ–ಇಂಡಿಯನ್ ನೇಮಕ |

## ತುರ್ತು ಪರಿಸ್ಥಿತಿ ಅಧಿಕಾರಗಳು :

ಸಂವಿಧಾನದ 18ನೇ ಭಾಗದಲ್ಲಿ, ರಾಷ್ಟ್ರಪತಿಯು 3 ವಿಧವಾದ ತುರ್ತು ಪರಿಸ್ಥಿತಿಗಳನ್ನು ಘೋಷಿಸಲು ಅವಕಾಶ ನೀಡಲಾಗಿದೆ.

| ವಿಧಿಗಳು | ಅಧಿಕಾರಗಳು |
|---|---|
| 352 | ರಾಷ್ಟ್ರ ತುರ್ತು ಪರಿಸ್ಥಿತಿ ಘೋಷಣೆ |
| 356 | ರಾಜ್ಯ ತುರ್ತು ಪರಿಸ್ಥಿತಿ ಘೋಷಣೆ |
| 360 | ಹಣಕಾಸು ತುರ್ತು ಪರಿಸ್ಥಿತಿ ಘೋಷಣೆ |

## ಸೈನಿಕ ಅಧಿಕಾರಿಗಳು :

| ವಿಧಿಗಳು | ಅಧಿಕಾರಗಳು |
|---|---|
| 53(2) ವಿಧಿ | ಪ್ರಕಾರ, ರಾಷ್ಟ್ರಪತಿಯು ಸಂಸತ್ತಿನ ರಕ್ಷಣಾ ಪಡೆಗಳ ಮಹಾದಂಡನಾಯಕ |
| 53(2) ವಿಧಿ | ಯುದ್ಧ & ಶಾಂತಿ ಘೊಷಣೆ |
| 53(2) ವಿಧಿ | ಸಚಿವ ಸಂಪುಟ ಸಲಹೆ ಮೇರೆಗೆ ರಕ್ಷಣಾ ಪಡೆಗಳ ಮುಖ್ಯಸ್ಥರ ನೇಮಕ |

## ರಾಜತಾಂತ್ರಿಕ ಅಧಿಕಾರಿಗಳು :

| | |
|---|---|
| 1 | ವಿದೇಶಾಂಗ ವ್ಯವಹಾರಗಳಲ್ಲಿ ರಾಷ್ಟ್ರವನ್ನು ಪ್ರತಿನಿಧಿಸುವುದು |
| 2 | ಬೇರೆ ರಾಷ್ಟ್ರಗಳಿಗೆ ರಾಯಭಾರಿಯಾಗಿ ನೇಮಕ & ಬೇರೆ ರಾಷ್ಟ್ರಗಳ ರಾಯಭಾರಗಳನ್ನು |

| | |
|---|---|
| | ಬರ ಮಾಡಿಕೊಳ್ಳುವುದು |
| 3 | ಭಾರತ ಸರ್ಕಾರ ರಾಷ್ಟ್ರಪತಿ ಹೆಸರಿನಲ್ಲಿ ಬೇರೆ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು |
| 4 | ರಾಷ್ಟ್ರಪತಿ ವಿದೇಶಗಳೊಂದಿಗೆ ಸಂಧಾನ ಮತ್ತು ಒಪ್ಪಂದ ಮಾಡಿಕೊಳ್ಳಬಹುದು |

## ನ್ಯಾಯಿಕ ಅಧಿಕಾರಗಳು :

| ವಿಧಿಗಳು | ಅಧಿಕಾರಗಳು |
|---|---|
| 72 | ರಾಷ್ಟ್ರಪತಿಯವರು ಸರ್ವೋಚ್ಚ ನ್ಯಾಯಾಲಯವು ಒಬ್ಬ ಅಪರಾಧಿಗೆ ನೀಡಿದ ಶಿಕ್ಷೆಯನ್ನು ಕ್ಷಮಿಸುವ, ಕಡಿಮೆ ಮಾಡುವ ಹಾಗೂ ಬದಲಿಸುವ ಅಧಿಕಾರ ಹೊಂದಿದ್ದಾರೆ. ಅಲ್ಲದೇ ವಿಶೇಷವಾಗಿ ಮರಣದಂಡನೆಯನ್ನು ರದ್ದು ಮಾಡುವ ಅಧಿಕಾರ ಹೊಂದಿರುತ್ತಾರೆ. |
| 76 | ಕೇಂದ್ರ ಸರ್ಕಾರದ ಕಾನೂನು ಸಲಹೆಗಾರರಾದ ಅಟಾರ್ನಿ ಜನರಲ್ ನೇಮಕ |
| 143 | ಕಾನೂನಿಗೆ ಸಂಭವಿಸಿದ & ಸಾರ್ವಜನಿಕ ಮಹತ್ವ ಪಡೆದ ವಿಷಯಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಸಲಹೆಯನ್ನು ಪಡೆಯುವ ಅಧಿಕಾರ ರಾಷ್ಟ್ರಪತಿಗಿದೆ. |
| | ಕೇಂದ್ರ & ರಾಜ್ಯ, ರಾಜ್ಯ–ರಾಜ್ಯಗಳ ನಡುವಣ ವಿವಾದಗಳನ್ನು ಸರ್ವೋಚ್ಚ ನ್ಯಾಯಲಯಕ್ಕೆ ಒಪ್ಪಿಸುವ ಅಧಿಕಾರವಿದೆ. |

## ಹಣಕಾಸು ಅಧಿಕಾರಗಳು :

| ವಿಧಿಗಳು | ಅಧಿಕಾರಗಳು |
|---|---|
| 117(1) | ರಾಷ್ಟ್ರಪತಿಯ ಪೂರ್ವಾನುಮತಿಯಿಲ್ಲದೇ, ಹಣಕಾಸು ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸುವಂತಿಲ್ಲ |
| 266 | ಭಾರತದ ಸಂಚಿತ ನಿಧಿಯಿಂದ ಹಣ ಬಿಡುಗಡೆಗೊಳಿಸುವುದು |
| 267 | ಆಕಸ್ಮಿಕ/ತುರ್ತು ನಿಧಿಯಿಂದ ಹಣ ಬಿಡುಗಡೆಗೊಳಿಸುವುದು |
| 280 | ಪ್ರತಿ 5 ವರ್ಷಗಳಿಗೊಮ್ಮೆ ಹಣಕಾಸು ಆಯೋಗ ನೇಮಕ |

## ವಿವೇಚಾನಾಧಿಕಾರಿಗಳು :

| | |
|---|---|
| 1 | ಲೋಕಸಭೆಯಲ್ಲಿ ಯಾವುದೇ ಒಂದು ಪಕ್ಷ ಚುನಾವಣೆಗಳಲ್ಲಿ ಬಹುಮತ ಪಡೆಯಲು ವಿಫಲವಾದಾಗ ಪ್ರಧಾನಿಪಟ್ಟಕ್ಕೆ ಯಾವುದೇ ಪಕ್ಷದ ನಾಯಕನನ್ನು ಸರ್ಕಾರ ರಚಿಸಲು ಆಹ್ವಾನಿಸಬಹುದು. ಆದರೆ ಆ ವ್ಯಕ್ತಿಯು ರಾಷ್ಟ್ರಪತಿಯ ಆಭಿಪ್ರಾಯದಲ್ಲಿ ಬಹುಮತವನ್ನು ಸಾಬೀತು ಪಡಿಸುವ ಸಾಮರ್ಥ್ಯ ಹೊಂದಿರಬೇಕು. |

| | |
|---|---|
| 2 | ರಾಷ್ಟ್ರಪತಿಯು ಸಚಿವ ಸಂಪುಟದ ಸಲಹೆಯನ್ನು ಮರು ಪರಿಶೀಲನೆಗೆ ಕಳುಹಿಸಬಹುದು |
| 3 | ರಾಷ್ಟ್ರಪತಿಯು, ಸಂಸತ್ತು ತಮ್ಮ ಅಂಗೀಕಾರಕ್ಕಾಗಿ ಕಳುಹಿಸಿದ ಮಸೂದೆಗಳನ್ನು ಒಮ್ಮೆ ಮರು ಪರಿಶೀಲನೆಗೆ ಕಳುಹಿಸಬಹುದು |
| 4 | ರಾಜೀನಾಮೆ ನೀಡಿ ಅಧಿಕಾರದಿಂದ ನಿರ್ಗಮಿಸಲಿರುವ ಮಂತ್ರಿ ಮಂಡಲವು ಲೋಕಸಭೆಯನ್ನು ವಿಸರ್ಜಿಸುವಂತೆ, ಸಲಹೆ ನೀಡಿದರೆ, ತಮ್ಮ ವಿವೇಚನೆಗೆ ಅನುಗುಣವಾಗಿ ನಿರ್ಧಾರ ಕೈಗೊಳ್ಳಬಹುದು. |

## ಸುಗ್ರೀವಾಜ್ಞೆ/ಅಧ್ಯಾದೇಶ (Ordinance):

- ಸಂಸತ್ತು ಅಧಿವೇಶನದಲ್ಲಿ ಇಲ್ಲದೆ ಇರುವಂತಹ ಸಂದರ್ಭದಲ್ಲಿ, ರಾಷ್ಟ್ರಪತಿಯು ತುರ್ತು ಅವಶ್ಯಕತೆಗಳನ್ನು ನಿಭಾಯಿಸಲು, ಅಗತ್ಯವಾಗಿರುವ ಶಾಸನೀಯ ರಚನೆ & ಹೊರಡಿಸುವ ಅಧಿಕಾರವನ್ನು ಸುಗ್ರೀವಾಜ್ಞೆ/ಅಧ್ಯಾದೇಶ ಎನ್ನುವರು.
- ಸಂಸತ್ತು ಅಧಿವೇಶನದಲ್ಲಿ ಇಲ್ಲದಿದ್ದಾಗ, ಅಗತ್ಯವೆಂದು ಕಂಡುಬಂದರೆ, ಸಂವಿಧಾನದ 123ನೇ ವಿಧಿಯನ್ವಯ, ರಾಷ್ಟ್ರಪತಿ ಸುಗ್ರೀವಾಜ್ಞೆಗಳನ್ನು ಘೋಷಿಸುತ್ತಾರೆ.
- ಸುಗ್ರೀವಾಜ್ಞೆಗಳು ಸಂಸತ್ತು ಅಂಗೀಕರಿಸಿದ ಕಾನೂನುಗಳಷ್ಟು ಅಧಿಕಾರ ಪಡೆದಿರುತ್ತದೆ.
- ಸಂಸತ್ತಿನ ಅಧಿವೇಶನ ಪ್ರಾರಂಭವಾದ 6 ವಾರಗಳಲ್ಲಿ ಸುಗ್ರೀವಾಜ್ಞೆಗಳನ್ನು ಸಂಸತ್ತು ಅಂಗೀಕರಿಸಬೇಕು. ಇಲ್ಲದಿದ್ದರೆ ರದ್ದಾಗುತ್ತದೆ.
- ಮಂತ್ರಿಮಂಡಲ ಸಲಹೆ ಪಡೆಯದೆ ರಾಷ್ಟ್ರವು ಸುಗ್ರೀವಾಜ್ಞೆ ಹೊರಡಿಸಲು ಸಾಧ್ಯವಿಲ್ಲ.

## ರಾಷ್ಟ್ರಪತಿಯ ಪೂರ್ವಾನುಮತಿ ವಿಷಯಗಳು :

| ವಿಧಿಗಳು | ವಿಷಯಗಳು |
|---|---|
| 3 | ಹೊಸ ರಾಜ್ಯಗಳ ರಚನೆ/ರಾಜ್ಯಗಳ ಭೂ ಪ್ರದೇಶಗಳ ಮಾರ್ಪಾಡು, ವಿಷಯಗಳಿಗೆ ಸಂಬಂಧಿಸಿದಂತೆ, ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಲು, ರಾಷ್ಟ್ರಪತಿಯ ಪೂರ್ವ ಸಮ್ಮತಿ ಅಗತ್ಯ |
| 108 | ಕೆಲವು ಮಸೂದೆಗಳ ಬಗ್ಗೆ ಸಂಸತ್ತಿನ ಎರಡು ಸದನಗಳ ನಡುವೆ ಭಿನ್ನಾಭಿಪ್ರಾಯ ಉಂಟಾದರೆ ಜಂಟಿ ಅಧಿವೇಶನ ಕರೆಯುವ ಅಧಿಕಾರ |
| 117(1) | ಹಣಕಾಸು ಮಸೂದೆ ಮಂಡನೆಗೆ ರಾಷ್ಟ್ರಪತಿ ಪೂರ್ವ ಸಮ್ಮತಿ ಅಗತ್ಯ. |
| 117(3) | ಭಾರತದ ಸಮುಚ್ಚಯ ನಿಧಿಯಿಂದ ಹಣ ಖರ್ಚು ಮಾಡಲು ಅವಕಾಶ |

| | |
|---|---|
| | ಮಾಡಿಕೊಡುವ ಮಸೂದೆಯನ್ನು ರಾಷ್ಟ್ರಪತಿ ಶಿಫಾರಸ್ಸು ಇಲ್ಲದೇ ಸಂಸತ್ತು ಅಂಗೀಕರಿಸುವಂತಿಲ್ಲ. |
| 274 | ರಾಷ್ಟ್ರಪತಿಯವರ ಅನುಮತಿ ಇಲ್ಲದೆ ತೆರಿಗೆಗೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸುವಂತಿಲ್ಲ. |

## ಭಾರತದ ರಾಷ್ಟ್ರಪತಿಗಳು :



| ಕ್ರ. ಸಂ. | ಹೆಸರು | ಅವಧಿ | | |
|---|---|---|---|---|
| | | ಪ್ರಾರಂಭ | ಮುಕ್ತಾಯ | ವೈಶಿಷ್ಟ್ಯತೆ |
| 1 | ಡಾ// ರಾಜೇಂದ್ರ ಪ್ರಸಾದ್ | 26–1–1950 | 13–5–1962 | ಹೆಚ್ಚು ಅವಧಿ ರಾಷ್ಟ್ರಪತಿ |
| 2 | ಡಾ// ಸರ್ವಪಲ್ಲಿ ರಾಧಾಕೃಷ್ಣನ್ | 13–5–1962 | 13–5–1967 | |
| 3 | ಡಾ// ಜಾಕೀರ್ ಹುಸೇನ್ | 13–5–1967 | 3–5–1969 | |
| 4 | ವರಹಗಿರಿ ವೆಂಕಟಗಿರಿ | 3–5–1969 | 20–7–1969 | ಹಂಗಾಮಿ |
| 5 | ನ್ಯಾಯಮೂರ್ತಿ ಮಹಮ್ಮದ್ ಹಿದಾಯತುಲ್ಲಾ | 20–7–1969 | 24–8–1969 | ಹಂಗಾಮಿ ಕಡಿಮೆ ಅವಧಿ ರಾಷ್ಟ್ರಪತಿ |
| 6 | ವರಹಗಿರಿ ವೆಂಕಟಗಿರಿ | 24–8–1969 | 24–8–1974 | |
| 7 | ಫಕ್ರುದ್ದೀನ್ ಅಲಿ ಮಹಮ್ಮದ್ | 24–8–1974 | 11–2–1977 | |
| 8 | ಬಿ.ಡಿ. ಜತ್ತಿ | 11–2–1977 | 25–7–1977 | ಹಂಗಾಮಿ |
| 9 | ನೀಲಂ ಸಂಜೀವರೆಡ್ಡಿ | 25–7–1977 | 25–7–1982 | |
| 10 | ಗ್ಯಾನಿ ಜೇಲ್ ಸಿಂಗ್ | 25–7–1982 | 25–7–1987 | |
| 11 | ಆರ್. ವೆಂಕಟರಾಮನ್ | 25–7–1987 | 25–7–1992 | |
| 12 | ಡಾ// ಶಂಕರ ದಯಾಳ್ ಶರ್ಮ | 25–7–1992 | 25–7–1997 | |
| 13 | ಕೆ.ಆರ್. ನಾರಾಯಣ್ | 25–7–1997 | 25–7–2002 | |
| 14 | ಡಾ// ಎ.ಪಿ.ಜೆ. ಅಬ್ದುಲ್ ಕಲಾಂ | 25–7–2002 | 25–7–2007 | |
| 15 | ಪ್ರತಿಭಾ ಪಾಟೀಲ್ | 25–7–2007 | 25–7–2012 | 13ನೇ ರಾಷ್ಟ್ರಪತಿ |
| 16 | ಪ್ರಣಭ್ ಮುಖರ್ಜಿ | 25–7–2012 | 25–7–2017 | |
| 17 | ರಾಮ್‌ನಾಥ್ ಕೋವಿಂದ್ | 25–7–2017 | | |

## ಉಪರಾಷ್ಟ್ರಪತಿಯಾದ ನಂತರ ರಾಷ್ಟ್ರಪತಿಯಾಗದವರು :

1. ಜಿ.ಎಸ್. ಪಾಠಕ್
2. ಕೆ. ಕೃಷ್ಣಕಾಂತ್
3. ಬೈರಾನ್‌ಸಿಂಗ್ ಶೇಖಾವತ್

GNANADHARE IAS ACADEMY

## ಉಪರಾಷ್ಟ್ರಪತಿಯಾಗದೇ ನೇರವಾಗಿ ರಾಷ್ಟ್ರಪತಿಯಾದವರು :

1. ಡಾ// ರಾಜೇಂದ್ರ ಪ್ರಸಾದ್
2. ಫಕ್ರುದ್ದೀನ್ ಅಲಿ ಮಹಮ್ಮದ್
3. ನೀಲಂ ಸಂಜೀವರೆಡ್ಡಿ
4. ಗ್ಯಾನಿ ಜೇಲ್ ಸಿಂಗ್
5. ಡಾ// ಎ.ಪಿ.ಜೆ. ಅಬ್ದುಲ್ ಕಲಾಂ
6. ಪ್ರತಿಭಾ ಪಾಟೀಲ್

## ಹಂಗಾಮಿ ರಾಷ್ಟ್ರಪತಿಯಾದವರು :

1. ವರಹಗಿರಿ ವೆಂಕಟಗಿರಿ
2. ನ್ಯಾಯಮೂರ್ತಿ ಮಹಮ್ಮದ್ ಹಿದಾಯತುಲ್ಲಾ
3. ಬಿ.ಡಿ. ಜತ್ತಿ

# ಉಪರಾಷ್ಟ್ರಪತಿ (Vice President) :

| ಅನುಚ್ಛೇದಗಳು | ವಿವರಣೆ |
|---|---|
| 63ನೇ ಅನುಚ್ಛೇದ | ಭಾರತಕ್ಕೆ ಒಬ್ಬ ಉಪರಾಷ್ಟ್ರಪತಿ ಇರತಕ್ಕದ್ದು |
| 64ನೇ ಅನುಚ್ಛೇದ | ಉಪರಾಷ್ಟ್ರಪತಿಯವರು ರಾಜ್ಯಸಭೆಯ ಪದನಿಮಿತ್ತ ರಾಜ್ಯಸಭೆಯ ಸಭಾಪತಿಯಾಗಿ ಕಾರ್ಯ ನಿರ್ವಹಿಸುವರು |
| 65ನೇ ಅನುಚ್ಛೇದ | ರಾಷ್ಟ್ರಪತಿ ನಿಧನರಾದರೆ/ರಾಜೀನಾಮೆ ನೀಡಿದರೆ/ಪದಚ್ಯುತಿಗೊಂಡರೆ/ ವಿದೇಶಗಳಿಗೆ ಹೋದಾಗ/ಕಾಯಿಲೆಯಿಂದ ನರಳುವಾಗ, ಅವರ ಗೈರುಹಾಜರಿಯಲ್ಲಿ ಉಪರಾಷ್ಟ್ರಪತಿಯು ರಾಷ್ಟ್ರಪತಿ ಅಧಿಕಾರವನ್ನು ಚಲಾಯಿಸುತ್ತಾರೆ |
| 66ನೇ ಅನುಚ್ಛೇದ | 1. ಭಾರತದ ಪ್ರಜೆಯಾಗಿರಬೇಕು<br>2. 35 ವರ್ಷಗಳು ತುಂಬಿರಬೇಕು<br>3. ರಾಜ್ಯಸಭೆಗೆ ಆಯ್ಕೆಯಾಗಲು ಅಗತ್ಯವಿರುವ ಅರ್ಹತೆಗಳನ್ನು ಹೊಂದಿರಬೇಕು |
| 66(4) | ಕೇಂದ್ರ/ರಾಜ್ಯ/ಸ್ಥಳೀಯ ಪ್ರಾಧಿಕಾರದಲ್ಲಿ ಲಾಭಾದಾಯಕ ಹುದ್ದೆಗಳನ್ನು |

GNANADHARE IAS KAS ACADEMY

| | |
|---|---|
| | ಹೊಂದಿರಬಾರದೆಂದು ವಿಧಿ ತಿಳಿಸುತ್ತದೆ. |
| 67ನೇ ಅನುಚ್ಛೇದ | ಉಪರಾಷ್ಟ್ರಪತಿಯವರು ತಾನು ಅಧಿಕಾರ ವಹಿಸಿಕೊಂಡ ದಿನದಿಂದ 5 ವರ್ಷಗಳ ಅವಧಿಗಳವರೆಗೆ ಅಧಿಕಾರದಲ್ಲಿರಬೇಕು.<br>ಉಪರಾಷ್ಟ್ರಪತಿಯವರು ಸಹಿ ಮಾಡಿದ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿಯವರಿಗೆ ನೀಡುವುದರೊಂದಿಗೆ ತಮ್ಮ ಸ್ಥಾನದಿಂದ ನಿರ್ಗಮಿಸಬಹುದು.<br>ರಾಜ್ಯ ಸಭೆಯು ಉಪರಾಷ್ಟ್ರಪತಿಯನ್ನು ಪದಚ್ಯುತಿಗೊಳಿಸಲು ತೀರ್ಮಾನಿಸಿ, 14 ದಿನಗಳ ಮುಂಚಿತ ನೋಟಿಸ್ ಕೊಟ್ಟು, ನಿರ್ಣಯವನ್ನು ಬಹುಮತದಿಂದ ಅಂಗೀಕರಿಸಿದ ನಂತರ, ಲೋಕಸಭೆ ಅದನ್ನು ಒಪ್ಪಿದರೆ, ಉಪರಾಷ್ಟ್ರಪತಿ ಅಧಿಕಾರವನ್ನು ಕಳೆದುಕೊಳ್ಳುವರು. |
| 68ನೇ ಅನುಚ್ಛೇದ | ಉಪರಾಷ್ಟ್ರಪತಿಯವರ ಸ್ಥಾನ ಖಾಲಿಯಾದ ತರುವಾಯ ಸಾಧ್ಯವಾದಷ್ಟು ಬೇಗನೆ ಅವರ ಸ್ಥಾನವನ್ನು ತುಂಬಲು ಚುನಾವಣೆಯನ್ನು ನಡೆಸಬೇಕು. |
| 69ನೇ ಅನುಚ್ಛೇದ | ಉಪರಾಷ್ಟ್ರಪತಿಯವರು ತಮ್ಮ ಹುದ್ದೆಯನ್ನು ವಹಿಸಿಕೊಳ್ಳುವ ಮೊದಲು ರಾಷ್ಟ್ರಪತಿಯವರ ಮುಂದೆ ಅಥವಾ ರಾಷ್ಟ್ರಪತಿಯು ಆ ಬಗ್ಗೆ ನೇಮಿಸಿದ ಯಾವುದೇ ವ್ಯಕ್ತಿಯ ಮುಂದೆ ಪ್ರಮಾಣ ವಚನ ಸ್ವೀಕರಿಸಿ ಅದಕ್ಕೆ ಸಹಿ ಮಾಡಬೇಕು. |
| 71(1)ನೇ ಅನುಚ್ಛೇದ | ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಗಳ ಚುನಾವಣಾ ವಿವಾದಗಳನ್ನು ಸರ್ವೋಚ್ಚ ನ್ಯಾಯಾಲಯ ಮಾತ್ರ ವಿಚಾರಣೆ ಮಾಡತಕ್ಕದ್ದು, ಅದರ ತೀರ್ಮಾನವೇ ಅಂತಿಮವಾಗಿರತಕ್ಕದ್ದು. |

## ಆಯ್ಕೆ ವಿಧಾನ :

1. 66(1)ನೇ ವಿಧಿ ಪ್ರಕಾರ, ಉಪರಾಷ್ಟ್ರಪತಿಯನ್ನು ಸಂಸತ್ತಿನ ಎರಡು ಸದನಗಳ ಸದಸ್ಯರುಗಳು ಚುನಾಯಿಸುತ್ತಾರೆ.
2. ಮತದಾನದ ಮೂಲಕ, ಏಕಮತವನ್ನು ವರ್ಗಾಯಿಸುವ ಪ್ರಮಾಣ ಗುಣ ಪದ್ಧತಿಗೆ ಅನುಗುಣವಾಗಿ ಚುನಾಯಿಸಲಾಗುತ್ತದೆ.
3. ಚುನಾವಣೆಯ ಸಮಯದಲ್ಲಿ ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿ ಸಂಸತ್ತಿನ/ರಾಜ್ಯ ಶಾಸಕಾಂಗದ ಸದಸ್ಯರಾಗಿದ್ದಲ್ಲಿ, ಆಯ್ಕೆ ನಂತರ ರದ್ದಾಗುವುದೆಂದು 66(2)ನೇ ವಿಧಿ ತಿಳಿಸುತ್ತದೆ.

## ಪ್ರಮಾಣ ವಚನ :

ಸಂವಿಧಾನದ 69ನೇ ವಿಧಿ ಅನ್ವಯ, ರಾಷ್ಟ್ರಪತಿ ಸಮ್ಮುಖದಲ್ಲಿ, ಉಪರಾಷ್ಟ್ರಪತಿಯು 'ಸಂವಿಧಾನಕ್ಕೆ ವಿಧೇಯತೆಯಿಂದಿದ್ದು, ನಿಷ್ಠೆಯಿಂದ ಕರ್ತವ್ಯವನ್ನು ನಿರ್ವಹಿಸುವೆ ಎಂದು ಪ್ರತಿಜ್ಞೆ ಮಾಡುತ್ತಾರೆ.

GNANADHARE IASKAS ACADEMY

## ವೇತನ :

- ಪ್ರಸ್ತುತ ವೇತನ – 1,25,000 ರೂ
- ಒಂದು ವೇಳೆ ಉಪರಾಷ್ಟ್ರಪತಿ ಹಂಗಾಮಿ ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸಿದರೆ ವೇತನ & ಭತ್ಯೆಗಳನ್ನು ಪಡೆಯುತ್ತಾರೆಂದು 65(3) ನೇ ವಿಧಿ ತಿಳಿಸುತ್ತದೆ.

## ಅಧಿಕಾರಗಳು ಮತ್ತು ಕರ್ತವ್ಯಗಳು :

- ಸಂವಿಧಾನದಲ್ಲಿ ಉಪರಾಷ್ಟ್ರಪತಿ ಪ್ರತ್ಯೇಕವಾಗಿ ನಿರ್ವಹಿಸಬೇಕಾದ ಅಧಿಕಾರಗಳನ್ನು & ಕರ್ತವ್ಯಗಳನ್ನು ನಮೂದಿಸಿಲ್ಲ.
- ಹಂಗಾಮಿ ರಾಷ್ಟ್ರಪತಿಯಾಗಿ ಕೆಲಸ ನಿರ್ವಹಿಸುವಾಗ ರಾಜ್ಯಸಭೆಯ ಅಧ್ಯಕ್ಷತೆ ವಹಿಸುವಂತಿಲ್ಲ.
- ಕರ್ತವ್ಯಗಳ ನಿರ್ವಹಣೆ ದೃಷ್ಟಿಯಿಂದ ಭಾರತದ ಉಪರಾಷ್ಟ್ರಪತಿಯ ಕರ್ತವ್ಯಗಳು ಅಮೆರಿಕಾದ ಉಪಾಧ್ಯಕ್ಷರ ಕರ್ತವ್ಯಗಳನ್ನು ಹೋಲುತ್ತವೆ

GNANADHARE IAS KAS ACADEMY

# ಉಪರಾಷ್ಟ್ರಪತಿಗಳು :



| | | ಅವಧಿ | | |
|---|---|---|---|---|
| ಕ್ರ.ಸಂ. | ಹೆಸರು | ಪ್ರಾರಂಭ | ಮುಕ್ತಾಯ | ವೈಶಿಷ್ಟ್ಯತೆ |
| 1 | ರಾಧಾಕೃಷ್ಣನ್ | 1952 | 1962 | ಹೆಚ್ಚು ಅವಧಿ ಉಪರಾಷ್ಟ್ರಪತಿ |
| 2 | ಜಾಕಿರ್ ಹುಸೇನ್ | 1962 | 1967 | |
| 3 | ವಿ.ವಿ. ಗಿರಿ | 1967 | 1969 | ಕಡಿಮೆ ಅವಧಿ ಉಪರಾಷ್ಟ್ರಪತಿ |
| 4 | ಜಿ.ಎಸ್. ಪಾಠಕ್ | 1969 | 1974 | |
| 5 | ಬಿ.ಡಿ ಜತ್ತಿ | 1974 | 1979 | |
| 6 | ಹಿದಾಯತ್ ಉಲ್ಲಾ | 1979 | 1984 | ಅವಿರೋಧ ಆಯ್ಕೆ |
| 7 | ಆರ್. ವೆಂಕಟರಾಮನ್ | 1984 | 1987 | |
| 8 | ಶಂಕರ್ ದಯಾಳ್ ಶರ್ಮ | 1987 | 1992 | ಅವಿರೋಧ ಆಯ್ಕೆ |
| 9 | ಕೆ.ಆರ್. ನಾರಾಯಣ್ | 1992 | 1997 | |
| 10 | ಕೃಷ್ಣಕಾಂತ್ | 1997 | 2002 | |
| 11 | ಭೈರಾನ್ ಸಿಂಗ್ ಶೆಖಾವತ್ | 2002 | 2007 | |
| 12 | ಮೊಹಮ್ಮದ್ ಹಮೀದ್ ಅನ್ಸಾರಿ | 2007 | 2017 | |
| 13 | ವೆಂಕಯ್ಯ ನಾಯ್ಡು | 2017 | | |

GNANADHARE IAS KAS ACADEMY

# ಸಂಸತ್ತು :



- "Parliament" ಎಂಬ ಇಂಗ್ಲೀಷ್ ಪದ ಇದರ ಅರ್ಥ – "ಆಲೋಚನಾ ಸಭೆ".
- ಪ್ರಜೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವ ಶಾಸಕಾಂಗ, ಬ್ರಿಟನ್, ಕೆನಡ & ಭಾರತದಲ್ಲಿ "ಪಾರ್ಲಿಮೆಂಟ್" ಎಂದು ಪ್ರಚಲಿತವಾಗಿದೆ.
- ಭಾರತದ ಸಂವಿಧಾನದ 5ನೇ ಭಾಗದ 2ನೇ ಅಧ್ಯಾಯದಲ್ಲಿ ಸಂಸತ್ತಿನ ಕೂಲಂಕುಷವಾದ ವಿವರಣೆ ನೀಡಲಾಗಿದೆ.
- ಕೇಂದ್ರ ಶಾಸಕಾಂಗವನ್ನು ಸಂಸತ್ತು ಎಂದು ಕರೆಯುತ್ತಾರೆ.
- ರಾಷ್ಟ್ರಪತಿಯು ಸಂಸತ್ತಿನ ಯಾವುದೇ ಸದನದ ಸದಸ್ಯರಲ್ಲದಿದ್ದರೂ ಸಂಸತ್ತಿನ ಅವಿಭಾಜ್ಯ ಅಂಗವಾಗಿರುತ್ತದೆ.
- ಸಂವಿಧಾನದ 5ನೇ ಭಾಗದ 2ನೇ ಅಧ್ಯಾಯದಲ್ಲಿ ನಮೂದಿಸಲ್ಪಟ್ಟಿರುವ 79–122ನೇ ವಿಧಿಗಳು, ಸಂಸತ್ತಿನ ರಚನೆ, ಸಂಘಟನೆ, ಅವಧಿ, ಅಧಿಕಾರಗಳು, ಸೌಲಭ್ಯಗಳು ಮೊದಲಾದವುಗಳ ಬಗ್ಗೆ ವಿವರಣೆ ನೀಡುತ್ತದೆ.

GNANADHARE IAS ACADEMY

# ಭಾರತದ ಸಂಸತ್ತು :

## ಭಾರತದ ಸಂಸತ್ತು

- ರಾಜ್ಯಸಭೆ (ಮೇಲ್ಮನೆ)
  - ಗರಿಷ್ಠ 250 ಸದಸ್ಯರು
    - ರಾಜ್ಯಗಳು & ಕೇಂದ್ರಾಡಳಿತ ಪ್ರದೇಶಗಳಿಂದ 238 ಸದಸ್ಯರ ಆಯ್ಕೆ
    - 12 ಸದಸ್ಯರ ನಾಮಕರಣ
- ಲೋಕಸಭೆ(ಕೆಳಮನೆ)
  - ಗರಿಷ್ಠ 552 ಸದಸ್ಯರು
    - ರಾಜ್ಯಗಳಿಂದ (530) ಸದಸ್ಯರ ಆಯ್ಕೆ
    - ಕೇಂದ್ರಾಡಳಿತ ಪ್ರದೇಶಗಳಿಂದ ಸದಸ್ಯರ ಆಯ್ಕೆ(20)
    - ಆಂಗ್ಲೋ-ಇಂಡಿಯನ್ ಜನಾಂಗದ 02 ಸದಸ್ಯರ ನಾಮಕರಣ

ರಾಜ್ಯಸಭೆಗೆ ಅತಿ ಹೆಚ್ಚು ಸ್ಥಾನ ಉತ್ತರಪ್ರದೇಶ ರಾಜ್ಯದಿಂದ(31) ಆಯ್ಕೆಯಾಗುತ್ತಾರೆ
ಕರ್ನಾಟಕದಿಂದ ರಾಜ್ಯಸಭೆಗೆ 12 ಜನ ಆಯ್ಕೆಯಾಗುತ್ತಾರೆ.

ಲೋಕಸಭೆಗೆ ಅತಿ ಹೆಚ್ಚು ಸ್ಥಾನ ಉತ್ತರಪ್ರದೇಶ ರಾಜ್ಯದಿಂದ (80) ಆಯ್ಕೆಯಾಗುತ್ತಾರೆ
ಕರ್ನಾಟಕದಿಂದ ಲೋಕಸಭೆಗೆ 28 ಜನ ಆಯ್ಕೆಯಾಗುತ್ತಾರೆ

GNANADHAREIAS KAS ACADEMY

| ರಾಜ್ಯಸಭೆ | ಲೋಕಸಭೆ |
|---|---|
| 1. ರಾಜ್ಯಸಭೆಯನ್ನು ಮೇಲ್ಮನೆ ಎಂದು ಕರೆಯುತ್ತಾರೆ | 1. ಲೋಕಸಭೆಯನ್ನು ಕೆಳಮನೆ ಎಂದು ಕರೆಯುತ್ತಾರೆ |
| 2. ರಾಜ್ಯಸಭಾ ಸದಸ್ಯರ ಅಧಿಕಾರವಧಿ 6 ವರ್ಷಗಳು | • ಲೋಕಸಭಾ ಸದಸ್ಯರ ಅಧಿಕಾರವಧಿ 5 ವರ್ಷಗಳು |
| 3. ರಾಜ್ಯಸಭಾ ಸದಸ್ಯರ ಅರ್ಹತೆಗಳು<br>• ಭಾರತೀಯ ಪ್ರಜೆಯಾಗಿರಬೇಕು<br>• 30 ವರ್ಷ ವಯಸ್ಸಾಗಿರಬೇಕು<br>• ದಿವಾಳಿಯಾಗಿರಬಾರದು<br>• ಮತಿಭ್ರಮಣನಾಗಿರಬಾರದು<br>• ಲಾಭದಾಯಕ ಹುದ್ದೆ ಹೊಂದಿರಬಾರದು | 3. ರಾಜ್ಯಸಭಾ ಸದಸ್ಯರ ಅರ್ಹತೆಗಳು<br>• ಭಾರತೀಯ ಪ್ರಜೆಯಾಗಿರಬೇಕು<br>• 25 ವರ್ಷ ವಯಸ್ಸಾಗಿರಬೇಕು<br>• ದಿವಾಳಿಯಾಗಿರಬಾರದು<br>• ಮತಿಭ್ರಮಣನಾಗಿರಬಾರದು<br>• ಲಾಭದಾಯಕ ಹುದ್ದೆ ಹೊಂದಿರಬಾರದು |

# ರಾಜ್ಯಸಭೆ (ಮೇಲ್ಮನೆ) :

## ರಾಜ್ಯಸಭೆ ಸ್ಥಾನಗಳ ಹಂಚಿಕೆ :

| ಕ್ರ.ಸಂ | ರಾಜ್ಯಗಳು | ಒಟ್ಟು ಸ್ಥಾನಗಳು |
|---|---|---|
| 1 | ಉತ್ತರ ಪ್ರದೇಶ | 31 |
| 2 | ಮಹಾರಾಷ್ಟ್ರ | 19 |
| 3 | ಆಂಧ್ರ ಪ್ರದೇಶ | 18 |
| 4 | ತಮಿಳುನಾಡು | 18 |
| 5 | ಬಿಹಾರ | 16 |
| 6 | ಪಶ್ಚಿಮ ಬಂಗಾಳ | 16 |
| 7 | ಕರ್ನಾಟಕ | 12 |
| 8 | ಮಧ್ಯ ಪ್ರದೇಶ | 11 |
| 9 | ಗುಜರಾತ್ | 11 |
| 10 | ಒರಿಸ್ಸಾ | 10 |
| 11 | ರಾಜಸ್ತಾನ | 10 |
| 12 | ಕೇರಳ | 9 |
| 13 | ಪಂಜಾಬ್ | 7 |
| 14 | ಅಸ್ಸಾಂ | 7 |
| 15 | ಜಾರ್ಖಂಡ್ | 6 |
| 16 | ಹರಿಯಾಣ | 5 |
| 17 | ಛತ್ತಿಸ್‌ಘಡ | 5 |
| 18 | ಜಮ್ಮು & ಕಾಶ್ಮೀರ | 4 |
| 19 | ಉತ್ತರಾಂಚಲ | 3 |
| 20 | ಹಿಮಾಚಲ ಪ್ರದೇಶ | 3 |

| | | |
|---|---|---|
| 21 | ಅರುಣಾಚಲ ಪ್ರದೇಶ | 1 |
| 22 | ಗೋವಾ | 1 |
| 23 | ಮಣಿಪುರ | 1 |
| 24 | ಮೇಘಾಲಯ | 1 |
| 25 | ಮಿಜೋರಾಂ | 1 |
| 26 | ನಾಗಾಲ್ಯಾಂಡ್ | 1 |
| 27 | ಸಿಕ್ಕಿಂ | 1 |
| 28 | ತ್ರಿಪುರ | 1 |
| | **ಕೇಂದ್ರಾಡಳಿತ ಪ್ರದೇಶಗಳು** | |
| 1 | ದೆಹಲಿ | 3 |
| 2 | ಪಾಂಡಿಚೇರಿ | 1 |
| 3 | ಅಂಡಮಾನ್ & ನಿಕೋಬಾರ್ | – |
| 4 | ದಾದ್ರ & ನಗರ ಹಾವೇಲಿ | – |
| 5 | ದಿಯು & ದಮನ್ | – |
| 6 | ಲಕ್ಷದ್ವೀಪ | – |
| 7 | ಚಂಡೀಗಢ | – |
| | **ನಾಮಕರಣ ಸದಸ್ಯರು** | **12** |
| | **ಒಟ್ಟು** | **245** |

## ರಾಜ್ಯ ಸಭೆಯ ಆಯ್ಕೆ ವಿಧಾನ :

- ವಿಧಾನಸಭೆಗಳ ಚುನಾಯಿತ ಸದಸ್ಯರು ಏಕಮತವನ್ನು ವರ್ಗಾಯಿಸುವ ಪ್ರಮಾಣಾನುಗುಣ ಪದ್ಧತಿಯ ಮೂಲಕ ಚುನಾಯಿಸುತ್ತಾರೆ.
- ಪ್ರತಿ ಕೇಂದ್ರಾಡಳಿತ ಪ್ರದೇಶದಿಂದ ರಾಜ್ಯಸಭಾ ಸದಸ್ಯರು ಪರೋಕ್ಷವಾಗಿ ಚುನಾಯಿತರ ಸಮೂಹದಿಂದ ಏಕಮತವನ್ನು ವರ್ಗಾಯಿಸುವ ಪ್ರಮಾಣಾನುಗುಣ ಪದ್ಧತಿಯ ಮೂಲಕ ಆಯ್ಕೆಯಾಗುತ್ತಾರೆ.

## ರಾಜ್ಯಸಭೆಯ ಅವಶ್ಯಕತೆ :

- ಕಾನೂನು ರಚಿಸುವಾಗ ಈ ಸದನದ ನುರಿತ & ಅನುಭವಿ ವ್ಯಕ್ತಿಗಳು ತಮ್ಮ ಸಲಹೆ & ಮಾರ್ಗದರ್ಶನ ಕೊಡುವುದು.
- ಸಂಸತ್ತಿನಲ್ಲಿ ರಾಜ್ಯಗಳ ಹಿತಾಸಕ್ತಿಗಳನ್ನು ರಕ್ಷಿಸಿ, ಅವುಗಳ ಬಗ್ಗೆ ಚರ್ಚಿಸುವುದು.
- ಲೋಕಸಭೆ ಅಧಿವೇಶನದಲ್ಲಿ ಇಲ್ಲದಿದ್ದಾಗ/ವಿಸರ್ಜನೆಯಾದಾಗ ಕೆಲವು ಕರ್ತವ್ಯಗಳನ್ನು ನಿರ್ವಹಿಸುವುದು.



GNANADHARE IAS KAS ACADEMY

# ಲೋಕಸಭೆ (ಕೆಳಮನೆ) :

## ವಿನಾಯಿತಿ :

1. ಸಂಸತ್ತಿನ ಸದಸ್ಯರು ಖಾಸಗಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರೆ, ಅದು ಲಾಭದಾಯಕ ಹುದ್ದೆಯಾಗುವುದಿಲ್ಲ.
2. ಕೇಂದ್ರ & ರಾಜ್ಯದಲ್ಲಿ ಸಚಿವರಾಗಿದ್ದಲ್ಲಿ, ಅದನ್ನು ಲಾಭದಾಯಕ ಹುದ್ದೆಯೆಂದು ಪರಿಗಣಿಸುವುದಿಲ್ಲ.

| ಕ್ರ.ಸಂ | ರಾಜ್ಯಗಳು | ಒಟ್ಟು ಸ್ಥಾನಗಳು |
|---|---|---|
| 1 | ಉತ್ತರ ಪ್ರದೇಶ | 80 |
| 2 | ಮಹಾರಾಷ್ಟ್ರ | 48 |
| 3 | ಆಂಧ್ರ ಪ್ರದೇಶ | 42 |
| 4 | ಪಶ್ಚಿಮ ಬಂಗಾಳ | 42 |
| 5 | ಬಿಹಾರ | 40 |
| 6 | ತಮಿಳುನಾಡು | 39 |
| 7 | ಮಧ್ಯ ಪ್ರದೇಶ | 29 |
| 8 | ಕರ್ನಾಟಕ | 28 |
| 9 | ಗುಜರಾತ್ | 26 |
| 10 | ರಾಜಸ್ತಾನ | 25 |
| 11 | ಒರಿಸ್ಸಾ | 21 |
| 12 | ಕೇರಳ | 20 |
| 13 | ಅಸ್ಸಾಂ | 14 |
| 14 | ಜಾರ್ಖಂಡ್ | 14 |
| 15 | ಪಂಜಾಬ್ | 13 |
| 16 | ಛತ್ತಿಸ್‌ಘಡ | 11 |
| 17 | ಹರಿಯಾಣ | 10 |
| 18 | ಜಮ್ಮು & ಕಾಶ್ಮೀರ | 6 |
| 19 | ಉತ್ತರಾಂಚಲ | 5 |
| 20 | ಹಿಮಾಚಲ ಪ್ರದೇಶ | 4 |
| 21 | ಅರುಣಾಚಲ ಪ್ರದೇಶ | 2 |
| 22 | ಗೋವಾ | 2 |
| 23 | ತ್ರಿಪುರ | 2 |
| 24 | ಮಣಿಪುರ | 2 |
| 25 | ಮೇಘಾಲಯ | 2 |
| 26 | ಮಿಜೋರಾಂ | 1 |
| 27 | ನಾಗಾಲ್ಯಾಂಡ್ | 1 |
| 28 | ಸಿಕ್ಕಿಂ | 1 |
| | **ಕೇಂದ್ರಾಡಳಿತ ಪ್ರದೇಶಗಳು** | |
| 1 | ದೆಹಲಿ | 7 |
| 2 | ಪಾಂಡಿಚೇರಿ | 1 |
| 3 | ಲಕ್ಷದ್ವೀಪ | 1 |
| 4 | ದಿಯು & ದಮನ್ | 1 |
| 5 | ದಾದ್ರ & ನಗರ ಹಾವೇಲಿ | 1 |
| 6 | ಅಂಡಮಾನ್ & ನಿಕೋಬಾರ್ | 1 |
| 7 | ಚಂಡೀಗಢ | 1 |

GNANADHARE IAS KAS ACADEMY

| | | |
|---|---|---|
| | ನಾಮಕರಣ ಸದಸ್ಯರು | 2 |
| | ಒಟ್ಟು | 545 |

## ಲೋಕಸಭೆಯ ರಚನೆ ಮತ್ತು ವಿಸರ್ಜನೆ :

| ಲೋಕಸಭೆ | ರಚನೆ | ವಿಸರ್ಜನೆ |
|---|---|---|
| 1ನೇ ಲೋಕಸಭೆ | 1952 | 1957 |
| 2ನೇ ಲೋಕಸಭೆ | 1957 | 1962 |
| 3ನೇ ಲೋಕಸಭೆ | 1962 | 1967 |
| 4ನೇ ಲೋಕಸಭೆ | 1967 | 1970 |
| 5ನೇ ಲೋಕಸಭೆ | 1971 | 1977 |
| 6ನೇ ಲೋಕಸಭೆ | 1977 | 1979 |
| 7ನೇ ಲೋಕಸಭೆ | 1980 | 1984 |
| 8ನೇ ಲೋಕಸಭೆ | 1984 | 1989 |
| 9ನೇ ಲೋಕಸಭೆ | 1989 | 1991 |
| 10ನೇ ಲೋಕಸಭೆ | 1991 | 1996 |
| 11ನೇ ಲೋಕಸಭೆ | 1996 | 1997 |
| 12ನೇ ಲೋಕಸಭೆ | 1998 | 1999 |
| 13ನೇ ಲೋಕಸಭೆ | 1999 | 2004 |
| 14ನೇ ಲೋಕಸಭೆ | 2004 | 2009 |
| 15ನೇ ಲೋಕಸಭೆ | 2009 | – |

GNANADHARE IAS KAS ACADEMY

## ಸಂಸದರ ಹಕ್ಕುಗಳು ಮತ್ತು ರಕ್ಷಣೆಗಳು :

ಸಂವಿಧಾನದ 105ನೇ ವಿಧಿಯನ್ವಯ ಸಂಸದರು ಕೆಲವು ಹಕ್ಕು & ರಕ್ಷಣೆಗಳನ್ನು ಹೊಂದಿರುತ್ತಾರೆ. ಅವುಗಳು ಕೆಳಗಿನಂತಿವೆ.

1. 105(1)ನೇ ವಿಧಿಯನ್ವಯ, ಸಂವಿಧಾನ & ಸಂಸತ್ತಿನ ನಿಯಮಗಳಿಗೆ ಒಳಪಟ್ಟು ಇವರಿಗೆ ಸಂಸತ್ತಿನೊಳಗೆ ವಾಕ್ ಸ್ವಾತಂತ್ರ್ಯವಿದೆ.
2. 105(2)ನೇ ವಿಧಿಯನ್ವಯ, ಸಂಸತ್ತಿನಲ್ಲಿ ಸಮಿತಿಗಳನ್ನು ಮಾತನಾಡಿದ್ದಕ್ಕಾಗಲೀ/ಮತ ಚಲಾಯಿಸಿದ್ದಕ್ಕಾಗಲೀ ಯಾವುದೇ ನ್ಯಾಯಲಯದಲ್ಲಿ ಪ್ರಶ್ನಿಸುವಂತಿಲ್ಲ.
3. ಸಿವಿಲ್ ವಿವಾದಗಳಿಗೆ ಸಂಬಂಧಿಸಿದಂತೆ ಅಧಿವೇಶನದ ಸಮಯದಲ್ಲಿ/ಸಮಿತಿಗಳು ಸಭೆ ನಡೆಸುತ್ತಿರುವಾಗ ಸಂಸದರನ್ನು ದಸ್ತಗಿರಿ ಮಾಡುವಂತಿಲ್ಲ. ಅಲ್ಲದೇ ಅಧಿವೇಶನ/ಸಮಿತಿಗಳು ಸಭೆ ಸೇರುವ 40 ದಿನಗಳಿಗೆ ಮುಂಚೆ & ಅಧಿವೇಶನ ಮುಗಿದ ದಿನದಿಂದ 40 ದಿನಗಳವರೆಗೆ ದಸ್ತಗಿರಿ ಮಾಡುವಂತಿಲ್ಲ. ಈ ರಕ್ಷಣೆಯು ಕ್ರಿಮಿನಲ್ ವಿವಾದಗಳಿಗೆ/ಮುನ್ನೆಚ್ಚರಿಕೆ ಬಂಧನಕ್ಕೆ ಅನ್ವಯಿಸುವುದಿಲ್ಲ.
4. ಕ್ರಿಮಿನಲ್ ಅಪರಾಧಕ್ಕಾಗಿ/ಮುನ್ನಚ್ಚರಿಕೆ ಬಂಧನ ಕಾಯ್ದೆ ಅನ್ವಯ ಸದಸ್ಯರನ್ನು ಬಂಧಿಸಿದಾಗ ಸಂಬಂಧಪಟ್ಟ ಅಧಿಕಾರಿ ಸ್ಪೀಕರ್‌ಗೆ ತಿಳಿಸಬೇಕು.
5. ಹೊರಗಿನವರು ಸದನಕ್ಕೆ ಚ್ಯುತಿ ಉಂಟು ಮಾಡಿದಾಗ ಅವರಿಗೆ ಎಚ್ಚರಿಕೆ ಕೊಡುವ/ಬಂಧಿಸುವ ಅಧಿಕಾರ ಸಂಸತ್ತಿಗಿದೆ.

## ಸಂಸತ್ತಿನ ಅಧಿಕಾರಗಳು ಮತ್ತು ಕರ್ತವ್ಯಗಳು :

1. ಶಾಸನ ರಚಿಸುವುದು.
2. ಸಂವಿಧಾನವನ್ನು ತಿದ್ದುಪಡಿ ಮಾಡುವುದು
3. ಮಂತ್ರಿಮಂಡಲ ನಿಯಂತ್ರಣ
4. ರಾಷ್ಟ್ರಪತಿ & ಉಪರಾಷ್ಟ್ರಪತಿಗಳನ್ನು ಚುನಾಯಿಸುವುದು
5. ರಾಷ್ಟ್ರಪತಿ & ಉಪರಾಷ್ಟ್ರಪತಿಗಳನ್ನು ಪದಚ್ಯುತಿಗೊಳಿಸುವುದು
6. ಭಾರತದ ಕಂಟ್ರೋಲರ್ & ಆಡಿಟರ್ ಜನರಲ್ ಪದಚ್ಯುತಿಗೊಳಿಸುವುದು
7. ಮುಖ್ಯ ಚುನಾವಣಾಧಿಕಾರಿಗಳನ್ನು ಪದಚ್ಯುತಿಗೊಳಿಸುವುದು
8. ವಿವಿಧ ವರದಿಗಳನ್ನು ಚರ್ಚಿಸುವುದು
9. ತುರ್ತು ಪರಿಸ್ಥಿತಿಗಳನ್ನು ಅನುಮೋದಿಸುವುದು
10. ಲೋಕಸಭೆಯ ವಿಶೇಷಾಧಿಕಾರಗಳು

11. ರಾಜ್ಯಸಭೆಯ ವಿಶೇಷಾಧಿಕಾರಗಳು

## 1. ಶಾಸನ ರಚಿಸುವುದು :

- ಸಂಸತ್ತು ಪ್ರಮುಖವಾಗಿ ಕಾನೂನು ಮಾಡುವ ಅಂಗ. ಎಲ್ಲಾ ವಿಷಯಗಳನ್ನು ಬಹುಮತದ ಮೇಲೆ ತೀರ್ಮಾನಿಸಬೇಕು. 100(1)ನೇ ವಿಧಿ ತಿಳಿಸುತ್ತದೆ. ಆಡಳಿತ & ಪ್ರತಿಪಕ್ಷಗಳ ನಡುವೆ ಸಮಾನ ಮತಗಳು ಬಂದಾಗ ಸ್ಪೀಕರ್ ತಮ್ಮ ಮತವನ್ನು ಚಲಾಯಿಸಬಹುದು. 100(3)ನೇ ವಿಧಿ ಪ್ರಕಾರ ಯಾವುದೇ ಸದನ ಕೋರಮ್ 1/10ರಷ್ಟು ಇರಬೇಕು. ಇಲ್ಲದಿದ್ದರೆ ಅಧಿವೇಶನ ಮುಂದೂಡಲಾಗುತ್ತದೆ.
- 107ನೇ ವಿಧಿ ಅನ್ವಯ, ಹಣಕಾಸು ಮಸೂದೆಗಳನ್ನು ಬಿಟ್ಟು ಇತರೆ ಮಸೂದೆಗಳನ್ನು ಯಾವುದೇ ಸದನದಲ್ಲಾದರೂ ಮಂಡಿಸಬಹುದು.
- 107(3)ನೇ ವಿಧಿ ಪ್ರಕಾರ, ಸಂಸತ್ತಿನ ಅಧಿವೇಶನವನ್ನು ಮುಕ್ತಾಯ ಮಾಡಿದರೂ, ಸಂಸತ್ತಿನಲ್ಲಿರುವ ಮಸೂದೆ ಜೀವಂತವಾಗಿರುತ್ತದೆ.
- 107(4) ನೇ ವಿಧಿ ಪ್ರಕಾರ, ಲೋಕಸಭೆಯ ಅಂಗೀಕಾರವನ್ನು ಪಡೆಯದ ಮಸೂದೆ, ರಾಜ್ಯಸಭೆಯಲ್ಲಿದ್ದರೂ, ಲೋಕಸಭೆ ವಿಸರ್ಜನೆಯಾದರೂ ರದ್ದಾಗುವುದಿಲ್ಲ.
- 107(5) ವಿಧಿ ಪ್ರಕಾರ, ಲೋಕಸಭೆಯಲ್ಲಿರುವ ಮಸೂದೆ/ಲೋಕಸಭೆಯಿಂದ ರಾಜ್ಯ ಸಭೆಯಲ್ಲಿರುವ ಮಸೂದೆ 108ನೇ ವಿಧಿಯಲ್ಲಿರುವ ನಿಯಮಗಳಿಗೆ ಒಳಪಟ್ಟು, ಲೋಕಸಭೆ ವಿಸರ್ಜನೆಯಾದಾಗ ರದ್ದಾಗುತ್ತದೆ

## ಕಾನೂನು ರಚನೆ ವಿಧಾನಗಳು :

| | |
|---|---|
| ಮೊದಲನೇ ಪರಿಶೀಲನೆ | • ಮಸೂದೆಯನ್ನು ಸಚಿವರಾಗಲಿ/ಸದಸ್ಯರಾಗಲಿ ಸದನದಲ್ಲಿ ಮಂಡಿಸಬಹುದು. "ಸಚಿವರು ಸರ್ಕಾರದ ಪರವಾಗಿ ಮಸೂದೆಯನ್ನು" ಮಂಡಿಸುವುದರಿಂದ ಇದನ್ನು ಸಾರ್ವಜನಿಕ/ಸರ್ಕಾರಿ ಮಸೂದೆ ಎನ್ನುವರು. "ಸದಸ್ಯರು ಮಂಡಿಸುವ ಮಸೂದೆಯನ್ನು" ಖಾಸಗಿ ಮಸೂದೆ ಎನ್ನುವರು.<br>• ಮಸೂದೆಯನ್ನು ಮಂಡಿಸುವ ಸದಸ್ಯರು, ಸಭಾಧ್ಯಕ್ಷರ ಅನುಮತಿ ಪಡೆಯಬೇಕು. ಸಂಸತ್ತಿನಲ್ಲಿ ಮಂಡಿಸಲು ಸದಸ್ಯರು 1 ತಿಂಗಳ ನೋಟಿಸ್ ಕೊಡಬೇಕು & ಸಚಿವರು 7 ದಿನಗಳ ನೋಟಿಸ್ ಕೊಡಬೇಕು. |

GNANADHARE IAS KAS ACADEMY

| | |
|---|---|
| | • ಒಬ್ಬ ಸದಸ್ಯರು 4 ಮಸೂದೆಗಳನ್ನು ಮಂಡಿಸಲು ಅವಕಾಶವಿದೆ. • ಸಂಸತ್ತಿನಲ್ಲಿ ಮಂಡಿಸಿದ ಮಸೂದೆಯನ್ನು, ಕೆಲವರು ವಿರೋಧಿಸಿದರೂ ಅದನ್ನು ಮತಕ್ಕೆ ಹಾಕಲಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಚರ್ಚೆ ನಡೆಯುವುದಿಲ್ಲ. |
| ಎರಡನೇ ಪರಿಶೀಲನೆ | • ಈ ಹಂತದಲ್ಲಿ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬಹುದು/ಸದನದ ಸೆಲೆಕ್ಟ್ ಕಮಿಟಿಗೆ ಒಪ್ಪಿಸಬಹುದು. ಸದನ ಸಮಿತಿ/ಜಂಟಿ ಸಮಿತಿಗೆ ಒಪ್ಪಿಸಿದಾಗ ವಿವರಗಳನ್ನು ಚರ್ಚೆಗಳು ನಡೆಯುತ್ತವೆ. ಜಂಟಿ ಸಮಿತಿಯಲ್ಲಿ ಲೋಕಸಭೆ & ರಾಜ್ಯ ಸಭೆಗೆ ಅನುಕ್ರಮವಾಗಿ 2:1 ಪ್ರಾತಿನಿಧ್ಯತೆ ಕೊಡಲಾಗುತ್ತದೆ. ನಿಗಧಿಪಡಿಸಿದ ಅವಧಿಯೊಳಗೆ ಸಮಿತಿ ತನ್ನ ವರದಿಯನ್ನು ಒಪ್ಪಿಸಬೇಕು. ಈ ವರದಿಯ ಆಧಾರದ ಮೇಲೆ ವಿವರವಾಗಿ ತಿದ್ದುಪಡಿಗಳನ್ನು ಮಾಡಬಹುದು. |
| ಮೂರನೇ ಪರಿಶೀಲನೆ | • ಈ ಹಂತದಲ್ಲಿ ಚರ್ಚೆಗಳು ದೀರ್ಘವಾಗಿರುವುದಿಲ್ಲ. ಮಸೂದೆಯನ್ನು ಸಾಧ್ಯವಾದಷ್ಟು ಬೇಗ ಅಂಗೀಕರಿಸಬೇಕೆಂದು ಸದನದ ಇಚ್ಛೆಯಾಗಿರುತ್ತದೆ. ಈ ಹಂತದಲ್ಲಿ ಸಾಮಾನ್ಯ ತಿದ್ದುಪಡಿಗಳನ್ನು ಮಂಡಿಸಬಹುದು. ಮಸೂದೆ ಅಂಗೀಕಾರವಾದ ಮೇಲೆ, ಇನ್ನೊಂದು ಸದನಕ್ಕೆ ಕಳುಹಿಸಲಾಗುತ್ತದೆ. ಈ ಸದನದ ಒಪ್ಪಿಗೆ ನಂತರ ರಾಷ್ಟ್ರಪತಿ ಅಂಗೀಕಾರಕ್ಕೆ ಒಪ್ಪಿಗೆ ನೀಡುತ್ತಾರೆ. |

### ಸದನದಲ್ಲಿ ಮಸೂದೆ ತಿರಸ್ಕಾರಗೊಂಡಾಗ ಕ್ರಮಗಳು :

1. 108(1)(ಎ) ಪ್ರಕಾರ, ರಾಷ್ಟ್ರಪತಿ, ಜಂಟಿ ಅಧಿವೇಶನವನ್ನು ಕರೆಯಬಹುದು.
2. 108(1)(ಬಿ) ಪ್ರಕಾರ, ಕೆಲವು ತಿದ್ದುಪಡಿಗಳೊಡನೆ ಒಪ್ಪದಿದ್ದರೆ, ಆಗಲೂ ರಾಷ್ಟ್ರಪತಿ ಜಂಟಿ ಅಧಿವೇಶನ ಕರೆದು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಬಹುದು.
3. ಮಸೂದೆ ಒಂದು ಸದನಕ್ಕೆ ಬಂದು ತಿಂಗಳಾದರೂ, ಇದು ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇದ್ದಾಗ 108(1)(ಸಿ) ವಿಧಿಯನ್ವಯ ರಾಷ್ಟ್ರಪತಿ ಜಂಟಿ ಅಧಿವೇಶನ ಕರೆಯಬಹುದು.

GNANADHARE IAS KAS ACADEMY

**ಇದುವರೆಗೆ ರಾಷ್ಟ್ರಪತಿ ಕರೆದಿರುವ 2 ಜಂಟಿ ಅಧಿವೇಶನಗಳು :**

1. 1961 ಮೇ ತಿಂಗಳಲ್ಲಿ ವರದಕ್ಷಿಣೆ ನಿಷೇಧ ಮಸೂದೆ.
2. 1978 (1975) ಮೇ ತಿಂಗಳಲ್ಲಿ Banking service commission ಮಸೂದೆ.
   - ಸಂವಿಧಾನದ 108(4)ನೇ ವಿಧಿಯನ್ವಯ, ಜಂಟಿ ಸಭೆಯಲ್ಲಿ ಎರಡು ಸದನಗಳ ಒಟ್ಟು ಸಂಖ್ಯೆಯ ಬಹುಮತದಿಂದ ಮಸೂದೆ ಅಂಗೀಕಾರವಾಗಬೇಕು.
   - ಜಂಟಿ ಅಧಿವೇಶನದಲ್ಲಿ ಲೋಕಸಭೆಯ ಸ್ಪೀಕರ್ ಅಧ್ಯಕ್ಷರಾಗಿರುತ್ತಾರೆ.

## 2. ಸಂವಿಧಾನವನ್ನು ತಿದ್ದುಪಡಿ ಮಾಡುವುದು :

ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಷಯದಲ್ಲಿ ಲೋಕಸಭೆ & ರಾಜ್ಯಸಭೆ ಸಮಾನ ಅಧಿಕಾರವನ್ನು ಪಡೆದಿದೆ. ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ಮೊದಲು ಯಾವುದೇ ಸದನದಲ್ಲಿ ಮಂಡಿಸಬಹುದು. ಈ ಮಸೂದೆ ಎರಡು ಸದನಗಳಿಂದಲೂ ಅಂಗೀಕೃತವಾಗಬೇಕು.

- ಸಂವಿಧಾನದ ತಿದ್ದುಪಡಿ ವಿಷಯದಲ್ಲಿ ಉಭಯ ಸದನಗಳ ನಡುವೆ ಭಿನ್ನಾಭಿಪ್ರಾಯ ಉಂಟಾದರೆ, ಜಂಟಿ ಅಧಿವೇಶನಕ್ಕೆ ಅವಕಾಶವಿಲ್ಲ.
- ಲೋಕಸಭೆ ಅಂಗೀಕರಿಸಿದ ಸಂವಿಧಾನದ ತಿದ್ದುಪಡಿ ಮಸೂದೆಯನ್ನು ರಾಜ್ಯಸಭೆಯು ತಿರಸ್ಕರಿಸಿದರೆ, ಈ ಮಸೂದೆ ಜಾರಿಗೆ ಬರುವುದಿಲ್ಲ.

## 3. ಮಂತ್ರಿಮಂಡಲ ನಿಯಂತ್ರಣ :

ಸಂಸತ್ತಿನ ಉಭಯ ಸದನಗಳು ಮಂತ್ರಿಮಂಡಲವನ್ನು ನಿಯಂತ್ರಿಸಿ, ಅದು ತಪ್ಪು ದಾರಿ ಹಿಡಿದಾಗ ಟೀಕಿಸುತ್ತವೆ.

- ಅಧಿವೇಶನದ ಸಮಯದಲ್ಲಿ ಪ್ರತಿದಿನ ಮೊದಲ ಗಂಟೆಯನ್ನು ಪ್ರಶ್ನೆ & ಉತ್ತರಗಳಿಗಾಗಿ ಮೀಸಲಾಗಿಡುತ್ತದೆ. ಎಂಪಿಗಳು ಪ್ರಶ್ನೆಗಳನ್ನು ಕೇಳಲು ಕನಿಷ್ಠ ಪಕ್ಷ 10 ದಿನಗಳ ನೋಟಿಸನ್ನು ಕೊಡಬೇಕು.
- ದೇಶದಲ್ಲಿ ಏನಾದರೂ ಘಟನೆಗಳು ಉಂಟಾದರೆ, ಅವುಗಳನ್ನು ಸರ್ಕಾರದ ಗಮನಕ್ಕೆ ತರಲು ಎರಡು ಸದನಗಳು ಗಮನ ಸೆಳೆಯುವ ಸೂಚನೆ ಮಂಡಿಸಬಹುದು.

GNANADHARE IAS KAS ACADEMY

- ಬಜೆಟ್ ಅಧಿವೇಶನ ಬಿಟ್ಟು, ಉಳಿದ ಅಧಿವೇಶನಗಳಲ್ಲಿ ಮುಖ್ಯ ಸಾರ್ವಜನಿಕ ವಿಷಯದ ಮೇಲೆ 1/2 ಗಂಟೆ ಚರ್ಚೆ ಸೋಮವಾರ, ಬುಧವಾರ & ಶುಕ್ರವಾರ ನಡೆಯುತ್ತದೆ.
- ಅಧಿವೇಶನ ಸಮಯದಲ್ಲಿ ದೇಶದ ಯಾವ ಭಾಗದಲ್ಲಾದರೂ ಅನಾಹುತ/ಗಲಭೆ ಉಂಟಾಗಿ, ಸಾರ್ವಜನಿಕ ದೃಷ್ಟಿಯಿಂದ ಮುಖ್ಯವಾಗಿದ್ದರೆ, ಲೋಕಸಭೆಯಲ್ಲಿ ಸದಸ್ಯರು 'ನಿಲುವಳಿ ಸೂಚನೆ'ಯನ್ನು ಮಂಡಿಸಬಹುದು. ಇದನ್ನು ಸ್ಪೀಕರ್ ಅಂಗೀಕರಿಸಬೇಕಾದರೆ 50 ಸದಸ್ಯರು ಬೆಂಬಲ ಇರಬೇಕು. ಈ ಸೂಚನೆ ಅಂಗೀಕಾರವಾದ ದಿನ, ಲೋಕಸಭೆ ಅಂದಿನ ಅಜೆಂಡಾದಲ್ಲಿರುವ ವಿಷಯಗಳನ್ನು ನಿಲ್ಲಿಸಿ, ಇದರಲ್ಲಿ ತಿಳಿಸಿರುವ ವಿಷಯವನ್ನು ಚರ್ಚಿಸುವುದರಿಂದ ಇದನ್ನು ನಿಲುಗಡೆ ಸೂಚನೆ ಎನ್ನುತ್ತಾರೆ.

4. ರಾಷ್ಟ್ರಪತಿ & ಉಪರಾಷ್ಟ್ರಪತಿಗಳನ್ನು ಚುನಾಯಿಸುವುದು.
5. ರಾಷ್ಟ್ರಪತಿ & ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವುದು.
6. 148(1) ವಿಧಿ ಪ್ರಕಾರ, ಭಾರತದ ಕಂಟ್ರೋಲರ್ & ಆಡಿಟರ್ ಜನರಲ್ ಪದಚ್ಯುತಿ.
7. 324(5) ವಿಧಿ ಅನ್ವಯ ಮುಖ್ಯ ಚುನಾವಣಾಧಿಕಾರಿಯನ್ನು ಪದಚ್ಯುತಿಗೊಳಿಸುವ ಅಧಿಕಾರ ಸಂಸತ್ತಿಗಿದೆ.
8. ವಿವಿಧ ವರದಿಗಳನ್ನು ಚರ್ಚಿಸುವುದು
9. ತುರ್ತು ಪರಿಸ್ಥಿತಿಗಳನ್ನು ಅನುಮೋದಿಸುವುದು.

| | |
|---|---|
| 325ನೇ ವಿಧಿ ರಾಷ್ಟ್ರೀಯ ತುರ್ತುಪರಿಸ್ಥಿತಿ | 1 ತಿಂಗಳೊಳಗೆ ಸಂಸತ್ತಿನ ಅನುಮತಿ ಪಡೆಯಬೇಕು |
| 356ನೇ ವಿಧಿ ರಾಜ್ಯ ತುರ್ತುಪರಿಸ್ಥಿತಿ | 2ತಿಂಗಳಿಗಿಂತ ಹೆಚ್ಚು ಕಾಲ ಮುಂದುವರಿಯಬೇಕಾದರೆ, ಎರಡು ಸದನಗಳ ಒಪ್ಪಿಗೆ ಬೇಕು. ಪ್ರತಿ ತಿಂಗಳಿಗೊಮ್ಮೆ ಸಂಸತ್‌ನ ಅನುಮತಿ ಬೇಕು |
| 360ನೇ ವಿಧಿ ಹಣಕಾಸು ತುರ್ತುಪರಿಸ್ಥಿತಿ | 2 ತಿಂಗಳೊಳಗೆ ಸಂಸತ್ತಿನ ಅಂಗೀಕಾರ ಪಡೆಯಬೇಕು |

## 10. ಲೋಕಸಭೆಯ ವಿಶೇಷಾಧಿಕಾರಗಳು :

- ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದು
- ಮಂತ್ರಿಮಂಡಲ ಸಮರ್ಪಕವಾಗಿ & ದಕ್ಷ ರೀತಿಯಲ್ಲಿ ಆಡಳಿತವನ್ನು ನಡೆಸದೇ ಇದ್ದಾಗ, ಇದರ ವಿರುದ್ಧ ಸದನದ 198ನೇ ನಿಯಮದ ಅನ್ವಯ ಅವಿಶ್ವಾಸ ನಿರ್ಣಯವನ್ನು ಲೋಕಸಭಾ

ಸದಸ್ಯರು ಸ್ಪೀಕರ್ ಅನುಮತಿ ಪಡೆದು ಮಂಡಿಸಬಹುದು. ಅಲ್ಲದೇ ಆಡಳಿತ ಪಕ್ಷಕ್ಕೆ ಬಹುಮತ ಇಲ್ಲವೆಂದು ವಿರೋಧ ಪಕ್ಷಗಳಿಗೆ ಮನವರಿಕೆಯಾದರೆ, ವಿರೋಧ ಪಕ್ಷದ ನಾಯಕರು ಅವಿಶ್ವಾಸ ನಿರ್ಣಯ ಮಂಡಿಸಬಹುದು.

- ಮೊದಲ ಬಾರಿಗೆ ಕೇಂದ್ರಮಂತ್ರಿ ಮಂಡಲದ ವಿರುದ್ಧ ರಾಮ್ ಮನೋಹರ್ ಲೋಹಿಯಾ 1963ರಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದರು.

## 11. ರಾಜ್ಯ ಸಭೆಯ ವಿಶೇಷಾಧಿಕಾರಗಳು :

- ಸಂವಿಧಾನದ 249ನೇ ವಿಧಿಯನ್ವಯ, ರಾಷ್ಟ್ರದ ಹಿತಾಸಕ್ತಿಯ ಹಿತಾದೃಷ್ಟಿಯಿಂದ ರಾಜ್ಯಸಭೆ ತನ್ನ 2/3ರಷ್ಟು ಬಹುಮತದಿಂದ ಒಂದು ನಿರ್ಣಯವನ್ನು ಅಂಗೀಕರಿಸಿ, ರಾಜ್ಯಪಟ್ಟಿಯಲ್ಲಿರುವ ಯಾವುದಾದರೂ ವಿಷಯದ ಮೇಲೆ ಕಾನೂನು ಮಾಡುವಂತೆ ಸಂಸತ್ತಿಗೆ ಶಿಫಾರಸ್ಸು ಮಾಡಬಹುದು.
- ಸಂವಿಧಾನದ 312ನೇ ವಿಧಿಯನ್ವಯ, ರಾಷ್ಟ್ರದ ಹಿತಾಸಕ್ತಿಯ ದೃಷ್ಠಿಯಿಂದ ಹೊಸ ಅಖಿಲ ಭಾರತ ಸೇವೆಗಳನ್ನು ರಚಿಸುವಂತೆ ಸಂಸತ್ತಿಗೆ ಶಿಫಾರಸ್ಸು ಮಾಡಬಹುದು.
- 67ನೇ ವಿಧಿಯನ್ವಯ, ಉಪರಾಷ್ಟ್ರಪತಿಯನ್ನು ಅಧಿಕಾರದಿಂದ ಪದಚ್ಯುತಿಗೊಳಿಸುವ ಅಧಿಕಾರವಿದೆ.

# ಸಂಸತ್ತಿನ ಅಧಿವೇಶನಗಳು :

| ಕ್ರ.ಸಂ | ಅಧಿವೇಶನಗಳು | ಅವಧಿ | ವೈಶಿಷ್ಟ್ಯ |
|---|---|---|---|
| 1 | ಬಜೆಟ್ | ಫೆಬ್ರವರಿ–ಮೇ | ದೊಡ್ಡದು |
| 2 | ಮಳೆಗಾಲ | ಜುಲೈ–ಆಗಸ್ಟ್ | – |
| 3 | ಚಳಿಗಾಲ | ನವೆಂಬರ್–ಡಿಸೆಂಬರ್ | ಚಿಕ್ಕದು |

- 1 ವರ್ಷಕ್ಕೆ ಲೋಕಸಭೆ 160 ದಿನಗಳ ಕಾಲ ಅಧಿವೇಶನ ನಡೆಸುವ ಅಂದಾಜು ಮಾಡಲಾಗಿದೆ
- 1 ವರ್ಷಕ್ಕೆ ರಾಜ್ಯಸಭೆ 120 ದಿನಗಳ ಕಾಲ ಅಧಿವೇಶನ ನಡೆಸುವ ಅಂದಾಜು ಮಾಡಲಾಗಿದೆ

## ಹಣಕಾಸು ಮಸೂದೆಗಳ ಬಗ್ಗೆ ಪರಮಾಧಿಕಾರ :

- ಸಂವಿಧಾನದ 109(1)ನೇ ವಿಧಿ ಪ್ರಕಾರ, ಹಣಕಾಸು ಮಸೂದೆಯನ್ನು ಮೊದಲು ರಾಜ್ಯಸಭೆಯಲ್ಲಿ ಮಂಡಿಸುವಂತಿಲ್ಲ. ಅಂದರೆ ಮೊದಲು ಲೋಕಸಭೆಯಲ್ಲಿ ಮಂಡಿಸಬೇಕು. ಲೋಕಸಭೆಯಲ್ಲಿ ಅಂಗೀಕೃತವಾದ ಹಣಕಾಸು ಮಸೂದೆಯನ್ನು ರಾಜ್ಯ ಸಭೆಗೆ ಕಳುಹಿಸಿದಾಗ, ಅದು ತಾನು ಪಡೆದ 14 ದಿನಗಳೊಳಗೆ ತನ್ನ ಶಿಫಾರಸ್ಸುಗಳೊಡನೆ ಲೋಕಸಭೆಗೆ ವಾಪಸ್ಸು ಕಳುಹಿಸಬೇಕು. ರಾಜ್ಯಸಭೆಯು ಶಿಫಾರಸ್ಸುಗಳನ್ನು ನಿರಾಕರಿಸಬಹುದೆಂದು 109(2) ತಿಳಿಸುವುದು. ಒಂದು ವೇಳೆ ತಾನು ಪಡೆದ 14 ದಿನಗಳೊಳಗೆ ಹಣಕಾಸು ಮಸೂದೆಯನ್ನು ರಾಜ್ಯಸಭೆ ವಾಪಸ್ಸು ಕಳುಹಿಸದಿದ್ದರೆ, ಅದು ಎರಡು ಸದನಗಳಿಂದಲೂ ಅಂಗೀಕೃತವಾಯಿತೆಂದು ಪರಿಗಣಿಸಲಾಗುತ್ತದೆ.
- ವಾರ್ಷಿಕ ಬಜೆಟ್‌ನ್ನು ಮೊದಲು ಲೋಕಸಭೆಯಲ್ಲಿ ಫೆಬ್ರವರಿ ತಿಂಗಳ ಕೊನೆಯ ದಿನ ಮಂಡಿಸಿ, ನಂತರ ರಾಜ್ಯ ಸಭೆಯಲ್ಲಿ ಮಂಡಿಸಲಾಗುತ್ತದೆ.
- ರಾಷ್ಟ್ರದ ಖಜಾನೆಯಲ್ಲಿ ವ್ಯವಸ್ಥಾಪಕ – ಲೋಕಸಭ್ಯು

# ಲೋಕಸಭೆಯ ಸ್ಪೀಕರ್ :

- 1921ರಲ್ಲಿ ಬ್ರಿಟಿಷರು ಸಭಾಧ್ಯಕ್ಷ/ಸ್ಪೀಕರ್ ಸ್ಥಾನವನ್ನು ಸೃಷ್ಟಿಸಿದರು.
- ಭಾರತದ ಕೇಂದ್ರ ಶಾಸನ ಸಭೆಯ ಮೊದಲ ಅಧ್ಯಕ್ಷರನ್ನಾಗಿ 'ಫ್ರೆಡರಿಕ್ ವೈಟ್" ಅವರನ್ನು 4 ವರ್ಷಗಳ ಅವಧಿಗೆ ವೈಸರಾಯ್ ನೇಮಿಸಿದರು.
- 1947ರಲ್ಲಿ ಸಭಾಧ್ಯಕ್ಷ ಸ್ಥಾನವನ್ನು ಸ್ಪೀಕರ್ ಎಂಬ ನಾಮಾಂಕಿತದಿಂದ ಕರೆಯಲಾಯಿತು.

## ಸ್ಪೀಕರ್ ಆಯ್ಕೆ :

- ಲೋಕಸಭೆಯ ಚುನಾವಣೆಗಳು ಮುಗಿದ ಬಳಿಕ, ಸದನದ ಸದಸ್ಯರಲ್ಲಿ ಇಬ್ಬರನ್ನು Speaker & Deputy Speaker ಆಗಿ ಆಯ್ಕೆ ಮಾಡಬೇಕೆಂದು ಸಂವಿಧಾನದ 93ನೇ ವಿಧಿ ತಿಳಿಸುತ್ತದೆ.
- 94ನೇ ವಿಧಿ ಪ್ರಕಾರ, ಸ್ಪೀಕರ್ ತಮ್ಮ ರಾಜೀನಾಮೆ ಪತ್ರವನ್ನು Deputy Speaker ಸಲ್ಲಿಸಿ, & Deputy Speaker ಸ್ಪೀಕರ್‌ಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿ, ತನ್ನ ಹುದ್ದೆಗಳಿಗೆ ರಾಜೀನಾಮೆ ನೀಡಬಹುದು. ಈ ಅಧಿಕಾರ ಲೋಕಸಭೆಗಿದೆ.

- 94(ಸಿ) ಪ್ರಕಾರ 14 ದಿನಗಳ ನೋಟಿಸ್ ನೀಡಿ, ಪದಚ್ಯುತಿಗೊಳಿಸುವ ನಿರ್ಣಯವು ಲೋಕಸಭೆಯ ಬಹುಮತದಿಂದ ಅಂಗೀಕಾರವಾದರೆ ಸ್ಪೀಕರ್ ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಾರೆ. ಇವರನ್ನು ಪದಚ್ಯುತಿಗೊಳಿಸಲು ನಿರ್ಣಯವನ್ನು ಮಂಡಿಸಿದಾಗ ಸ್ಪೀಕರ್ ಲೋಕಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತಿಲ್ಲ. ಆದರೆ ಸದನದಲ್ಲಿ ಹಾಜರಾಗಿ ಮಾತನಾಡಬಹುದು.
- ಇಂಗ್ಲೆಂಡಿನಲ್ಲಿ ಚಾಲ್ತಿ ಲೋಕಸಭೆ ವಿಸರ್ಜನೆಯಾದರೂ, ಸ್ಪೀಕರ್ ತಮ್ಮ ಸ್ಥಾನದಲ್ಲಿ ಖಾಲಿ ಮಾಡುವುದಿಲ್ಲ. ಹೊಸ ಲೋಕಸಭೆ ಬರುವವರೆಗೂ ಮುಂದುವರಿಯುತ್ತಾರೆ.

## ವೇತನ & ಸೌಲಭ್ಯಗಳು :

- ಸಂವಿಧಾನದ 97ನೇ ಅನುಚ್ಛೇದ ಪ್ರಕಾರ, ಸ್ಪೀಕರ್ & ಡೆಪ್ಯುಟಿ ಸ್ಪೀಕರ್ ಸಂಸತ್ತು ಆಗಿಂದಾಗ್ಗೆ ನಿರ್ಧರಿಸುವ ವೇತನ & ಭತ್ಯೆಗಳನ್ನು ಪಡೆಯುವರು.
- 1992ರ Table of Precedence ಬದಲಾವಣೆಯ ಅನ್ವಯ ಸ್ಪೀಕರ್ & ಭಾರತದ ಮುಖ್ಯ ನ್ಯಾಯಾಧೀಶರು 6ನೇ ಸ್ಥಾನ ಪಡೆದಿದ್ದಾರೆ.

## ಅಧಿಕಾರಗಳು & ಕರ್ತವ್ಯಗಳು :

1. ಸ್ಪೀಕರ್‌ರವರು, ಲೊಕಸಭೆಯ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸಿ, ಸದನದ ಕಲಾಪಗಳು ನಿಯಮಗಳಿಗನುಸಾರ ನಡೆಯುವಂತೆ ನೋಡಿಕೊಳ್ಳುತ್ತಾರೆ.
2. ಸದನದಲ್ಲಿ ನಿರ್ದಿಷ್ಟ ಹಾಜರಿ ಇಲ್ಲದಿದ್ದರೆ ಸಭೆಯನ್ನು ಮುಂದೂಡುತ್ತಾರೆ.
3. ಸಭೆಯಲ್ಲಿ ಕೋಲಾಹಲ ಉಂಟಾದಲ್ಲಿ ಕೆಲವು ನಿಮಿಷಗಳವರೆಗೆ ಸಭೆಯನ್ನು ಮುಂದೂಡುತ್ತಾರೆ.
4. ಇವರ ಅನುಮತಿ ಪಡೆದು ಸದಸ್ಯರು ಪ್ರಶ್ನೆಗಳನ್ನು, ನಿರ್ಣಯಗಳನ್ನು & ಮಸೂದೆಗಳನ್ನು ಮಂಡಿಸುತ್ತಾರೆ.
5. ಸದನದಲ್ಲಿ ಮೊದಲು ಚರ್ಚಿಸಬೇಕಾದ ವಿಷಯಗಳನ್ನು ಸ್ಪೀಕರ್ ತೀರ್ಮಾನಿಸುತ್ತಾರೆ.
6. ಯಾವುದಾದರೂ ಮಸೂದೆ ಹಣಕಾಸು ಮಸೂದೆಯೋ/ಇಲ್ಲವೋ ಎಂಬುದನ್ನು ತೀರ್ಮಾನಿಸುವ ಅಂತಿಮ ಅಧಿಕಾರ ಸ್ಪೀಕರ್‌ಗೆ ಇದೆ.
7. ಸದನದಲ್ಲಿ ಚರ್ಚೆಯಾದ ಮಸೂದೆ ಬಗ್ಗೆ ಪರ–ವಿರೋಧ ಸಮಾನ ಮತಗಳು ಬಂದಾಗ, ಸ್ಪೀಕರ್ ತಮ್ಮ ಮತವನ್ನು ಚಲಾಯಿಸುತ್ತಾರೆ.
8. ಸದನದಲ್ಲಿ ಶಿಸ್ತು, ಶಾಂತಿ & ಸಂಯಮವನ್ನು ಸ್ಪೀಕರ್ ಕಾಪಾಡುತ್ತಾರೆ.



GNANADHARE IAS KAS ACADEMY

9. ಸದನದಲ್ಲಿ ಶಿಸ್ತನ್ನು ಪಾಲಿಸದಿದ್ದಲ್ಲಿ ಸದಸ್ಯರನ್ನು ಹೊರಕ್ಕೆ ಹೋಗುವಂತೆ ಹೇಳುವ ಅಧಿಕಾರ ಇದೆ.
10. ಸದನದಲ್ಲಿ ಸದಸ್ಯರು Un parlimentary ಶಬ್ಧಗಳನ್ನು ಬಳಸದಂತೆ ತಡೆಯುವ ಅಧಿಕಾರ ಇದೆ.
11. ಅಸಂಬದ್ಧ ಚರ್ಚೆಗಳನ್ನು ಕಲಾಪಗಳನ್ನು ತೆಗೆದುಹಾಕುವ ಅಧಿಕಾರ ಸ್ಪೀಕರ್‌ಗೆ ಇದೆ.
12. ಸಾರ್ವಜನಿಕ ಲೆಕ್ಕ ಪತ್ರಗಳು, ಸಮಿತಿ, ಅಂದಾಜು ಸಮಿತಿ, ಸಾರ್ವಜನಿಕ ಉದ್ಯಮ ಸಮಿತಿ ಇವುಗಳ ಅಧ್ಯಕ್ಷರನ್ನು ಸ್ಪೀಕರ್ ನೇಮಿಸುತ್ತಾರೆ. ಈ ಸಮಿತಿಗಳು ಸ್ಪೀಕರ್ ನಿರ್ದೇಶನದಲ್ಲಿ ಕೆಲದ ಮಾಡುತ್ತವೆ.
13. ಸಂಸತ್ತಿನ ಕಾರ್ಯಲಯ ಮೇಲ್ವಿಚಾರಣೆಯನ್ನು ಸ್ಪೀಕರ್ ನಿರ್ವಹಿಸುತ್ತಾರೆ.

## ಲೋಕಸಭೆಯ ಸಭಾಧ್ಯಕ್ಷರುಗಳು :

| ಕ್ರ, ಸಂ | ಹೆಸರು | ಅವಧಿ | ಭಾವಚಿತ್ರ |
|---|---|---|---|
| 1 | ಗಣೇಶ ವಾಸುದೇವ್ ಮಾವಲಂಕರ್ | 1952–1956 |  |
| 2 | ಎಂ. ಅನಂತಾಶಯನಮ್ ಅಯ್ಯಂಗಾರ್ | 1956–1962 |  |
| 3 | ಸರ್ದಾರ್ ಹುಕುಮ್ ಸಿಂಗ್ | 1962–1967 |  |
| 4 | ನೀಲಂ ಸಂಜೀವರೆಡ್ಡಿ | 1967–1969 |  |

GNANADHARE IAS KAS ACADEMY

| | | | |
|---|---|---|---|
| 5 | ಗುರ್‌ದಯಾಳ್ ಸಿಂಗ್ ಧಿಲ್ಲಾನ್ | 1969–1975 |  |
| 6 | ಬಲಿರಾಮ್ ಭಗತ್ | 1976–1977 |  |
| 7 | ನೀಲಂ ಸಂಜೀವರೆಡ್ಡಿ | 1977–1977 |  |
| 8 | ಕೆ.ಎಸ್. ಹೆಗಡೆ | 1977–1980 |  |
| 9 | ಬಲರಾಮ್ ಜಾಖರ್ | 1980–1989 |  |
| 10 | ರಬಿ ರಾಯ್ | 1989–1991 |  |
| 11 | ಶಿವರಾಜ್ ವಿ. ಪಾಟೀಲ್ | 1991–1996 |  |
| 12 | ಪಿ. ಎ. ಸಂಗ್ಮಾ | 1996–1998 |  |

GNANADHARE IAS KAS ACADEMY

| | | | |
|---|---|---|---|
| 13 | ಜಿ.ಎಂ.ಸಿ. ಬಾಲಯೋಗಿ | 1998–2002 |  |
| 14 | ಮನೋಹರ ಗಜಾನನ್ ಜೋಷಿ | 2002–2004 |  |
| 15 | ಸೋಮನಾಥ ಚಟರ್ಜಿ | 2004–2009 |  |
| 16 | ಮೀರಾಕುಮಾರ್ | 2009–2014 |  |
| 17 | ಸುಮಿತ್ರ ಮಹಾಜನ್ | 2014– |  |

## ಸಂಸತ್ತಿನ ಸಮಿತಿಗಳು :

- ಸಂಸತ್ತಿನ ಅಧಿಕ ಕಾರ್ಯ, ಸಂಸತ್ತು ಕೈಗೊಳ್ಳುವ ಎಲ್ಲಾ ಕಾರ್ಯಕ್ರಮಗಳನ್ನು ಪರಿಶೀಲಿಸಲು & ಚರ್ಚಿಸಲು ಸಮಯ ದೊರೆಯುವುದಿಲ್ಲ. ಅಲ್ಲದೆ ಕೆಲವೂ ವಿಷಯಗಳ ಬಗ್ಗೆ ಚರ್ಚಿಸಲು ನುರಿತ ಸಂಸದರು ಸಿಗುವುದಿಲ್ಲ. ಇಂತಹ ಕಾರಣಗಳಿಂದಲೂ ಸಂಸತ್ತು ಕಲವು ಸಮಿತಿಗಳನ್ನು ರಚಿಸಿಕೊಳ್ಳುವುದರ ಮೂಲಕ ಕಾರ್ಯ ಪ್ರವೃತ್ತವಾಗುತ್ತದೆ.
- ಸಂಸತ್ತಿನ ಸಮಿತಿಗಳ ರಚನೆ, ಅವಧಿ, ಕಾರ್ಯಗಳು ಮೊದಲಾದವುಗಳು ಸಂಸತ್ತಿನ ಎರಡು ಸದನಗಳಿಂದ ರೂಪಿಸಲ್ಪಟ್ಟ ಸಂಸತ್ತಿನ ನಿಯಮಗಳಿಂದ ನಿರ್ಧರಿಸಲ್ಪಟ್ಟಿದೆ.

GNANADHARE IAS KAS ACADEMY

# ವಿಧಗಳು

**ಸಂಸತ್ತಿನ ಸಮಿತಿಗಳು**

- **ಶಾಶ್ವತ ಉದ್ದೇಶ ಸಮಿತಿ**
- **ತಾತ್ಕಾಲಿಕ ಉದ್ದೇಶ ಸಮಿತಿ**
  - **ವಿಚಾರಣಾ ಸಮಿತಿ**
  - **ಸಲಹಾ ಸಮಿತಿ**

## ಪ್ರಮುಖ ಸಮಿತಿಗಳು :

1. ಅಂದಾಜು ಸಮಿತಿ
2. ಸಾರ್ವಜನಿಕ ಲೆಕ್ಕ ಪತ್ರ ಸಮಿತಿ
3. ಸಾರ್ವಜನಿಕ ಉದ್ಯಮಗಳ ಮೇಲಿನ ಸಮಿತಿ
4. ವ್ಯವಹಾರ ಸಲಹಾ ಸಮಿತಿ
5. ಖಾಸಗಿ ಸದಸ್ಯರ ಮಸೂದೆ & ನಿರ್ಣಯಗಳ ಸಮಿತಿ
6. ಹಕ್ಕು ಸಮಿತಿ
7. ನಿಯೋಜಿತ ಶಾಸನ ಮೇಲಿನ ಸಮಿತಿ
8. ಸರ್ಕಾರಿ ಭರವಸೆಗಳ ಮೇಲಿನ ಸಮಿತಿ
9. ಸದಸ್ಯರ ಗೈರು ಹಾಜರಿ ಸಮಿತಿ
10. ನಿಯಮಗಳ ಸಮಿತಿ
11. ಕೃಷಿ ಸಮಿತಿ
12. ದೂರುಗಳ ಮೇಲಿನ ಸಮಿತಿ

### 1. ಅಂದಾಜು ಸಮಿತಿ :

- 1950ರಲ್ಲಿ ಪ್ರಥಮ ಅಂದಾಜು ಸಮಿತಿಯನ್ನು ರಚಿಸಲಾಯಿತು.
- ಈ ಸಮಿತಿಯು ಪ್ರಸ್ತುತ 30ಸದಸ್ಯರನ್ನು ಒಳಗೊಂಡಿದೆ. ಎಲ್ಲಾ ಸದಸ್ಯರೂ ಲೋಕಸಭಾ ಸದಸ್ಯರಾಗಿರುತ್ತಾರೆ. ಈ ಸಮಿತಿಯಲ್ಲಿ ರಾಜ್ಯಸಭೆಗೆ ಪ್ರಾತಿನಿಧ್ಯತೆ ಇರುವುದಿಲ್ಲ. ಇವೆರಲ್ಲರೂ 1



GNANADHARE IAS KAS ACADEMY

ವರ್ಷದ ಅವಧಿಗೆ ಪ್ರಮಾಣಾನುಗುಣ ಪದ್ಧತಿ ಮೂಲಕ ಸಮಿತಿಗೆ ಆಯ್ಕೆಯಾಗಿರುತ್ತಾರೆ. ಮಂತ್ರಿಗಳು ಈ ಸಮಿತಿಯ ಸದಸ್ಯರಾಗಲು ಅವಕಾಶವಿಲ್ಲ.

- ಸಮಿತಿಯ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಸ್ಪೀಕರ್ ನೇಮಿಸುತ್ತಾರೆ.

**ಕರ್ತವ್ಯಗಳು :**

1. ಬಜೆಟ್‌ನಲ್ಲಿ ನಮೂದಿಸಲ್ಪಟ್ಟಿರುವ ಅಂದಾಜುಗಳನ್ನು ಪರಿಕ್ಷೀಸುವುದು.
2. ಸಾರ್ವಜನಿಕ ವೆಚ್ಚದಲ್ಲಿ ಮಿತವ್ಯಯ ಸಾಧಿಸುವುದಕ್ಕೆ ಸಂಬಂಧಿಸದಂತೆ ಪರಿಶೀಲಿಸುವುದು.
3. ಅಂದಾಜು ಪಟ್ಟಿಯು ಸಂಸತ್ತಿನಲ್ಲಿ ಹೇಗೆ ಮಂಡನೆಯಾಗಬೇಕು ಎಂಬುದನ್ನು ಸಲಹೆ ಮಾಡುವುದು.
4. ಆಡಳಿತದಲ್ಲಿ ಬೇಕಾಗುವ ದಕ್ಷತೆ & ಸುಧಾರಣೆಗಳನ್ನು ಸಲಹೆ ಮಾಡಿ, ಮಿತವ್ಯಯದ ಬಗ್ಗೆ ಅನುಸರಿಸಬೇಕಾದ ನಿಯಗಳನ್ನು ಸೂಚಿಸುವುದು.

## 2. ಸಾರ್ವಜನಿಕ ಲೆಕ್ಕ ಪತ್ರ ಸಮಿತಿ :

1. 1919ರ ಭಾರತ ಸರ್ಕಾರದ ಕಾಯ್ದೆ ಅನ್ವಯ, 1921ರಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯನ್ನು ರಚಿಸಲಾಗುವುದು.
2. ಈ ಸಮಿತಿಯು ಒಟ್ಟು 22 ಸದಸ್ಯರನ್ನು ಹೊಂದಿದ್ದು, ಇದರಲ್ಲಿ ಲೋಕಸಭೆಯಿಂದ 15 ಸದಸ್ಯರು & ರಾಜ್ಯ ಸಭೆಯಿಂದ 7 ಸದಸ್ಯರು ಆಯ್ಕೆಯಾಗಿರುತ್ತಾರೆ. ಇವರು 1 ವರ್ಷದ ಅವಧಿಗೆ ಪ್ರಮಾಣಾನುಗುಣವಾಗಿ ಪದ್ಧತಿಯ ಮೂಲಕ ಚುನಾಯಿತರಾಗುತ್ತಾರೆ.
3. ಈ ಸಮಿತಿಯು ಒಟ್ಟು 25 ಸದಸ್ಯರನ್ನು ಹೊಂದಿದ್ದು, ಇದರಲ್ಲಿ ಲೋಕಸಭೆಯಿಂದ 15 ಸದಸ್ಯರು & ರಾಜ್ಯ ಸಭೆಯಿಂದ 7 ಸದಸ್ಯರು ಆಯ್ಕೆಯಾಗುತ್ತಾರೆ. ಇವರು 1 ವರ್ಷದ ಅವಧಿಗೆ ಚುನಾಯಿತರಾಗಿರುತ್ತಾರೆ. ಈ ಸಮಿತಿಯಲ್ಲಿ 2/3ರಷ್ಟು ಸದಸ್ಯರು ಆಡಳಿತ ಪಕ್ಷಕ್ಕೆ, 1/3ರಷ್ಟು ಸದಸ್ಯರು ವಿರೋಧ ಪಕ್ಷಕ್ಕೆ ಸೇರುತ್ತಾರೆ.

**ಕರ್ತವ್ಯಗಳು :**

- ಸರ್ಕಾರದ ಪ್ರತಿಯೊಂದು ಇಲಖೆಯು ನಿಗಧಿಪಡಿಸಿರುವ ಹಣವು ಕ್ರಮಬದ್ಧವಾಗಿ ವೆಚ್ಚವಾಗಿದೆಯೋ/ಇಲ್ಲವೋ ಎಂದು ಪರೀಕ್ಷಿಸುವುದು.
- ಹಣಕಾಸು ವರ್ಷದಲ್ಲಿ ಯಾವುದೇ ಸೇವೆ ಮೇಲೆ ಖರ್ಚು ಮಾಡಿದ ಹೆಚ್ಚುವರಿ ಮೊತ್ತವು ನಿರ್ದಿಷ್ಟ ಉದ್ದೇಶಕ್ಕಾಗಿಯೇ ಬಳಸಲ್ಪಟ್ಟಿದೆಯೇ ಎಂದು ಪರಿಶೀಲಿಸುವುದು.



GNANADHARE IAS KAS ACADEMY

### 3. ಸಾರ್ವಜನಿಕ ಉದ್ಯಮಗಳ ಮೇಲಿನ ಸಮಿತಿ :

1. ಕೃಷ್ಣ ಮೆನನ್ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಈ ಸಮಿತಿಯು 1964ರಲ್ಲಿ ರಚನೆಯಾಯಿತು.
2. ಈ ಸಮಿತಿಯು ಒಟ್ಟು 22 ಸದಸ್ಯರನ್ನು ಹೊಂದಿದ್ದು, ಇದರಲ್ಲಿ ಲೋಕಸಭೆಯಿಂದ 15 ಸದಸ್ಯರು & ರಾಜ್ಯ ಸಭೆಯಿಂದ 7 ಸದಸ್ಯರು ಆಯ್ಕೆಯಾಗಿರುತ್ತಾರೆ. ಇವರು 1 ವರ್ಷದ ಅವಧಿಗೆ ಪ್ರಮಾಣಾನುಗುಣವಾಗಿ ಪದ್ಧತಿಯ ಮೂಲಕ ಚುನಾಯಿತರಾಗುತ್ತಾರೆ
3. ಈ ಸದಸ್ಯರಲ್ಲಿ ಅದರಲ್ಲೂ ಲೋಕಸಭೆಯಿಂದ ಆಯ್ಕೆಯಾದ ಸದಸ್ಯರೊಬ್ಬರನ್ನು ಅಧ್ಯಕ್ಷರಾನ್ನಾಗಿ ಸ್ಪೀಕರ್ ಆಯ್ಕೆ ಮಾಡುತ್ತಾರೆ.

### ಕರ್ತವ್ಯಗಳು :

- ಸಾರ್ವಜನಿಕ ಉದ್ಯಮಗಳ ಲೆಕ್ಕ ಪತ್ರಗಳು & ವರದಿಯನ್ನು ಪರೀಕ್ಷಿಸುವುದು.
- ಸಾರ್ವಜನಿಕ ಉದ್ಯಮಗಳ ಬಗ್ಗೆ ಕಂಟ್ರೋಲರ್ & ಆಡಿಟರ್ ಸಲ್ಲಿಸಿದ ವರದಿಯನ್ನು ಪರೀಕ್ಷಿಸುವುದು.
- ಸಾರ್ವಜನಿಕ ಉದ್ಯಮಗಳ ದಕ್ಷತೆ & ಸ್ವಾಯತ್ತತೆಯನ್ನು ಪರೀಕ್ಷಿಸುವುದು.

| ಅನುಚ್ಛೇದ | ವಿವರಣೆ |
|---|---|
| 79ನೇ ಅನುಚ್ಛೇದ | **ಸಂಸತ್ತಿನ ರಚನೆ :**<br>ಸಂಸತ್ತು ರಾಷ್ಟ್ರಪತಿ & ರಾಜ್ಯಸಭೆ/ಮೇಲ್ಮನೆ ಹಾಗೂ ಲೋಕಸಭೆ/ಕೆಳಮನೆಯನ್ನು ಒಳಗೊಂಡಿರುತ್ತದೆ |
| 80ನೇ ಅನುಚ್ಛೇದ | **ರಾಜ್ಯಸಭೆಯ ರಚನೆ :**<br>80(1)(ಎ) : ಸಾಹಿತ್ಯ, ವಿಜ್ಞಾನ, ಕಲೆ & ಸಮಾಜ ಸೇವೆಯಲ್ಲಿ ವಿಶೇಷ ಜ್ಞಾನ/ಅನುಭವ ಪಡೆದಿರುವ 12 ಮಂದಿಯನ್ನು ರಾಷ್ಟ್ರಪತಿ ಈ ಸದನಕ್ಕೆ 6 ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡುತ್ತಾರೆ.<br>80(1)(ಬಿ) : 238 ಸದಸ್ಯರು ರಾಜ್ಯಗಳನ್ನು & ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸಲು ಅವಕಾಶವಿದೆ<br>250 – ರಾಜ್ಯಸಭೆಯ ಒಟ್ಟು ಸದಸ್ಯರ ಸಂಖ್ಯೆ.<br>245 – ಪ್ರಸ್ತುತ ಆಯ್ಕೆಯಾಗುವ ಸದಸ್ಯರು<br>229 – ಸದಸ್ಯರು ರಾಜ್ಯಗಳನ್ನು ಪ್ರತಿನಿಧಿಸುವವರು |



GNANADHARE IAS KAS ACADEMY

| | |
|---|---|
| | 4 – ಸದಸ್ಯರು ಕೇಂದ್ರಾಡಳಿತ ಪ್ರದೇಶಗಳಿಂದ ಆಯ್ಕೆಯಾಗುವರು<br>12 – ಸಾಹಿತ್ಯ, ಕಲೆ, ವಿಜ್ಞಾನ & ಸಮಾಜ ಸೇವೆಗಳಲ್ಲಿ ವಿಶೇಷ ಅನುಭವ ಹಾಗೂ ಪರಿಣತಿಯನ್ನು ಹೊಂದಿದ್ದ 12 ಜನರನ್ನು ರಾಷ್ಟ್ರಪತಿಯು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡುತ್ತಾರೆ. |
| 81ನೇ ಅನುಚ್ಛೇದ | **ಲೋಕಸಭೆಯ ರಚನೆ :**<br>ರಾಜ್ಯಗಳಿಂದ 530 ಸದಸ್ಯರು ಆಯ್ಕೆಗೊಳ್ಳುವರು<br>ಕೇಂದ್ರಾಡಳಿತ ಪ್ರದೇಶಗಳಿಂದ 20 ಸದಸ್ಯರು ಆಯ್ಕೆಯಾಗಬಹುದು.<br>ಇಬ್ಬರು ಆಂಗ್ಲೊ-ಇಂಡಿಯನ್ ನಾಮಕರಣ ಮಾಡಬಹುದು.<br>ಹೀಗೆ 552 ಸದಸ್ಯರು ಸಂವಿಧಾನದಲ್ಲಿನ ಲೋಕಸಭೆಯ ಒಟ್ಟು ಸದಸ್ಯತ್ವಕ್ಕೆ ಅವಕಾಶವಿದೆ.<br>545-ಪ್ರಸ್ತುತ ಲೋಕಸಭೆಗೆ ಆಯ್ಕೆಯಾಗುವ ಒಟ್ಟು ಸದಸ್ಯರು<br>530- ರಾಜ್ಯಗಳಿಂದ ಆಯ್ಕೆ<br>13- ಕೇಂದ್ರಾಡಳಿತ ಪ್ರದೇಶಗಳಿಂದ ಆಯ್ಕೆ<br>2-ಆಂಗ್ಲೊ-ಇಂಡಿಯನ್ನರು ರಾಷ್ಟ್ರಪತಿಯವರಿಂದ (331ನೇ ವಿಧಿಯ ಪ್ರಕಾರ) ನಾಮನಿರ್ದೇಶನಗೊಳ್ಳುವರು |
| 82ನೇ ಅನುಚ್ಛೇದ | ಪ್ರತಿ 10 ವರ್ಷಗಳಿಗೊಮ್ಮೆ ನಡೆಯುವ ಜನಗಣತಿಯ ಆಧಾರದ ಮೇಲೆ ರಾಜ್ಯಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಮರುವಿಂಗಡನೆಗೆ ಅವಕಾಶ ಕಲ್ಪಿಸಬಹುದು |
| 83ನೇ ಅನುಚ್ಛೇದ | **ಸಂಸತ್ತಿನ ಸದನಗಳ ಅಧಿಕಾರಾವಧಿ :**<br>83(1)ನೇ ವಿಧಿ : ರಾಜ್ಯಸಭೆಯು ಒಂದು ಶಾಶ್ವತ ಸದನವಾಗಿದ್ದು ಇದನ್ನು ವಿಸರ್ಜಿಸಲು ಸಾಧ್ಯವಿಲ್ಲ. 1/3 ರಷ್ಟು ಸದಸ್ಯರು ನಿವೃತ್ತಿಯಾದಾಗ ಪ್ರತಿ ಎರಡು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ಖಾಲಿಯಾದ ಸ್ಥಾನಗಳಿಗಷ್ಟೇ ಚುನಾವಣೆ ನಡೆಯುತ್ತದೆ.<br>ಈ ಸದನದ ಸದಸ್ಯರು 6 ವರ್ಷಗಳ ಅವಧಿಗೆ ಚುನಾಯಿತರಾಗುತ್ತಾರೆ.<br>83(2)ನೇ ವಿಧಿ : ಲೋಕಸಭೆಯ ಸದಸ್ಯರು 5 ವರ್ಷಗಳ ಅವಧಿಗೆ ಚುನಾಯಿತರಾಗುತ್ತಾರೆ.<br>1. ಸಂವಿಧಾನದ 83ನೇ ವಿಧಿಯನ್ವಯ, ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಯಲ್ಲಿದ್ದಾಗ ಅದರ ಅವಧಿಯನ್ನು ವಿಸ್ತರಿಸಲು ಪಾರ್ಲಿಮೆಂಟ್‌ಗೆ ಅಧಿಕಾರವಿದ್ದು, 1 ವರ್ಷ ವಿಸ್ತರಿಸಬಹುದು.<br>2. ತುರ್ತುಪರಿಸ್ಥಿತಿ ಜಾರಿಯಲ್ಲಿರುವಾಗ, ಪ್ರತಿವರ್ಷ ಲೋಕಸಭೆಯ ಅವಧಿ ವಿಸ್ತರಿಸಬಹುದು. |
| 84ನೇ ಅನುಚ್ಛೇದ | **ಸಂಸತ್ತಿನ ಸದಸ್ಯತ್ವಕ್ಕೆ ಅರ್ಹತೆ :**<br>84(ಎ) ವಿಧಿಯನ್ವಯ ಭಾರತದ ಪೌರನಾಗಿರಬೇಕು. |

| | |
|---|---|
| | 84(ಬಿ) ವಿಧಿಯನ್ವಯ ರಾಜ್ಯಸಭೆಗೆ ಸದಸ್ಯನಾಗಲು 30 ವರ್ಷಗಳಾಗಿರಬೇಕು. ಲೋಕಸಭೆಗೆ ಸದಸ್ಯನಾಗಲು 25 ವರ್ಷಗಳಾಗಿರಬೇಕು.<br>ಸಂಸತ್ತು ಕಾಲಕಾಲಕ್ಕೆ ನಿರ್ಧರಿಸಬಹುದಾದ ಇತರ ಅರ್ಹತೆಗಳನ್ನು ಹೊಂದಿರಬೇಕು. |
| 85ನೇ ಅನುಚ್ಛೇದ | **ಸಂಸತ್ತಿನ ಅಧಿವೇಶನಗಳು, ಮುಕ್ತಾಯ ಹಾಗೂ ವಿಸರ್ಜನೆ :**<br>85(1) : ರಾಷ್ಟ್ರಪತಿಯು ಕಾಲಕಾಲಕ್ಕೆ ಸಂಸತ್ತಿನ ಅಧಿವೇಶನವನ್ನು ಕರೆಯುವರು, ಒಂದು ಅಧಿವೇಶನದ ಕೊನೆಯ ಉಪಸ್ಥಿತಿಗೆ & ಮುಂದಿನ ಅಧಿವೇಶನದ ಮೊದಲ ಉಪಸ್ಥಿತಿಯ ನಡುವೆ 6 ತಿಂಗಳಿಗಿಂತ ಹೆಚ್ಚಿನ ಅಂತರವಿರಬಾರದು.<br>ಒಂದು ವರ್ಷದಲ್ಲಿ 2 ಬಾರಿ ಮಾತ್ರ ಅಧಿವೇಶನ ಕರೆಯಬಹುದು.<br>85(2) : ರಾಷ್ಟ್ರಪತಿಯು ಸಂಸತ್ತಿನ ಅಧಿವೇಶನವನ್ನು ಮುಕ್ತಾಯಗೊಳಿಸುವ ಹಾಗೂ ವಿಸರ್ಜಿಸುವ ಅಧಿಕಾರವನ್ನು ಹೊಂದಿರುವರು. |
| 86ನೇ ಅನುಚ್ಛೇದ | **ಸಂಸತ್ತಿನ ಸದನಗಳನ್ನು ಉದ್ದೇಶಿಸಿ ಭಾಷಣ & ಸಂದೇಶಗಳನ್ನು ಕಳುಹಿಸುವ ಅಧಿಕಾರ :**<br>ರಾಷ್ಟ್ರಪತಿಯು ಸಂಸತ್ತಿನ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡುವ ಹಾಗೂ ಇತ್ಯರ್ಥಗೊಳ್ಳದೇ ಉಳಿದಿರುವ ವಿಧೇಯಕಗಳಿಗೆ ಸಂಬಂಧಿಸಿದಂತೆ ಸದನಗಳಿಗೆ ಸಂದೇಶಗಳನ್ನು ಕಳುಹಿಸುವ ಅಧಿಕಾರ ಹೊಂದಿರುತ್ತಾರೆ. |
| 87ನೇ ಅನುಚ್ಛೇದ | **ರಾಷ್ಟ್ರಪತಿಯವರ ಭಾಷಣ :**<br>ಪ್ರಥಮ ಅಧಿವೇಶನ ಹಾಗೂ ಸಾರ್ವತ್ರಿಕ ಚುನಾವಣೆಯ ನಂತರ ಪ್ರಥಮ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವರು. |
| 88ನೇ ಅನುಚ್ಛೇದ | **ಸಂಸತ್ತಿನ ಸದನಗಳಲ್ಲಿ ಅಟಾರ್ನಿ ಜನರಲ್‌ರವರ ಅಧಿಕಾರ :**<br>ಅಟಾರ್ನಿ ಜನರಲ್‌ರವರು ಸಂಸತ್ತಿನ ಸದಸ್ಯರಲ್ಲದಿದ್ದರೂ ಸಹ ಅಧಿವೇಶನದಲ್ಲಿ ಭಾಗವಹಿಸುವ, ಸಮಿತಿಯ ವ್ಯವಹಾರಗಳಲ್ಲಿ ಭಾಗವಹಿಸುವ, ಮಾತನಾಡುವ ಅಧಿಕಾರ ಹೊಂದಿರುತ್ತಾರೆ. ಆದರೆ ಮತದಾನದ ಹಕ್ಕನ್ನು ಹೊಂದಿರುವುದಿಲ್ಲ. |
| 89ನೇ ಅನುಚ್ಛೇದ | **ರಾಜ್ಯಸಭೆಯ ಸಭಾಪತಿ & ಉಪರಾಷ್ಟ್ರಪತಿ :**<br>89(1) : ಭಾರತದ ಉಪರಾಷ್ಟ್ರಪತಿಯು ರಾಜ್ಯಸಭೆಯ ಪದನಿಮಿತ್ತ ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಾರೆ.<br>89(2) : ರಾಜ್ಯಸಭೆಯ ಸದ್ಯಸರು ತಮ್ಮಲ್ಲಿಯೇ ಒಬ್ಬರನ್ನು ಉಪಸಭಾಪತಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. |
| 90ನೇ ಅನುಚ್ಛೇದ | **ಉಪಸಭಾಪತಿಯ ಸ್ಥಾನ ಖಾಲಿಯಾಗುವಿಕೆ :**<br>ರಾಜ್ಯಸಭೆಯ ಉಪಸಭಾಪತಿಯು ತನ್ನ ಸದಸ್ಯತ್ವದ ಅವಧಿ ಮುಗಿದನಂತರ ತಮ್ಮ ಸ್ಥಾನದಿಂದ ನಿರ್ಗಮಿಸುವರು. ತಮ್ಮ ರಾಜೀನಾಮೆ ಪತ್ರವನ್ನು ಸಭಾಪತಿಯವರಿಗೆ ನೀಡಬಹುದು. |
| 91ನೇ ಅನುಚ್ಛೇದ | 91(1) : ರಾಷ್ಟ್ರಪತಿಗಳ ಸ್ಥಾನ ಕಾರಣಾಂತರಗಳಿಂದ ಖಾಲಿಯಾಗಿ ರಾಜ್ಯಸಭೆಯ |

| | |
|---|---|
| | ಸಭಾಪತಿಗಳಾಗಿ ಉಪರಾಷ್ಟ್ರಪತಿಯು ಹಂಗಾಮಿ ರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸುವಾಗ ರಾಜ್ಯಸಭೆಯ ಉಪಸಭಾಪತಿಯು ಸಭಾಪತಿಗಳಾಗಿ ಕಾರ್ಯ ನಿರ್ವಹಿಸುವರು.<br>91(2) : ರಾಜ್ಯಸಭೆಯ ಸಭಾಪತಿ & ಉಪಸಭಾಪತಿ ಇಬ್ಬರು ಗೈರುಹಾಜರಾದರೆ ರಾಜ್ಯಸಭೆಯು ನಿರ್ಧರಿಸಬಹುದಾದ ವ್ಯಕ್ತಿಯು ಸಭಾಪರಿಯಾಗಿ ಕಾರ್ಯ ನಿರ್ವಹಿಸಬಹುದು.<br>14 ದಿನಗಳ ಮುಂಚಿತವಾಗಿ ನೋಟಿಸ್ ನೀಡುವುದರೊಂದಿಗೆ ರಾಜ್ಯಸಭೆಯ ಸದಸ್ಯರು ಒಂದು ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ರಾಜ್ಯಸಭೆಯ ಉಪಸಭಾಪತಿಯನ್ನು ಪದಚ್ಯುತಿಗೊಳಿಸಬಹುದು. |
| 92ನೇ ಅನುಚ್ಛೇದ | ರಾಜ್ಯಸಭೆಯ ಸಭಾಪತಿ (ಉಪರಾಷ್ಟ್ರಪತಿ) ಯವರನ್ನು ಅವರ ಸ್ಥಾನದಿಂದ ಪದಚ್ಯುತಿಗೊಳಿಸುವ ಚರ್ಚೆಯ ಸಂದರ್ಭದಲ್ಲಿ ರಾಜ್ಯಸಭೆಯ ಸಭಾಪತಿಯು ಸದನದ ಅಧ್ಯಕ್ಷತೆಯನ್ನು ವಹಿಸುವ ಹಾಗಿಲ್ಲ. |
| 93ನೇ ಅನುಚ್ಛೇದ | **ಲೋಕಸಭೆಯ ಅಧ್ಯಕ್ಷ & ಉಪಾಧ್ಯಕ್ಷ :**<br>ಲೋಕಸಭೆಯ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಸಭಾಧ್ಯಕ್ಷರನ್ನಾಗಿ ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. |
| 94ನೇ ಅನುಚ್ಛೇದ | ಲೋಕಸಭೆಯ ಸಭಾಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸದನದ ಸದಸ್ಯತ್ವವನ್ನು ಕಳೆದುಕೊಂಡರೆ ತಮ್ಮ ಸಭಾಪತಿ ಅಥವಾ ಉಪಾಧ್ಯಕ್ಷರ ಹುದ್ದೆಯನ್ನು ಕಳೆದುಕೊಳ್ಳುತ್ತಾರೆ.<br>ಸಭಾಪತಿಯು ಉಪಸಭಾಪತಿಗೆ, ಉಪಸಭಾಪತಿಯು ಸಭಾಪತಿಗೆ ತಾವು ಸಹಿ ಮಾಡಿದ ರಾಜೀನಾಮೆ ಪತ್ರವನ್ನು ನೀಡುವ ಮೂಲಕ ತಮ್ಮ ಸ್ಥಾನದಿಂದ ನಿರ್ಗಮಿಸಬಹುದು.<br>14 ದಿನಗಳ ಮುಂಚಿತವಾಗಿ ನೋಟಿಸ್ ನೀಡುವುದರೊಂದಿಗೆ ರಾಜ್ಯಸಭೆಯು ಒಂದು ಗೊತ್ತುವಳಿಯೊಂದಿಗೆ ಲೋಕಸಭೆಯ ಸಭಾಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಪದಚ್ಯುತಿಗೊಳಿಸಬಹುದು. |
| 96ನೇ ಅನುಚ್ಛೇದ | ಲೋಕಸಭೆಯ ಸಭಾಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಪದಚ್ಯುತಿಗೊಳಿಸುವ ಚರ್ಚೆಯ ಸಮಯದಲ್ಲಿ ಚರ್ಚಿತ ವ್ಯಕ್ತಿ ಸದನದ ಅಧ್ಯಕ್ಷತೆಯನ್ನು ವಹಿಸುವ ಹಾಗಿಲ್ಲ. |
| 97ನೇ ಅನುಚ್ಛೇದ | ರಾಜ್ಯಸಭೆಯ ಸಭಾಪತಿ, ಉಪಸಭಾಪತಿ, ಲೋಕಸಭೆಯ ಸಭಾಧ್ಯಕ್ಷ ಹಾಗೂ ಉಪಾಧ್ಯಕ್ಷರು ಸಂವಿಧಾನದ 2ನೇ ಅನುಸೂಚಿಯಲ್ಲಿ ನಿಗಧಿಪಡಿಸಿದ ವೇತನ ಹಾಗು ಭತ್ಯೆಗಳನ್ನು ಪಡೆಯುತ್ತಾರೆ. |
| 98ನೇ ಅನುಚ್ಛೇದ | ರಾಜ್ಯಸಭೆ ಹಾಗೂ ಲೋಕಸಭೆ ಸದನಗಳಿಗೆ ಪ್ರತ್ಯೇಕವಾದ ಸಚಿವಾಲಯ ಹಾಗೂ ಸಿಬ್ಬಂದಿ ಇರತಕ್ಕದ್ದು. |
| 99ನೇ ಅನುಚ್ಛೇದ | **ಸದಸ್ಯರ ಪ್ರಮಾಣ ವಚನ :** |

GNANADHARE IAS KAS ACADEMY

| | |
|---|---|
| | ಸಂಸತ್ತಿನ ಉಭಯಸದನದ ಸದಸ್ಯರು ಸದಸ್ಯತ್ವದ ಸ್ಥಾನವನ್ನು ವಹಿಸಿಕೊಳ್ಳುವ ಮೊದಲು ರಾಷ್ಟ್ರಪತಿಯ ಸಮ್ಮುಖದಲ್ಲಿ ಸಂವಿಧಾನವನ್ನು ಗೌರವಿಸಿ, ದೇಶದ ಪರಮಾಧಿಕಾರ & ಸಮಗ್ರತೆಯನ್ನು ರಕ್ಷಿಸಿ ತನ್ನ ಕರ್ತವ್ಯಗಳನ್ನು ಪ್ರಮಾಣಿಕತೆಯನ್ನು ನಿರ್ವಹಿಸುತ್ತೇನೆಂದು ಪ್ರಮಾಣವಚನವನ್ನು ಸ್ವೀಕರಿಸಿ ಅದಕ್ಕೆ ತಮ್ಮ ಸಹಿ ಹಾಕಬೇಕು |
| 100ನೇ ಅನುಚ್ಛೇದ | **ಸದನದಲ್ಲಿ ಕೋರಂ (ಹಾಜರಾತಿ) :**<br>ಸದನದ ಕಾರ್ಯಕಲಾಪ ನಡೆಯಲು ಸದನದ 1/10ರಷ್ಟು ಸದಸ್ಯರ ಹಾಜರಾತಿ ಕಡ್ಡಾಯ, ಇಲ್ಲದಿದ್ದರೆ ಸಭಾಧ್ಯಕ್ಷರು ಸದನವನ್ನು ಮೂಂದೂಡುತ್ತಾರೆ. |
| 101ನೇ ಅನುಚ್ಛೇದ | ಸಂಸತ್ತಿನ ಯಾವುದೇ ಸದನದ ಅನುಮತಿ ಇಲ್ಲದೇ ಸತತ 60 ದಿನಗಳವರೆಗೆ ಗೈರುಹಾಜರಾದರೆ ಆತನ ಸ್ಥಾನ ಖಾಲಿಯಾಗಿದೆ ಎಂದು ಸದನ ಘೋಷಿಸಬಹುದು. |
| 102ನೇ ಅನುಚ್ಛೇದ | **ಸದಸ್ಯರ ಅನರ್ಹತೆಗಳು :**<br>ಚುನಾವಣೆಯಲ್ಲಿ ಆಯ್ಕೆಯಾದ ಮೇಲೆ ಸಂವಿಧಾನದ 10ನೇ ವಿಧಿಯಲ್ಲಿ ನಮೂದಿಸಿರುವ ಅನರ್ಹತೆಗಳನ್ನು ಹೊಂದಿದ್ದರೆ, ಸದಸ್ಯತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ.<br>• ನ್ಯಾಯಾಲಯದಿಂದ ಮತಿಗೆಟ್ಟವನೆಂದು ಘೋಷಿಸಲ್ಪಟ್ಟರೆ.<br>• ದಿವಾಳಿಯಾದರೆ<br>• ಭಾರತದ ಪೌರನಾಗಿಲ್ಲದಿದ್ದರೆ/ ವಿದೇಶ ಪೌರತ್ವ ಹೊಂದಿದ್ದರೆ/ ವಿದೇಶಕ್ಕೆ ನಿಷ್ಠೆಯಿಂದಿದ್ದರೆ.<br>ಸೆಕ್ಷನ್–8 ರ ಪ್ರಕಾರ ಧರ್ಮ, ಕುಲ, ವಾಸಸ್ಥಳ, ಭಾಷೆ ಮುಂತಾದವುಗಳ ಆದಾರದ ಮೇಲೆ ವಿವಿಧ ಜನಾಂಗಗಳ ನಡುವೆ ದ್ವೇಷ ಉಂಟು ಮಾಡುವವರು, ಅಸ್ಪೃಶ್ಯತೆಯನ್ನು ಬೆಂಬಲಿಸುವವರು, ಅಪರಾಧಿಗಳೆಂದು ಸಾಬೀತಾದರೆ 6 ವರ್ಷಗಳ ಕಾಲ ಅನರ್ಹತೆಗೆ ಒಳಗಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿಲ್ಲ.<br>ಅಪರಾಧಿ ನ್ಯಾಯಲಯದಿಂದ ಶಿಕ್ಷೆಗೆ ತಡೆಯಾಜ್ಞೆ ಪಡೆದು, ಜಾಮೀನಿನ ಮೇಲೆ ಬಿಡುಗಡೆಯಾಗಿರಲಿ/ಇಲ್ಲದಿರಲಿ, ಅಪರಾಧಿ ಎಂದು ತೀರ್ಪು ಕೊಟ್ಟ ದಿನದಿಂದಲೇ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹತೆ ಹೊಂದಿರುವುದಿಲ್ಲ.<br>ಸೆಕ್ಷನ್–9ರ ಪ್ರಕಾರ, ಭ್ರಷ್ಟಾಚಾರಕ್ಕಾಗಿ/ರಾಷ್ಟ್ರದ್ರೋಹಕ್ಕಾಗಿ ಸರ್ಕಾರಿ ಸೇವೆಯಿಂದ ವಜಾ ಮಾಡಲ್ಪಟ್ಟರೆ, ವಜಾ ಆದ ದಿನದಿಂದ 5 ವರ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿಲ್ಲ.<br>ಸೆಕ್ಷನ್–10ಎ ಅನ್ವಯ, ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿ ವೆಚ್ಚದ ವಿವರಗಳನ್ನು ಕಾಲಮಿತಿಯೊಳಗೆ ಒಪ್ಪಿಸದಿದ್ದಲ್ಲಿ, ಅಂಥ ವ್ಯಕ್ತಿಯನ್ನು 3 |

| | |
|---|---|
| | ವರ್ಷಗಳವರೆಗೆ ಸ್ಪರ್ಧಿಸದಂತೆ ತಡೆಯುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ. |
| 103ನೇ ಅನುಚ್ಛೇದ | ಸಂಸತ್ತು ಸದಸ್ಯರ ಅನರ್ಹತೆ ಕುರಿತಾದ ವಿವಾದಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳೇನಾದರೂ ಉದ್ಭವಿಸಿದರೆ ವಿವಾದವನ್ನು ರಾಷ್ಟ್ರಪತಿಗಳಿಗೆ ಒಪ್ಪಿಸಲಾಗುತ್ತದೆ. ಚುನಾವಾಣಾ ಆಯೋಗದ ಅಭಿಪ್ರಾಯ ಪಡೆದು ರಾಷ್ಟ್ರಪತಿಯವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ. |
| 106ನೇ ಅನುಚ್ಛೇದ | ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದ ವೇತನ ಹಾಗು ಭತ್ಯೆಗಳನ್ನು ಸದಸ್ಯರು ಪಡೆಯುತ್ತಾರೆ. |
| 108ನೇ ಅನುಚ್ಛೇದ | **ಉಭಯ ಸದನಗಳ ಜಂಟೀ ಅಧಿವೇಶನ :**<br>ಯಾವುದಾದರೊಂದು ವಿಧೇಯಕಕ್ಕೆ ಉಭಯ ಸದನಗಳ ನಡುವೆ ಭಿನ್ನಾಭಿಪ್ರಾಯಗಳುಂಟಾದರೆ ಅದನ್ನು ಬಗೆಹರಿಸಲು ರಾಷ್ಟ್ರಪತಿಯವರು ಉಭಯ ಸದನಗಳಿಗೆ ಜಂಟೀ ಅಧಿವೇಶನವನ್ನು ಕರೆಯುತ್ತಾರೆ.<br>ಅಧ್ಯಕ್ಷತೆಯನ್ನು ಲೋಕಸಭೆಯ ಸಭಾಪತಿಗಳು ವಹಿಸುತ್ತಾರೆ. |
| 109ನೇ ಅನುಚ್ಛೇದ | ಹಣಕಾಸು ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸುವಂತಿಲ್ಲ, ಲೋಕಸಭೆಯಲ್ಲಿಯೇ ಮೊದಲು ಮಂಡಿಸಬೇಕು.<br>ಲೋಕಸಭೆಯಿಂದ ಪಾಸಾಗಿ ಬಂದ ಹಣಕಾಸು ಮಸೂದೆಯನ್ನು ರಾಜ್ಯಸಭೆ ಒಪ್ಪಬಹುದು ಅಥವಾ ತಿರಸ್ಕರಿಸಬಹುದು. 14 ದಿನಗಳವರೆಗೆ ಮಾತ್ರ ರಾಜ್ಯಸಭೆ ಹಣಕಾಸು ಮಸೂದೆಯನ್ನು ತಿರಸ್ಕರಿಸಬಹುದು.<br>14 ದಿನಗಳ ನಂತರ ರಾಜ್ಯಸಭೆ ಹಣಕಾಸು ಮಸೂದೆಯನ್ನು ಹಿಂದಿರುಗಿಸದಿದ್ದರೆ ಮಸೂದೆಯು ಪಾಸಾಯಿತೆಂದು ತಿಳಿದು ರಾಷ್ಟ್ರಪತಿಯವರ ಅಂಕಿತಕ್ಕೆ ಕಳುಹಿಸಲಾಗುತ್ತದೆ. |
| 111ನೇ ಅನುಚ್ಛೇದ | **ರಾಷ್ಟ್ರಪತಿಯವರ ಅಂಕಿತಕ್ಕಾಗಿ ಮಸೂದೆಗಳು :**<br>ಪಾಸಾದ ಮಸೂದೆಯು ಕಾಯ್ದೆಯಾಗಿ ಜಾರಿಯಲ್ಲಿ ಬರಬೇಕಾದರೆ ರಾಷ್ಟ್ರಪತಿಯವರ ಅಂಕಿತ ಅವಶ್ಯಕ<br>ರಾಷ್ಟ್ರಪತಿಯವರು ಸಂಸತ್ತಿನಿಂದ ಪಾಸಾಗ ಬಂದ ಮಸೂದೆಗೆ ಅಂಕಿತ ನೀಡಬಹುದು ಅಥವಾ ತಡೆಹಿಡಿಯಬಹುದು.<br>ವಾಪಸ್ಸು ಬಂದ ಮಸೂದೆಯನ್ನು ಸಂಸತ್ತಿನಲ್ಲಿ ಚರ್ಚಿಸಿ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿಯಿಲ್ಲದೇ ಪುನಃ ಅಂಗೀಕರಿಸಿ ರಾಷ್ಟ್ರಪತಿಯವರ ಅಂಕಿತಕ್ಕೆ ಕಳುಹಿಸಬೇಕು<br>ರಾಷ್ಟ್ರಪತಿಯವರು ಅನಿವಾರ್ಯವಾಗಿ ತಮ್ಮ ಒಪ್ಪಿಗೆಯನ್ನು ನೀಡಲೇಬೇಕಾಗುತ್ತದೆ. |
| 112ನೇ ಅನುಚ್ಛೇದ | **ಬಜೆಟ್ :**<br>ಕೇಂದ್ರಸರ್ಕಾರದ ಆದಾಯ & ವೆಚ್ಚದ ಅಂದಾಜು ವಿವರಣೆಯಾದ ವಾರ್ಷಿಕ |

| | |
|---|---|
| | ಹಣಕಾಸು ವಿವರ ಪತ್ರವನ್ನು ಸಂಸತ್ತಿನ ಮುಂದೆ ಮಂಡಿಸಲು ಕ್ರಮ ಕೈಗೊಳ್ಳಬೇಕು. |

# ಪ್ರಧಾನಮಂತ್ರಿ (Prime Minister):

- ಬ್ರಿಟನ್ ಮಾದರಿಯ "ಕ್ಯಾಬಿನೆಟ್ ಪದ್ದತಿ"ಯನ್ನು ಅಳವಡಿಸಿಕೊಂಡು ಪ್ರಧಾನಮಂತ್ರಿಯ ಸ್ಥಾನವನ್ನು ಸೃಷ್ಟಿಸಲಾಗಿದೆ.
- The Prime minister is the pivot of the whole system of the government – H. J. Laski
- ಪ್ರಧಾನಿ ಚುನಾಯಿತ ರಾಜನಂತೆ ಎಂದವರು – ಹಿಂಟನ್
- ಸಂವಿಧಾನದ 74(1)ನೇ ವಿಧಿಯು ಪ್ರಧಾನಮಂತ್ರಿಯ ಸ್ಥಾನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಪ್ರಧಾನಿಯು ಕೇಂದ್ರದ ಸಮಸ್ತ ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ರಾಷ್ಟ್ರಪತಿ ಹೆಸರಿನಲ್ಲಿ ಚಲಾಯಿಸುತ್ತಾರೆ.
- Table of Precedence ನಲ್ಲಿ ಪ್ರಧಾನಮಂತ್ರಿಯು 3ನೇ ಸ್ಥಾನವನ್ನು ಪಡೆದಿದ್ದಾರೆ.
- ಭಾರತದ ಪ್ರಧಾನಮಂತ್ರಿಯ ಸ್ಥಾನವನ್ನು ಬ್ರಿಟನ್ ಪ್ರಧಾನಮಂತ್ರಿಯ ಸ್ಥಾನಕ್ಕೆ ಹೋಲಿಕೆ ಮಾಡಲಾಗಿದೆ.

## ಪ್ರಧಾನಮಂತ್ರಿ ನೇಮಕ :

ಸಂವಿಧಾನದ 75(1)ನೇ ವಿಧಿಯನ್ವಯ, ರಾಷ್ಟ್ರಪತಿಯು ಪ್ರಧಾನಮಂತ್ರಿಯನ್ನು ನೇಮಿಸುತ್ತಾರೆ. ಸಾಮಾನ್ಯವಾಗಿ ಲೋಕಸಭೆಯಲ್ಲಿ ಬಹುಮತ ಪಡೆದಿರುವ ಪಕ್ಷದ ನಾಯಕನನ್ನು ಪ್ರಧಾನಮಂತ್ರಿಯನ್ನಾಗಿ ನೇಮಿಸಲಾಗುತ್ತದೆ.

GNANADHARE IAS KAS ACADEMY

## ಅಧಿಕಾರ ಮತ್ತು ಕರ್ತವ್ಯಗಳು :

1. ಸಚಿವರ ನೇಮಕ/ಮಂತ್ರಿ ಮಂಡಲ ರಚನೆ
2. ಖಾತೆಗಳ ಹಂಚಿಕೆ
3. ಸಚಿವ ಸಂಪುಟ ಗಾತ್ರವನ್ನು ನಿರ್ಧರಿಸುವುದು
4. ಮಂತ್ರಿ ಮಂಡಲದ ಪುನರಚನೆ
5. ಸಚಿವರನ್ನು ಪದಚ್ಯುತಿಗೊಳಿಸುವುದು
6. ಸರ್ಕಾರದ ಮುಖ್ಯಸ್ಥರಾಗಿ ಕಾರ್ಯ
7. ಲೋಕಸಭೆಯ ನಾಯಕತ್ವ
8. ಸಚಿವ ಸಂಪುಟದ ನಾಯಕತ್ವ
9. ರಾಷ್ಟ್ರಪತಿಯ ಸಲಹೆಗಾರನಾಗಿ ಕಾರ್ಯ
10. ರಾಷ್ಟ್ರಪತಿ & ಮಂತ್ರಿ ಮಂಡಲದ ನಡುವೆ ಸಂಪರ್ಕ ಸೇತುವೆ
11. ಲೋಕಸಭೆ ವಿಸರ್ಜಿಸುವಂತೆ ಸಲಹೆ ನೀಡುವುದು

### 1. ಸಚಿವರ ನೇಮಕ/ಮಂತ್ರಿ ಮಂಡಲ ರಚನೆ :

74ನೇ ವಿಧಿಯನ್ವಯ, ಪ್ರಧಾನಮಂತ್ರಿ ನೇತೃತ್ವದಲ್ಲಿ ಮಂತ್ರಿಮಂಡಲ ಇರಬೇಕೆಂದು ತಿಳಿಸುತ್ತದೆ. 74(1)ನೇ ವಿಧಿಯನ್ವಯ ಪ್ರಧಾನಮಂತ್ರಿ ಸಲಹೆ ಮೇರೆಗೆ ರಾಷ್ಟ್ರಪತಿಯು ಸಚಿವರನ್ನಾಗಿ ನೇಮಿಸುತ್ತದೆ. ಪ್ರಧಾನ ಮಂತ್ರಿಯು ಸಚಿವರನ್ನು ನೇಮಿಸುವಾಗ, ವಿವಿಧ ಧರ್ಮ, ವರ್ಗ, ರಾಜ್ಯ ಮೊದಲಾದ ವಿಷಯಗಳಿಗೆ ಪ್ರಾತಿನಿಧ್ಯ ನೀಡಬೇಕಾಗುತ್ತದೆ.

### 2. ಖಾತೆಗಳ ಹಂಚಿಕೆ :

- ಖಾತೆಗಳ ಹಂಚಿಕೆಯಲ್ಲಿ ಪ್ರಧಾನಮಂತ್ರಿಯು ಅತ್ಯಂತ ಜಾಗೃತಿಯನ್ನು ವಹಿಸಬೇಕಾಗುತ್ತದೆ. ಖಾತೆಗಳನ್ನು ಹಂಚುವಾಗ, ಮಂತ್ರಿಗಳ ಹಿನ್ನೆಲೆ, ಪರಿಣಿತಿ ಅನುಭವ, ಮೊದಲಾದವುಗಳನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಉತ್ತಮ ಚಾರಿತ್ರ್ಯವುಳ್ಳವರಿಗೆ ಖಾತೆಗಳನ್ನು ಹಂಚಬೇಕಾಗುತ್ತದೆ.
- 1985ರಲ್ಲಿ ರಾಜೀವ್‌ಗಾಂಧಿ ನೀರಾವರಿ ಖಾತೆಯನ್ನು "ಜಲ ಸಂಪನ್ಮೂಲ ಖಾತೆ" ಎಂದು ನಾಮಕರಣ ಮಾಡಿದರು.
- ಮಾನವ ಸಂಪನ್ಮೂಲ ಅಭಿವೃದ್ಧಿ & ಕಾರ್ಯಕ್ರಮ ಅನುಷ್ಠಾನ ಎಂಬ ಖಾತೆ ರಚನೆ

- ಶಿಕ್ಷಣ
- ಯುವಕರು
- ಮಹಿಳೆಯರು
- ಕ್ರೀಡೆಗಳು

- ಗೃಹ ಖಾತೆಯನ್ನು 4 ಇಲಾಖೆಗಳನ್ನು ವಿಂಗಡಿಸಿ, ಆಂತರಿಕ ಭದ್ರತೆ ಇಲಾಖೆ ಸ್ಥಾಪನೆ.

### 3. ಸಚಿವ ಸಂಪುಟ ಗಾತ್ರವನ್ನು ನಿರ್ಧರಿಸುವುದು :

ಸಂವಿಧಾನದಲ್ಲಿ 91ನೇ ತಿದ್ದುಪಡಿಯನ್ವಯ, (2003) ಲೋಕಸಭೆಯ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಶೇ. 15ಕ್ಕಿಂತ ಹೆಚ್ಚು ಸಚಿವರು ಇರುವಂತಿಲ್ಲ. ಸಂವಿಧಾನದ 75 & 164ನೇ ವಿಧಿಗಳನ್ನು ತಿದ್ದುಪಡಿ ಮಾಡಿ, ಕೇಂದ್ರ ಮಂತ್ರಿ ಮಂಡಲಗಳ ಗರಿಷ್ಠ ಸಂಖ್ಯೆಯನ್ನು ನಿಗಧಿಪಡಿಸಲಾಗಿದೆ.

### 4. ಮಂತ್ರಿ ಮಂಡಲ ಪುನರ್ರಚನೆ :

ಆಡಳಿತದಲ್ಲಿ ದಕ್ಷತೆ & ಹೊಸತನವನ್ನು ಮೂಡಿಸಲು, ಆಗಿಂದಾಗ್ಗೆ, ಕಾರ್ಯ ನಿರ್ವಹಿಸುತ್ತಿರುವ ಮಂತ್ರಿಗಳನ್ನು ಮಂಡಲದಿಂದ ಕೈಬಿಡುವ ಹಾಗೂ ಹೊಸ ವ್ಯಕ್ತಿಗಳನ್ನು ಮಂತ್ರಿಗಳನ್ನಾಗಿ ನೇಮಕ ಮಾಡುವುದು.

### 5. ಸಚಿವರನ್ನು ಪದಚ್ಯುತಿಗೊಳಿಸುವುದು :

- ಸಚಿವರೊಬ್ಬರನ್ನು ಪ್ರಧಾನಿಯ ವಿಶ್ವಾಸವನ್ನು ಕಳೆದುಕೊಂಡಾಗ/ಮಂತ್ರಿ ಮಂಡಲವನ್ನು ಬಹಿರಂಗವಾಗಿ ಟೀಕಿಸಿದಾಗ, ದಕ್ಷತೆಯಿಂದ ಕೆಲಸ ಮಾಡದೆ ಇದ್ದಾಗ, ಅವರನ್ನು ರಾಜೀನಾಮೆ ಕೊಡುವಂತೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕೇಳುವ ಅಧಿಕಾರ ಪ್ರಧಾನಿಗಿದೆ. ರಾಜೀನಾಮೆ ಕೊಡದಿದ್ದರೆ, ಅವರನ್ನು ವಜಾ ಮಾಡುವಂತೆ ರಾಷ್ಟ್ರಪತಿಗೆ ಶಿಫಾರಸ್ಸು ಮಾಡಬಹುದು.
- 1966ರಲ್ಲಿ ಇಂದಿರಾಗಾಂಧೀಯವರು ಪ್ರಧಾನಿಯಾಗಿದ್ದಾಗ ರಾಜ್ಯಸಭೆ ಸದಸ್ಯರಾಗಿದ್ದರು.
- 1996ರಲ್ಲಿ ದೇವೇಗೌಡರು ಪ್ರಧಾನಿಯಾದ ನಂತರ ರಾಜ್ಯಸಭೆಗೆ ಆಯ್ಕೆಯಾದರು.
- ಪ್ರಧಾನಮಂತ್ರಿ/ಮುಖ್ಯಮಂತ್ರಿ ಪರೋಕ್ಷವಾಗಿ ಆಯ್ಕೆಯಾಗುವ ಸದನದ ಸದಸ್ಯರಾಗಿರಬಾರದೆಂದು ಹೇಳಿದವರು – ಹೆಚ್. ವಿ. ಕಾಮತ್



GNANADHARE IAS KAS ACADEMY

**6. ಸರ್ಕಾರದ ಮುಖ್ಯಸ್ಥರಾಗಿ ಕಾರ್ಯ :**

ಸಂಸದೀಯ ಪದ್ಧತಿಯಲ್ಲಿ ಪ್ರಧಾನಮಂತ್ರಿ ಸರ್ಕಾರದ ಮುಖ್ಯಸ್ಥರಾಗಿರುವುದರಿಂದ, ಆಡಳಿತದಲ್ಲಿ ಇವರ ಪಾತ್ರ ವಿಶೇಷ, ಸರ್ಕಾರದ ಹಾಗು–ಹೋಗುಗಳಿಗೆ ಜವಾಬ್ದಾರರಾಗುವುದಲ್ಲದೇ, ಎಲ್ಲಾ ಇಲಾಖೆಗಳ ನಡುವೆ ಸಮನ್ವಯ & ಸಹಕಾರ ಮನೋಭಾವನೆ ಬೆಳೆಯುವಂತೆ ಮಾಡುವುದು ಇವರ ಮುಖ್ಯ ಕರ್ತವ್ಯ. ವಿವಿಧ ಇಲಾಖೆಗಳಿಗೆ ಕಾರ್ಯದರ್ಶಿಗಳನ್ನು & ಕ್ಯಾಬಿನೆಟ್ ಸೆಕ್ರೆಟರಿಯನ್ನು ನೇಮಿಸುವಾಗ ಪ್ರಧಾನಿಯ ಪಾತ್ರ ವಿಶೇಷವಾಗಿರುತ್ತದೆ. ದೇಶದ ಪ್ರಗತಿಗೆ ಪ್ರಗತಿಪರ ಆರ್ಥಿಕ ನಿಯಮಗಳನ್ನು ರೂಪಿಸಿ, ಅವುಗಳು ಜಾರಿಗೆ ಬರುವಂತೆ ಎಚ್ಚರಿಕೆ ವಹಿಸುತ್ತಾರೆ.

**7. ಲೋಕಸಭೆಯ ನಾಯಕತ್ವ :**

ಪ್ರಧಾನ ಮಂತ್ರಿ ಬಹುಮತ ಪಡೆದ ಸಂಸದೀಯ ಪಕ್ಷದ ನಾಯಕರಾಗಿರುವುದರಿಂದ ಲೋಕಸಭೆಯ ನಾಯಕರಾಗಿರುತ್ತಾರೆ. ಆದ್ದರಿಂದ ಸಂಸತ್ತಿನ ವ್ಯವಹಾರಗಳಲ್ಲಿ ಇವರ ಪಾತ್ರ ಮಹತ್ವದು. ಲೋಕಸಭೆಯ ಸ್ಪೀಕರ್ ಜೊತೆ ಸಮಾಲೋಚಿಸಿ, ಸದನದ ಅಧಿವೇಶನವನ್ನು ಕರೆಯುವ/ಮುಂದೂಡುವ ದಿನಗಳನ್ನು ಗೊತ್ತು ಪಡಿಸುತ್ತಾರೆ. ಅಧಿವೇಶನ ಸಮಯದಲ್ಲಿ ಸರ್ಕಾರ ಕೈಗೊಳ್ಳಬೇಕಾದ ವಿಷಯಗಳ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರ ಮಂಡಿಸಬೇಕಾದ ಮಸೂದೆ & ನಿರ್ಣಯಗಳನ್ನು ತೀರ್ಮಾನಿಸುತ್ತಾರೆ.

**8. ಸಚಿವ ಸಂಪುಟದ ನಾಯಕತ್ವ :**

ಸಂವಿಧಾನದ 74(1) ನೇ ವಿಧಿಯನ್ವಯ ಪ್ರಧಾನಮಂತ್ರಿಯು ಸಚಿವ ಸಂಪುಟದ ನಾಯಕರಾಗಿರುತ್ತಾರೆ. ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ಸೇರಿ ಮಹತ್ವದ ವಿಚಾರಗಳನ್ನು ಚರ್ಚಿಸುತ್ತಾರೆ.

**9. ರಾಷ್ಟ್ರಪತಿ ಸಲಹೆಗಾರ :**

ಕೆಲವು ಮುಖ್ಯ ನೇಮಕಾತಿಗಳಿಗೆ ಸಂಬಂಧಿಸಿದಂತೆ, ಪ್ರಧಾನಮಂತ್ರಿಯು ರಾಷ್ಟ್ರಪತಿಗೆ ಸಲಹೆಗಾರನಾಗಿ ಕಾರ್ಯ ನಿರ್ವಹಿಸುತ್ತಾರೆ.

**10. ರಾಷ್ಟ್ರಪತಿ ಮತ್ತು ಮಂತ್ರಿ ಮಂಡಲದ ನಡುವೆ ಸಂಪರ್ಕ ಸೇತುವೆ:** ಪ್ರಧಾನಮಂತ್ರಿಯ ಮಂತ್ರಿ ಮಂಡಲದ ಎಲ್ಲಾ ನಿರ್ಧಾರಗಳನ್ನು ರಾಷ್ಟ್ರಪತಿಗೆ ತಿಳಿಸುವುದು & ರಾಷ್ಟ್ರಪತಿಯ ಸಲಹೆ ಸೂಚನೆಗಳನ್ನು ಮಂತ್ರಿ ಮಂಡಲಕ್ಕೆ ತಿಳಿಸುವುದು.

### 11. ಲೋಕಸಭೆ ವಿಸರ್ಜನೆ ಸಲಹೆ ನೀಡುವುದು :

ಲೋಕಸಭೆಯಲ್ಲಿ ವಿಶ್ವಾಸ ಮತವನ್ನು ಕಳೆದುಕೊಂಡಾಗ & ಇತರ ಸಂದರ್ಭದಲ್ಲಿ 85ನೇ ವಿಧಿಯನ್ವಯ ಲೋಕಸಭೆ ವಿಸರ್ಜನೆಗೆ ಸಲಹೆ ನೀಡಲಾಗುತ್ತದೆ.

## ಭಾರತದ ಪ್ರಧಾನ ಮಂತ್ರಿಗಳು :

| ಕ್ರ. ಸಂ | ಹೆಸರು | ಅವಧಿ | | ಭಾವಚಿತ್ರ |
|---|---|---|---|---|
| | | ಯಿಂದ | ತನಕ | |
| 1 | ಜವಹರಲಾಲ್ ನೆಹರೂ | 15–8–1947 | 27–5–1964 |  |
| 2 | ಗುಲ್ಜಾರಿಲಾಲ್ ನಂದ | 27–5–1964 | 9–6–1964 |  |
| 3 | ಲಾಲ್ ಬಹದ್ದೂರ್ ಶಾಸ್ತ್ರಿ | 9–6–1964 | 11–1–1966 |  |
| 4 | ಗುಲ್ಜಾರಿಲಾಲ್ ನಂದ | 11–1–1966 | 24–1–1966 |  |
| 5 | ಇಂದಿರಾ ಗಾಂಧಿ | 24–1–1966 | 24–3–1977 |  |

GNANADHARE IAS KAS ACADEMY

| | | | | |
|---|---|---|---|---|
| 6 | ಮೊರಾರ್ಜಿ ದೇಸಾಯಿ | 24–3–1977 | 28–7–1979 |  |
| 7 | ಚೌದರಿ ಚರಣ್ ಸಿಂಗ್ | 28–7–1979 | 14–1–1980 |  |
| 8 | ಇಂದಿರಾ ಗಾಂಧಿ | 14–1–1980 | 31–10–1984 |  |
| 9 | ರಾಜೀವ್ ಗಾಂಧಿ | 31–10–1984 | 2–12–1989 |  |
| 10 | ವಿಶ್ವನಾಥ್ ಪ್ರತಾಪ್ ಸಿಂಗ್ | 2–12–1989 | 10–11–1990 |  |
| 11 | ಚಂದ್ರಶೇಖರ್ | 10–11–1990 | 21–6–1991 |  |
| 12 | ಪಿ.ವಿ. ನರಸಿಂಹರಾವ್ | 21–6–1991 | 16–5–1996 |  |

GNANADHARE IAS KAS ACADEMY

| | | | | |
|---|---|---|---|---|
| 13 | ಅಟಲ್ ಬಿಹಾರಿ ವಾಜಪೇಯಿ | 16–5–1996 | 1–6–1996 |  |
| 14 | ಹೆಚ್.ಡಿ. ದೇವೇಗೌಡ | 1–6–1996 | 21–4–1997 |  |
| 15 | ಐ.ಕೆ. ಗುಜ್ರಾಲ್ | 21–4–1997 | 19–3–1998 |  |
| 16 | ಅಟಲ್ ಬಿಹಾರಿ ವಾಜಪೇಯಿ | 19–3–1998 | 13–10–1999 |  |
| 17 | ಅಟಲ್ ಬಿಹಾರಿ ವಾಜಪೇಯಿ | 13–10–1999 | 22–5–2004 |  |
| 18 | ಮನಮೋಹನ್ ಸಿಂಗ್ | 22–5–2004 | 26–5–2014 |  |
| 19 | ನರೇಂದ್ರ ಮೋದಿ | 26–5–2014 | – |  |

GNANADHARE IAS KAS ACADEMY

# ಭಾರತದ ಉಪಪ್ರಧಾನಿಗಳು :

| ಕ್ರ. ಸಂ | ಹೆಸರು | ಅವಧಿ | | ಭಾವಚಿತ್ರ |
|---|---|---|---|---|
| | | ಯಿಂದ | ತನಕ | |
| 1 | ಸರ್ದಾರ್ ವಲ್ಲಭ ಬಾಯಿ ಪಟೇಲ್ | 15–8–1947 | 15–12–1950 |  |
| 2 | ಮೊರಾರ್ಜಿ ದೇಸಾಯಿ | 13–3–1967 | 19–7–1969 |  |
| 3 | ಚರಣ್ ಸಿಂಗ್ | 24–1–1979 | 19–7–1979 |  |
| 4 | ಜಗಜೀವನರಾಯ್ | 24–7–1979 | 28–7–1979 |  |
| 5 | ವೈ.ಬಿ. ಚವಾಣ್ | 28–7–1979 | 14–1–1980 |  |
| 6 | ದೇವಿಲಾಲ್ | 2–12–1989 | 21–6–1991 |  |

GNANADHARE IAS KAS ACADEMY

| | | | | |
|---|---|---|---|---|
| 7 | ಎಲ್.ಕೆ.ಅಡ್ವಾಣಿ | 29–6–2002 | 22–5–2004 |  |

## ಕೇಂದ್ರದ ಮಂತ್ರಿಮಂಡಲ :

ಸಂವಿಧಾನದ 74(1) ವಿಧಿಯನ್ವಯ ರಾಷ್ಟ್ರಪತಿಗೆ ನೆರವು & ಸಲಹೆ ನೀಡಲು ಪ್ರಧಾನಮಂತ್ರಿ ನೇತೃತ್ವ ಮಂತ್ರಿಮಂಡಲ ಇರತಕ್ಕದ್ದು. ಸಚಿವ ಸಂಪುಟದಲ್ಲಿ 'ಮೂರು ದರ್ಜೆಯ ಸಚಿವರು" ಇರಬೇಕೆಂದು "ಗೋಪಾಲಸ್ವಾಮಿ ಅಯ್ಯಂಗಾರ್" ಶಿಫಾರಸ್ಸು ಮಾಡಿದ್ದರು.

### ಮಂತ್ರಿಮಂಡಲ ವರ್ಗೀಕರಣ :

1. ಕ್ಯಾಬಿನೆಟ್ ಮಂತ್ರಿಗಳು/ಸಂಪುಟ ದರ್ಜೆಯ ಮಂತ್ರಿಗಳು
2. ಸಹಾಯಕ ಮಂತ್ರಿಗಳು/ರಾಜ್ಯ ಮಂತ್ರಿಗಳು
3. ಉಪ ಸಚಿವರು/ಉಪ ಮಂತ್ರಿಗಳು

### ಸಂಪುಟ ದರ್ಜೆಯ ಮಂತ್ರಿಗಳು(Cabinet Ministers) :

1. ಮೊದಲ & ಉನ್ನತ ಸ್ಥಾನದ ಮಂತ್ರಿಗಳು
2. ರಾಜಕೀಯದಲ್ಲಿ & ಆಡಳಿತದಲ್ಲಿ ಅನುಭವ ಪಡೆದವರನ್ನು & ಪ್ರಧಾನಿಯ ವಿಶ್ವಾಸಕ್ಕೆ ಅರ್ಹರಾಗಿರುವವರನ್ನು ಕ್ಯಾಬಿನೆಟ್ ದರ್ಜೆ ಸಚಿವರನ್ನಾಗಿ ಮಾಡುವರು.
3. ಗೃಹ, ರಕ್ಷಣೆ, ವಿದೇಶಾಂಗ, ಹಣಕಾಸು & ಕೈಗಾರಿಕೆ ಇತ್ಯಾದಿ ಸಂಪುಟ ದರ್ಜೆ ಮಂತ್ರಿಗಳು.
4. ಇವರಿಗೆ ಸಹಾಯ ಮಾಡಲು ಸಹಾಯಕ & ಉಪ ಸಚಿವರು ಇರುತ್ತಾರೆ.

GNANADHARE IAS KAS ACADEMY

## ಸಹಾಯಕ ಸಚಿವರು (Ministers of State) :

1. ಇವರು ಕ್ಯಾಬಿನೆಟ್ ಸಚಿವರಿಗೆ ತಮ್ಮ ಖಾತೆಗಳ ನಿರ್ವಹಣೆಯಲ್ಲಿ ನೆರವು ನೀಡುತ್ತಾರೆ.
2. ಕೆಲವು ಖಾತೆಗಳಲ್ಲಿ ಕ್ಯಾಬಿನೆಟ್ ಮಂತ್ರಿ ಇಲ್ಲದಿದ್ದಾಗ, ಸಹಾಯಕ ಸಚಿವರೇ ಅಂತಹ ಖಾತೆಗಳನ್ನು ನಿರ್ವಹಿಸುತ್ತಾರೆ.
3. ಸಹಾಯಕ ಸಚಿವರು, ಕ್ಯಾಬಿನೆಟ್ ಸಭೆಗಳಲ್ಲಿ ಭಾಗವಹಿಸುವುದಿಲ್ಲವಾದರೂ ಆಹ್ವಾನದ ಮೇರೆಗೆ ಭಾಗವಹಿಸುತ್ತಾರೆ.

## ಉಪ ಸಚಿವರು (Deputy minister) :

1. ಇವರು ಕ್ಯಾಬಿನೆಟ್ & ರಾಜ್ಯ ಸಚಿವರಿಗೆ ತಮ್ಮ ಖಾತೆಗಳ ನಿರ್ವಹಣೆಯಲ್ಲಿ ಮಾಡುತ್ತಾರೆ.
2. ಇವರು ಸಚಿವ ಸಂಪುಟ ಸಭೆಗಳಿಗೆ ಹಾಜರಾಗುವಂತಿಲ್ಲ.

## ಮಂತ್ರಿಮಂಡಲ ಗಾತ್ರ :

- ಸಂವಿಧಾನದ 91ನೇ ತಿದ್ದುಪಡಿ (2003) ಪ್ರಕಾರ, ಕೇಂದ್ರ ಮಂತ್ರಿ ಮಂಡಲದ ಗಾತ್ರವು ಲೋಕಸಭಾ ಸದಸ್ಯರ ಒಟ್ಟು ಸಂಖ್ಯೆಯ ಶೇ. 15ನ್ನು ಮೀರುವಂತಿಲ್ಲ.
- ಸಂವಿಧಾನದ 74 & 75ನೇ ವಿಧಿಗಳಲ್ಲಿ ಕ್ಯಾಬಿನೆಟ್ ಎಂಬ ಪದವನ್ನು ಬಳಸಿಲ್ಲದಿದ್ದರೂ, ಕೆಲವು ವೇಳೆ ಮಂತ್ರಿ ಮಂಡಲದ ಅರ್ಥದಲ್ಲಿ ಬಳಸುತ್ತಾರೆ. ಸರ್ಕಾರದಲ್ಲಿ ಅಧಿಕಾರಗಳನ್ನು ಚಲಾಯಿಸುವುದರ ಜೊತೆಗೆ ಪ್ರಧಾನಿ ನೇತೃತ್ವದಲ್ಲಿ ವಾಸ್ತವ ಕಾರ್ಯಾಂಗವಾಗಿದೆ.
- ದೇಶದ ಆಡಳಿತ & ರಾಜಕೀಯದಲ್ಲಿ ಕ್ಯಾಬಿನೆಟ್ ಉನ್ನತ ಅಧಿಕಾರಗಳನ್ನು & ಶ್ರೇಷ್ಠ ಸ್ಥಾನವನ್ನು ಪಡೆದಿರುವುದರಿಂದ ಪಾರ್ಲಿಮೆಂಟರಿ ಪದ್ಧತಿಯನ್ನು "Cabinet System" ಎನ್ನುವರು.
- ಪ್ರಧಾನಿ ಅಧ್ಯಕ್ಷತೆಯಲ್ಲಿ ಕ್ಯಾಬಿನೆಟ್ ವಾರಕ್ಕೊಮ್ಮೆ ಸಭೆ ಸೇರುತ್ತದೆ.
- ಸಭೆ ಪ್ರಧಾನಿ ನಿವಾಸ/ರಾಷ್ಟ್ರಪತಿ ಭವನದಲ್ಲಿ ನಡೆಯಬಹುದು.
- ಮೊದಲ ಬಾರಿಗೆ ರಾಜಸ್ಥಾನದ ಸರಿಸ್ಕ ಎಂಬ ಸ್ಥಳದಲ್ಲಿ Cabinet ಸಭೆ 1987 ಡಿಸೆಂಬರ್‌ನಲ್ಲಿ ನಡೆಯಿತು.
- ಸಭೆಯ ತೀರ್ಮಾನಗಳನ್ನು ರಹಸ್ಯವಾಗಿ ಇಡಲಾಗುವುದು.



GNANADHARE IAS KAS ACADEMY

## ಎಂ.ವಿ. ಪೈಲಿಯವರ ಪ್ರಕಾರ, ಭಾರತದ ಕ್ಯಾಬಿನೆಟ್ ಈ ಕೆಳಕಂಡ 4 ಕರ್ತವ್ಯಗಳನ್ನು ನಿರ್ವಹಿಸುತ್ತದೆ.

- ಸರ್ಕಾರದ ನಿಯಮಗಳನ್ನೊಳಗೊಂಡ ಶಾಸನಗಳನ್ನು ರಚಿಸಲು ಅನುಮತಿ ನೀಡುವುದು.
- ಪ್ರಮುಖ ನೇಮಕಗಳನ್ನು ರದ್ದು ಮಾಡುವುದು.
- ವಿವಿಧ ಇಲಾಖೆಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸುವುದು.
- ಸರ್ಕಾರದ ವಿವಿಧ ಚಟುವಟಿಕೆಗಳಲ್ಲಿ, ಸಮನ್ವಯ ಉಂಟು ಮಾಡಿ, ತನ್ನ ನೀತಿಗಳನ್ನು ಕಾರ್ಯಾಗತಗೊಳಿಸುವುದರ ಬಗ್ಗೆ ಮೇಲ್ವಿಚಾರಣೆ ನಡೆಸುವುದು.

## ಕ್ಯಾಬಿನೆಟ್ ಮುಖ್ಯ ಕರ್ತವ್ಯಗಳು :

1. ಸುಗ್ರಿವಾಜ್ಞೆಗಳನ್ನು ಘೋಷಿಸುವುದು & ಕಾನೂನುಗಳನ್ನು ರಚಿಸುವುದು.
2. ತುರ್ತು ಪರಿಸ್ಥಿತಿಗಳನ್ನು ಘೋಷಿಸುವುದು.
3. ವಿದೇಶಗಳಿಗೆ ನಿಯೋಗಗಳನ್ನು ಕಳುಹಿಸುವುದು.
4. ಸಂಸತ್ತಿನ ರಾಷ್ಟ್ರ ಪತಿ ಮಾಡಬೇಕಾದ ಭಾಷಣ ಸಿದ್ಧಪಡಿಸುವುದು.
5. ಸರ್ಕಾರದ ಆಯ-ವ್ಯಯ ಪತ್ರವನ್ನು ಸಿದ್ಧಪಡಿಸುವುದು.
6. ಅಗತ್ಯವಿದ್ದಲ್ಲಿ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಗಳನ್ನು ತರುವುದು.
7. ಸಂಸತ್ತಿನ ಅಧಿವೇಶನ ಕರೆಯುವುದು/ಮುಂದೂಡುವುದು/ವಿಸರ್ಜಿಸುವುದು.
8. ಹೊಸದಾಗಿ ಕಂಪನಿ/ಕಾರ್ಪೋರೇಷನ್‌ಗಳನ್ನು ಸ್ಥಾಪಿಸುವುದು.
9. ಯೋಜನಾ ಮಂಡಳಿ ರೂಪಿಸಿದ ಯೋಜನೆಗಳನ್ನು ಚರ್ಚಿಸಿ, ಅನುಮತಿ ನೀಡುವುದು.
10. ರಾಜ್ಯಪಾಲರು, Supreme Court & High court judge, UPSC president & members, ಪ್ರಧಾನ & ಇತರೆ ಚುನಾವಣಾಧಿಕಾರಿಗಳು Controleer & Auditor General & ರಾಯಭಾರಿಗಳ ನೇಮಕಕ್ಕೆ ಶಿಫಾರಸ್ಸು ಮಾಡುವುದು.

## ಕ್ಯಾಬಿನೆಟ್ ಸೆಕ್ರೆಟರಿಯಟ್ :

- ಕ್ಯಾಬಿನೆಟ್‌ಗೆ ಸಹಾಯ ಮಾಡಲು, ಕ್ಯಾಬಿನೆಟ್ ಸೆಕ್ರೆಟರಿಯಟ್ ಇದೆ. ಇದರ ಕಛೇರಿ ದೆಹಲಿ, ರಾಷ್ಟ್ರಪತಿ ಭವನದ ದಕ್ಷಿಣದಲ್ಲಿದೆ.

- ಇದರ ಕೇಂದ್ರ ಕಛೇರಿ ದೆಹಲಿಯಲ್ಲಿದೆ.

## ಕರ್ತವ್ಯಗಳು :

- ಕ್ಯಾಬಿನೆಟ್ ಸಭೆಗಳಿಗೆ ಕಾರ್ಯಕ್ರಮ ಪಟ್ಟಿ ಸಿದ್ಧಪಡಿಸುವುದು.
- ಅದನ್ನು ಕ್ಯಾಬಿನೆಟ್ ಮಂತ್ರಿಗಳಿಗೆ ತಲುಪಿಸುವುದು.
- ಕ್ಯಾಬಿನೆಟ್ ಸಭೆಯಲ್ಲಿ ನಡೆಯುವ ಚರ್ಚೆಗಳನ್ನು ರೆಕಾರ್ಡ್ ಮಾಡುವುದು.
- ಕ್ಯಾಬಿನೆಟ್ ಪದ್ಧತಿ ಸರ್ಕಾರದಲ್ಲಿ ಸಚಿವರ ಸಾಮೂಹಿಕ ಜವಾಬ್ದಾರಿ & ವೈಯುಕ್ತಿಕ ಜವಾಬ್ದಾರಿ ಪ್ರಮುಖ ಲಕ್ಷಣಗಳಾಗಿವೆ.
- ಸಂವಿಧಾನದ 75(3)ನೇ ವಿಧಿಯು ಸಾಮೂಹಿಕ ಜವಾಬ್ದಾರಿಯನ್ನು ಸ್ಪಷ್ಟಪಡಿಸಿದೆ.
- ಸಂವಿಧಾನದ 75(2)ನೇ ವಿಧಿಯು ವೈಯುಕ್ತಿಕ ಜವಾಬ್ದಾರಿಯನ್ನು ಸ್ಪಷ್ಟಪಡಿಸಿದೆ.

## ಕ್ಯಾಬಿನೆಟ್ ಕಾರ್ಯಾಲಯ /ಕಾರ್ಯದರ್ಶಿಗಳ ಕರ್ತವ್ಯಗಳು :

- ಕ್ಯಾಬಿನೆಟ್ ಕಾರ್ಯಗಳಲ್ಲಿ ಸಮನ್ವಯ ಉಂಟು ಮಾಡುವುದು.
- ಕ್ಯಾಬಿನೆಟ್ ಪತ್ರಗಳನ್ನು ಸಿದ್ಧಪಡಿಸುವುದು.
- ಕ್ಯಾಬಿನೆಟ್ & ಇತರ ಸಮಿತಿಗಳ ಚರ್ಚೆಗಳನ್ನು & ತೀರ್ಮಾನಗಳನ್ನು ಸಂರಕ್ಷಿಸುವುದು.
- ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ, ವಿಶ್ಲೇಷಿಸುವುದು.
- ಪ್ರಧಾನ ಮಂತ್ರಿಗೆ ವರದಿ ಒಪ್ಪಿಸುವುದು.
- ಶಾಸನ ರಚಿಸುವುದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ, ಸಂಸತ್ತಿನಲ್ಲಿ ರಾಷ್ಟ್ರಪತಿ ಭಾಷಣ ಹಾಗೂ ಸಂಸತ್ತಿನ ಅಧೀವೇಶನವನ್ನು ಕರೆಯುವ & ಮುಂದೂಡುವ ವಿಷಯಗಳ ಬಗ್ಗೆ ಸಲಹೆ.
- ಸಚಿವರ ನೇಮಕಾತಿ & ರಾಜೀನಾಮೆ ಅಂಗೀಕಾರ ಕೆಲಸಗಳನ್ನು ಕೈಗೆತ್ತಿಕೊಳ್ಳುವುದು.

GNANADHARE IAS KAS ACADEMY

## ಮಂತ್ರಿಮಂಡಲ v/s ಸಂಪುಟ ಸಚಿವ (Council of ministers v/s Cabinet) :

| ವ್ಯತ್ಯಾಸಗಳು | | |
|---|---|---|
| ಕ್ರ.ಸಂ | ಮಂತ್ರಿಮಂಡಲ | ಸಂಪುಟ ಸಚಿವ |
| 1 | 60–70 ಮಂತ್ರಿಗಳನ್ನೊಳಗೊಂಡಿದ್ದು ಸಚಿವ ಸಂಪುಟಕ್ಕಿಂತ ದೊಡ್ಡದಾಗಿರುತ್ತದೆ. | 15–20 ಮಂತ್ರಿಗಳನ್ನು ಒಳಗೊಂಡಿದ್ದು, ಮಂತ್ರಿಮಂಡಲಕ್ಕಿಂತ ಚಿಕ್ಕದಾದ & ಮಂತ್ರಿಮಂಡಲದ ಒಂದು ಭಾಗ. |
| 2 | ಮಂತ್ರಿಮಂಡಲ ವರ್ಗೀಕರಣದ 3 ದರ್ಜೆಯ ಸಚಿವರುಗಳನ್ನು ಒಳಗೊಂಡಿರುತ್ತದೆ. (ಕ್ಯಾಬಿನೆಟ್ ರಾಜ್ಯ & ಉಪ ಸಚಿವರು) | ಸಂಪುಟ ದರ್ಜೆ ಸಚಿವರನ್ನು ಮಾತ್ರ ಒಳಗೊಂಡಿರುತ್ತದೆ. |
| 3 | ಮಂತ್ರಿ ಮಂಡಲವು ಸೈದ್ಧಾಂತಿಕವಾಗಿ ಎಲ್ಲಾ ಅಧಿಕಾರಗಳನ್ನು ಹೊಂದಿದೆ. | ವಾಸ್ತವವಾಗಿ ಮಂತ್ರಿಮಂಡಲದ ಎಲ್ಲಾ ಅಧಿಕಾರಗಳನ್ನು ಚಲಾಯಿಸುತ್ತದೆ. |
| 4 | ಮಂತ್ರಿ ಮಂಡಲದ ಕಾರ್ಯಗಳನ್ನು ಸಚಿವ ಅಧಿಕಾರಗಳನ್ನು ಹೊಂದಿದೆ. | ಮಂತ್ರಿ ಮಂಡಲವು ತಾನು ಕೈಗೊಂಡ ನಿರ್ಧಾರಗಳನ್ನು ಕಾರ್ಯಗತಗೊಳಿಸುವಂತೆ ಸೂಚಿಸುತ್ತದೆ. |
| 5 | ಸಚಿವ ಸಂಪುಟ ತೆಗೆದುಕೊಳ್ಳುವ ನಿರ್ಧಾರಗಳನ್ನು ಕಾರ್ಯಗತಗೊಳಿಸುತ್ತದೆ. | ಮಂತ್ರಿ ಮಂಡಲವು ತೆಗೆದುಕೊಂಡ ನಿರ್ಧಾರಗಳನ್ನು ಕಾರ್ಯಗತಗೊಳಿಸುವ ಮೇಲ್ವಿಚಾರಣೆ ಮಾಡುತ್ತದೆ. |
| 6 | ಮಂತ್ರಿ ಮಂಡಲವು ಕೆಳಮನೆಗೆ (ಲೋಕಸಭೆಗೆ) ಸಾಮೂಹಿಕ ಹೊಣೆಯಾಗಿರುತ್ತದೆ. | ಸಚಿವ, ಸಂಪುಟದ, ಮಂತ್ರಿಮಂಡಲದ ಕೆಳಮನೆ, ಸಾಮೂಹಿಕ ಹೊಣೆಗಾರಿಕೆಯನ್ನು ಜಾರಿಗೊಳಿಸುತ್ತದೆ. |
| 7 | ಸಂವಿಧಾನದ 74 & 75ನೇ ವಿಧಿಗಳು ಮಂತ್ರಿ ಮಂಡಲದ ಬಗ್ಗೆ ವಿವರಣೆ ನೀಡುತ್ತದೆ. | 1978ರ 44ನೇ ಸಂವಿಧಾನ ತಿದ್ದುಪಡಿ ಮೂಲಕ ಸಚಿವ ಸಂಪುಟ ಎಂಬ ಪದವನ್ನು 352ನೇ ವಿಧಿಗೆ ಸೇರಿಸಲಾಯಿತು. |

GNANADHARE IAS KAS ACADEMY

## ಸ್ವತಂತ್ರ ಭಾರತದ ಮೊದಲ ಕ್ಯಾಬಿನೆಟ್ :

| | ಖಾತೆಗಳು | ಸಚಿವರ ಹೆಸರು |
|---|---|---|
| 1 | ಪ್ರಧಾನಮಂತ್ರಿ<br>ವಿದೇಶಾಂಗ ವ್ಯವಹಾರ<br>ಕಾಮನ್‌ವೆಲ್ತ್ ಸಂಬಂಧಗಳು | ಜವಹರಲಾಲ್ ನೆಹರೂ |
| 2 | ಗೃಹ ಪ್ರಸಾರ & ರಾಜ್ಯಗಳು | ಸರ್ದಾರ್ ವಲ್ಲಭ ಬಾಯಿ ಪಟೇಲ್ |
| 3 | ಆಹಾರ & ಕೃಷಿ | ರಾಜೇಂದ್ರ ಪ್ರಸಾದ್ |
| 4 | ಶಿಕ್ಷಣ | ಅಬ್ದುಲ್ ಕಲಾಂ ಅಜಾದ್ |
| 5 | ರಕ್ಷಣೆ | ಸರ್ದಾರ್ ಬಲದೇವ್ ಸಿಂಗ್ |
| 6 | ರೈಲು & ಸಾರಿಗೆ | ಜಾನ್ ಮಥಾಯ್ |
| 7 | ವಾಣಿಜ್ಯ | ಸಿ.ಹೆಚ್. ಬಾಭ |
| 8 | ಸಂಪರ್ಕ | ರಫಿ ಅಹಮ್ಮದ್ ಕಿದ್ವಾಯಿ |
| 9 | ಆರೋಗ್ಯ | ರಾಜಕುಮಾರಿ ಅಮೃತ್ ಕೌರ್ |
| 10 | ಕಾರ್ಮಿಕ | ಜಗಜೀವನರಾಮ್ |
| 11 | ಕಾನೂನು | ಡಾ// ಬಿ.ಆರ್. ಅಂಬೇಡ್ಕರ್ |
| 12 | ಹಣಕಾಸು | ಷಣ್ಮುಖಂಚೆಟ್ಟಿ |
| 13 | ಕೈಗಾರಿಕೆ & ಪೂರೈಕೆ | ಶ್ಯಾಮ್‌ಪ್ರಸಾದ್ ಮುಖರ್ಜಿ |
| 14 | ಕಾಮಗಾರಿ, ಗಣಿ & ವಿದ್ಯುಚ್ಛಕ್ತಿ | ಎನ್.ವಿ. ಗಾಡ್ಗಿಲ್ |

GNANADHARE IAS KAS ACADEMY

# ಭಾರತದ ಮಹಾನಿಯಂತ್ರಕ ಹಾಗೂ ಲೆಕ್ಕ ಪರಿಶೋಧಕ :

ಸಂವಿಧಾನದ 148ನೇ ವಿಧಿಯು ಮಹಾನಿಯಂತ್ರಕ ಹಾಗೂ ಲೆಕ್ಕ ಪರಿಶೋಧಕರ ಹುದ್ದೆಗೆ ಅವಕಾಶ ಮಾಡಕೊಡುತ್ತದೆ. ಈ ಹುದ್ದೆ ಕಾರ್ಯಾಂಗದಿಂದ ಸ್ವತಂತ್ರವೂ ಪ್ರತ್ಯೇಕವೂ ಆಗಿರುತ್ತದೆ. ಇವರು ಭಾರತದ ಲೆಕ್ಕಪತ್ರ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಸಾರ್ವಜನಿಕ ಹಣಕಾಸಿನ ರಕ್ಷಕನಾಗಿರುವ ಇವರು ರಾಷ್ಟ್ರದ ಸಮಸ್ತ ಹಣಕಾಸು ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ. ಅಂದರೆ ಕೇಂದ್ರ ಹಾಗೂ ಎಲ್ಲ ರಾಜ್ಯಗಳ ಹಣಕಾಸು ವ್ಯವಸ್ಥೆಯನ್ನು ನಿಯಂತ್ರಿಸುವುದು ಎಂದರ್ಥ

ಭಾರತದ ಸಂವಿಧಾನವನ್ನು ಎತ್ತಿಹಿಡಿಯುವುದು & ಹಣಕಾಸು ಆಡಳಿತದಲ್ಲಿ ಸಂಸತ್ತಿನ ಕಾನೂನುಗಳನ್ನು ಎತ್ತಿಹಿಡಿಯುವುದು ಇವರ ಕರ್ತವ್ಯವಾಗಿದೆ.

## ನೇಮಕಾತಿ :

ಸಂವಿಧಾನದ 148ನೇ ವಿಧಿಯನ್ವಯ ಭಾರತದ ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಸಲಹೆಯ ಮೇರೆಗೆ ಭಾರತದ ಮಹಾನಿಯಂತ್ರಕ ಹಾಗೂ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುತ್ತಾರೆ.

## ಪ್ರಮಾಣ ವಚನ :

ಭಾರತದ ಮಹಾನಿಯಂತ್ರಕ ಹಾಗೂ ಲೆಕ್ಕ ಪರಿಶೋಧಕನಾಗಿ ನಿಯೋಜಿತಗೊಂಡ ವ್ಯಕ್ತಿಯು ಅಧಿಕಾರ ಸ್ವೀಕರಿಸುವ ಮುನ್ನ ರಾಷ್ಟ್ರಾಧ್ಯಕ್ಷರ ಎದುರಿನಲ್ಲಿ ಅಥವಾ ಅವರಿಂದ ನೇಮಕಗೊಂಡ ವ್ಯಕ್ತಿಯ ಸಮ್ಮುಖದಲ್ಲಿ 3ನೇ ಅನುಸೂಚಿಯ ನಮೂನೆಯಲ್ಲಿ ನೀಡಿರುವಂತೆ ಪ್ರಮಾಣವಚನವನ್ನು ಸ್ವೀಕರಿಸಿ ಅದಕ್ಕೆ ತಮ್ಮ ಸಹಿ ಹಾಕಬೇಕು.

## ಅಧಿಕಾರವಧಿ :

ಇವರು 6 ವರ್ಷಗಳ ಕಾಲ ಅಥವಾ 65 ವರ್ಷ ವಯಸ್ಸಾಗುವವರೆಗೆ ಯಾವುದು ಮೊದಲಾಗುತ್ತದೆಯೋ ಅಲ್ಲಿಯವರೆಗೆ ಅಧಿಕಾರದಲ್ಲಿ ಮುಂದುವರೆಯಬಹುದು.

GNANADHARE IAS KAS ACADEMY

## ಪದಚ್ಯುತಿ :

ರಾಷ್ಟ್ರಾಧ್ಯಕ್ಷರು ಸುಪ್ರೀಕೋರ್ಟ್ ನ್ಯಾಯಾಧೀಶರನ್ನು ಯಾವ ಆಧಾರದ ಮೇಲೆ & ಯಾವ ವಿಧಾನದ ಮೂಲಕ ಅಧಿಕಾರದಿಂದ ಪದಚ್ಯುತಿಗೊಳಿಸುತ್ತಾರೆಯೋ ಅದೇ ಆಧಾರದ ಮೇಲೆ & ಅದೇ ವಿಧಾನದ ಮೂಲಕ ಇವರನ್ನು ಪದಚ್ಯುತಿಗೊಳಿಸುತ್ತಾರೆ.

# ಮಹಾನಿಯಂತ್ರಕ ಹಾಗೂ ಲೆಕ್ಕ ಪರಿಶೋಧಕರ ಅಧಿಕಾರ & ಕಾರ್ಯಗಳು :

ಸಂವಿಧಾನದ 149ನೇ ವಿಧಿಯ ಪ್ರಕಾರ ರಾಜ್ಯ ಹಾಗೂ ಇತರೆ ಯಾವುದೇ ಪ್ರಾಧಿಕಾರ ಅಥವಾ ಸಂಸ್ಥೆಯ ಲೆಕ್ಕಗಳಿಗೆ ಸಂಬಂಧಿಸಿದಂತೆ ಸಿ.ಎ.ಜಿಯವರ ಕರ್ತವ್ಯ & ಅಧಿಕಾರಗಳನ್ನು ಗೊತ್ತುಪಡಿಸಿದ ಅಧಿಕಾರ ಸಂಸತ್ತಿಗೆ ಇದೆ. ಅದರಂತೆ ಸಂಸತ್ತು ಸಿ.ಎ.ಜಿ (ಕರ್ತವ್ಯಗಳು, ಅಧಿಕಾರಗಳು & ಸೇವಾ ನಿಯಮಗಳು) ಕಾಯ್ದೆ 1971ನ್ನು ರೂಪಿಸಿತು. ಲೆಕ್ಕಪತ್ರ ಇಡುವ ಕಾರ್ಯವನ್ನು ಲೆಕ್ಕಪರಿಶೋಧನೆಯ ಕಾರ್ಯದಿಂದ ಬೇರ್ಪಡಿಸಲು 1976ರಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಯಿತು.

1. ಮಹಾನಿಯಂತ್ರಕ ಹಾಗೂ ಲೆಕ್ಕ ಪರಿಶೋಧಕರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಡಿದ ಎಲ್ಲ ವೆಚ್ಚಗಳಿಗೆ ಸಂಬಂಧಿದ ಲೆಕ್ಕಗಳನ್ನು ಪರಿಶೀಲಿಸುತ್ತಾರೆ (149 ವಿಧಿ).
2. ಕೇಂದ್ರ ಹಾಗೂ ರಾಜ್ಯ ಆದಾಯದಿಂದ ಧನ ಸಹಾಯ ಪಡೆದ ಸಂಸ್ಥೆಗಳು & ಪ್ರಾಧಿಕಾರಗಳ ಲೆಕ್ಕಗಳನ್ನು ಪರಿಶೀಲಿಸುತ್ತಾರೆ (ಉದಾ : ನಿಗಮಗಳು, ಕಂಪನಿಗಳು)
3. ರಾಷ್ಟ್ರಾಧ್ಯಕ್ಷರ ಅಥವಾ ರಾಜ್ಯಪಾಲರ ವಿನಂತಿಯ ಆಧಾರದ ಮೇಲೆ ಇತರ ಯಾವುದೇ ಪ್ರಾಧಿಕಾರದ ಲೆಕ್ಕವನ್ನು ಪರಿಶೋಧನೆ ಮಾಡುತ್ತಾರೆ. (ಉದಾ : ಸ್ಥಳೀಯ ಸಂಸ್ಥೆಗಳ ಲೆಕ್ಕ ಪರಿಶೋಧನೆ)
4. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಯಾವ ನಮೂನೆಯಲ್ಲಿ ತಮ್ಮ ಲೆಕ್ಕಪತ್ರಗಳನ್ನು ಇಡಬೇಕು ಎಂಬುದರ ಬಗ್ಗೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡಬೇಕು. (150 ವಿಧಿ)
5. ಮಹಾನಿಯಂತ್ರಕ ಹಾಗೂ ಲೆಕ್ಕ ಪರಿಶೋಧಕರು ತಾವು ನಿಗಧಿ ಪಡಿಸಿದ ನಮೂನೆಯಲ್ಲಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಲೆಕ್ಕಪತ್ರ ಇಡುವಂತೆ ಕೇಳಬಹುದು.

6. ಕೇಂದ್ರದ ಲೆಕ್ಕಪತ್ರಗಳಿಗೆ ಸಂಬಂಧಿಸಿದ ತನ್ನ ಪರಿಶೀಲನಾ ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸುತ್ತಾರೆ. ರಾಷ್ಟ್ರಾಧ್ಯಕ್ಷರು ಈ ವರದಿಯನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡುತ್ತಾರೆ. ಸಿ.ಎ.ಜಿಯ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಪರಿಶೀಲಿಸುತ್ತದೆ.
7. ರಾಜ್ಯಗಳ ಲೆಕ್ಕ ಪತ್ರಗಳಿಗೆ ಸಂಬಂಧಿಸಿದ ತಮ್ಮ ಪರಿಶೀಲನಾ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸುತ್ತದೆ. ರಾಜ್ಯಪಾಲರು ಅದನ್ನು ರಾಜ್ಯ ಶಾಸಕಾಂಗದ ಮುಂದೆ ಇಡುತ್ತಾರೆ.
8. ಇವರು ಸಂಸತ್ತಿನ ಲೆಕ್ಕಪತ್ರ ಸಮಿತಿಯ ಮಾರ್ಗದರ್ಶಕ, ಸ್ನೇಹಿತ & ತತ್ವಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

1976ರವರೆಗೆ ಭಾರತದಲ್ಲಿ ಲೆಕ್ಕಪತ್ರ ಇಡುವ & ಲೆಕ್ಕಪರಿಶೋಧನೆಯ ಕಾರ್ಯಗಳೆರಡೂ ಸಿಎಜಿ ಕೈಯಲ್ಲಿ ಕೇಂದ್ರಿಕೃತವಾಗಿದ್ದವು

**List of Comptroller and Auditors General of India**

| No. | Comptroller and Auditor General of India | Period |
|---|---|---|
| 1 | V. Narahari Rao | 1949 - 1954 |
| 2 | A. K. Chanda | 1954 - 1960 |
| 3 | A. K. Roy | 1960 - 1966 |
| 4 | S. Ranganathan | 1966 - 1972 |
| 5 | A. Bakshi | 1972 - 1978 |
| 6 | Gian Prakash | 1978 - 1984 |
| 7 | T. N. Chaturvedi | 1984 -1990 |
| 8 | C. G. Somiah | 1990 - 1996 |
| 9 | V. K. Shunglu | 1996 -2002 |
| 10 | VN Kaul | 2002 - 2008 |
| 11 | Vinod Rai | 2008 - 2013 |
| 12 | Shashi Kant Sharma | 2013 - 2017 |
| 13 | Rajiv Mehrishi | 2017 - Present |

# ಭಾರತದ ಅಟಾರ್ನಿ ಜನರಲ್ & ಸಾಲಿಸಿಟರ್ ಜನರಲ್:

## ನೇಮಕಾತಿ , ಅಧಿಕಾರವಧಿ, ಅರ್ಹತೆಗಳು :

ರಾಷ್ಟ್ರಾಧ್ಯಕ್ಷರು ಮಂತ್ರಿ ಮಂಡಲದ ಸಲಹೆಯ ಮೇರೆಗೆ ಅಟಾರ್ನಿ ಜನರಲ್‌ರವರನ್ನು ನೇಮಿಸುತ್ತಾರೆ. ಸುಪ್ರೀಕೋರ್ಟ್ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಹೊಂದಿರಬೇಕಾದ ಎಲ್ಲ ಅರ್ಹತೆಗಳನ್ನು ಅಟಾರ್ನಿ ಜನರಲ್ ಆಗಬಯಸುವ ವ್ಯಕ್ತಿ ಹೊಂದಿರಬೇಕು.

1. ಭಾರತದ ಪ್ರಜೆಯಾಗಿರಬೇಕು
2. ಯಾವುದೇ ಹೈಕೋರ್ಟ್‌ನಲ್ಲಿ 5 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು .
3. ರಾಷ್ಟ್ರಾಧ್ಯಕ್ಷರ ಅಭಿಪ್ರಾಯದಲ್ಲಿ ನ್ಯಾಯ ಪರಿಣಿತರಾಗಿರಬೇಕು.
4. ಅಟಾರ್ನಿ ಜನರಲ್‌ರವರು ಅಧಿಕಾರವಧಿಯನ್ನು ಸಂವಿಧಾನವು ನಿಗಧಿಪಡಿಸಿಲ್ಲ.
5. ಸಂವಿಧಾನವು ಅಟಾರ್ನಿ ಜನರಲ್‌ರನ್ನು ಅಧಿಕಾರದಿಂದ ವಜಾ ಮಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ನಿಯಮ & ಆಧಾರಗಳನ್ನು ಗೊತ್ತುಪಡಿಸಿಲ್ಲ.
6. ಅಟಾರ್ನಿ ಜನರಲ್‌ರವರು ರಾಷ್ಟ್ರಾಧ್ಯಕ್ಷರ ಇಚ್ಛೆಯ ಪರ್ಯಂತ ಅಧಿಕಾರದಲ್ಲಿರುತ್ತಾರೆ.
7. ರಾಷ್ಟ್ರಾಧ್ಯಕ್ಷರಿಗೆ ರಾಜಿನಾಮೆ ಸಲ್ಲಿಸುವ ಮೂಲಕ ಇವರು ಪದತ್ಯಾಗ ಮಾಡಬಹುದು.
8. ಸಾಮಾನ್ಯವಾಗಿ ಸರ್ಕಾರ ಅಧಿಕಾರ ಕಳೆದುಕೊಂಡಾಗ ಇವರೂ ಕೂಡ ರಾಜೀನಾಮೆ ನೀಡುತ್ತಾರೆ
9. ಅಟಾರ್ನಿ ಜನರಲ್‌ರವರ ವೇತನವನ್ನು ಸಂವಿಧಾನ ನಿರ್ದಿಷ್ಟಪಡಿಸಿಲ್ಲ.
10. ರಾಷ್ಟ್ರಾಧ್ಯಕ್ಷರು ನಿಗದಿಪಡಿಸಿದ ವೇತನವನ್ನು ಪಡೆಯುತ್ತಾರೆ.

## ಕಾರ್ಯಗಳು :

1. ಕಾನೂನು ವಿಷಯಕ್ಕೆ ಸಂಬಂಧಿಸಿದ ಭಾರತ ಸರ್ಕಾರಕ್ಕೆ ಸಲಹೆ ನೀಡುವುದು.
2. ರಾಷ್ಟ್ರಾಧ್ಯಕ್ಷರಿಂದ ವಹಿಸಲ್ಪಟ್ಟ ಕಾನೂನು ಸ್ವರೂಪದ ಇತರ ಕಾರ್ಯಗಳನ್ನು ನಿರ್ವಹಿಸುವುದು.
3. ಸಂವಿಧಾನ ಅಥವಾ ಇತರೆ ಯಾವುದೇ ಕಾನೂನಿಂದ ವಹಿಸಲ್ಪಟ್ಟ ಕಾರ್ಯಗಳನ್ನು ನಿರ್ವಹಿಸುವುದು.
4. ಭಾರತ ಸರ್ಕಾರದ ಪರವಾಗಿ ಸುಪ್ರೀಂಕೊರ್ಟ್ ವಾದಿಸುವುದು.
5. ಭಾರತ ಸರ್ಕಾರಸ ವಿನಂತಿಯ ಮೇರೆಗೆ ಯಾವುದೇ ಹೈಕೋರ್ಟ್‌ನಲ್ಲಿ ಭಾರತ ಸರ್ಕಾರದ ಪರವಾಗಿ ಹಾಜರಾಗುವುದು.



GNANADHARE IAS KAS ACADEMY

## ನಿರ್ಬಂಧಗಳು :

1. ಭಾರತ ಸರ್ಕಾರದ ವಿರುದ್ಧ ಹೂಡಲಾಗಿರುವ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಸಲಹೆ ನೀಡಬಾರದು.
2. ಭಾರತ ಸರ್ಕಾರದ ವಿರುದ್ಧ ಹೂಡಲಾಗಿರುವ ಮೊಕದ್ದಮೆಗಳ ಪರ ವಕಾಲತ್ತು ವಹಿಸುವಂತಿಲ್ಲ.
3. ಭಾರತ ಸರ್ಕಾರದ ಪೂರ್ವಾನುಮತಿಯಿಲ್ಲದೇ ಇವರು ಯಾವುದೇ ಅಪರಾಧಿಯ ಪರವಾಗಿ ವಕಾಲತ್ತು ವಹಿಸುವಂತಿಲ್ಲ.
4. ಭಾರತ ಸರ್ಕಾರದ ಪೂರ್ವಾನುಮತಿಯಿಲ್ಲದೇ ಯಾವುದೇ ಕಂಪನಿ ಅಥವಾ ಕಾರ್ಪೋರೇಷನ್‌ನ ನಿರ್ದೇಶಕನ ಹುದ್ದೆಯನ್ನು ಒಪ್ಪಿಕೊಳ್ಳುವಂತಿಲ್ಲ.

| Attorney General of India (Name) | Tenure |
|---|---|
| **1.** M.C. Setalvad (longest term) | 28 January 1950 - 1 March 1963 |
| **2.** C.K. Daftari | 2 March 1963 - 30 October 1968 |
| **3.** Niren de | 1 November 1968 - 31 March 1977 |
| **4.** S.V. Gupte | 1 April , 1977 - 8 August 1979 |
| **5.** L.N. Sinha | 9 August, 1979 - 8 August, 1983 |
| **6.** K. Parasaran | 9 August 1983 - 8 December 1989 |
| **7.** Soli Sorabjee (shortest tenure) | 9 December 1989 - 2 December 1990 |
| **8.** J. Ramaswamy | 3 December , 1990 - November 23, 1992 |
| **9.** Milon K. Banerji | 21 November 1992 - 8 July 1996 |
| **10.** Ashok Desai | 9 July 1996 - 6 April 1998 |
| **11.** Soli Sorabjee | 7 April 1998 - 4 June 2004 |
| **12.** Milon K. Banerjee | 5 June 2004 - 7 June 2009 |
| **13.** Goolam Essaji Vahanvati | 8 June 2009 - 11 June 2014 |
| **14.** Mukul Rohatgi | 12 June, 2014 - 30 June 2017 |
| **15.** K.K. Venugopal | 30 June 2017 till date |

## ಸಾಲಿಸಿಟರ್ ಜನರಲ್ :

ತನ್ನ ಜವಾಬ್ದಾರಿಗಳನ್ನು ನಿಭಾಯಿಸಲು ಅಟಾರ್ನಿ ಜನರಲ್‌ಗೆ ನೆರವು ನೀಡಲು ಸಾಲಿಸಿಟರ್ ಜನರಲ್ & ಅಡಿಷನಲ್ ಸಾಲಿಸಿಟರ್ ಜನರಲ್ ಎಂಬ ಇತರೆ ಕಾನೂನು ಅಧಿಕಾರಿಗಳಿರುತ್ತಾರೆ. ಈ ಹುದ್ದೆಗಳೂ ಸಂವಿಧಾನ್ಮಕ ಹುದ್ದೆಗಳಾಗಿರುವುದಿಲ್ಲ. ಸಂವಿಧಾನದ 76ನೇ ವಿಧಿಯು ಸಾಲಿಸಿಟರ್ ಜನರಲ್ & ಅಡಿಷನಲ್ ಸಾಲಿಸಿಟರ್ ಜನರಲ್ ಹುದ್ದೆಗಳನ್ನು ಹೆಸರಿಸಿಲ್ಲ. ಈ ವಿಧಿಯು ಅಟಾರ್ನಿ ಹುದ್ದೆಗೆ ಸಂಬಂಧಿಸಿದ ವಿವರಣೆಗಳನ್ನು ಮಾತ್ರ ಒಳಗೊಂಡಿದೆ.

### Former Solicitors General [ edit ]

The former Solicitors General for India were as follows:[6]

| Solicitor General | Term | Prime Ministers[7] |
|---|---|---|
| C.K.Daphtary | 28 January 1950 – 1 March 1963 | Jawaharlal Nehru |
| H.N. Sanyal | 2 March 1963 – 9 September 1964 | Jawaharlal Nehru, Lal Bahadur Shastri |
| S.V. Gupta | 10 September 1964 – 16 September 1967 | Lal Bahadur Shastri, Indira Gandhi |
| Niren De | 30 September 1967 – 30 October 1968 | Indira Gandhi |
| Jagadish Swarup | 5 June 1969 – 4 June 1972 | Indira Gandhi |
| L.N. Sinha | 17 July 1972 – 5 April 1977 | Indira Gandhi |
| S.N. Kacker | 5 April 1977 – 2 August 1979 | Morarji Desai |
| Soli Sorabjee | 9 August 1979 – 25 January 1980 | Charan Singh |
| K. Parasaran | 6 March 1980 – 8 August 1983 | Indira Gandhi |
| Milon K. Banerji | 4 April 1986 – 3 April 1989 | Rajiv Gandhi |
| Ashok Desai | 18 December 1989 – 2 December 1990 | VP Singh |
| A.D. Giri | 4 December 1990 – 1 December 1991 | Chandra Shekhar |
| Dipankar P. Gupta | 9 April 1992 – 10 April 1997 | PV Narasimha Rao, HD Deve Gowda |
| T R Andhyarujina | 11 April 1997 – 4 April 1998 | Inder Kumar Gujral |
| Nitte Santhosh Hegde | 10 April 1998 – 7 January 1999 | Atal Bihari Vajpayee |
| Harish Salve | 1 November 1999 – 3 November 2002 | Atal Bihari Vajpayee |
| Kirit Raval | 4 November 2002 – 19 April 2004 | Atal Bihari Vajpayee |
| G. E. Vahanvati | 20 April 2004 – 7 June 2009 | Manmohan Singh |
| Gopal Subramaniam | 15 June 2009 – 14 July 2011 | Manmohan Singh |
| Rohinton Nariman | 23 July 2011 – 4 February 2013 | Manmohan Singh |
| Mohan Parasaran | 2013–2014 | Manmohan Singh |
| Ranjit Kumar | June 2014 - 20 October 2017 | Narendra Modi |
| Tushar Mehta | 10 October 2018 - incumbent | Narendra Modi |

# ಸುಪ್ರಿಂಕೋರ್ಟ್ :



ರಚನೆ : ಜನವರಿ 28, 1950ರಂದು ಸರ್ವೋಚ್ಛ ನ್ಯಾಯಲಯ ಉದ್ಘಾಟನೆಗೊಂಡಿತ್ತು. ಇದರ ಪ್ರಾರಂಭೋತ್ಸವ ಸಂಸತ್ ಭವನದ ಚೇಂಬರ್ ಆರ್ಫ ಪ್ರಿನ್ಸೆಸ್‌ನಲ್ಲಿ ನಡೆದು, ಅಲ್ಲಿಂದಲೇ ತನ್ನ ಕೆಲಸವನ್ನು ಪ್ರಾರಂಭಿಸಿತು. 1958ಕ್ಕೆ ಈಗಿನ ಕಟ್ಟಡಕ್ಕೆ ವರ್ಗಾವಣೆಯಾಯಿತು. (ಸರ್ವೋಚ್ಛ ನ್ಯಾಯಾಲಯ ದೆಹಲಿಯಲ್ಲಿದೆ).

ಪ್ರಾರಂಭದಲ್ಲಿ ಮುಖ್ಯ ನ್ಯಾಯಾಧೀಶರು & 7 ಇತರ ನ್ಯಾಯಾಧೀಶರಿದ್ದರು. ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವ ಅಧಿಕಾರ ಸಂಸತ್ತಿಗೆ ಇದೆ. 1956–11, 1960–14, 1978–18 & 1986–26 ನ್ಯಾಯಾಧೀಶರಿದ್ದರು. 2008ರಲ್ಲಿ ಇವರ ಸಂಖ್ಯೆಯನ್ನು 30ಕ್ಕೆ ಹೆಚ್ಚಿಸಿದ್ದರಿಂದ ಮುಖ್ಯ ನ್ಯಾಯಾಧೀಶರು ಸೇರಿದಂತೆ ಇಂದು 31 ನ್ಯಾಯಾಧೀಶರಿದ್ದಾರೆ. ಕಾನೂನು ಆಯೋಗ 1988ರಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸಲು ಶಿಫಾರಸು ಮಾಡಿ, ಕನಿಷ್ಟ ಪಕ್ಷ ಒಂದು ಮಿಲಿಯನ್ ಜನಸಂಖ್ಯೆಗೆ 50 ಮಂದಿ ನ್ಯಾಯಾಧೀಶರು ಇರಬೇಕೆಂದಿತು. 130ನೇ ವಿಧಿ ಪ್ರಕಾರ ರಾಷ್ಟ್ರಪತಿಯ ಅನುಮತಿ ಪಡೆದು ಸುಪ್ರಿಂಕೋರ್ಟ್ ದೆಹಲಿ ಅಥವಾ ಇತರ ಸ್ಥಳಗಳಲ್ಲಿ ಕಾರ್ಯನಿರ್ವಹಿಸುವ ಕ್ರಮ ತೆಗೆದುಕೊಳ್ಳಬಹುದು. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ & ಮಧ್ಯ ಭಾರತದಲ್ಲಿ ಸುಪ್ರೀಂಕೋರ್ಟ್‌ನ ಪೀಠಗಳನ್ನು ಸ್ಥಾಪಿಸಲು ಕಾನೂನು ಆಯೋಗ ಶಿಫಾರಸು ಮಾಡಿತು.

## ಸಂವಿಧಾನದ 5ನೇ ಭಾಗದಲ್ಲಿ ನಮೂದಿಸಲ್ಪಟ್ಟಿರುವ 124–147ವರೆಗಿನ ವಿಧಿಗಳು ಸರ್ವೋಚ್ಛ ನ್ಯಾಯಾಲಯದ ಬಗ್ಗೆ ವಿವರಣೆ ನೀಡುತ್ತದೆ..

| ಅನುಚ್ಛೇಧಗಳು | ವಿವರಣೆ |
|---|---|
| 124ನೇ ಅನುಚ್ಛೇಧ | **ಸ್ಥಾಪನೆ & ರಚನೆ :**<br>124(1)ನೇ ವಿಧಿಯನ್ವಯ ಭಾರತಕ್ಕೆ ಒಂದು ಸರ್ವೋಚ್ಛ ನ್ಯಾಯಾಲಯವಿರತಕ್ಕದ್ದು & ಒಬ್ಬ ಮುಖ್ಯ ನ್ಯಾಯಾಧೀಶರು ಕಾಲಕಾಲಕ್ಕೆ ನಿರ್ಧರಿಸತಕ್ಕ ಇತರ ನ್ಯಾಯಾಧೀಶರನ್ನು ಹೊಂದಿರುವರು.<br>124(2) ವಿಧಿಯನ್ವಯ ರಾಷ್ಟ್ರಪತಿಯು ಕೇಂದ್ರ ಮಂತ್ರಿ ಮಂಡಲದ ಸಲಹೆಯ ಮೇರೆಗೆ ತಾವು ಬಯಸಿದಷ್ಟು ಮಂದಿ ಸುಪ್ರಿಂಕೋರ್ಟ್ & ಹೈಕೋರ್ಟ್‌ಗಳ |

| | |
|---|---|
| | ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿ ಮುಖ್ಯ ನ್ಯಾಯಧೀಶರು & ಇತರೆ ನ್ಯಾಯಾಧೀಶರನ್ನು ನೇಮಿಸಲಾಗುತ್ತದೆ.<br>65 ವರ್ಷಗಳವರೆಗೆ ಅಧಿಕಾರದಲ್ಲಿ ಮುಂದುವರೆಯಬಹುದು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ತಮ್ಮ ಅಧಿಕಾರದಲ್ಲಿ ಮುಂದುವರೆಯಲು ಇಷ್ಟವಿಲ್ಲದಿದ್ದರೆ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿಯವರಿಗೆ ನೀಡುವುದರ ಮೂಲಕ ತಮ್ಮ ಸ್ಥಾನದಿಂದ ನಿರ್ಗಮಿಸಬಹುದು.<br>124(3) ವಿಧಿಯನ್ವಯ<br>ಭಾರತದ ಪ್ರಜೆಯಾಗಿರಬೇಕು<br>ಯಾವುದಾದರೂ ಹೈಕೋರ್ಟಿನಲ್ಲಿ 5 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು ಅಥವಾ ಯಾವುದಾದರೂ ಹೈಕೋರ್ಟಿನಲ್ಲಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು.<br>ರಾಷ್ಟ್ರಪತಿಯ ಅಭಿಪ್ರಾಯದಲ್ಲಿ ಹೆಸರಾಂತ ನ್ಯಾಯಾವಾದಿಯಾಗಿರಬೇಕು.<br>124(4)ನೇ ವಿಧಿಯನ್ವಯ ಸುಪ್ರಿಂಕೋರ್ಟ್‌ನ ನ್ಯಾಯಾಧೀಶರನ್ನು ಅಸಮರ್ಪಕತೆ ರುಜುವಾತದರೆ, ಸಂಸತ್ತಿನ ಸದನಗಳ 2/3ರಷ್ಟು ಸದಸ್ಯರು ನಿರ್ಣಯಗಳನ್ನು ಅಂಗೀಕರಿಸಿ ಪದಚ್ಯುತಿಗೊಳಿಸಬಹುದು.<br>125ನೇ ವಿಧಿಯನ್ವಯ ಸಂಸತ್ತು ಕಾನೂನು ಮೂಲಕ ಕಾಲಕಾಲಕ್ಕೆ ನಿಗದಿಪಡಿಸಿದ ವೇತನ & ಇತರ ಸೌಲಭ್ಯಗಳನ್ನು ಪಡೆಯುತ್ತಾರೆ.<br>126ನೇ ವಿಧಿ : ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡ ವ್ಯಕ್ತಿ ತನ್ನ ಸ್ಥಾನವನ್ನು ವಹಿಸಿಕೊಳ್ಳುವ ಮುಂಚೆ ರಾಷ್ಟ್ರಪತಿಯ ಸಮ್ಮುಖದಲ್ಲಿ ಸಂವಿಧಾನದ 3ನೇ ನಮೂನೆಯಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿ ಸಹಿ ಹಾಕಬೇಕು.<br>127ನೇ ವಿಧಿ : ನಿವೃತ್ತಿಯ ನಂತರ ಯಾವುದೇ ಭಾರತದ ನ್ಯಾಯಲಯದಲ್ಲಿ ಕಾರ್ಯ ನಿರ್ವಹಿಸುವಂತಿಲ್ಲ. |
| 125ನೇ ಅನುಚ್ಛೇಧ | ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಕಾನೂನಿನ ಮೂಲಕ ಸಂಸತ್ತು ನಿರ್ಧರಿಸಿದ ವೇತನ & ಭತ್ಯೆಗಳನ್ನು ಸಂವಿಧಾನದ 2ನೇ ಅನುಸೂಚಿಯಲ್ಲಿ ನಿಗದಿಪಡಿಸಿದಂತೆ ಪಡೆಯುವರು.<br>ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಮಾಸಿಕ ವೇತನ 1,00,000/–, ಇತರ ನ್ಯಾಯಾಧೀಶರ 90,000/– ಮಾಸಿಕ ವೇತನವನ್ನು ಪಡೆಯುವರು. |
| 126ನೇ ಅನುಚ್ಛೇಧ | ಭಾರತದ ಮುಖ್ಯ ನ್ಯಾಯಾಧೀಶರು ತಮ್ಮ ಕರ್ತವ್ಯ ನಿರ್ವಹಿಸಲು ಅಸಮರ್ಥರಾದರೆ, ಅವರ ಸ್ಥಾನ ಖಾಲಿಯಾದರೆ, ಗೈರು ಹಾಜರಾದರೆ ಇತರ ನ್ಯಾಯಾಧೀಶರ ಪೈಕಿ ಒಬ್ಬರನ್ನು ರಾಷ್ಟ್ರಪತಿಯ ಹಂಗಾಮಿ ನ್ಯಾಯಾಧೀಶರನ್ನಾಗಿ ನೇಮಕ ಮಾಡುತ್ತಾರೆ. |



GNANADHARE IAS ACADEMY

| | |
|---|---|
| 127ನೇ ಅನುಚ್ಛೇಧ | ಸರ್ವೋಚ್ಚ ನ್ಯಾಯಾಲಯದ ಕಾರ್ಯ ಕಲಾಪ ನಡೆಸಲು ಅವಶ್ಯವಿರುವ ನ್ಯಾಯಾಧೀಶರ ಕೋರಂ ಇಲ್ಲದಿದ್ದಾಗ ರಾಷ್ಟ್ರಪತಿಯವರ ಪೂರ್ವಾನುಮತಿ ಪಡೆದು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳುವ ವ್ಯಕ್ತಿಯನ್ನು ಅವಶ್ಯವಿರುವ ಅವಧಿಯವರೆಗೆ 'ಅಡ್‌ಹಾಕ್ ನ್ಯಾಯಾಧೀಶ'ನನ್ನಾಗಿ ನೇಮಕ ಮಾಡಿಕೊಳ್ಳಬಹುದು. |
| 128ನೇ ಅನುಚ್ಛೇಧ | ಭಾರತದ ಮುಖ್ಯ ನ್ಯಾಯಾಧೀಶರು ರಾಷ್ಟ್ರಪತಿಯವರ ಪೂರ್ವಾನುಮತಿ ಪಡೆಯ ನಿವೃತ್ತಿ ಹೊಂದಿದ ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಕಾರ್ಯ ನಿರ್ವಹಿಸಲು ಕೋರಬಹುದು. ಹೀಗೆ ನೇಮಕಗೊಂಡ ನ್ಯಾಯಾಧೀಶನು ರಾಷ್ಟ್ರಪತಿ ಆದೇಶಿಸುವ ವೇತನ ಭತ್ಯೆಯನ್ನು ಪಡೆಯುವನು. |
| 129ನೇ ಅನುಚ್ಛೇಧ | ಸರ್ವೋಚ್ಚ ನ್ಯಾಯಾಲಯವು ಅಭಿಲೇಖ ನ್ಯಾಯಾಲಯವಾಗಿದೆ.<br>ಸರ್ವೋಚ್ಚ ನ್ಯಾಯಾಲಯವು ತಾನು ನೀಡಿದ ಆದೇಶದ ನಿಂದನೆಗೆ ದಂಡಿಸುವ ಅಧಿಕಾರ ಹೊಂದಿದೆ. |
| 130ನೇ ಅನುಚ್ಛೇಧ | **ಸರ್ವೋಚ್ಚ ನ್ಯಾಯಾಲಯದ ಕಾರ್ಯಸ್ಥಾನ :**<br>ಸರ್ವೋಚ್ಚ ನ್ಯಾಯಾಲಯವು ದೆಹಲಿಯಲ್ಲಿ ಅಥವಾ ಮುಖ್ಯ ನ್ಯಾಯಾಧೀಶನು ರಾಷ್ಟ್ರಪತಿಯ ಅನುಮೋದನೆ ಪಡೆದು ನಿಗದಿಪಡಿಸಿದ ಸ್ಥಳದಲ್ಲಿ ಸರ್ವೋಚ್ಚ ನ್ಯಾಯಾಲಯ ಕಾರ್ಯ ನಿರ್ವಹಿಸಬಹುದು. |
| 131ನೇ ಅನುಚ್ಛೇಧ | **ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿ :**<br>ಸುಪ್ರಿಂಕೋರ್ಟ್ ಮೂಲ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ಕೇಂದ್ರ ಸರ್ಕಾರ & ರಾಜ್ಯ ಸರ್ಕಾರ, ರಾಜ್ಯ-ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸುವ ಅಧಿಕಾರ ಇದೆ |
| 132ನೇ ಅನುಚ್ಛೇಧ | ದೇಶದ ಯಾವುದೇ ಹೈಕೋರ್ಟ್ ಸಿವಿಲ್, ಕ್ರಿಮಿನಲ್ ವಿಷಯದ ಬಗ್ಗೆ ನೀಡಿದ ತೀರ್ಪು ಸಂವಿಧಾನದ ಅರ್ಥ ವಿವರಣೆಯನ್ನು ಪ್ರಶ್ನಿಸುವಂತಿದ್ದರೆ, ಉಚ್ಚ ನ್ಯಾಯಾಲಯದ ಅಂತಿಮ ಆದೇಶದ ವಿರುದ್ದ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಬಹುದು. |
| 133ನೇ ಅನುಚ್ಛೇಧ | ಸಿವಿಲ್ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಅಂತಿಮ ಆದೇಶದ ವಿರುದ್ದ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಬಹುದು. |
| 134ನೇ ಅನುಚ್ಛೇಧ | ಕ್ರಿಮಿನಲ್ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಅಂತಿಮ ಆದೇಶದ ವಿರುದ್ದ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಬಹುದು |
| 334 (ಎ) ಅನುಚ್ಛೇಧ | ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು :<br>ಉಚ್ಚ ನ್ಯಾಯಾಲಯದ ಅಂತಿಮ ಆದೇಶದಲ್ಲಿ ಬಾದಿತ ಪಕ್ಷಕಾರನು ಉಚ್ಚ ನ್ಯಾಯಾಲಯಕ್ಕೆ ಮೌಖಿಕ ಅರ್ಜಿಯನ್ನು ಮಾಡಿಕೊಂಡರೆ ಅಥವಾ ಉಚ್ಚ |

| | |
|---|---|
| | ನ್ಯಾಯಾಲಯವು ತನ್ನ ಸ್ವಂತ ಇಚ್ಛೆಯ ಮೇರೆಗೆ ಪ್ರಕರಣ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಯೋಗ್ಯವೆಂದು ನಿರ್ಣಯಿಸಿ ಸರ್ವೋಚ್ಚ ನ್ಯಾಯಲಯಕ್ಕೆ ಅಪೀಲು ಸಲ್ಲಿಸಲು ಪ್ರಮಾಣ ಪತ್ರವನ್ನು ನೀಡಬಹುದು. |
| 135ನೇ ಅನುಚ್ಛೇಧ | ಒಕ್ಕೂಟ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು & ಅಧಿಕಾರವನ್ನು ಭಾರತದ ಸರ್ವೋಚ್ಚ ನ್ಯಾಯಾಲಯ ಚಲಾಯಿಸಬಹುದು |
| 136ನೇ ಅನುಚ್ಛೇಧ | ಭಾರತದ ಯಾವುದೇ ನ್ಯಾಯಾಲಯದ ಅಪೀಲಿಗೆ ಉಚ್ಚ ನ್ಯಾಯಾಲಯ ಪ್ರಮಾಣ ಪತ್ರವನ್ನು ನೀಡದಿದ್ದರೂ ಸರ್ವೋಚ್ಚ ನ್ಯಾಯಲಯ ತನ್ನ ಸ್ವಂತ ವಿವೇಚನೆಯಿಂದ ಮೊಕದ್ದಮೆಗಳೀಗೆ ಅಪೀಲು ಸಲ್ಲಿಸಲು ಅವಕಾಶ ನೀಡಬಹುದು. |
| 137ನೇ ಅನುಚ್ಛೇಧ | ಸರ್ವೋಚ್ಚ ನ್ಯಾಯಲಯ ತಾನು ನೀಡಿದ ತೀರ್ಪನ್ನು ಅಥವಾ ಮಾಡಿದ ಆದೇಶವನ್ನು ಪುನರಾವಲೋಕನ ಮಾಡುವುದಕ್ಕೆ ಅವಕಾಶವನ್ನು ಹೊಂದಿದೆ. |
| 138ನೇ ಅನುಚ್ಛೇಧ | ಸಂಸತ್ತು ಸೂಕ್ತ ಕಾನೂನು ಮಾಡುವುದರ ಮೂಲಕ ಸರ್ವೋಚ್ಚ ನ್ಯಾಯಲಯದ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿ ಇನ್ನೂ ಹೆಚ್ಚಿ ಅಧಿಕಾರ ವ್ಯಾಪ್ತಿಯನ್ನು ನೀಡಬಹುದು. |
| 339ನೇ ಅನುಚ್ಛೇಧ | ಸಂವಿಧಾನದ 32ನೇ ವಿಧಿಯ ಮೂಲಭೂತ ಹಕ್ಕುಗಳ ರಕ್ಷಣೆಯ ಉದ್ದೇಶವನ್ನು ಹೊರತುಪಡಿಸಿ ಸರ್ವೋಚ್ಚ ನ್ಯಾಯಲಯ ಇತರ ಯಾವುದೇ ಉದ್ದೇಶಗಳಿಗಾಗಿ ವಿವಿಧ ರಿಟ್‌ಗಳನ್ನು ಹೊರಡಿಸಲು ಸಂಸತ್ತು ಕಾನೂನಿನ ಮೂಲಕ ಸರ್ವೋಚ್ಚ ನ್ಯಾಯಲಯಕ್ಕೆ ಅಧಿಕಾರವನ್ನು ನೀಡಬಹುದು. |
| 339 (ಎ) ಅನುಚ್ಛೇಧ | ಒಂದೇ ಬಗೆಯ ಕಾನೂನು ಪ್ರಶ್ನೆಗಳನ್ನೊಳಗೊಂಡ ಸರ್ವೋಚ್ಚ ನ್ಯಾಯಲಯ & ಉಚ್ಚ ನ್ಯಾಯಾಲಯಗಳ ಮುಂದೆ ಇತ್ಯರ್ಥದಲ್ಲಿರುವ ಸಾರ್ವಜನಿಕ ಮಹತ್ವದ ಮುಖ್ಯ ಪ್ರಶ್ನೆಗಳಾಗಿವೆ ಎಂದು ಸರ್ವೋಚ್ಚ ನ್ಯಾಯಲಯಕ್ಕೆ ಮನದಟ್ಟಾದರೆ ಅಂತಹ ಪ್ರಕರಣಗಳನ್ನು ತನ್ನೆಡೆಗೆ ವರ್ಗಾಯಿಸಿಕೊಂಡು ವಿಚಾರಣೆ ನಡೆಸಬಹುದು. |
| 140ನೇ ಅನುಚ್ಛೇಧ | ಸಂವಿಧಾನ ಸರ್ವೋಚ್ಚ ನ್ಯಾಯಲಯಕ್ಕೆ ನೀಡಿರುವ ಅಧಿಕಾರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಚಲಾಯಿಸುವುದಕ್ಕೆ ಅವಶ್ಯವಾದ ಪೂರಕ ಅಧಿಕಾರಗಳನ್ನು ಸರ್ವೋಚ್ಚ ನ್ಯಾಯಲಯಕ್ಕೆ ಸಂಸತ್ತು ಸೂಕ್ತ ಕಾನೂನು ಮಾಡುವುದರ ಮೂಲಕ ನೀಡಬಹುದು. |
| 141ನೇ ಅನುಚ್ಛೇಧ | ಸರ್ವೋಚ್ಚ ನ್ಯಾಯಲಯ ಘೋಷಿಸಿದ ಕಾನೂನಿಗೆ ಭಾರತ ಒಕ್ಕೂಟದಲ್ಲಿರುವ ಎಲ್ಲ ನ್ಯಾಯಾಲಯ ಬದ್ಧವಾಗಿರತಕ್ಕದ್ದು |
| 143ನೇ ಅನುಚ್ಛೇಧ | ರಾಷ್ಟ್ರಪತಿಯವರು ಸಾರ್ವಜನಿಕ ಮಹತ್ವವುಳ್ಳ ಕಾನೂನಿನ/ವಿಷಯಗಳ ಕುರಿತು ಪ್ರಶ್ನೆ ಉದ್ಭವಿಸಿದಾಗ ಅದನ್ನು ಸರ್ವೋಚ್ಚ ನ್ಯಾಯಲಯದ ಪರ್ಯಾಲೋಚನೆಗಾಗಿ ಕಳುಹಿಸಬಹುದು. ಸರ್ವೋಚ್ಚ ನ್ಯಾಯಲಯವು ಇದಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಸಲಹೆಗಳನ್ನು ನೀಡುವುದು. |

| | |
|---|---|
| 144ನೇ ಅನುಚ್ಛೇಧ | ದೇಶದಲ್ಲಿರುವ ಸಮಸ್ತ ಸಿವಿಲ್ & ನ್ಯಾಯಿಕ ಪ್ರಾದಿಕರಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಅಧೀನವಾಗಿ ಕಾರ್ಯ ನಿರ್ವಹಿಸುತ್ತದೆ. |

## ಸುಪ್ರಿಂಕೋರ್ಟ್‌ನ ವೈಶಿಷ್ಟ್ಯತೆಗಳು :

- ಸಂವಿಧಾನದಲ್ಲಿ ಯಾವುದಾದರೂ ವಿಷಯಗಳ ಬಗ್ಗೆ ವಾದ-ವಿವಾದಗಳು ಉಂಟಾದರೆ ಸುಪ್ರಿಂಕೋರ್ಟ್ ಅಂತಿಮ ವಿವರಣೆ ನೀಡುತ್ತದೆ.
- ಅಮೆರಿಕ, ಆಸ್ಟ್ರೇಲಿಯಾ, ಫ್ರಾನ್ಸ್, ಸ್ವಿಜರ್‌ಲ್ಯಾಂಡ್ ಮೊದಲಾದ ದೇಶಗಳ ಸುಪ್ರಿಂಕೋರ್ಟ್ ಸಂವಿಧಾನಕ್ಕೆ ಅರ್ಥ ವಿವರಣೆಯನ್ನು ಕೊಡುವ ಅಧಿಕಾರವನ್ನು ಹೊಂದಿಲ್ಲ.

## ಸರ್ವೋಚ್ಚ ನ್ಯಾಯಾಲಯದ ಅಧಿಕಾರಗಳು & ವ್ಯಾಪ್ತಿ :

1. ಮೂಲ ಅಧಿಕಾರ ವ್ಯಾಪ್ತಿ
2. ಅಪೀಲು ಅಧಿಕಾರ ವ್ಯಾಪ್ತಿ
3. ಸಲಹಾ ಅಧಿಕಾರ ವ್ಯಾಪ್ತಿ
4. ಪುನರ್ ಪರಿಶೀಲನಾ ವ್ಯಾಪ್ತಿ
5. ಎಟ್ ಅಧಿಕಾರ ವ್ಯಾಪ್ತಿ
6. ದಾಖಲೆಗಳ ಅಧಿಕಾರ ವ್ಯಾಪ್ತಿ

**ಮೂಲ ಅಧಿಕಾರ ವ್ಯಾಪ್ತಿ :** ಸಂವಿಧಾನದ 131ನೇ ವಿಧಿಯನ್ವಯ ಸುಪ್ರಿಂಕೋರ್ಟ್ ಈ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ಇಂತಹ ಅಧಿಕಾರವನ್ನು ಇತರ ಯಾವುದೇ ನ್ಯಾಯಾಲಯ ಚಲಾಯಿಸುವಂತಿಲ್ಲ. ಕೇಂದ್ರ ಸರ್ಕಾರ & ರಾಜ್ಯ ಅಥವಾ ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಅಥವಾ ರಾಜ್ಯಗಳ ನಡುವೆ ಉಂಟಾಗುವ ವಿವಾದಗಳನ್ನು ಬಗೆಹರಿಸುವ ಅಧಿಕಾರ ಸುಪ್ರಿಂಕೋರ್ಟ್‌ಗೆ ಇದೆ. ವಿವಾದಗಳ ಕಾಯ್ದೆ ಹಕ್ಕಿಗೆ ಸಂಬಂಧಿಸಿರಬೇಕು. ಸುಪ್ರಿಂಕೋರ್ಟ್ ನೀಡಿರುವ ಈ ಮೂಲ ಅಧಿಕಾರ ಫೆಡರಲ್ ಮಾದರಿಯ ಸರ್ಕಾರ ಪದ್ಧತಿಯನ್ನು ಸ್ಪಷ್ಟಪಡಿಸುತ್ತದೆ. 1961ರಲ್ಲಿ ಮೊದಲ ಬಾರಿಗೆ ಪಶ್ಚಿಮ ಬಂಗಾಳ ಸರ್ಕಾರ ಕೇಂದ್ರದ ವಿರುದ್ಧ ಕಲ್ಲಿದ್ದಲು ಪ್ರದೇಶಗಳ ಕಾಯ್ದೆಹೆ ಸಂಬಂಧಿಸಿದಂತೆ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸುಪ್ರಿಂಕೋರ್ಟ್ ವಜಾ ಮಾಡಿತ್ತು

**ಅಪೀಲು ಅಧಿಕಾರ ವ್ಯಾಪ್ತಿ :** 132ನೇ ವಿಧಿ ಅನ್ವಯ ಯಾವುದೇ ಹೈಕೋರ್ಟ್ ಸಿವಿಲ್, ಕ್ರಿಮಿನಲ್ ಅಥವಾ ಇತರ ವಿಷಯದ ಬಗ್ಗೆ ನೀಡಿದ ತೀರ್ಪು ಅಥವಾ ಆಜ್ಞೆ ಸಂವಿಧಾನದ ಅರ್ಥವಿವರಣೆ ಬಗ್ಗೆ ಪ್ರಶ್ನೆಯನ್ನು ಒಳಗೊಂಡಿದೆಯೆಂದು ತಿಳಿದಾಗ ಸುಪ್ರಿಂಕೋರ್ಟ್‌ಗೆ ಅಪೀಲು ಸಲ್ಲಿಸಲು ಹೈಕೋರ್ಟ್ 134ಎ ವಿಧಿ ಅನ್ವಯ ಸರ್ಟಿಫೀಕೆಟ್ ನೀಡಬಹುದು. 133ನೇ ವಿಧಿ ಅನ್ವಯ ಸಿವಿಲ್ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರಿಂಕೋರ್ಟಗೆ ಅಪೀಲು ಹೋಗಬಹುದು. ಸಂಬಂಧಪಟ್ಟ ಹೈಕೋರ್ಟ್ ಅಪೀಲು ಹೋಗಲು ಸರ್ಟಿಫಿಕೆಟ್ ನೀಡಿ, ಮೊಕದ್ದಮೆ ಮುಖ್ಯವಾಗಿರುವುದರಿಂದ ಸುಪ್ರಿಂಕೋರ್ಟ್‌ನಲ್ಲಿ ಇತ್ಯರ್ಥವಾಗಲು ಸಮ್ಮತಿಸುತ್ತದೆ. 134ನೇ ವಿಧಿ ಅನ್ವಯ ಕ್ರಿಮಿನಲ್ ವಿಷಯಗಳಿಗೆ ಸಂಬಂಧಿಸಿದಂತೆ ಸುಪ್ರಿಂಕೋರ್ಟ್‌ಗೆ ಅಪೀಲು ಹೋಗಲು ಅವಕಾಶವಿದೆ. ಕೆಳಗಿನ ನ್ಯಾಯಾಲಯ ಅಪರಾಧಿಯ ಬಿಡುಗಡೆಗೆ ತೀರ್ಪು ನೀಡಿದಾಗ ಅದನ್ನು ಪ್ರಶ್ನಿಸಲು ಹೈಕೋರ್ಟಿಗೆ ಅಪೀಲು ಸಲ್ಲಿಸಬಹುದು. ಆಗ ಹೈಕೋರ್ಟ್ ಕೆಳಗಿನ ನ್ಯಾಯಾಲಯದ ತೀರ್ಪನ್ನು ಕಡೆಗಣಿಸಿ, ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದರೆ ಸುಪ್ರಿಂಕೋರ್ಟ್‌ಗೆ ಹೋಗಲು ಅವಕಾಶವಿದೆ. ಹೈಕೋರ್ಟ್ ತನ್ನ ಅದೀನ ನ್ಯಾಯಾಲಯದಿಂದ ಯಾವುದಾದರೂ ಮೊಕದ್ದಮೆಯನ್ನು ತನ್ನಲ್ಲಿಗೆ ವರ್ಗಾಯಿಸಿದರೆ, ಅದನ್ನು ವಿಚಾರಣೆ ಮಾಡಿ ಅಪರಾಧಿಗೆ ಮರಣದಂಡನೆ ವಿಧಿಸಿದಾಗಲೂ ಸುಪ್ರಿಂಕೋರ್ಟ್‌ಗೆ ಅಪೀಲು ಹೋಗಬಹುದು. ಅಲ್ಲದೆ, ಕ್ರಿಮಿನಲ್ ವಿವಾದ ಸುಪ್ರಿಕೋರ್ಟ್‌ನಲ್ಲಿ ವಿಚಾರಣೆಯಾಗಬೇಕೆಂದು ಹೈಕೋರ್ಟ್ ಇಚ್ಚಿಸಿದರೆ ಸುಪ್ರಿಕೋರ್ಟ್‌ಗೆ ಅಪೀಲು ಹೋಗಬಹುದು. 136ನೇ ವಿಧಿ ಅನ್ವಯ ಭಾರತದ ಯಾವುದೇ ನ್ಯಾಯಾಲಯ ನೀಡುವ ತೀರ್ಪಿನ ಅಥವಾ ಆಜ್ಞೆಯ ವಿರುದ್ಧ ತನ್ನಲ್ಲಿಗೆ ಅಪೀಲು ಸಲ್ಲಿಸುವಂತೆ ಅನುಮತಿ ನೀಡುವ ಅಧಿಕಾರ ಸುಪ್ರಿಂಕೋರ್ಟ್‌ಗೆ ಇದೆ.

**ಸಲಹಾ ಅಧಿಕಾರ ವ್ಯಾಪ್ತಿ :** 143ನೇ ವಿಧಿಯನ್ವಯ ಸುಪ್ರಿಂಕೊರ್ಟ್ ಸಲಹೆ ನೀಡುವ ಅಧಿಕಾರವನ್ನು ಹೊಂದಿದೆ. 143(1) ಪ್ರಕಾರ, ಸಾರ್ವಜನಿಕವಾಗಿ ಪ್ರಮುಖವಾಗಿರುವ ಕಾನೂನು ಕುರಿತು ಪ್ರಶ್ನೆ ಉಂಟಾಗಿದೆ ಎಂದು ರಾಷ್ಟ್ರಪತಿಗೆ ಮನವರಿಕೆಯಾದರೆ, ಅದನ್ನು ಸುಪ್ರಿಂಕೋರ್ಟ್‌ನ ಸಲಹೆಗೆ ಒಪ್ಪಿಸಬಹುದು. 143(2) ಪ್ರಕಾರ, 131ನೇ ವಿಧಿಯಲ್ಲಿ ಸೇರಿಸಿದ ವಿಷಯಗಳ ಬಗ್ಗೆ ವಿವಾದಗಳುಂಟಾದರೆ, ಅವುಗಳ ಬಗ್ಗೆಯೂ ರಾಷ್ಟ್ರಪತಿ ಸಲಹೆಯನ್ನು ಕೇಳಬಹುದು.

## 2012ರ ಮಾರ್ಚ್‌ವರೆಗೆ ಕೆಳಗಿನ ವಿಷಯಗಳ ಬಗ್ಗೆ ಸುಪ್ರಿಕೋರ್ಟ್‌ನ ಸಲಹೆಗಳನ್ನು ಕೇಳಲಾಗಿತ್ತು.

1. ದೆಹಲಿ ಕಾಯ್ದೆ (The Delhi Laws Act, 1912), ಅಜ್ಮೀರ್‌ಮೆರ್‌ವಾರ ಕಾಯ್ದೆ (1947) & 'ಸಿ' ವರ್ಗದ ರಾಜ್ಯಗಳ ಕಾಯ್ದೆ (1950) ಬಗ್ಗೆ ಸುಪ್ರಿಕೋರ್ಟ್ ತನ್ನ ಸಲಹೆಯನ್ನು ಮೇ 23,

1951ರಂದು ನೀಡಿತು. ವಿವಿಧ ನ್ಯಾಯಾಧೀಶರು ನೀಡಿದ ಅಭಿಪ್ರಾಯಗಳನ್ನು ನಿಯೋಜಿತ ಶಾಸನ ಅಧಿಕಾರದ (Delegation of Legislative Power) ಬಗ್ಗೆ ಮುಖ್ಯ ಸಲಹೆಗಳಾದವು.

2. 1957ರಲ್ಲಿ ಕೇರಳದ ವಿಧಾನ ಸಭೆ ಅಂಗೀಕರಿಸಿದ ಶಿಕ್ಷಣ ಮಸೂದೆ ವಿವಾದಕ್ಕೆ ಒಳಗಾಯಿತು. ಅನೇಕರು ರಾಷ್ಟ್ರಪತಿಗೆ ಮನವಿ ಸಲ್ಲಿಸಲು ಈ ಮಸೂದೆಗೆ ರಾಷ್ಟ್ರಪತಿ ಒಪ್ಪಿಗೆ ಕೊಡದಂತೆ ತಡೆಹಿಡಿದರು. ಆಗ ರಾಷ್ಟ್ರಪತಿ ಇದನ್ನು ಸುಪ್ರಿಂಕೋರ್ಟ್‌ನ ಅಭಿಪ್ರಾಯಕ್ಕೆ ಒಪ್ಪಿಸಿದರು. ಇದು ಮೇ 22, 1958ರಂದು ತನ್ನ ಅಭಿಪ್ರಾಯವನ್ನು ಸೂಚಿಸಿ, 'ಈ ಮಸೂದೆಯ ಕೆಲವು ಉಪವಿಧಿಗಳು ಸಂವಿಧಾನದ 30ನೇ ವಿಧಿಯನ್ನು ಉಲ್ಲಂಘಿಸಿದರೂ ಇತರ ನಿಯಮಗಳ ಕ್ರಮಬದ್ಧವಾಗಿದೆ' ಎಂದಿತು.
3. ಬೆರುಬಾರಿ ಪ್ರದೇಶದ ವರ್ಗಾವಣೆಯ ಬಗ್ಗೆ ಭಾರತ & ಪಾಕಿಸ್ತಾನಗಳು ಸೆಪ್ಟೆಂಬರ್ 10, 1958ರಂದು ಮಾಡಿಕೊಂಡ ಒಪ್ಪಂದದ ಬಗ್ಗೆ ಸುಪ್ರಿಂಕೋರ್ಟ್ ತನ್ನ ಅಭಿಪ್ರಾಯವನ್ನು ಮಾರ್ಚ್ 14, 1960ರಂದು ನೀಡಿತು. ಭಾರತದ ಭೂಪ್ರದೇಶವನ್ನು ವಿದೇಶಕ್ಕೆ ವರ್ಗಾಯಿಸಲು 368ನೇ ವಿಧಿ ಅನ್ವಯ ಸಂವಿಧಾನ ತಿದ್ದುಪಡಿ ಅಗತ್ಯವೆಂದು ತಿಳಿಸಿತು.
4. ರಾಜ್ಯಗಳು ಕೇಂದ್ರ್ರದ ತೆರಿಗೆ ಪದ್ಧತಿಯಿಂದ ವಿನಾಯಿತಿ ಪಡೆಯುವುದರ ಬಗ್ಗೆ ಸುಪ್ರಿಂಕೋರ್ಟ್ ಮೇ 10, 1963ರಂದು ತನ್ನ ಸಲಹೆ ನೀಡಿತು. 1878ರ ಸಮುದ್ರ ಸುಂಕ ಕಾಯಿದೆ (Sea Customs Act) ಸಂಸತ್ತು ತಿದ್ದುಪಡಿ ಮಾಡುವುದು ಸಂವಿಧಾನದ 289ನೇ ವಿಧಿಗೆ ವಿರುದ್ಧವಲ್ಲ ಎಂದು ಅಭಿಪ್ರಾಯಪಟ್ಟಿತ್ತು.
5. ಉತ್ತರ ಪ್ರದೇಶದ ಶಾಸಕಾಂಗ & ಅಲಹಾಬಾದ್ ಹೈಕೋರ್ಟ್‌ನ ನಡುವೆ ಘರ್ಷಣೆಯಾದಾಗ ಸುಪ್ರಿಕೋರ್ಟ್ ಸೆಪ್ಟಂಬರ್ 30 1964ರಂದು ಸಲಹೆ ನೀಡಿತು.
6. ಯಾವುದಾದರೂ ರಾಜ್ಯದ ವಿಧಾನಸಭೆ ವಿಸರ್ಜನೆಯಾದಾಗ ರಾಷ್ಟ್ರಪತಿಯ ಚುನಾವಣೆಯನ್ನು ನಡೆಸಬಹುದೆ ಎಂಬ ವಿವಾದ 1974ರಲ್ಲಿ ಉಂಟಾಯಿತು. ಆ ವರ್ಷ ಗುಜರಾತಿನ ವಿಧಾನಸಭೆ ವಿಸರ್ಜನೆಯಾದ್ದರಿಂದ ರಾಷ್ಟ್ರಪತಿಯ ಚುನಾವಣೆಯನ್ನು ಮುಂದೂಡುವಂತೆ ಕೆಲವರು ವಾದಿಸಿದರು. ಸುಪ್ರಿಂಕೋರ್ಟ್ ಜೂನ್ 5, 1974ರಂದು ತನ್ನ ಸಲಹೆ ನೀಡಿ 'ಯಾವುದಾದರೂ ರಾಜ್ಯದ ವಿಧಾನಸಭೆ ವಿಸರ್ಜನೆಯಾಗಿದ್ದರೂ ಚುನಾವಣೆಯನ್ನು ನಡೆಸಬಹುದು ಎಂದು ತಿಳಿಸಿತು'.
7. ತುರ್ತುಪರಿಸ್ಥಿತಿಯ ಕಾಲದಲ್ಲಿ ಉಂಟಾದ ಅತಿರೇಕಗಳನ್ನು ವಿಚಾರಣೆ ಮಾಡಲು ವಿಶೇಷ ಕೋರ್ಟ್‌ಗಳ ರಚನೆ (Special Courts) ಬಗ್ಗೆ ಸುಪ್ರಿಂಕೋರ್ಟ್ ಆಗಸ್ಟ್ 1, 1978ರಂದು ತನ್ನ ಅಭಿಪ್ರಾಯ ಸೂಚಿಸಿ, ವಿಶೇಷ ಕೋರ್ಟಗಳನ್ನು ರಚಿಸಬಹುದೆಂದು ತಿಳಿಸಿತು. ಪರಿಣಾಮವಾಗಿ

ಜನತಾ ಸರ್ಕಾರ ಇಂತಹ ಕೋರ್ಟಗಳನ್ನು ರಚಿಸಿತು. ಅದರೆ ಇಂದಿರಾಗಾಂಧಿ 1980ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಮೇಲೆ ಇವುಗಳನ್ನು ರದ್ದುಪಡಿಸಿದರು.

8. 1982ರಲ್ಲಿ ಜಮ್ಮು-ಕಾಶ್ಮೀರ ಶಾಸಕಾಂಗ ಅಂಗೀಕರಿಸಿದ ರೀಸೆಟ್‌ಲ್‌ಮೆಂಟ್ ಬಿಲ್ಲನ್ನು (Resettlement Bill ) ಕೂಡ ಸುಪ್ರಿಂಕೋರ್ಟ್‌ನ ಸಲಹೆಗೆ ಒಪ್ಪಿಸಲಾಗಿತ್ತು.

**ರಿಟ್ ಅಧಿಕಾರ ವ್ಯಾಪ್ತಿ :** ಸಂವಿಧಾನದ 32ನೇ ವಿಧಿಯ ಪ್ರಕಾರ ಪ್ರಜೆಗಳು ತಮ್ಮ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ಅವುಗಳ ರಕ್ಷಣೆಗಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗುವ ಹಕ್ಕನ್ನು ಹೊಂದಿದ್ದಾರೆ.

1. ಬಂಧಿ ಪ್ರತ್ಯಕ್ಷೀಕರಣ
2. ಪರಮಾದೇಶ
3. ಪ್ರತಿಬಂಧಕಾಜ್ಞೆ
4. ಉತ್ಪ್ರೇಕ್ಷಣಾ ಲೇಖ
5. ಕೊವಾರಂಟೋ

**ದಾಖಲೆಗಳ ಅಧಿಕಾರ ವ್ಯಾಪ್ತಿ :** ಸಂವಿಧಾನದ 129ನೇ ವಿಧಿಯ ಪ್ರಕಾರ ಸರ್ವೋಚ್ಚ ನ್ಯಾಯಾಲಯವು ತನ್ನ ಕಾರ್ಯಕಲಾಪಗಳನ್ನು & ತೀರ್ಪುಗಳನ್ನು ದಾಖಲೆಗಳ ರೂಪದಲ್ಲಿ ಸಂಗ್ರಹಿಸಿಡುತ್ತದೆ.

GNANADHARE IAS KAS ACADEMY

# ಸಮವರ್ತಿ ಪಟ್ಟಿಯಲ್ಲಿ ನಮೂದಿಸಿರುವ ವಿಷಯಗಳು 99:

| ಕ್ರ. ಸಂ | ವಿಷಯಗಳಿಗೆ ಸಂಖ್ಯೆ | ವಿಷಯಗಳು |
|---|---|---|
| 1 | 1 | ಭಾರತದ ರಕ್ಷಣೆ |
| 2 | 2 | ನೌಕಾಸೈನ್ಯ, ಮಿಲಿಟರಿ, ವಾಯು ಪಡೆಗಳು ಹಾಗೂ ಕೇಂದ್ರದ ಇತರ ಸೈನಿಕ ಪಡೆಗಳು |
| 3 | 2ಎ | ಯಾವುದೇ ರಾಜ್ಯಕ್ಕೆ ಕೇಂದ್ರದ ಸೈನಿಕ ಅಥವಾ ಇತರ ಮಿಲಿಟರಿ ಪಡೆಯನ್ನು ಕಳುಹಿಸುವುದು |
| 4 | 3 | ಕಂಟೋನ್‌ಮೆಂಟ್ ಪ್ರದೇಶವನ್ನು ನಿರ್ಣಯಿಸುವುದು |
| 5 | 4 | ನಾವಿಕ, ಮಿಲಿಟರಿ & ವಾಯು ಪಡೆಗಳ ಕೆಲಸಗಳು |
| 6 | 5 | ಅಸ್ತ್ರಗಳು, ಬಂದೂಕುಗಳು, ಮದ್ದು & ಸ್ಫೋಟಕಗಳು |
| 7 | 6 | ಅಣುಶಕ್ತಿ & ಅವುಗಳ ಉತ್ಪಾದನೆಗೆ ಅಗತ್ಯವಿರುವ ಖನಿಜಗಳು |
| 8 | 7 | ರಕ್ಷಣೆ ಅಥವಾ ಯುದ್ಧಕ್ಕೆ ಅಗತ್ಯ ಎಂದು ಸಂಸತ್ತಿನಿಂದ ನಿರ್ಧರಿಸಿದ ಕೈಗಾರಿಕೆಗಳು |
| 9 | 8 | ಕೇಂದ್ರ ಬೇಹುಗಾರಿಕೆ (ಸಿ.ಬಿ.ಐ) |
| 10 | 9 | ಮುನ್ನೆಚ್ಚರಿಕೆ ಬಂಧನ |
| 11 | 10 | ವಿದೇಶಾಂಗ ವ್ಯವಹಾರಗಳು |
| 12 | 11 | ರಾಜತಾಂತ್ರಿಕ, ಕೌನ್ಸಲರ್ & ವ್ಯಾಪಾರ ಪ್ರಾತಿನಿಧ್ಯತೆ |
| 13 | 12 | ವಿಶ್ವಸಂಸ್ಥೆ |
| 14 | 13 | ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವಿಕೆ |
| 15 | 14 | ವಿದೇಶಗಳೊಡನೆ ಒಪ್ಪಂದ |
| 16 | 15 | ಯುದ್ಧ & ಶಾಂತಿ |
| 17 | 16 | ವಿದೇಶಿ ಅಧಿಕಾರ ವ್ಯಾಪ್ತಿ |
| 18 | 17 | ಪೌರತ್ವ |
| 19 | 18 | ಅಪರಾಧಕ್ಕೊಳಗಾದವರನ್ನು ಒಪ್ಪಿಸುವುದು |
| 20 | 19 | ಪಾಸ್‌ಪೋರ್ಟ್ & ವೀಸಾ |
| 21 | 20 | ಭಾರತದ ಹೊರಗಿರುವ ತೀರ್ಥ ಯಾತ್ರಾ ಸ್ಥಳಗಳು |
| 22 | 21 | ಸಮುದ್ರ ಕಳ್ಳತನ |
| 23 | 22 | ರೈಲುಗಳು |
| 24 | 23 | ರಾಷ್ಟ್ರೀಯ ಹೆದ್ದಾರಿಗಳು |
| 25 | 24 | ರಾಷ್ಟ್ರೀಯ ಜಲಮಾರ್ಗಗಳೆಂದು ಸಂಸತ್ತು ನಿರ್ಧರಿಸಿದ ನೌಕಾಯಾನ |

GNANADHARE IAS KAS ACADEMY

| | | |
|---|---|---|
| 26 | 25 | ಕಡಲ ಸಂಬಂಧ ಹಡಗುಗಳು & ನೌಕಾಯಾನ |
| 27 | 26 | ಹಡಗು ಹಾಗೂ ವಿಮಾನಗಳ ರಕ್ಷಣೆಗೆ ಬೇಕಾಗಿರುವ ದೀಪದ ಮನೆಗಳು |
| 28 | 27 | ಪ್ರಧಾನ ಬಂದರುಗಳು |
| 29 | 28 | ನೌಕಾಯಾನಕ್ಕೆ ಬೇಕಾಗುವ ಆಸ್ಪತ್ರೆಗಳು & ಬಂದರುಗಳಲ್ಲಿ ಸಾಂಕ್ರಾಮಿಕ ರೋಗಗಳ ನಿಷೇಧ |
| 30 | 29 | ವಿಮಾನ ಯಾನ |
| 31 | 30 | ಪ್ರಯಾಣಿಕರನ್ನು & ಸಾಮಾಗ್ರಿಗಳನ್ನು ರೈಲು, ಸಮುದ್ರ ಅಥವಾ ವಿಮಾನ ಯಾನದ ಮೂಲಕ ಸಾಗಿಸುವುದು |
| 32 | 31 | ಅಂಚೆ & ತಂತಿ ಸುದ್ದಿ, ದೂರವಾಣಿ, ವೈರ್‌ಲೆಸ್, ಪ್ರಸಾರ & ಇತರ ಸಂಪರ್ಕ |
| 33 | 32 | ಕೇಂದ್ರದ ಆಸ್ತಿ |
| | 33 | ರದ್ದುಗೊಳಿಸಲಾಗಿದೆ. |
| 34 | 34 | ಕೋರ್ಟ್ ಆಫ್ ವಾರ್ಡ್ ಫಾರ್ ದಿ ಎಸ್ಟೇಟ್ಸ್ ಆಫ್ ರೂಲರ್ಸ್ ಆಫ್ ಇಂಡಿಯನ್ ಸ್ಟೇಟ್ಸ್ |
| 35 | 35 | ಕೇಂದ್ರದ ಸಾಲ |
| 36 | 36 | ನೋಟುಗಳ & ಕಾಯಿನ್‌ಗಳ ಮುದ್ರಣ ಹಾಗೂ ವಿದೇಶಿ ವಿನಿಮಯ |
| 37 | 37 | ವಿದೇಶಿ ಸಾಲ |
| 38 | 38 | ಭಾರತದ ರಸರ್ವ್ ಬ್ಯಾಂಕ್ |
| 39 | 39 | ಅಂಚೆ ಕಛೇರಿಯ ಉಳಿತಾಯ ಬ್ಯಾಂಕ್ |
| 40 | 40 | ಕೇಂದ್ರ ಅಥವಾ ರಾಜ್ಯ ಸರ್ಕಾರ ಜಾರಿಗೊಳಿಸುವ ಲಾಟರಿಗಳು |
| 41 | 41 | ವಿದೇಶಗಳೊಡನೆ ವ್ಯಾಪಾರ |
| 42 | 42 | ಅಂತರ ರಾಜ್ಯ ವ್ಯಾಪಾರ |
| 43 | 43 | ವ್ಯಾಪಾರ ನಿಗಮಗಳ ಸಂಘಟನೆ, ನಿಯಂತ್ರಣ & ರದ್ದುಪಡಿಸುವಿಕೆ |
| 44 | 44 | ಇತರ ನಿಗಮಗಳ ಸಂಘಟನೆ, ನಿಯಂತ್ರಣ & ರದ್ದುಪಡಿಸುವಿಕೆ |
| 45 | 45 | ಬ್ಯಾಂಕಿಂಗ್ |
| 46 | 46 | ಬಿಲ್ಸ್ ಆಫ್ ಎಕ್ಸ್‌ಚೇಂಜ್, ಚೆಕ್ಕುಗಳು & ಪ್ರಾಮಿಸರಿ ನೋಟ್ಸ್ |
| 47 | 47 | ಜೀವ ವಿಮೆ |
| 48 | 48 | ಸ್ಟಾಕ್ ಎಕ್ಸ್‌ಚೇಂಜ್ & ಫ್ಯೂಚರ್ ಮಾರ್ಕೆಟ್ |
| 49 | 49 | ಪೇಟೆಂಟ್ಸ್, ಕಾಪಿರೈಟ್ ಹಾಗೂ ಟ್ರೇಡ್ ಮಾರ್ಕ್ಸ್ |
| 50 | 50 | ತೂಕ & ಅಳತೆಗಳ ಗುಣಮಟ್ಟ ನಿರ್ಧರಿಸುವುದು |
| 51 | 51 | ರಫ್ತು ಮಾಡುವ ಅಥವಾ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ರವಾನಿಸುವ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲಿಸುವುದು. |
| 52 | 52 | ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಅಗತ್ಯ ಎಂದು ಸಂಸತ್ತು ನಿರ್ಧರಿಸುವ |

| | | |
|---|---|---|
| | | ಕೈಗಾರಿಕೆಗಳು |
| 53 | 53 | ತೈಲ & ಪೆಟ್ರೋಲಿಯಂ ಉತ್ಪನ್ನಗಳ ನಿಯಂತ್ರಣ & ಅಭಿವೃದ್ದಿ |
| 54 | 54 | ಸಾರ್ವಜನಿಕ ಹಿತಾದೃಷ್ಟಿಯಿಂದ ಅಗತ್ಯವಾಗಿರುವ ಗಣಿಗಳ ನಿಯಂತ್ರಣ & ಖನಿಜಗಳ ಅಭಿವೃದ್ದಿ |
| 55 | 55 | ಗಣಿ & ತೈಲ ಸ್ಥಳಗಳಲ್ಲಿ ಕಾರ್ಮಿಕ ನಿಯಂತ್ರಣ & ರಕ್ಷಣೆ |
| 56 | 56 | ಸಾರ್ವಜನಿಕ ಹಿತದೃಷ್ಟಿಯಿಂದ ಅಂತರಾಜ್ಯಗಳ ನದಿ & ಕಣಿವೆಗಳ ನಿಯಂತ್ರಣ & ಅಭಿವೃದ್ದಿ |
| 57 | 57 | ಮೀನುಗಾರಿಕೆ |
| 58 | 58 | ಉಪ್ಪಿನ ಉತ್ಪಾದನೆ, ವಿತರಣೆ & ನಿಯಂತ್ರಣ |
| 59 | 59 | ಅಫೀಮು ಸಾಗುವಳಿ, ತಯಾರಿಕೆ & ಮಾರಾಟ |
| 60 | 60 | ಪ್ರದರ್ಶನಕ್ಕೆ ಚಲನ–ಚಿತ್ರಗಳ ಮಂಜೂರಾತಿ |
| 61 | 61 | ಕೇಂದ್ರ ನೌಕರರಿಗೆ ಸಂಬಂಧಿಸಿದ ಕೈಗಾರಿಕಾ ವಿವಾದಗಳು |
| 62 | 62 | ರಾಷ್ಟ್ರೀಯ ಗ್ರಂಥಾಲಯ, ಭಾರತದ ಸಂಗ್ರಾಲಯ |
| 63 | 63 | ಬನಾರಸ್ ಹಿಂದು, ಆಲಿಗರ್ ಮುಸ್ಲಿಂ & ದೆಹಲಿ ವಿಶ್ವವಿದ್ಯಾನಿಲಯಳು & ಸಂಸತ್ತಿನಿಂದ ನಿರ್ಧರಿಸಲ್ಪಟ್ಟ ಇತರ ಸಂಸ್ಥೆಗಳು |
| 64 | 64 | ರಾಷ್ಟ್ರದ ಪ್ರಮುಖ ಸಂಸ್ಥೆಗಳೆಂದು ಸಂಸತ್ತಿನಿಂದ ತೀರ್ಮಾನಿಸಲ್ಪಡುವ ಕೇಂದ್ರದಿಂದ ಪೂರ್ಣವಾಗಿ ಅಥವಾ ಭಾಗಶಃ ಹಣ ಸಹಾಯ ಪಡೆಯುವ ಹಾಗೂ ವೈಜ್ಞಾನಿಕ ಅಥವಾ ತಾಂತ್ರಿಕ ಸಂಸ್ಥೆಗಳು |
| 65 | 65 | ಉದ್ಯೋಗ, ವೃತ್ತಿ ಅಥವಾ ತಾಂತ್ರಿಕ ತರಬೇತಿ ವಿಶೇಷ ಅಧ್ಯಯನ ಅಥವಾ ಸಂಶೋಧನೆಗೆ ಪ್ರೋತ್ಸಾಹ, ತನಿಖೆಗೆ ಬೇಕಾಗುವ ವೈಜ್ಞಾನಿಕ ಅಥವಾ ತಾಂತ್ರುಕ ಸಹಾಯ ಕೇಂದ್ರ ಸಂಸ್ಥೆಗಳು |
| 66 | 66 | ಉನ್ನತ ಶಿಕ್ಷಣ ಅಥವಾ ಸಂಶೋಧನೆಗೆ ಹಾಗೂ ವೈಜ್ಞಾನಿಕ & ತಾಂತ್ರಿಕ ಸಂಸ್ಥೆಗಳ ಸಮನ್ವಯ ಹಾಗೂ ಗುಣಮಟ್ಟ ನಿರ್ಧಾರ |
| 67 | 67 | ರಾಷ್ಟ್ರ ಪ್ರಮುಖವೆಂದು ಸಂಸತ್ತಿನಿಂದ ನಿರ್ಧರಿಸಲ್ಪಡುವ ಪ್ರಾಚೀನ & ಐತಿಹಾಸಿಕ ಸ್ಮಾರಕಗಳು & ರೆಕಾರ್ಡ್‌ಗಳು |
| 68 | 68 | ಸರ್ವೆ ಆಫ್ ಇಂಡಿಯಾ, Geological, Botanical, Zoological and Anthropoligical Surveys of Indid; Meteorological organizations. |
| 69 | 69 | ಜನಗಣತಿ |
| 70 | 70 | ಕೇಂದ್ರಲೋಕ ಸೇವಾ ಆಯೋಗ, ಅಖಿಲ ಭಾರತ & ಕೇಂದ್ರ ಸೇವೆಗಳು |
| 71 | 71 | ಕೇಂದ್ರ ಪಿಂಚಣಿಗಳು |
| 72 | 72 | ಸಂಸತ್ತು, ರಾಜ್ಯ ಶಾಸಕಾಂಗಗಳಿಗೆ, ರಾಷ್ಟ್ರಪತಿ & ಉಪರಾಷ್ಟ್ರಪತಿ ಸ್ಥಾನಗಳಿಗೆ ಚುನಾವಣೆಗಳು; ಚುನಾವಣಾ ಆಯೋಗ |

| | | |
|---|---|---|
| 73 | 73 | ಸಂಸತ್ ಸದಸ್ಯರ, ಸಭಾಧ್ಯಕ್ಷರ ಹಾಗೂ ಉಪಸಭಾಧ್ಯಕ್ಷರ ವೇತನ & ಭತ್ಯೆಗಳು |
| 74 | 74 | ಸಂಸತ್ತಿನ & ಅದರ ಸಮಿತಿಗಳ ಅಧಿಕಾರಗಳು |
| 75 | 75 | ರಾಷ್ಟ್ರಪತಿ, ರಾಜ್ಯಪಾಲರ, ಕೇಂದ್ರ ಸಚಿವರ & ಕಂಟ್ರೋಲರ್ & ಆಡಿಟರ್ ಜನರಲ್‌ರ ವೇತನ ಭತ್ಯೆ, ಹಕ್ಕುಗಳು |
| 76 | 76 | ಕೇಂದ್ರ & ರಾಜ್ಯಗಳ ಲೆಕ್ಕ ಪರಿಶೋಧನೆ |
| 77 | 77 | ಸುಪ್ರಿಂಕೋರ್ಟ್ |
| 78 | 78 | ಹೈಕೋರ್ಟ್‌ಗಳು |
| 79 | 79 | ಯಾವುದೇ ಕೇಂದ್ರಾಡಳಿತ ಪ್ರದೇಶಕ್ಕೆ ಹೈಕೋರ್ಟಿನ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸುವುದು ಅಥವಾ ತೆಗೆದು ಹಾಕುವುದು |
| 80 | 80 | ಯಾವುದೇ ರಾಜ್ಯದ ಪೋಲಿಸ್ ಪಡೆಯ ಅಧಿಕಾರ ವ್ಯಾಪ್ತಿಯನ್ನು ಬೇರೆ ರಾಜ್ಯದ ಪ್ರದೇಶಕ್ಕೆ & ರೈಲ್ವೆ ಪ್ರದೇಶಕ್ಕೆ ವಿಸ್ತರಿಸುವುದು. |
| 81 | 81 | ಅಂತರರಾಜ್ಯ ವಲಸೆ |
| 82 | 82 | ಆದಾಯ ತೆರಿಗೆ |
| 83 | 83 | ರಫ್ತು ಸುಂಕ ಸೇರಿದಂತೆ ಸುಂಕಗಳು |
| 84 | 84 | ಮದ್ಯಸಾರ & ಅಫೀಮುಗಳನ್ನು ಬಿಟ್ಟು ಹೊಗೆ ಸೊಪ್ಪು & ಇತರ ವಸ್ತುಗಳ ಮೇಲೆ ಸುಂಕಗಳು |
| 85 | 85 | ಕಂಪನಿ ತೆರಿಗೆ |
| 86 | 86 | ವ್ಯವಸಾಯ ಭೂಮಿ ಹೊರತುಪಡಿಸಿ, ಆಸ್ತಿಗಳ ಮೌಲ್ಯ & ಕಂಪನಿಗಳ ಬಂಡವಾಳದ ಮೇಲಿನ ತೆರಿಗೆಗಳು |
| 87 | 87 | ವ್ಯವಸಾಯ ಭೂಮಿ ಬಿಟ್ಟು ಇತರ ಆಸ್ತಿ ಮೇಲೆ ಎಸ್ಟೇಟ್ ಸುಂಕ |
| 88 | 88 | ಬೇಸಾಯ ಭೂಮಿ ಬಿಟ್ಟು ಆಸ್ತಿಯ ಉತ್ತಾರಾಧಿಕಾರದ ಬಗ್ಗೆ ವಿಧಿಸುವ ಸುಂಕ |
| 89 | 89 | ರೈಲು, ಸಮುದ್ರ & ವಿಮಾನ ಪ್ರಯಾಣಿಕರ ಹಾಗೂ ಪದಾರ್ಥಗಳ ಮೇಲೆ & ರೈಲು ದರಗಳ ಹಾಗೂ ಸರಕು ಸಾಗಾಣಿಕೆಯ ಮೇಲಿನ ತೆರಿಗೆಗಳು |
| 90 | 90 | ಸ್ಟಾಕ್ ಎಕ್ಸ್‌ಚೇಂಜ್ & ಮಾರುಕಟ್ಟೆಗಳ ವಹಿವಾಟು ಮೇಲಿನ ತೆರಿಗೆಗಳು |
| 91 | 91 | ಚೆಕ್ಕುಗಳ, ಪ್ರಾಮಿಸರಿ ನೋಟುಗಳ ವಿಮಾ ಪಾಲಿಸಿ ಮುಂತಾದವುಗಳ ಬಗ್ಗೆ ವಿಧಿಸುವ ಸ್ಟ್ಯಾಂಪ್ ಸುಂಕ ದರಗಳು |
| 92 | 92 | ವೃತ್ತಪತ್ರಿಕೆಗಳ ಮಾರಾಟ ಅಥವಾ ಕೊಳ್ಳುವ & ಜಾಹೀರಾತುಗಳ ಮೇಲೆ ವಿಧಿಸುವ ತೆರಿಗೆಗಳು |
| 93 | 92 ಎ | ವೃತ್ತ ಪತ್ರಿಕೆಗಳನ್ನು ಬಿಟ್ಟು ಅಂತರಾಜ್ಯ ವ್ಯಾಪಾರ ಅಥವಾ ವಾಣಿಜ್ಯದಲ್ಲಿ ಮಾರಾಟವಾಗುವ ಅಥವಾ ಕೊಳ್ಳುವ ವಸ್ತುಗಳ ಮೇಲಿನ ಸುಂಕಗಳು |
| 94 | 92 ಬಿ | ಅಂತರಾಜ್ಯ ವ್ಯಾಪಾರ ಅಥವಾ ವಾಣಿಜ್ಯದಲ್ಲಿ ರವಾನಿಸುವ ಪದಾರ್ಥಗಳ ಮೇಲಿನ ತೆರಿಗೆಗಳು |
| 95 | 93 | ಕೇಂದ್ರ ಪಟ್ಟಿಯಲ್ಲಿರುವ ಯಾವುದೇ ವಿಷಯದ ಬಗ್ಗೆ ರಚಿಸಲಾದ ಕಾನೂನುಗಳ |

| | | |
|---|---|---|
| | | ವಿರುದ್ಧ ಅಪರಾಧ |
| 96 | 94 | ಕೇಂದ್ರ ಪಟ್ಟಿಯಲ್ಲಿರುವ ಯಾವುದೇ ವಿಷಯಗಳಿಗೆ ವಿಚಾರಣೆಗಳು, ಸರ್ವೆಗಳು & ಸಂಖ್ಯೆಗಳು |
| 97 | 95 | ಕೇಂದ್ರ ಪಟ್ಟಿಯಲ್ಲಿರುವ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ (ಸುಪ್ರಿಂಕೊರ್ಟ್ ಬಿಟ್ಟು) ಎಲ್ಲ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ |
| 98 | 96 | ಮೇಲಿನ ಪಟ್ಟಿಯಲ್ಲಿರುವ ಯಾವುದೇ ವಿಷಯಗಳ ಬಗ್ಗೆ ಫೀಜು (ಕೋರ್ಟ್‌ನಲ್ಲಿ ತೆಗೆದುಕೊಳ್ಳುವುದನ್ನು ಬಿಟ್ಟು) |
| 99 | 97 | ರಾಜ್ಯ ಅಥವಾ ಸಮವರ್ತಿ ಪಟ್ಟಿಗಳಲ್ಲಿ ನಮೂದಿಸದೇ ಇರುವ ಇತರ ವಿಷಯಗಳು |

## ರಾಜ್ಯ ಪಟ್ಟಿಯಲ್ಲಿ ನಮೂದಿಸಿರುವ ವಿಷಯಗಳು 61 :

| ಕ್ರ. ಸಂ | ವಿಷಯಗಳಿಗೆ ಸಂಖ್ಯೆ | ವಿಷಯಗಳು |
|---|---|---|
| 1 | 1 | ಸಾರ್ವಜನಿಕ ಶಿಸ್ತು |
| 2 | 2 | ಪೋಲಿಸ್ |
| 3 | 3 | ಹೈಕೊರ್ಟ್‌ನ ಅಧಿಕಾರಿಗಳು & ಸೇವಕರು ಕಂದಾಯ ಕೊರ್ಟುಗಳ ವಿಧಾನಗಳು & ಸುಪ್ರಿಂ ಕೋರ್ಟ್ ಬಿಟ್ಟು ಎಲ್ಲ ಕೋರ್ಟ್‌ಗಳಲ್ಲಿ ವಿಧಿಸುವ ಫೀಜುಗಳು |
| 4 | 4 | ಬಂದೀಖಾನೆಗಳು, ಸುಧಾರಣೆ ಸ್ಥಳಗಳು & ತರುಣ ಅಪರಾಧಿಗಳಿಗೆ ಶಿಕ್ಷಣ ಸಂಸ್ಥೆಗಳು |
| 5 | 5 | ಸ್ಥಳಿಯ ಸರ್ಕಾರಗಳು |
| 6 | 6 | ಸಾರ್ವಜನಿಕ ಆರೋಗ್ಯ & ಆಸ್ಪತ್ರೆಗಳು |
| 7 | 7 | ಯಾತ್ರಾಸ್ಥಳಗಳು |
| 8 | 8 | ಮದ್ಯಪಾನ |
| 9 | 9 | ಅಶಕ್ತರಿಗೆ ನೆರವು |
| 10 | 10 | ಸ್ಮಶಾನ ಸ್ಥಳಗಳು |
| | 11 | ರದ್ದು ಮಾಡಲಾಗಿದೆ. |
| 11 | 12 | ರಾಜ್ಯದಿಂದ ನಿಯಂತ್ರಿಸಲ್ಪಡುವ ಗ್ರಂಥಾಲಯಗಳು ಸಂಗ್ರಾಲಯಗಳು |
| 12 | 13 | ರಾಜ್ಯ ರಸ್ತೆಗಳು & ಸೇತುವೆಗಳು |
| 13 | 14 | ವ್ಯವಸಾಯ |

| | | |
|---|---|---|
| 14 | 15 | ಪಶು ಸಂಗೋಪನೆ |
| 15 | 16 | ದನಗಳ ದೊಡ್ಡಿಗಳು & ಅವುಗಳ ಅತಕ್ರಮ ಪ್ರವೇಶದ ನಿಷೇಧ |
| 16 | 17 | ನೀರಾವರಿ |
| 17 | 18 | ಭೂಮಿಯು ಅಭಿವೃದ್ದಿ & ಬೇಸಾಉ ಭೂಮಿಯ ವರ್ಗಾವಣೆ ಹಾಗೂ ಪರಭಾರೆ & ಬೇಸಾಯ ಸಾಲ. |
| | 19<br>20 } | ರದ್ದು ಮಾಡಲಾಗಿದೆ. |
| 18 | 21 | ಮೀನುಗಾರಿಕೆ |
| 19 | 22 | ವಾರ್ಡ್‌ಗಳ ನ್ಯಾಯಲಯಗಳು & ಅಟ್ಯಾಚ್ ಮಾಡಿರುವ ಅಎಷ್ಟೇಟ್‌ಗಳು |
| 20 | 23 | ಗಣಿಗಳ ನಿಯಂತ್ರಣ & ಖನಿಜಗಳ ಅಭಿವೃದ್ದಿ |
| 21 | 24 | ಕೈಗಾರಿಕೆ |
| 22 | 25 | ಅನಿಲ |
| 23 | 26 | ರಾಜ್ಯದೊಳಗೆ ವ್ಯಾಪಾರ |
| 24 | 27 | ಪದಾರ್ಥಗಳ ಉತ್ಪತ್ತಿ, ಸರಬರಾಜು ವಿತರಣೆ |
| 25 | 28 | ಮಾರ್ಕೆಟ್‌ಗಳು & ಜಾತ್ರೆಗಳು |
| | 29 | ರದ್ದು ಮಾಡಲಾಗಿದೆ. |
| 26 | 30 | ಹಣ ವ್ಯವಹಾರ & ಬೇಸಾಯ ಸಾಲಕ್ಕೆ ನೆರವು |
| 27 | 31 | ಹೋಟೆಲುಗಳು |
| 28 | 32 | ಕೇಂದ್ರಪಟ್ಟಿಯಲ್ಲಿ ತಿಳಿಸಿರುವುದನ್ನು ಬಿಟ್ಟು, ಇತರೆ ನಿಗಮಗಳ ಸ್ಥಾಪನೆ, ನಿಗಮಗಳ ಸ್ಥಾಪನೆ & ನಿಯಂತ್ರಣ & ರದ್ದು ಪಡಿಸುವಿಕೆ, ವಿಶ್ವ ವಿದ್ಯಾಲಯಗಳು, ಸಾಹಿತ್ಯ, ವೈಜ್ಞಾನಿಕ, ಧಾರ್ಮಿಕ ಸಂಸ್ಥೆಗಳು ಹಾಗೂ ಸಹಕಾರ ಸಂಘಗಳು |
| 29 | 33 | ಸಿನೆಮಾಗಳು, ಕ್ರೀಡೆಗಳು ಮನರಂಜನೆ |
| 30 | 34 | ಪಂದ್ಯ & ಜೂಜಾಟ |
| 31 | 35 | ರಾಜ್ಯದಲ್ಲಿರುವ ಕಾಮಗಾರಿ, ಭೂಮಿ & ಕಟ್ಟಡಗಳು |
| | 36 | ರದ್ದು ಮಾಡಲಾಗಿದೆ |
| 32 | 37 | ಸಂಸತ್ತು ಮಾಡುವ ಯಾವುದೇ ಕಾನೂನಿಗೆ ಒಳಪಟ್ಟ ರಾಜ್ಯ ಶಾಸಕಾಂಗಕ್ಕೆ ಚುನಾವಣೆಗಳು |
| 33 | 38 | ರಾಜ್ಯ ಶಾಸಕರ & ಸಭಾಧ್ಯಕ್ಷರ ವೇತನ & ಭತ್ಯೆಗಳು |
| 34 | 39 | ರಾಜ್ಯ ಶಾಸಕರ & ಶಾಸಕಾಂಗ ಸಮಿತಿಗಳ ಅಧಿಕಾರಗಳು, ಹಕ್ಕುಗಳು & ರಕ್ಷಣೆಗಳು |
| 35 | 40 | ರಾಜ್ಯ ಸರ್ಕಾರದ ಸಚಿವರ ವೇತನ & ಭತ್ಯೆಗಳು |

| | | |
|---|---|---|
| 36 | 41 | ರಾಜ್ಯ ಸಾರ್ವಜನಿಕ ಸೇವೆಗಳು & ರಾಜ್ಯ ಲೋಕಸೇವಾ ಆಯೋಗ |
| 37 | 42 | ರಾಜ್ಯ ಸರ್ಕಾರ ನೀಡುವ ಪಿಂಚಣಿಗಳು |
| 38 | 43 | ರಾಜ್ಯದ ಸಾರ್ವಜನಿಕ ಸಾಲ |
| 39 | 44 | ಗುಪ್ತನಿಧಿ |
| 40 | 45 | ಭೂ ಕಂದಾಯ |
| 41 | 46 | ಬೇಸಾಯ ಆದಾಯದ ಮೇಲೆ ತೆರಿಗೆ |
| 42 | 47 | ಬೇಸಾಯ ಭೂಮಿ ಉತ್ತರಾಧಿಕಾರಕ್ಕೆ ಸಂಬಂಧಿಸಿದ ತೆರಿಗೆ. |
| 43 | 48 | ಬೇಸಾಯ ಭೂಮಿಗೆ ಸಂಬಂಧಿಸಿದ ಎಸ್ಟೇಟ್ ಡ್ಯೂಟಿ |
| 44 | 49 | ಭೂಮಿ & ಕಟ್ಟಡಗಳ ಮೇಲೆ ತೆರಿಗೆ |
| 45 | 50 | ಸಂಸತ್ತು ವಿಧಿಸುವ ಮಿತಿಗಳಿಗೆ ಒಳಪಟ್ಟು ಖನಿಜ ಹಕ್ಕುಗಳ ಮೇಲೆ ತೆರಿಗೆ |
| 46 | 51 | ಮದ್ಯಪಾನ, ಅಫೀಮು & ನಿದ್ರಾಜನಕ ಔಷಧಿಗಳ ಮೇಲೆ ತೆರಿಗೆ |
| 47 | 52 | ರಾಜ್ಯದೊಳಕ್ಕೆ ಬರುವ ಪದಾರ್ಥಗಳ ಮೇಲೆ ತೆರಿಗೆ |
| 48 | 53 | ವಿದ್ಯುಚ್ಛಕ್ತಿಯ ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ |
| 49 | 54 | ವೃತ್ತ ಪತ್ರಿಕೆಗಳನ್ನು ಬಿಟ್ಟು ಇತರ ಪದಾರ್ಥಗಳ ಮಾರಾಟ ಅಥವಾ ಕೊಳ್ಳುವ ಪದಾರ್ಥಗಳ ಮೇಲೆ ತೆರಿಗೆ |
| 50 | 55 | ವೃತ್ತ ಪತ್ರಿಕೆಗಳಲ್ಲಿ ಬರುವ ಜಾಹೀರಾತುಗಳನ್ನು ಬಿಟ್ಟು, ಇತರ ಜಾಹೀರಾತುಗಳ ಮೇಲೆ ತೆರಿಗೆ & ರೇಡಿಯೋ ಅಥವಾ ದೂರದರ್ಶನದಲ್ಲಿ ಬರುವ ಜಾಹೀರಾತುಗಳ ಮೇಲೆ ತೆರಿಗೆ |
| 51 | 56 | ರಸ್ತೆ ಅಥವಾ ಜಲ ಮಾರ್ಗಗಳಲ್ಲಿ ಬರುವ ಪದಾರ್ಥಗಳ & ಪ್ರಯಾಣಿಕರ ಮೇಲೆ ತೆರಿಗೆ |
| 52 | 57 | ವಾಹನ ತೆರಿಗೆ |
| 53 | 58 | ಪ್ರಾಣಿಗಳ & ದೋಣಿಗಳ ಮೇಲೆ ತೆರಿಗೆ |
| 54 | 59 | ರಸ್ತೆ ಸುಂಕಗಳು |
| 55 | 60 | ಉದ್ಯೋಗ & ವ್ಯಾಪಾರ ತೆರಿಗೆ |
| 56 | 61 | ಕ್ಯಾಪಿಟೇಷನ್ ತೆರಿಗೆ |
| 57 | 62 | ಮನರಂಜನೆಗಳು, ಜೂಜಾಟಗಳು & ಪಂದ್ಯಗಳು ಸೇರಿದಂತೆ ಭೋಗ ವಸ್ತುಗಳ ಮೇಲೆ ತೆರಿಗೆ |
| 58 | 63 | ದಾಖಲೆ ಪತ್ರಗಳಿಗೆ ಸಂಬಂಧಿಸಿದ ಸ್ಟ್ಯಾಂಪ್ ಡ್ಯೂಟಿ ದರಗಳು |
| 59 | 64 | ರಾಜ್ಯ ಪಟ್ಟಿಯಲ್ಲಿರುವ ಯವುದೇ ವಿಷಯದ ಬಗ್ಗೆ ರಚಿಸಿರುವ ಕಾನೂನಿನ ವಿರುದ್ಧ ಅಪರಾಧಗಳು |
| 60 | 65 | ರಾಜ್ಯ ಪಟ್ಟಿಯಲ್ಲಿರುವ ಯವುದೇ ವಿಷಯದ ಬಗ್ಗೆ ಎಲ್ಲ ಕೋರ್ಟುಗಳ ಅಧಿಕಾರ ವ್ಯಾಪ್ತಿ |

| | | |
|---|---|---|
| 61 | 66 | ರಾಜ್ಯ ಪಟ್ಟಿಯಲ್ಲಿರುವ ಯಾವುದೇ ವಿಷಯದ ಬಗ್ಗೆ ಸಂಬಂಧಿಸಿದ ಫೀಜುಗಳು |

## ಸಮವರ್ತಿ ಪಟ್ಟಿಯಲ್ಲಿ ನಮೂದಿಸಿರುವ ವಿಷಯಗಳು 52 :

| ಕ್ರ. ಸಂ | ವಿಷಯಗಳಿಗೆ ಸಂಖ್ಯೆ | ವಿಷಯಗಳು |
|---|---|---|
| 1 | 1 | ಅಪರಾಧಿ ಕಾನೂನು, ಇಂಡಿಯನ್ ಪೀನಲ್ ಕೋಡ್ |
| 2 | 2 | ಅಪರಾಧ ವಿಧಾನ |
| 3 | 3 | ಮುನ್ನೆಚ್ಚರಿಕೆ ಬಂಧನ ಕಾನೂನು |
| 4 | 4 | ಅಪರಾಧಿಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಕಳುಹಿಸುವುದು |
| 5 | 5 | ಮದುವೆ & ವಿಚ್ಚೇದನ, ದತ್ತು, ವಿಲ್‌ಗಳು, ಶಿಶು & ಉತ್ತರಾಧಿಕಾರಿ, ಅಪ್ರಾಪ್ತರು, ಜಂಟಿ ಕುಟುಂಬ & ವಿಭಜನೆ |
| 6 | 6 | ಬೇಸಾಯ ಭೂಮಿ ಬಿಟ್ಟು ಇತರ ಆಸ್ತಿ ವರ್ಗಾವಣೆ; ಪತ್ರ & ದಾಖಲೆಗಳ ನೋಂದಣಿ |
| 7 | 7 | ಬೇಸಾಯ ಭೂಮಿಗೆ ಸಂಬಂಧಿಸಿದ ಒಪ್ಪಂದಗಳನ್ನು ಬಿಟ್ಟು ಇತರ ಒಪ್ಪಂದಗಳು |
| 8 | 8 | ಕೆಟ್ಟಿರುವವನ್ನು ಹರಾಜು ಮಾಡುವುದು |
| 9 | 9 | ದಿವಾಳಿತನ & ಸಾಲ ತೀರಿಸಲಾಗದ ಸ್ಥಿತಿ |
| 10 | 10 | ಟ್ರಸ್ಟ್ & ಟ್ರಸ್ಟಿಗಳು |
| 11 | 11 | ಆಡಳಿತಗಾರರು ಸಾಮಾನ್ಯ & ಅಧಿಕೃತ ಟ್ರಸ್ಟಿಗಳು |
| 12 | 11 ಎ | ನ್ಯಾಯದ ಅನುಷ್ಠಾನ, ಸುಪ್ರಿಂಕೋರ್ಟ್ & ಹೈಕೋರ್ಟ್‌ಗಳನ್ನು ಬಿಟ್ಟು ಇತರ ಕೋರ್ಟ್‌ಗಳ ರಚನೆ |
| 13 | 12 | ಸಾಕ್ಷಿ & ಪ್ರತಿಜ್ಞೆ, ಕಾನೂನುಗಳ ಮನ್ನಣೆ, ಸಾರ್ವಜನಿಕ ಕಾಯ್ದೆಗಳು & ರೆಕಾರ್ಡ್‌ಗಳು ಹಾಗೂ ನ್ಯಾಯಿಕ ವಿಧಾನಗಳು |
| 14 | 13 | ಸಿವಿಲ್ ಪ್ರೋಸಿಜರ್ |
| 15 | 14 | ನ್ಯಾಯಲಯ ನಿಂದನೆ |
| 16 | 15 | ಅಲೆಮಾರಿತನ & ವಲಸೆ ಹೋಗುವ ಬುಡಕಟ್ಟು ಜನರು |
| 17 | 16 | ಮತಿಭ್ರಮಣೆ |
| 18 | 17 | ಪ್ರಾಣಿಗಳಿಗೆ ಕೊಡುವ ಕ್ರೌರ್ಯದ ನಿಷೇಧ |
| 19 | 17 ಎ | ಅರಣ್ಯಗಳು |
| 20 | 17 ಬಿ | ವನ್ಯ ಮೃಗಗಳು & ಪಕ್ಷಿಗಳ ರಕ್ಷಣೆ |
| 21 | 18 | ಆಹಾರ ಹಾಗೂ ಇತರ ಪದಾರ್ಥಗಳ ಕಲಬೆರಕೆ |
| 22 | 19 | ಔಷಧಿಗಳು & ವಿಷ |

GNANADHARE IAS KAS ACADEMY

| | | |
|---|---|---|
| 23 | 20 | ಆರ್ಥಿಕ & ಸಾಮಾಜಿಕ ಯೋಜನೆ |
| 24 | 20 ಎ | ಜನಸಂಖ್ಯೆ ನಿಯಂತ್ರಣ & ಕುಟುಂಬ ಯೋಜನೆ |
| 25 | 21 | ವಾಣಿಜ್ಯ & ಕೈಗಾರಿಕಾ ಏಕ ಸ್ವಾಮ್ಯತೆಗಳು, ಸಂಯೋಜನೆಗಳು & ಟ್ರಸ್ಟ್‌ಗಳು |
| 26 | 22 | ಟ್ರೇಡ್ ಯೂನಿಯನ್‌ಗಳು, ಕೈಗಾರಿಕಾ & ಕಾರ್ಮಿಕ ವಿವಾದಗಳು |
| 27 | 23 | ಸಾಮಾಜಿಕ ಭದ್ರತೆ & ಸಾಮಾಜಿಕ ವಿಮೆ; ಉದ್ಯೋಗ ಹಾಗೂ ನಿರುದ್ಯೋಗ |
| 28 | 24 | ಕಾರ್ಮಿಕರ ಕಲ್ಯಾಣ |
| 29 | 25 | ಶಿಕ್ಷಣ |
| 30 | 26 | ಕಾನೂನಿನ, ವೈದ್ಯಕೀಯ & ಇತರ ಉದ್ಯೋಗಳು |
| 31 | 27 | ಭಾರತದ ವಿಭಜನೆ ನಂತರ ಸ್ಥಳ ಪಲ್ಲಟಕ್ಕೆ ಒಳಗಾದವರ ಪುನರ್ ವಸತಿ & ಸಹಾಯ |
| 32 | 28 | ಧರ್ಮ ಸಂಸ್ಥೆಗಳು ಹಾಗೂ ಧಾರ್ಮಿಕ ದತ್ತಿಗಳು & ಧಾರ್ಮಿಕ ಸಂಸ್ಥೆಗಳು |
| 33 | 29 | ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಅಂಟು ಅಥವಾ ಸೋಂಕು ರೋಗಗಳು ಹರಡದಂತೆ ತಡೆಯುವುದು |
| 34 | 30 | ಜನನ & ಮರಣಗಳ ನೋಂದಣಿ |
| 35 | 31 | ಸಂಸತ್ತು ನಿರ್ಧರಿಸುವ ಪ್ರಧಾನ ಬಂದರುಗಳನ್ನು ಬಿಟ್ಟು, ಇತರ ಬಂದರುಗಳು |
| 36 | 32 | ಕೇಂದ್ರದ ರಾಷ್ಟ್ರೀಯ ಜಲ ಮಾರ್ಗಗಳ ಅಧಿಕಾರಕ್ಕೆ ಒಳಪಟ್ಟ ನೌಕೆಗಳು & ನೌಕಾಯಾನ |
| 37 | 33 | ಆಹಾರ ಪದಾರ್ಥಗಳು, ಮೇವು, ಕಚ್ಚಾ ಹತ್ತಿ & ಹತ್ತಿ ಬೀಜಗಳಿಗೆ ಸಂಬಂಧಿಸಿದಂತೆ ವಾಣಿಜ್ಯ ವ್ಯವಹಾರ |
| 38 | 33 ಎ | ತೂಕ & ಅಳತೆ |
| 39 | 34 | ಬೆಲೆ ನಿಯಂತ್ರಣ |
| 40 | 35 | ಯಾಂತ್ರಿಕವಾಗಿ ಚಲಿಸುವ ವಾಹನಗಳು |
| 41 | 36 | ಫ್ಯಾಕ್ಟರಿಗಳು |
| 42 | 37 | ಬಾಯ್ಲರ್‌ಗಳು |
| 43 | 38 | ವಿದ್ಯುಚ್ಚಕ್ತಿ |
| 44 | 39 | ವೃತ್ತ ಪತ್ರಿಕೆಗಳು, ಪುಸ್ತಕಗಳು & ಮುದ್ರಾಣಾಲಯಗಳು |
| 45 | 40 | ಐತಿಹಾಸಿಕ ಸ್ಥಳಗಳು & ಅವಶೇಷಗಳು |
| 46 | 41 | ಬಿಟ್ಟು ಹೋದವರ ಆಸ್ತಿಯ ರಕ್ಷಣೆ, ನಿರ್ವಹಣೆ & ಫೈಸಲು ಮಾಡುವುದು |
| 47 | 42 | ಆಸ್ತಿಯ ಸಂಪಾದನೆ & ಉಪಯೋಗ |
| 48 | 43 | ಬರಬೇಕಾದ ತೆರಿಗೆ ಹಾಗೂ ಬಾಕಿಯನ್ನು ವಸೂಲಿ ಮಾಡುವುದು |
| 49 | 44 | ಸ್ಟ್ಯಾಂಪ್ ಡ್ಯೂಟಿ |
| 50 | 45 | ರಾಜ್ಯ ಅಥವಾ ಸಮವರ್ತಿ ಪಟ್ಟಿಯಲ್ಲಿರುವ ಯಾವುದೇ ವಿಷಯದ |

GNANADHARE IAS KAS ACADEMY

| | | |
|---|---|---|
| | | ಉದ್ದೇಶಕ್ಕಾಗಿ ವಿಚಾರಣೆ & ಸಂಖ್ಯಾ ಸಂಗ್ರಹಣ |
| 51 | 46 | ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲ ನ್ಯಾಯಲಯಗಳ ಅಧಿಕಾರ ವ್ಯಾಪ್ತಿ. |
| 52 | 47 | ಈ ಪಟ್ಟಿಯಲ್ಲಿರುವ ಯಾವುದೇ ವಿಷಯದ ಬಗ್ಗೆ ಸಂಬಂಧಿಸಿದ ಫೀಜುಗಳು |

# ರಾಜ್ಯಪಾಲರು :

| ಅನುಚ್ಛೇದಗಳು | ವಿವರಣೆ |
|---|---|
| 153ನೇ ಅನುಚ್ಛೇದ | ಪ್ರತಿಯೊಂದು ರಾಜ್ಯಕ್ಕೆ ಒಬ್ಬರು ರಾಜ್ಯಪಾಲರು ಇರಬೇಕು. 1956ರ ತಿದ್ದುಪಡಿಯ ನಂತರ 2/2ಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಬ್ಬನೇ ರಾಜ್ಯಪಾಲರು ರಾಷ್ಟ್ರಪತಿಗಳು ನೇಮಿಸಬಹುದಾಗಿದೆ. |
| 154ನೇ ಅನುಚ್ಛೇದ | ರಾಜ್ಯದ ಸಮಸ್ತ ಕಾರ್ಯಾಂಗ ಅಧಿಕಾರವೆಲ್ಲವೂ ರಾಜ್ಯಪಾಲರ ಹೆಸರಿನಲ್ಲಿದ್ದು, ಅವರು ನೇರವಾಗಲಿ ಅಥವಾ ತಮ್ಮ ಅಧೀನ ಅಧಿಕಾರಿಗಳ ಮುಖಾಂತರ ಸಂವಿಧಾನಕ್ಕನುಸಾರವಾಗಿ ಚಲಾಯಿಸಬಹುದು. |
| 155ನೇ ಅನುಚ್ಛೇದ | **ರಾಜ್ಯಪಾಲರ ನೇಮಕಾತಿ** :<br>ರಾಜ್ಯದ ರಾಜ್ಯಪಾಲರನ್ನು ಭಾರತದ ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ |
| 156ನೇ ಅನುಚ್ಛೇದ | **ರಾಜ್ಯಪಾಲರ ಅಧಿಕಾರವಧಿ** :<br>156(1) : ರಾಜ್ಯಪಾಲರು ರಾಷ್ಟ್ರಪತಿಗಳ ಇಷ್ಟಪರ್ಯಂತ ಅಧಿಕಾರದಲ್ಲಿರುತ್ತಾರೆ.<br>156(2) : ರಾಜ್ಯಪಾಲರು ತಾವು ಸಹಿ ಮಾಡಿದ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿಯವರಿಗೆ ನೀಡುವುದರೊಂದಿಗೆ ತಮ್ಮ ಸ್ಥಾನದಿಂದ ನಿರ್ಗಮಿಸಬಹುದು.<br>156(3) : ರಾಜ್ಯಪಾಲರು ತಾವು ಅಧಿಕಾರ ವಹಿಸಿಕೊಂಡ ದಿನದಿಂದ 5 ವರ್ಷಗಳವರೆಗೆ ಅಧಿಕಾರದಲ್ಲಿರುತ್ತಾರೆ. |
| 157ನೇ ಅನುಚ್ಛೇದ | **ರಾಜ್ಯಪಾಲರಾಗಿ ನೇಮಕಗೊಳ್ಳಲು ಅರ್ಹತೆಗಳು**<br>ಭಾರತದ ಪ್ರಜೆಯಾಗಿರಬೇಕು<br>ಕನಿಷ್ಠ ಪಕ್ಷ 35 ವರ್ಷ ವಯಸ್ಸಾಗಿರಬೇಕು |
| 158ನೇ ಅನುಚ್ಛೇದ | **ರಾಜ್ಯಪಾಲರ ಸ್ಥಾನದ ಷರತ್ತುಗಳು** :<br>158(1) : ಸಂಸತ್ತು & ರಾಜ್ಯ ವಿಧಾನಮಂಡಲದ ಯಾವುದೇ ಸದನದ ಸದಸ್ಯನಾಗಿದ್ದರೆ ರಾಜ್ಯಪಾಲ ಹುದ್ದೆಯನ್ನು ವಹಿಸಿಕೊಳ್ಳುವ ಮೊದಲು ಶಾಸಕಾಂಗದ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕು.<br>158(2) : ಯಾವುದೇ ಲಾಭದಾಯಕ ಹುದ್ದೆ ಹೊಂದಿರಬಾರದು |

GNANADHARE IAS KAS ACADEMY

| | |
|---|---|
| | 158(3) : ರಾಜ್ಯಪಾಲರು ಬಾಡಿಗೆರಹಿತ ಅಧಿಕೃತ ನಿವಾಸ, ಸಂವಿಧಾನದ 2ನೇ ಅನುಸೂಚಿಯಲ್ಲಿ ಸಂಸತ್ತು ನಿಗಧಿಪಡಿಸಿದ ವೇತನ ಹಾಗೂ ಭತ್ಯೆಗಳನ್ನು ಪಡೆಯುವರು. ಪ್ರಸ್ತುತ ವೇತನ 1,10,000 ರೂ.<br>158(4) : ರಾಜ್ಯಪಾಲರ ಅಧಿಕಾರವಧಿಯಲ್ಲಿ ಅವರ ವೇತನ ಹಾಗೂ ಭತ್ಯೆಗಳನ್ನು ಕಡಿತಗೊಳಿಸುವಂತಿಲ್ಲ. |
| 159ನೇ ಅನುಚ್ಛೇದ | **ರಾಜ್ಯಪಾಲರ ಪ್ರಮಾಣ ವಚನ** :<br>ರಾಜ್ಯಪಾಲರು ತಮ್ಮ ಸ್ಥಾನವನ್ನು ವಹಿಸಿಕೊಳ್ಳುವ ಮೊದಲು ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಎದುರು ಅಥವಾ ಗೈರುಹಾಜರಿಯಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಪೈಕಿ ಲಭ್ಯವಿರುವ ಜೇಷ್ಠ ನ್ಯಾಯಾಧೀಶನ ಸಮಕ್ಷಮದಲ್ಲಿ ಸಂವಿಧಾನದ 3ನೇ ಅನುಸೂಚಿಯಲ್ಲಿ ನಮೂನೆಯಲ್ಲಿ ಅಧಿಕಾರ ಗೋಪ್ಯತೆಯ ಪ್ರಮಾಣ ವಚನವನ್ನು ಸ್ವೀಕರಿಸಿ ಅದಕ್ಕೆ ತನ್ನ ಸಹಿ ಹಾಕಬೇಕು. |

## ರಾಜ್ಯಪಾಲರ ಶಾಸನೀಯ ಅಧಿಕಾರಗಳು :

| ಅನುಚ್ಛೇದಗಳು | ವಿವರಣೆ |
|---|---|
| 168ನೇ ಅನುಚ್ಚೇದ | ರಾಜ್ಯಪಾಲರು ರಾಜ್ಯವಿಧಾನಮಂಡಲದ ಸದಸ್ಯರಲ್ಲದಿದ್ದರೂ ಕೂಡ ರಾಜ್ಯಪಾಲರನ್ನೂ ರಾಜ್ಯ ವಿಧಾನಮಂಡಳದ ಅವಿಭಾಜ್ಯ ಅಂಗ ಎಂದು ಪರಿಗಣಿಸುತ್ತಾರೆ. |
| 174ನೇ ಅನುಚ್ಚೇದ | ರಾಜ್ಯ ವಿಧಾನ ಮಂಡಳದ ಅಧಿವೇಶನವನ್ನು ಕರೆಯುವ, ಮುಂದೂಡುವ ಹಾಗೂ ವಿಸರ್ಜಿಸುವ ಅಧಿಕಾರವನ್ನು ರಾಜ್ಯಪಾಲರು ಹೊಂದಿರುತ್ತಾರೆ.<br>ವಿಧಾನಮಂಡಳದ ಅಧಿವೇಶನದ ಕೊನೆಯ ಉಪಸ್ಥಿತಿ ಹಾಗೂ ಮುಂದಿನ ಅಧಿವೇಶನದ ಮೊದಲ ವಸ್ತುಸ್ಥಿತಿಗಳ ಮಧ್ಯ 6 ತಿಂಗಳಿಗಿಂತ ಹೆಚ್ಚಿನ ಅಂತರವಿರಬಾರದು. |
| 175ನೇ ಅನುಚ್ಚೇದ | ರಾಜ್ಯ ವಿಧಾನಮಂಡಳಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವ ಹಾಗೂ ಅಧಿವೇಶನದ ಸಂದರ್ಭದಲ್ಲಿ ಸಂದೇಶಗಳನ್ನು ಕಳುಹಿಸುವ ಅಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ |
| 171(5)ನೇ ಅನುಚ್ಚೇದ | ಕಲೆ, ಸಾಹಿತ್ಯ, ವಿಜ್ಞಾನ, ಸಹಕಾರ ಚಳುವಳಿ & ಸಮಾಜಸೇವೆ ಇವುಗಳಲ್ಲಿ ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವ ಹೊಂದಿದ 11 ಜನ ಪರಿಣಿತರನ್ನು ರಾಜ್ಯಪಾಲರು 6 ವರ್ಷಗಳ ಅವಧಿಗೆ ರಾಜ್ಯ ವಿಧಾನ ಪರಿಷತ್ತಿಗೆ ನಾಮ ನಿರ್ದೇಶನ ಮಾಡುತ್ತಾರೆ. |


GNANADHARE IASKAS ACADEMY

| | |
|---|---|
| 176ನೇ ಅನುಚ್ಛೇದ | ಸಾರ್ವತ್ರಿಕ ಚುನಾವಣೆಯ ನಂತರ ಆಸ್ತಿತ್ವಕ್ಕೆ ಬಂದ ಹೊಸ ವಿಧಾನಸಭೆಯ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ವಿಶೇಷ ಭಾಷಣ ಮಾಡುತ್ತಾರೆ. |
| 192ನೇ ಅನುಚ್ಛೇದ | ರಾಜ್ಯ ಶಾಸಕರುಗಳ ಅನರ್ಹತೆಯ ಬಗ್ಗೆ ವಿವಾದಗಳು ಉಂಟಾದರೆ ಚುನಾವಣಾ ಆಯೋಗದ ಸಲಹೆಗಳನ್ನು ಪಡೆದು ರಾಜ್ಯಪಾಲರು ಅನರ್ಹತೆಯ ವಿವಾದವನ್ನು ಇತ್ಯರ್ಥಪಡಿಸುವರು. ಈ ಬಗ್ಗೆ ರಾಜ್ಯಪಾಲರ ತೀರ್ಮಾನವೇ ಅಂತಿಮವಾಗಿರುತ್ತದೆ |
| 200ನೇ ಅನುಚ್ಛೇದ | ವಿಧಾನ ಮಂಡಲದಿಂದ ಪಾಸಾದ ವಿಧೇಯಕ ಕಾಯ್ದೆಯಾಗಿ ಜಾರಿಯಲ್ಲಿ ಬರಬೇಕಾದರೆ ರಾಜ್ಯಪಾಲರು ಅಂಕಿತ ಅವಶ್ಯಕ. ರಾಜ್ಯಪಾಲರು ಅಂಕಿತಕ್ಕೆ ಮಸೂದೆ ಬಂದಾಗ ವಿಧೇಯಕಕ್ಕೆ ಅಂಕಿತ ಹಾಕಬಹುದು ಅಥವಾ ತಡೆ ಹಿಡಿಯಬಹುದು.<br>ಈ ಕೆಳಕಂಡ ಸಂದರ್ಭಗಳಲ್ಲಿ ರಾಜ್ಯಪಾಲರು ಮಸೂದೆಗಳನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಬಹುದು<br>• ರಾಜ್ಯ ಶಾಸಕಾಂಗ ಅಂಗೀಕರಿಸಿದ ಮಸೂದೆಯೂ ಕೇಂದ್ರ ವಿಷಯಗಳ ವಿರುದ್ಧ ಘರ್ಷಣೆಯನ್ನುಂಟು ಮಾಡುವಂತಿದ್ದರೆ<br>• ಮಸೂದೆಯು ರಾಜ್ಯ ಹೈಕೋರ್ಟಿನ ಅಧಿಕಾರ ವ್ಯಾಪ್ತಿಗೆ ದಕ್ಕೆಯನ್ನುಂಟು ಮಾಡುವಂತಿದ್ದರೆ. |
| 213ನೇ ಅನುಚ್ಛೇದ | ರಾಜ್ಯ ವಿಧಾನಮಂಡಳದ ಅಧಿವೇಶನದಲ್ಲಿ ಇಲ್ಲದಿದ್ದಾಗ ತುರ್ತು ಕ್ರಮ ಕೈಗೊಳ್ಳಬೇಕಾದ ಸಂದರ್ಭ ಒದಗಿದರೆ ರಾಜ್ಯಪಾಲರು ಸುಗ್ರೀವಾಜ್ಞೆಗಳನ್ನು ಹೊರಡಿಸಬಹುದು. |
| 323(2)ನೇ ಉಪನುಚ್ಛೇದ | ರಾಜ್ಯ ಲೋಕಸೇವಾ ಆಯೋಗವು ಒಪ್ಪಿಸಿದ ವಾರ್ಷಿಕ ವರದಿಯನ್ನು ವಿಧಾನ ಮಂಡಲದಲ್ಲಿ ಮಂಡಿಸಲು ರಾಜ್ಯಪಾಲರು ಕ್ರಮ ಕೈಗೊಳ್ಳುವರು. |
| 333ನೇ ಅನುಚ್ಛೇದ | ರಾಜ್ಯ ವಿಧಾನ ಸಭೆಯಲ್ಲಿ ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಪ್ರಾತಿನಿಧ್ಯತೆ ಇಲ್ಲವೆಂದಾಗ ರಾಜ್ಯಪಾಲರು ವಿಧಾನ ಸಭೆಗೆ ಒಬ್ಬ ಆಂಗ್ಲೋ ಇಂಡಿಯನ್‌ರನ್ನು ನಾಮ ನಿರ್ದೇಶನ ಮಾಡುತ್ತಾರೆ. |
| 154ನೇ ಅನುಚ್ಛೇದ | ರಾಜ್ಯದ ಸಮಸ್ತ ಕಾರ್ಯಾಂಗೀಯ ಅಧಿಕಾರಗಳು ರಾಜ್ಯಪಾಲರ ಹೆಸರಿನಲ್ಲಿದ್ದು, ಅವರು ನೇರವಾಗಿ ಅಥವಾ ತಮ್ಮ ಅಧೀನ ಅಧಿಕಾರಿಗಳ ಮುಖಾಂತರ ಸಂವಿಧಾನಕ್ಕನುಸಾರವಾಗಿ ಚಲಾಯಿಸತಕ್ಕದ್ದು. |
| 163ನೇ ಅನುಚ್ಛೇದ | ರಾಜ್ಯಪಾಲರ ವಿವೇಚನಾ ಅಧಿಕಾರಿಗಳನ್ನು ಹೊರತುಪಡಿಸಿ ಉಳಿದೆಲ್ಲ ಕಾರ್ಯಾಂಗೀಯ ಅಧಿಕಾರಗಳನ್ನು ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಳದ ಸಲಹೆಗೆ ಅನುಗುಣವಾಗಿ ಚಲಾಯಿಸತಕ್ಕದ್ದು. |
| 164ನೇ ಅನುಚ್ಛೇದ | ರಾಜ್ಯಪಾಲರು ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ ಮುಖಂಡನನ್ನು ಮುಖ್ಯಮಂತ್ರಿಯಾಗಿ ಹಾಗೂ ಮುಖ್ಯಮಂತ್ರಿಯ ಸಲಹೆ |

GNANADHARE IAS KAS ACADEMY

| | |
|---|---|
| | ಮೇರೆಗೆ ಇತರ ಮಂತ್ರಿಗಳನ್ನು ನೇಮಕ ಮಾಡುತ್ತಾರೆ. |
| 165ನೇ ಅನುಚ್ಛೇದ | ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳುವ ಅರ್ಹತೆಯುಳ್ಳ ವ್ಯಕ್ತಿಯನ್ನು ರಾಜ್ಯದ ಅಡ್ವೊಕೇಟ್ ಜನರಲ್‌ನನ್ನಾಗಿ ನೇಮಕ ಮಾಡುತ್ತಾರೆ. |
| 167ನೇ ಅನುಚ್ಛೇದ | ಮಂತ್ರಿಮಂಡಳದ ತೀರ್ಮಾನಗಳನ್ನು ಮುಖ್ಯಮಂತ್ರಿಗಳು ರಾಜ್ಯಪಾಲರ ಜೊತೆ ಸಮಾಲೋಚಿಸುತ್ತಾರೆ |
| 217ನೇ ಅನುಚ್ಛೇದ | ರಾಜ್ಯ ಉಚ್ಚ ನ್ಯಾಯಲಯದ ನ್ಯಾಯಾಧೀಶರನ್ನು ನೇಮಕ ಮಾಡುವಾಗ ರಾಷ್ಟ್ರಪತಿಯವರು ರಾಜ್ಯಪಾಲರ ಸಲಹೆಯನ್ನು ಪಡೆಯುವರು. |
| 356ನೇ ಅನುಚ್ಛೇದ | ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಘೋಷಣೆಯಾದಾಗ ರಾಷ್ಟ್ರಪತಿಯವರ ಪರವಾಗಿ ರಾಜ್ಯಪಾಲರು ರಾಜ್ಯದ ಆಡಳಿತ ನಡೆಸುವರು. |
| 316ನೇ ಅನುಚ್ಛೇದ | ರಾಜ್ಯಲೋಕಸೇವಾ ಆಯೋಗದ ಅಧ್ಯಕ್ಷ ಹಾಗೂ ಸದಸ್ಯರನ್ನು ನೇಮಕ ಮಾಡುತ್ತಾರೆ. |
| | ರಾಜ್ಯ ಚುನಾವಣಾ ಆಯುಕ್ತರನ್ನು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಹಾಗೂ ಸದಸ್ಯರನ್ನು ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಹಾಗೂ ಸದಸ್ಯರನ್ನು ರಾಜ್ಯ ಮಂತ್ರಿಮಂಡಳದ ಸಲಹೆ ಮೇರೆಗೆ ರಾಜ್ಯಪಾಲರು ನೇಮಕ ಮಾಡುತ್ತಾರೆ. |

## ರಾಜ್ಯಪಾಲರ ಹಣಕಾಸಿನ ಅಧಿಕಾರಗಳು :

| **ಅನುಚ್ಛೇದಗಳು** | **ವಿವರಣೆ** |
|---|---|
| 207(1)ನೇ ವಿಧಿ | ರಾಜ್ಯಪಾಲರ ಶಿಫಾರಸ್ಸಿಲ್ಲದೇ ಹಣಕಾಸು ಮಸೂದೆಯನ್ನು ವಿಧಾನ ಮಂಡಲದಲ್ಲಿ ಮಂಡಿಸುವಂತಿಲ್ಲ ಅಥವಾ ತಿದ್ದುಪಡಿ ಮಾಡುವಂತಿಲ್ಲ. |
| 202ನೇ ಅನುಚ್ಛೇದ | ಪ್ರತಿ ವರ್ಷದ ಸರ್ಕಾರದ ಆದಾಯ & ವೆಚ್ಚಗಳ ಅಂದಾಜು ವಿವರಣೆಯಾದಾಗ ವಾರ್ಷಿಕ ಹಣಕಾಸು ವಿವರ ಪತ್ರವನ್ನು ರಾಜ್ಯ ಹಣಕಾಸು ಸಚಿವರು ರಾಜ್ಯ ಶಾಸಕಾಂಗದ ಮುಂದೆ ಮಂಡಿಸಲು ರಾಜ್ಯಪಾಲರು ಕ್ರಮಕೈಗೊಳ್ಳುತ್ತಾರೆ. |
| 203(3)ನೇ ಉಪ ಅನುಚ್ಛೇದ | ರಾಜ್ಯಪಾಲರು ಶಿಫಾರಸ್ಸಿಲ್ಲದೆ ಅನುದಾನಕ್ಕೆ ಸಂಬಂಧಿಸಿದ ಯಾವುದೇ ಬೇಡಿಕೆಯನ್ನು ಮಂಡಿಸತಕ್ಕದ್ದಲ್ಲ |
| 205ನೇ ಅನುಚ್ಛೇದ | ಅಗತ್ಯವೆನಿಸಿದಾಗ ಪೂರಕ ಅಧಿಕ ಅಥವಾ ಹೆಚ್ಚಿನ ಅನುದಾನಗಳ ವ್ಯಯ ಪಟ್ಟಿಯನ್ನು ಮಂಡಿಸುವಂತೆ ಕ್ರಮಕೈಗೊಳ್ಳಬೇಕಾದ ಅಧಿಕಾರ ರಾಜ್ಯಪಾಲರಿಗಿದೆ. |
| 243(ಐ)ನೇ ಅನುಚ್ಛೇದ | ಪಂಚಾಯತ್ ಸಂಸ್ಥೆಗಳ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಲು ರಾಜ್ಯಪಾಲರು ರಾಜ್ಯ ಹಣಕಾಸು ಆಯೋಗವನ್ನು ರಚಿಸುವರು. |

| | |
|---|---|
| | ಅನಿರೀಕ್ಷಿತ ತುರ್ತು ವೆಚ್ಚಗಳನ್ನು ಭರಿಸಲು ರಾಜ್ಯದ ಸಾದಿಲ್ವಾರು ನಿಧಿಯಿಂದ ಹಣವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ರಾಜ್ಯಪಾಲರು ಹೊಂದಿರುವರು. |

## ರಾಜ್ಯಪಾಲರ ನ್ಯಾಯಿಕ ಅಧಿಕಾರಗಳು :

| ಅನುಚ್ಛೇದಗಳು | ವಿವರಣೆ |
|---|---|
| 161ನೇ ಅನುಚ್ಛೇದ | ರಾಜ್ಯ ಕಾರ್ಯಾಂಗ ಅಧಿಕಾರ ವ್ಯಾಪ್ತಿಯಲ್ಲಿ ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗೆ ಕ್ಷಮಾದಾನ ಮಾಡುವ, ಶಿಕ್ಷೆಯನ್ನು ಮುಂದೂಡುವ, ಒಂದು ಶಿಕ್ಷೆಯನ್ನು ಬೇರೆ ಶಿಕ್ಷೆಗೆ ಪರಿವರ್ತಿಸುವ, ಮರಣ ದಂಡನೆಯನ್ನು ರದ್ದುಗೊಳಿಸುವ ಅಧಿಕಾರ ಇಲ್ಲದಿದ್ದರೂ ಕೂಡ ತಾತ್ಕಾಲಿಕವಾಗಿ ತಡೆಹಿಡಿಯುವ ಅಧಿಕಾರವನ್ನು ರಾಜ್ಯಪಾಲರು ಹೊಂದಿರುವರು. |
| 233(1)ನೇ ಉಪ ಅನುಚ್ಛೇದ | ಉಚ್ಚ ನ್ಯಾಯಾಲಯದೊಡನೆ ಸಮಲೋಚಿಸಿ ಜಿಲ್ಲಾ ನ್ಯಾಯಾಧೀಶರ ನೇಮಕ, ಸ್ಥಳ ನಿಯುಕ್ತಿ & ಬಡ್ತಿ ನೀಡುವ ಅಧಿಕಾರವನ್ನು ರಾಜ್ಯಪಾಲರು ಹೊಂದಿರುತ್ತಾರೆ. |
| 234ನೇ ಅನುಚ್ಛೇದ | ಉಚ್ಚ ನ್ಯಾಯಾಲಯ ಹಾಗೂ ರಾಜ್ಯ ಲೋಕಸೇವಾ ಆಯೋಗದೊಡನೆ ಸಮಾಲೋಚಿಸಿ ನಿಯಮಾವಳಿಗಳಿಗೆ ಅನುಸಾರವಾಗಿ ರಾಜ್ಯದ ನ್ಯಾಯಿಕ ಸೇವೆಗೆ ಜಿಲ್ಲಾ ನ್ಯಾಯಾಧೀಶರಲ್ಲದ ಇತರೆ ನ್ಯಾಯಿಕ ಅಧಿಕಾರಗಳನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ. |
| 165ನೇ ಅನುಚ್ಛೇದ | ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳುವ ಅರ್ಹತೆಯನ್ನು ಹೊಂದಿದ ವ್ಯಕ್ತಿಯನ್ನು ರಾಜ್ಯಪಾಲರು ರಾಜ್ಯ ಅಡ್ವೋಕೇಟ್ ಜನರಲ್‌ನನ್ನಾಗಿ ನೇಮಕ ಮಾಡುತ್ತಾರೆ. |
| 217ನೇ ಅನುಚ್ಛೇದ | ರಾಜ್ಯ ಹೈಕೋರ್ಟ್ ನ್ಯಾಯಾಧೀಶರನ್ನು ನೇಮಕ ಮಾಡುವಾಗ ರಾಷ್ಟ್ರಪತಿಯವರು ಸಂಬಂಧಿಸಿದ ರಾಜ್ಯದ ರಾಜ್ಯಪಾಲರ ಸಲಹೆಯನ್ನು ಪಡೆಯುವರು. |

GNANADHARE IAS KAS ACADEMY

## ರಾಜ್ಯಪಾಲರ ವಿವೇಚನಾ ಅಧಿಕಾರಗಳು :

### ಮಂತ್ರಿಮಂಡಳದ ಸಲಹೆ ಪಡೆಯದೇ ರಾಜ್ಯಪಾಲರು ಚಲಾಯಿಸುವ ಅಧಿಕಾರಗಳನ್ನು ವಿವೇಚನಾ ಅಧಿಕಾರಗಳೆನ್ನುವರು.

- ಮುಖ್ಯಮಂತ್ರಿಯ ನೇಮಕ ಮಾಡುತ್ತಾರೆ.
- ಸರ್ಕಾರ ವಿಧಾನ ಸಭೆಯ ವಿಶ್ವಾಸವನ್ನು ಕಳೆದುಕೊಂಡಾಗ, ಮಂತ್ರಿಮಂಡಳ ಸಂವಿಧಾನಕ್ಕನುಗುಣವಾಗಿ ಕಾರ್ಯ ನಿರ್ವಹಿಸದೆ ಇದ್ದಾಗ, ಬಹುಮತ ಕಳೆದುಕೊಂಡು ಮುಖ್ಯಮಂತ್ರಿ ರಾಜೀನಾಮೆ ಕೊಡದಿದ್ದಾಗ, ಅವಿಶ್ವಾಸ ಮಂಡನೆಯು ಸರ್ಕಾರದ ವಿರುದ್ಧವಾದಾಗ, ಮಂತ್ರಿಮಂಡಲ ವಜಾ ಮಾಡುವ ರಾಜ್ಯಪಾಲರ ಅಧಿಕಾರ
- ರಾಜ್ಯದಲ್ಲಿ ಪರ್ಯಾಯ ಸರ್ಕಾರ ರಚನೆ ಅಸಾಧ್ಯವಾದಾಗ, ವಿಧಾನ ಸಭೆಯ ವಿಸರ್ಜನಾಧಿಕಾರ.
- ವಿಧಾನಮಂಡಳ ಅಂಗೀಕರಿಸಿ ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಿದ ಮಸೂದೆಗೆ ಒಪ್ಪಿಗೆ ಕೊಡುವ ತಡೆಹಿಡಿಯುವ ಅಥವಾ ರಾಷ್ಟ್ರಪತಿಯವರ ಪರ್ಯಾಲೋಚನೆಗಾಗಿ ಕಾಯ್ದಿರಿಸುವ ಅಧಿಕಾರ.
- 356ನೇ ವಿಧಿಯನ್ನು ಘೋಷಿಸಲು ರಾಜ್ಯಪಾಲರು ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡುವ ವರದಿ.

## ರಾಜ್ಯಪಾಲರ ವಿಶೇಷ ಜವಾಬ್ದಾರಿಗಳು :

- ಕೆಲವು ರಾಜ್ಯಗಳ ಜಿಲ್ಲಾ ಮಂಡಳಿಗಳಿಗೆ ರಾಯಲ್ಟಿಯನ್ನು ನೀಡುವ ಅಧಿಕಾರ
- ಕೆಲವು ರಾಜ್ಯಗಳ ಬುಡಕಟ್ಟು ಪ್ರದೇಶಗಳಲ್ಲಿ ಶಾಂತಿ & ಸುವ್ಯವಸ್ಥೆಗಾಗಿ ವಿಶೇಷ ಜವಾಬ್ದಾರಿಗಳನ್ನು ನಿರ್ವಹಿಸುವುದು
- ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಲಹೆ ಸೂಚನೆಗಳಿಗೆ ಪೂರಕವಾಗಿ ರಾಜ್ಯ ಶಾಸಕಾಂಗ ತೆಗೆದುಕೊಳ್ಳುವ ನಿರ್ಧಾರಗಳನ್ನು ಪರಿಶೀಲಿಸುವುದು.

GNANADHARE IAS KAS ACADEMY

## ಕರ್ನಾಟಕದ ರಾಜ್ಯಪಾಲರುಗಳು :

**Here is the Karnataka Governors List :**

| S.No | Name | Period |
|---|---|---|
| 1 | Majaraja Jayachamarajendra Wadiyar | 1957-1963 |
| 2 | S M Srinagesh | 1963-1965 |
| 3 | V. V. Giri | 1965-1967 |
| 4 | Gopal Swarup Pathak | 1967-1969 |
| 5 | Dharma Vira | 1970-1972 |
| 6 | Mohanlal Sukhadia | 1972-1975 |
| 7 | Uma Shankar Dikshit | 1975-1977 |
| 8 | Govind Narain | 1977-1982 |
| 9 | Ashoknath Banerji | 1982-1987 |
| 10 | Pendekanti Venkatasubbaiah | 1987-1990 |
| 11 | Bhanu Pratap Singh | 1990-1992 |
| 12 | Khurshed Alam Khan | 1992-1999 |
| 13 | V. S. Ramadevi | 1999-2002 |
| 14 | T. N. Chaturvedi | 2002-2007 |
| 15 | Rameshwar Thakur | 2007-2009 |
| 16 | Hans Raj Bhardwaj | 2009-2014 |
| 17 | Konijeti Rosaiah | 2014 |
| 18 | Vajubhai Rudabhai Vala | 2014 - At Present |

| ಕ್ರ.ಸಂ | ರಾಜ್ಯಪಾಲರುಗಳ ಹೆಸರು | ಅಧಿಕಾರದ ಅವಧಿ | | ಭಾವಚಿತ್ರ |
|---|---|---|---|---|
| | | ಯಿಂದ | ವರೆಗೆ | |
| 1 | ಜಯಚಾಮರಾಜೇಂದ್ರ ಒಡೆಯರ್ | 01.11.1956 | 04.05.1964 |  |
| 2 | ನ್ಯಾ.ಎಸ್.ಎಂ. ನಾಗೇಶ್ | 04.05.1964 | 02.04.1965 |  |
| 3 | ವಿ.ವಿ ಗಿರಿ | 02.04.1965 | 13.05.1967 |  |
| 4 | ಗೋಪಾಲ ಸ್ವರೂಪ್ ಪಾಟಕ್ | 13.05.1967 | 30.08.1969 |  |
| 5 | ಧರ್ಮವೀರ | 23.10.1969 | 01.02.1972 | |
| 6 | ಮೋಹನ್ ಲಾಲ್ ಸುಕಾಡಿಯಾ | 01.02.1972 | 10.01.1976 |  |
| 7 | ಉಮಾಶಂಕರ್ ದೀಕ್ಷಿತ್ | 10.01.1976 | 02.08.1977 | |
| 8 | ಗೋವಿಂದ ನಾರಾಯಣ | 02.08.1977 | 15.04.1983 |  Govind Narain |
| 9 | ಅಶೋಕ್‌ನಾಥ್ ಬ್ಯಾನರ್ಜಿ | 16.04.1983 | 25.02.1988 | |

GNANADHARE IAS KAS ACADEMY

| | | | | |
|---|---|---|---|---|
| | | | |  |
| 10 | ಪಿ. ವೆಂಕಟಸುಬ್ಬಯ್ಯ | 26.02.1988 | 05.02.1990 |  |
| 11 | ಭಾನುಪ್ರತಾಪ್ ಸಿಂಗ್ | 08.05.1990 | 06.01.1991 | |
| 12 | ಕುರ್ಷಿದ್ ಅಲಂಖಾನ್ | 06.01.1991 | 02.12.1999 |  |
| 13 | ವಿ.ಎಸ್. ರಮಾದೇವಿ | 02.12.1999 | 20.08.2002 |  |
| 14 | ಟಿ.ಎನ್. ಚತುರ್ವೇದಿ | 21.08.2002 | 20.08.2007 |  |
| 15 | ರಾಮೇಶ್ವರ ಠಾಕೂರ | 21.08.2007 | 24.01.2009 |  Ramewshwar Thakur |

GNANADHARE IAS KAS ACA

| | | | | |
|---|---|---|---|---|
| 16 | ಹಂಸರಾಜ್ ಭಾರದ್ವಾಜ್ | 25.01.2009 | 2014 |  |
| 17 | ರೋಸಯ್ಯ | 2014 | 2014 |  |
| 18 | ವಜುಬಾಯಿ ವಾಲಾ | 2014 | |  |

## ರಾಜ್ಯ ವಿಧಾನ ಮಂಡಳಿ :

| ಅನುಚ್ಛೇದಗಳು | ವಿವರಣೆ |
|---|---|
| 168ನೇ ಅನುಚ್ಛೇದ | **ರಾಜ್ಯ ವಿಧಾನಮಂಡಳಿಗಳ ರಚನೆ :**<br>ಪ್ರತಿಯೊಂದು ರಾಜ್ಯ ಮಂಡಳವು ವಿಧಾನಸಭೆ ಹಾಗೂ ವಿಧಾಸಪರಿಷತ್ತನ್ನು ಹೊಂದಿದ್ದರೆ ವಿಧಾನಪರಿಷತ್ತನ್ನು ಹಾಗೂ ರಾಜ್ಯಪಾಲರನ್ನು ಒಳಗೊಂಡಿರತಕ್ಕದ್ದು.<br>ಆಂಧ್ರಪ್ರದೇಶ, ಬಿಹಾರ, ಜಮ್ಮು & ಕಾಶ್ಮೀರ, ಕರ್ನಾಟಕ, ಮಹಾರಾಷ್ಟ್ರ & ಉತ್ತರಪ್ರದೇಶ ರಾಜ್ಯಗಳು ವಿಧಾನಪರಿಷತ್ತುಗಳನ್ನು ಹೊಂದಿದ್ದು, ದ್ವಿಸದನ ಶಾಸಕಾಂಗವನ್ನು ಹೊಂದಿವೆ |
| 169ನೇ ಅನುಚ್ಛೇದ | **ವಿಧಾನಪರಿಷತ್ತಿನ ರಚನೆ & ರದ್ದುಪಡಿಸುವಿಕೆ :**<br>ವಿಧಾನಪರಿಷತ್ತು ರಚಿಸಿಕೊಳ್ಳುವ ಅಥವಾ ರದ್ದುಪಡಿಸುವಿಕೆ ಆಯಾ ರಾಜ್ಯದ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ವಿಧಾನ ಪರಿಷತ್ತಿನ ರಚನೆ & ರದ್ದುಪಡಿಸುವಿಕೆಗೆ ಸಂಬಂಧಿಸಿದಂತೆ ರಾಜ್ಯ ವಿಧಾನಸಭೆ 2/3 ಬಹುಮತದಿಂದ ಗೊತ್ತುವಳಿಯೊಂದನ್ನು ಅಂಗೀಕರಿಸಿದರೆ ಸಂಸತ್ತು ಸೂಕ್ತ ಕಾನೂನು ರಚಿಸುವುದರ ಮೂಲಕ ವಿಧಾನಪರಿಷತ್ತನ್ನು ಹೊಸದಾಗಿ ರಚಿಸುವ ಹಾಗೂ ರದ್ದುಪಡಿಸುವ ಕ್ರಮಕೈಗೊಳ್ಳುತ್ತದೆ. |

GNANADHARE IAS KAS ACADEMY

| | |
|---|---|
| 170ನೇ ಅನುಚ್ಛೇದ | **ವಿಧಾನಸಭೆಯ ರಚನೆ :**<br>ರಾಜ್ಯ ವಿಧಾನಸಭೆಯು ರಾಜ್ಯದಲ್ಲಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ಜನರಿಂದ ನೇರವಾಗಿ ಚುನಾಯಿತಗೊಳ್ಳುವ 500ಕ್ಕಿಂತ ಹೆಚ್ಚಿಲ್ಲದಷ್ಟು ಹಾಗೂ 60ಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರನ್ನು ಒಳಗೊಂಡಿರುತ್ತದೆ.<br>ವಿಧಾನಸಭೆಯಲ್ಲಿ ಆಂಗ್ಲೊ-ಇಂಡಿಯನ್ನರಿಗೆ ಸೂಕ್ತ ಪ್ರಾತಿನಿಧ್ಯತೆ ಇಲ್ಲದಿದ್ದಾಗ ರಾಜ್ಯಪಾಲರು ಒಬ್ಬರು ಆಂಗ್ಲೋ-ಇಂಡಿಯನ್ನರನ್ನು ವಿಧಾನಸಭೆಗೆ ನೇಮಕ ಮಾಡುತ್ತಾರೆ. |
| 171ನೇ ಅನುಚ್ಛೇದ | **ವಿಧಾನ ಪರಿಷತ್ತಿನ ರಚನೆ :**<br>ರಾಜ್ಯವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆ 1/3ಕ್ಕಿಂತ ಹೆಚ್ಚಿಲ್ಲದಷ್ಟು ಸದಸ್ಯರನ್ನು ವಿಧಾನಪರಿಷತ್ತು ಒಳಗೊಂಡಿದೆ.<br>• 1/3ರಷ್ಟು ಸ್ಥಳೀಯ ಸಂಸ್ಥೆಗಳಿಂದ<br>• 1/12ರಷ್ಟು ಸದಸ್ಯರು ಪದವೀರರ ಕ್ಷೇತ್ರದಿಂದ<br>• 1/12ರಷ್ಟು ಸದಸ್ಯರು ಶಿಕ್ಷಕರ ಕ್ಷೇತ್ರದಿಂದ<br>• 1/3ರಷ್ಟು ಸದಸ್ಯರು ರಾಜ್ಯ ವಿಧಾನಸಭೆಯ ಸದಸ್ಯರಿಂದ 6 ವರ್ಷಗಳ ಅವಧಿಗಾಗಿ ಪ್ರಮಾಣುವಾರು ಪ್ರಾತಿನಿಧ್ಯ ಏಕ ವರ್ಗಾಯಿಸಲ್ಪಡುವ ಮತದಾನ ಪದ್ಧತಿಯ ಮೂಲಕ ಚುನಾಯುತರಾಗುತ್ತಾರೆ.<br>• ಉಳಿದ ಸದಸ್ಯರನ್ನು ರಾಜ್ಯಪಾಲರು ಕಲೆ, ಸಾಹಿತ್ಯ, ವಿಜ್ಞಾನ, ಸಹಕಾರ ಚಳುವಳಿ & ಸಮಾಜಸೇವೆಗಳಲ್ಲಿ ವಿಶೇಷ ಜ್ಞಾನ ಹಾಗೂ ವ್ಯವಹಾರಿಕ ಅನುಭವಗಳನ್ನು ಹೊಂದಿದವರನ್ನು ನೇಮಕ ಮಾಡುತ್ತಾರೆ. |
| 172ನೇ ಅನುಚ್ಛೇದ | **ವಿಧಾನ ಮಂಡಳದ ಅಧಿಕಾರವಾಧಿ :**<br>172(1) : ವಿಸರ್ಜನೆಯನ್ನು ಹೊರತುಪಡಿಸಿ ರಾಜ್ಯ ವಿಧಾನಸಭೆಯ ಅಧಿಕಾರವಧಿ 5 ವರ್ಷಗಳು ತುರ್ತುಪರಿಸ್ಥಿತಿಯ ಘೋಷಣೆಯ ಸಂದರ್ಭದಲ್ಲಿ ಸಂಸತ್ತು ಕಾನೂನಿನ ಮೂಲಕ ಒಂದು ಸಲಕ್ಕೆ ಒಂದು ವರ್ಷದವರೆಗೆ ವಿಧಾನಸಭೆಯ ಅವಧಿಯನ್ನು ವಿಸ್ತರಿಸಬಹುದು.<br>172(2) : ವಿಧಾನಪರಿಷತ್ತು ಒಂದು ಶಾಶ್ವತ ಸದನವಾಗಿದ್ದು, ಇದನ್ನು ವಿಸರ್ಜಿಸಲು ಬರುವುದಿಲ್ಲ. ಪ್ರತಿ 2 ವರ್ಷಕ್ಕೊಮ್ಮೆ 1/3ರಷ್ಟು ಸದಸ್ಯರು ನಿವೃತ್ತರಾಗುತ್ತಾರೆ. ಖಾಲಿಯಾದ ಸ್ಥಾನಗಳಿಗಷ್ಟೇ ಚುನಾವಣೆ ನಡೆಸುತ್ತಾರೆ. |
| 173ನೇ ಅನುಚ್ಛೇದ | **ವಿಧಾನಮಂಡಳಿಯ ಸದಸ್ಯನಾಗಲು ಬೇಕಾದ ಅರ್ಹತೆಗಳು :**<br>• ಭಾರತದ ನಾಗರೀಕನಾಗಿರಬೇಕು<br>• ವಿಧಾನಸಭೆಯ ಸದಸ್ಯನಾಗಲು 25 ವರ್ಷ ಹಾಗೂ ವಿಧಾನಪರಿಷತ್ತಿನ ಸದಸ್ಯನಾಗಲು 30 ವರ್ಷ ವಯಸ್ಸಾಗಿರಬೇಕು |

GNANADHARE IAS KAS ACADEMY

| | |
|---|---|
| | • ಸಂಸತ್ತು ಕಾಲಕಾಲಕ್ಕೆ ನಿರ್ಧರಿಸಬಹುದಾದ ಅರ್ಹತೆಗಳನ್ನು ಹೊಂದಿರಬೇಕು<br>• ಚುನಾವಣಾ ಆಯೋಗವು ಅಧಿಕೃತಗೊಳಿಸಿದ ನಂತರ ಪ್ರಮಾಣವಚನವನ್ನು ಸ್ವೀಕರಿಸಿ ಅದಕ್ಕೆ ತನ್ನ ಸಹಿ ಹಾಕಬೇಕು |
| 174ನೇ ಅನುಚ್ಛೇದ | **ವಿಧಾನಮಂಡಲದ ಅಧಿವೇಶನ, ಮುಕ್ತಾಯ & ವಿಸರ್ಜನೆ :**<br>174(1) : ರಾಜ್ಯಪಾಲರು ಕಾಲಕಾಲಕ್ಕೆ ವಿಧಾನಮಂಡಲದ ಅಧಿವೇಶನವನ್ನು ಕರೆಯುತ್ತಾರೆ. ವಿಧಾನಮಂಡಳದ ಒಂದು ಅಧಿವೇಶನದ ಕೊನೆಯ ಉಪಸ್ಥಿತಿ & ಮುಂದಿನ ಅಧಿವೇಶನದ ಮೊದಲ ಉಪಸ್ಥಿತಿ ನಡುವೆ 6 ತಿಂಗಳಿಗಿಂತ ಹೆಚ್ಚಿನ ಅಂತರವಿರಬಾರದು.<br>174(2) : ರಾಜ್ಯಪಾಲರು ವಿಧಾನಮಂಡಲದ ಅಧಿವೇಶನವನ್ನು ಮುಕ್ತಾಯಗೊಳಿಸುವ & ವಿಸರ್ಜಿಸುವ ಅಧಿಕಾರ ಹೊಂದಿರುತ್ತಾರೆ. |
| 175ನೇ ಅನುಚ್ಛೇದ | **ವಿಧಾನಮಂಡಲವನ್ನು ಉದ್ದೇಶಿಸಿ ಭಾಷಣ ಮಾಡುವ & ಸದನಗಳಿಗೆ ಸಂದೇಶಗಳನ್ನು ಕಳುಹಿಸುವ ರಾಜ್ಯಪಾಲರ ಅಧಿಕಾರ :**<br>ರಾಜ್ಯಪಾಲರು ಉಭಯಸದನಗಳನ್ನು ಉದ್ದೇಶಿಸಿ ಭಾಷಣ ಮಾಡುವ ಹಾಗೂ ಇತ್ಯರ್ಥವಾಗದೇ ಉಳಿದಿರುವ ಮಸೂದೆಗಳಿಗೆ ಸಂಬಂಧಿಸಿದಂತೆ ಸದನಗಳಿಗೆ ಸಂದೇಶಗಳನ್ನು ಕಳುಹಿಸುವ ಅಧಿಕಾರವನ್ನು ಹೊಂದಿರುತ್ತಾರೆ. |
| 176ನೇ ಅನುಚ್ಛೇದ | **ರಾಷ್ಟ್ರಪತಿಯವರಿಂದ ಭಾಷಣ :**<br>ಪ್ರತಿವರ್ಷದ ವಿಧಾನಮಂಡಲದ ಪ್ರಥಮ ಅಧಿವೇಶನವನ್ನು ಹಾಗೂ ಸಾರ್ವತ್ರಿಕ ಚುನಾವಣೆಯ ನಂತರ ಪ್ರಥಮ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುತ್ತಾರೆ. |
| 177ನೇ ಅನುಚ್ಛೇದ | **ರಾಜ್ಯ ಶಾಸಕಾಂಗದ ಅಡ್ವೋಕೇಟ್ ಜನರಲ್‌ರವರ ಅಧಿಕಾರ :**<br>ಅಡ್ವೋಕೇಟ್ ಜನರಲ್‌ರವರು ವಿಧಾನಮಂಡಳದ ಸದಸ್ಯರಲ್ಲದಿದ್ದರೂ ಸಹ ಅಧಿವೇಶನದಲ್ಲಿ ಭಾಗವಹಿಸುವ, ಸಮಿತಿಯ ವ್ಯವಹಾರಗಳಲ್ಲಿ ಭಾಗವಹಿಸುವ, ಮಾತನಾಡುವ ಅಧಿಕಾರ ಹೊಂದಿರುತ್ತಾರೆ. ಆದರೆ ಮತದಾನದ ಹಕ್ಕನ್ನು ಹೊಂದಿರುವುದಿಲ್ಲ. |
| 178ನೇ ಅನುಚ್ಛೇದ | **ವಿಧಾನಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ :**<br>ವಿಧಾನಸಭೆಯ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷರನ್ನಾಗಿ, ಇನ್ನೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ವಿಧಾನಸಭೆಯ ಅಧ್ಯಕ್ಷರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಬೇಕು. |
| 179ನೇ ಅನುಚ್ಛೇದ | **ವಿಧಾನಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನ ಖಾಲಿಯಾಗುವಿಕೆ, ರಾಜೀನಾಮೆ & ತೆಗೆದುಹಾಕುವಿಕೆ :** |

GNANADHARE IAS ACADEMY

| | |
|---|---|
| | • ವಿಧಾನಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ತಾವು ಸದನದ ಸದಸ್ಯರಾಗಿರುವುದು ನಿಂತು ಹೋದ ಮೇಲೆ ತಮ್ಮ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ಪತ್ರವನ್ನು ಅಧ್ಯಕ್ಷನು ಉಪಾಧ್ಯಕ್ಷರಿಗೆ, ಉಪಾಧ್ಯಕ್ಷರು ಅಧ್ಯಕ್ಷನಿಗೆ ನೀಡುವುದರೊಂದಿಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬಹುದು.<br>• 14ದಿನಗಳ ಮುಂಚಿತವಾಗಿ ನೋಟಿಸ್ ನೀಡುವುದರೊಂದಿಗೆ ವಿಧಾನಸಭೆಯ ಸದಸ್ಯರು ಒಂದು ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಪದಚ್ಯುತಿಗೊಳಿಸಬಹುದು.<br>• ವಿಧಾನಸಭೆ ವಿಸರ್ಜನೆಗೊಂಡು ಚುನಾವಣೆ ಜರುಗಿ ಪ್ರಥಮ ಅಧಿವೇಶನ ನಡೆಯುವವರೆಗೂ ಅಧ್ಯಕ್ಷರು ತಮ್ಮ ಸ್ಥಾನದಲ್ಲಿ ಮುಂದುವರಿಯುತ್ತಾರೆ. |
| 180ನೇ ಅನುಚ್ಛೇದ | 180(1) : ವಿಧಾನಸಭೆಯ ಅಧ್ಯಕ್ಷರ ಸ್ಥಾನವು ಖಾಲಿಯಾದಾಗ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಬೇಕು. ಹಾಗೂ ಉಪಾಧ್ಯಕ್ಷರ ಸ್ಥಾನವೂ ಖಾಲಿಯಾದಾಗ ರಾಜ್ಯಪಾಲರು ಹೆಸರಿಸಬಹುದಾದ ವಿಧಾನಸಭೆಯ ಸದಸ್ಯನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವರು.<br>180(2) : ವಿಧಾನಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ಇಬ್ಬರು ಗೈರುಹಾಜರಾದರೆ ವಿಧಾನಸಭೆಯು ನಿರ್ಧರಿಸಬಹುದಾದ ಸದಸ್ಯನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವರು |
| 181ನೇ ಅನುಚ್ಛೇದ | ವಿಧಾನಸಭೆಯ ಅಧ್ಯಕ್ಷರನ್ನು ಪದಚ್ಯುತಿಗೊಳಿಸುವ ಸಂದರ್ಭದ ಚರ್ಚೆಯ ಸಮಯದಲ್ಲಿ ವಿಧಾನಸಭೆಯ ಅಧ್ಯಕ್ಷರು ಸದನದ ಅಧ್ಯಕ್ಷತೆಯನ್ನು ವಹಿಸುವಂತಿಲ್ಲ. ಅದೇ ರೀತಿ ಉಪಾಧ್ಯಕ್ಷರನ್ನು ಪದಚ್ಯುತಿಗೊಳಿಸುವ ಚರ್ಚೆಯ ಸಮಯದಲ್ಲಿ ವಿಧಾನಸಭೆಯ ಉಪಾಧ್ಯಕ್ಷನು ಸಹ ವಿಧಾನಸಭೆಯ ಅಧ್ಯಕ್ಷತೆಯನ್ನು ವಹಿಸುವಂತಿಲ್ಲ. |
| 182ನೇ ಅನುಚ್ಛೇದ | **ವಿಧಾನಪರಿಷತ್ತಿನ ಸಭಾಪತಿ & ಉಪಸಭಾಪತಿ :**<br>ವಿಧಾನಪರಿಷತ್ತಿನ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಸಭಾಪತಿಯನ್ನಾಗಿ ಇನ್ನೊಬ್ಬರನ್ನು ಉಪಸಭಾಪತಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಸಭಾಪತಿಯ ಗೈರುಹಾಜರಿಯಲ್ಲಿ ಉಪಸಭಾಪತಿಯು ಸಭಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಾರೆ |
| 183ನೇ ಅನುಚ್ಛೇದ | ವಿಧಾನಪರಿಷತ್ತಿನ ಸಭಾಪತಿ & ಉಪಸಭಾಪತಿಯವರು ಸದನದ ಸದಸ್ಯರಾಗಿರುವುದು ನಿಂತು ಹೋದ ಮೇಲೆ ತಮ್ಮ ಸಭಾಪತಿ & ಉಪಸಭಾಪತಿ ಹುದ್ದೆಯನ್ನು ಕಳೆದುಕೊಳ್ಳುವರು. |

GNANADHARE IAS KAS ACADEMY

| | |
|---|---|
| | ಸಭಾಪತಿಯು ಉಪಸಭಾಪತಿಗೆ, ಉಪಸಭಾಪತಿಯು ಸಭಾಪತಿಗೆ ತಾವು ಸಹಿ ಮಾಡಿದ ರಾಜೀನಾಮೆ ಪತ್ರವನ್ನು ನೀಡುವುದರೊಂದಿಗೆ ತಮ್ಮ ಸ್ಥಾನದಿಂದ ನಿರ್ಗಮಿಸಬಹುದು.<br>14ದಿನಗಳ ಮುಂಚಿತವಾಗಿ ನೋಟಿಸ್ ನೀಡುವುದರೊಂದಿಗೆ ವಿಧಾನಪರಿಷತ್ತು ಒಂದು ನಿರ್ಣಯವನ್ನು ಅಂಗೀಕರಿಸುವುದರ ಮೂಲಕ ಸಭಾಪತಿ & ಉಪಸಭಾಪತಿಯವನ್ನು ಪದಚ್ಯುತಿಗೊಳಿಸಬಹುದು. |
| 184ನೇ ಅನುಚ್ಛೇದ | 184(1) : ಸಭಾಪತಿಯ ಸ್ಥಾನವು ಖಾಲಿಯಾದಾಗ ಉಪಸಭಾಪತಿಯು ಸಭಾಪತಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಉಪಸಭಾಪತಿಯ ಸ್ಥಾನವೂ ಖಾಲಿಯಾದಾಗ ರಾಜ್ಯಪಾಲರು ಹೆಸರಿಸಬಹುದಾದ ವಿಧಾನಪರಿಷತ್ತಿನ ಸದಸ್ಯನು ಸಭಾಪತಿಯ ಕಾರ್ಯನಿರ್ವಹಿಸುವರು<br>184(2) : ಸಭಾಪತಿ & ಉಪಸಭಾಪತಿ ಇಬ್ಬರು ಗೈರುಹಾಜರಾದರೆ ವಿಧಾನಸಭೆಯು ನಿರ್ಧರಿಸಬಹುದಾದ ಸದಸ್ಯನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವರು |
| 185ನೇ ಅನುಚ್ಛೇದ | ವಿಧಾನಪರಿಷತ್ತಿನ ಸಭಾಪತಿ & ಉಪಸಭಾಪತಿಯವರನ್ನು ಪದುಚ್ಯುತಿಗೊಳಿಸುವ ಚರ್ಚೆಯ ಸಂದರ್ಭದಲ್ಲಿ ಪದುಚ್ಯುತಿಗೊಳ್ಳುವ ವ್ಯಕ್ತಿ ಸದನದ ಅಧ್ಯಕ್ಷತೆಯನ್ನು ವಹಿಸುವಂತಿಲ್ಲ. |
| 186ನೇ ಅನುಚ್ಛೇದ | ವಿಧಾನಸಭೆಯ ಅಧ್ಯಕ್ಷ, ವಿಧಾನಪರಿಷತ್ತಿನ ಸಭಾಪತಿ & ಉಪಸಭಾಪತಿಯವರು ವಿಧಾನಮಂಡಲ ರೂಪಿಸುವ ಕಾನೂನಿಗೆ ಅನುಗುಣವಾಗಿ 2ನೇ ಅನುಸೂಚಿಯಲ್ಲಿ ನಿಗಧಿಪಡಿಸಿದ ವೇತನ & ಭತ್ಯೆಗಳನ್ನು ಪಡೆಯುವರು. |
| 187ನೇ ಅನುಚ್ಛೇದ | ವಿಧಾನಪರಿಷತ್ತು & ವಿಧಾನಸಭೆ ಎರಡೂ ಸದನಗಳಿಗೆ ಪ್ರತ್ಯೇಕವಾದ ಸಚಿವಾಲಯ ಹಾಗೂ ಸಿಬ್ಬಂದಿ ಇರುವುದು. |
| 188ನೇ ಅನುಚ್ಛೇದ | **ವಿಧಾನಮಂಡಲದ ಸದಸ್ಯರ ಪ್ರಮಾಣವಚನ :**<br>ವಿಧಾನಮಂಡಲದ ಸದಸ್ಯರು ತಮ್ಮ ಸ್ಥಾನವನ್ನು ವಹಿಸಿಕೊಳ್ಳುವ ಮುಂಚೆ ರಾಜ್ಯಪಾಲರು/ರಾಜ್ಯಪಾಲರಿಂದ ನೇಮಕಗೊಂಡ ವ್ಯಕ್ತಿಯ ಸಮ್ಮುಖದಲ್ಲಿ 3ನೇ ಅನುಸೂಚಿಯ ನಮೂನೆಯಲ್ಲಿ ನೀಡಿರುವಂತೆ ಪ್ರಮಾಣವಚನವನ್ನು ಸ್ವೀಕರಿಸಿ ಅದಕ್ಕೆ ತಮ್ಮ ಸಹಿ ಹಾಕಬೇಕು |
| 189ನೇ ಅನುಚ್ಛೇದ | **ಸದನದಲ್ಲಿ ಕೋರಂ :**<br>ವಿಧಾನಮಂಡಲದ ಅಧಿವೇಶನ ನಡೆಯಲು ಸದನದ 1/10ರಷ್ಟು ಹಾಜರಾತಿ ಕಡ್ಡಾಯ. ನಿಗಧಿತ ಸದಸ್ಯರ ಹಾಜರಾತಿ ಇಲ್ಲದಿದ್ದರೆ ಸದನ ಅಧಿವೇಶನವನ್ನು ಸಭಾಧ್ಯಕ್ಷರು ಮೂಂದೂಡಬಹುದು |
| 190ನೇ ಅನುಚ್ಛೇದ | ವಿಧಾನಮಂಡಲದ ಯಾವುದೇ ಸದನದ ಸದಸ್ಯನು ಅನುಮತಿಯಿಲ್ಲದೇ ಸತತ 60ದಿನಗಳವರೆಗೆ ಅಧಿವೇಶನಕ್ಕೆ ಗೈರು ಹಾಜರಾದರೇ ಆತನ ಸ್ಥಾನ |

| | |
|---|---|
| | ಖಾಲಿಯಾಗಿದೆ ಎಂದು ಘೋಷಿಸಬಹುದು. |
| 191ನೇ ಅನುಚ್ಛೇದ | **ವಿಧಾನಮಂಡಲ ಸದಸ್ಯತ್ವಕ್ಕೆ ಅನರ್ಹತೆಗಳು :**<br>• ಯಾವುದೇ ಲಾಭದಾಯಕ ಹುದ್ದೆಯಲ್ಲಿಬಾರದು<br>• ನ್ಯಾಯಾಲಯವು ಮಾನಸಿಕ ಅಸ್ವಸ್ಥನೆಂದು ಘೋಷಿಸಿದರೆ ದಿವಾಳಿಯಾಗಿದ್ದರೆ<br>• ಪಕ್ಷಾಂತರ ಕಾರಣದಿಂದ ಸದಸ್ಯತ್ವದಿಂದ ಅನರ್ಹಗೊಳಿಸಬಹುದು<br>• ವಿದೇಶಿ ನಾಗರೀಕತ್ವವನ್ನು ಪಡೆದುಕೊಂಡಿದ್ದರೆ & ಪರರಾಷ್ಟ್ರಕ್ಕೆ ನಿಷ್ಠನಾಗಿದ್ದರೆ ಅಥವಾ ಭಾರತೀಯ ಪೌರನಾಗಿರದಿದ್ದರೆ ಅಂತಹ ವ್ಯಕ್ತಿಯನ್ನು ಅನರ್ಹಗೊಳಿಸಬಹುದು. |
| 192ನೇ ಅನುಚ್ಛೇದ | ವಿಧಾನಮಂಡಲದ ಯಾವುದೇ ಸದನದ ಸದಸ್ಯನ ಅನರ್ಹತೆಯ ಕುರಿತಾದ ಪ್ರಶ್ನೆಗಳುಂಟಾದಾಗ ವಿವಾದವನ್ನು ರಾಜ್ಯಪಾಲರ ತೀರ್ಮಾನಕ್ಕೆ ಒಪ್ಪಿಸಲಾಗುತ್ತದೆ. ಚುನಾವಣಾ ಆಯೋಗದ ಅಭಿಪ್ರಾಯ ಪಡೆದು ರಾಜ್ಯಪಾಲರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ. |
| 195ನೇ ಅನುಚ್ಛೇದ | ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ ನಿರ್ಧರಿಸಬಹುದಾದ ವೇತನ ಹಾಗೂ ಭತ್ಯೆಗಳನ್ನು ಸದಸ್ಯರು ಪಡೆಯುತ್ತಾರೆ |
| 198ನೇ ಅನುಚ್ಛೇದ | 198(1) : ಹಣಕಾಸು ಮಸೂದೆಯನ್ನು ವಿಧಾನಪರಿಷತ್ತಿನಲ್ಲಿ ಮಂಡಿಸುವಂತಿಲ್ಲ ಹಣಕಾಸು ಮಸೂದೆಯನ್ನು ಮೊದಲು ವಿಧಾನಸಭೆಯಲ್ಲಿಯೇ ಮಂಡಿಸಬೇಕು ವಿಧಾನಸಭೆಯಿಂದ ಪಾಸಾಗಿ ವಿಧಾನಪರಿಷತ್ತಿಗೆ ಬಂದ ಹಣಕಾಸು ವಿಧೇಯಕವನ್ನು ವಿಧಾನಪರಿಷತ್ತು ಒಪ್ಪಬಹುದು. ತಿರಸ್ಕರಿಸಬಹುದು ಅಥವಾ ತನ್ನ ಶಿಫಾರಸ್ಸಿನೊಂದಿಗೆ ವಾಪಸ್ಸು ಕಳುಹಿಸಬಹುದು. ವಿಧಾನಪರಿಷತ್ತು ನೀಡಿದ ಶಿಫಾರಸ್ಸುಗಳನ್ನು ವಿಧಾನಸಭೆ ಒಪ್ಪಬಹುದು ಅಥವಾ ಬಿಡಬಹುದು. 14 ದಿನಗಳವರೆಗೆ ವಿಧಾನಪರಿಷತ್ತು ತಡೆ ಹಿಡಿಯಬಹುದು, 14 ದಿನಗಳ ನಂತರ ವಿಧಾನಪರಿಷತ್ತು ಮಸೂದೆಯನ್ನು ಹಿಂದಿರುಗಿಸದಿದ್ದರೂ ಸಹ ಉಭಯ ಸದನಗಳಿಂದ ಪಾಸಾಯಿತೆಂದು ತಿಳಿದು ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗುತ್ತದೆ. |
| 200ನೇ ಅನುಚ್ಛೇದ | **ರಾಜ್ಯಪಾಲರ ಅನುಮತಿಗಾಗಿ ಮಸೂದೆಗಳು :**<br>ವಿಧಾನಮಂಡಲದಿಂದ ಪಾಸಾದ ಮಸೂದೆಯು ಕಾಯ್ದೆಯಾಗಿ ಜಾರಿಯಲ್ಲಿ ಬರಬೇಕಾದರೆ ರಾಜ್ಯಪಾಲರ ಅಂಕಿತ ಅವಶ್ಯಕ. ರಾಜ್ಯಪಾಲರು ವಿಧಾನಮಂಡಲದಿಂದ ಬಂದ ಮಸೂದೆಗೆ ತಮ್ಮ ಅಂಕಿತ ನೀಡಬಹುದು ಅಥವಾ ತಡೆಹಿಡಿಯಬಹುದು ಇಲ್ಲವೇ ರಾಷ್ಟ್ರಪತಿಯವರ ಪರ್ಯಾಲೋಚನೆಗಾಗಿ ಕಾಯ್ದಿರಿಸಬಹುದು. ಇಲ್ಲವೇ ಮಸೂದೆಗೆ ತಮ್ಮ ಶಿಫಾರಸ್ಸುಗಳೊಂದಿಗೆ ವಿಧಾನಮಂಡಲಕ್ಕೆ ವಾಪಸ್ಸು ಕಳುಹಿಸಬಹುದು ಹೀಗೆ |

GNANADHARE IAS KAS ACADEMY

| | |
|---|---|
| | ವಾಪಸ್ಸು ಬಂದ ಮಸೂದೆಯನ್ನು ವಿಧಾನಮಂಡಲ ಪುನಃ ಚರ್ಚಿಸಿ ರಾಜ್ಯಪಾಲರ ಅನುಮತಿಗಾಗಿ ಕಳುಹಿಸಿದರೆ ರಾಜ್ಯಪಾಲರು ಅನಿವಾರ್ಯವಾಗಿ ತಮ್ಮ ಅನುಮತಿಯನ್ನು ನೀಡಲೇ ಬೇಕಾಗುತ್ತದೆ. |
| 201ನೇ ಅನುಚ್ಛೇದ | ವಿಧಾನಮಂಡಲದಿಂದ ಪಾಸಾಗಿ ಬಂದ ರಾಜ್ಯಪಾಲರ ಅನುಮತಿಗಾಗಿ ನಂದ ಮಸೂದೆಯು ರಾಜ್ಯ ಉಚ್ಚನ್ಯಾಯಾಲಯದ ಸ್ಥಾನಮಾನಕ್ಕೆ ಧಕ್ಕೆ ತರಬಹುದು ಎಂದೆನಿಸಿದರೆ ರಾಷ್ಟ್ರಪತಿಯವರ ಪರ್ಯಾಲೋಚನೆಗಾಗಿ ಕಾಯ್ದಿರಿಸಬಹುದು. ಆಗ ಮಸೂದೆಗೆ ತಮ್ಮ ಒಪ್ಪಿಗೆಯನ್ನು ನೀಡಬಹುದು, ತಡೆಹಿಡಿಯಬಹುದು ಇಲ್ಲವೇ ಶಾಸಕಾಂಗಕ್ಕೆ ತಮ್ಮ ಸಂದೇಶಗಳೊಂದಿಗೆ ಹಿಂದಿರುಗಿಸಬಹುದು. ಮಸೂದೆಯನ್ನು ವಿಧಾನಮಂಡಲ ಪುನಃ ಚರ್ಚಿಸಿ ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿಯಿಲ್ಲದೇ ಅಂಗೀಕರಿಸಿ ಮತ್ತೆ ರಾಜ್ಯಪಾಲರ ಅನುಮತಿಗಾಗಿ ಕಳುಹಿಸಿದರೆ ರಾಜ್ಯಪಾಲರು ಪುನಃ ಮಸೂದೆಯನ್ನು ರಾಷ್ಟ್ರಪತಿಯವರ ಪರ್ಯಾಲೋಚನೆಗಾಗಿ ಒಪ್ಪಿಸಬೇಕು. |
| 202ನೇ ಅನುಚ್ಛೇದ | **ಬಜೆಟ್ :**<br>ರಾಜ್ಯದ ರಾಜ್ಯಪಾಲರು ಪ್ರತಿವರ್ಷ ರಾಜ್ಯಸರ್ಕಾರದ ಆದಾಯ & ವೆಚ್ಚದ ಅಂದಾಜು ವಿವರಣೆಯಾದಾಗ 'ವಾರ್ಷಿಕ ಹಣಕಾಸು ವಿವರ ಪತ್ರ'ವನ್ನು ವಿಧಾನಮಂಡಲದ ಮುಂದೆ ಮಂಡಿಸಲು ಕ್ರಮಕೈಗೊಳ್ಳುವರು. |

GNANADHARE IAS KAS ACADEMY

# ಮುಖ್ಯಮಂತ್ರಿ & ಮಂತ್ರಿಮಂಡಲ :

| ಅನುಚ್ಛೇದಗಳು | ವಿವರಣೆ |
|---|---|
| 163ನೇ ಅನುಚ್ಛೇದ | ರಾಜ್ಯಪಾಲರಿಗೆ ನೆರವು & ಸಲಹೆ ನೀಡಲು ಮಂತ್ರಿಮಂಡಲ : ರಾಜ್ಯಪಾಲರಿಗೆ ಸಂವಿಧಾನಕ್ಕೆ ಅನುಸಾರವಾಗಿ ಚಲಾಯಿಸಬಹುದಾದ ವಿವೇಚನಾ ಆಡಳಿತದಲ್ಲಿ ಅಧಿಕಾರಗಳನ್ನು ಹೊರುಪಡಿಸಿ ಆಡಳಿತದಲ್ಲಿ ನೆರವು & ಸಲಹೆಗಳನ್ನು ನೀಡಲು ಮುಖ್ಯಮಂತ್ರಿ ನೇತೃತ್ವದ ಮಂತ್ರಿಮಂಡಲ ಇರುವುದು. |
| 164ನೇ ಅನುಚ್ಛೇದ | 164(1) : ವಿಧಾನಸಭೆಯ ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ ಮುಖಂಡನನ್ನು ರಾಜ್ಯಪಾಲರು ಮುಖ್ಯಮಂತ್ರಿಯಾಗಿ ನೇಮಕ ಮಾಡುತ್ತಾರೆ ಹಾಗೂ ಮುಖ್ಯಮಂತ್ರಿಯ ಸಲಹೆಯ ಮೇರೆಗೆ ಮಂತ್ರಿಮಂಡಲದ ಸಚಿವರನ್ನು ನೇಮಕ ಮಾಡುತ್ತಾರೆ.<br>ರಾಜ್ಯ ಮಂತ್ರಿಮಂಡಲದ ಸಚಿವರು ರಾಜ್ಯಪಾಲರ ಇಷ್ಟಪರ್ಯಂತ ಅಧಿಕಾರದಲ್ಲಿರುತ್ತಾರೆ<br>ಜಾರ್ಖಂಡ್, ಮಧ್ಯಪ್ರದೇಶ, ಛತ್ತೀಸ್‌ಗಡ ಹಾಗೂ ಒರಿಸ್ಸಾ ರಾಜ್ಯಗಳಲ್ಲಿ ಬುಡಕಟ್ಟು ಆದಿವಾಸಿ ಜನಾಂಗದ ಜನರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಇಬ್ಬರು ಸಚಿವರು ಇರತಕ್ಕದ್ದು.<br>164(2) : ರಾಜ್ಯ ಮಂತ್ರಿಮಂಡಲವು ಜನರಿಂದ ನೇರವಾಗಿ ಚುನಾಯಿತಗೊಂಡ ಜನಪ್ರತಿನಿಧಿಗಳಿಂದ ಕೂಡಿದ ವಿಧಾನಸಭೆಗೆ ನೇರವಾಗಿ ಹೊಣೆಯಾಗಿರತಕ್ಕದ್ದು<br>164(3) : ರಾಜ್ಯ ಮಂತ್ರಿಮಂಡಲದ ಸದಸ್ಯರು ತಮ್ಮ ಸ್ಥಾನವನ್ನು ಸಂವಿಧಾನದ 3ನೇ ಅನುಸೂಚಿಯಲ್ಲಿ ನಮೂನೆಯಲ್ಲಿ ರಾಜ್ಯಪಾಲರ ಸಮ್ಮುಖದಲ್ಲಿ ಅಧಿಕಾರ ಗೋಪ್ಯತೆಯ ಪ್ರಮಾಣ ವಚನವನ್ನು ಸ್ವೀಕರಿಸಿ ಅದಕ್ಕೆ ತನ್ನ ಸಹಿ ಹಾಕಬೇಕು.<br>164(4) : ರಾಜ್ಯ ವಿಧನಮಂಡಲದ ಸದಸ್ಯನಲ್ಲದ ವ್ಯಕ್ತಿ ಸಚಿವನಾಗಿ ನೇಮಕಗೊಂಡರೆ ನೇಮಕಗೊಂಡ 6 ತಿಂಗಳ ಒಳಗಾಗಿ ವಿಧಾನಮಂಡಲದ ಯಾವುದಾದರೊಂದು ಸದನದ ಸದಸ್ಯನಾಗಿ ಆಯ್ಕೆಗೊಳ್ಳಬೇಕು. ಇಲ್ಲವಾದರೆ ಸಚಿವ ಸ್ಥಾನವನ್ನು ಕಳೆದುಕೊಳ್ಳಬೇಕಾಗುತ್ತದೆ.<br>164(5) : ರಾಜ್ಯ ವಿಧಾನಮಂಡಲ ಸಚಿವರ ವೇತನ & ಭತ್ಯೆಗಳನ್ನು ರಾಜ್ಯ ವಿಧಾನಮಂಡಲ ಕಾಲಕಾಲಕ್ಕೆ ಕಾನೂನಿನ ಮೂಲಕ ನಿರ್ಧರಿಸಿದಂತೆ ಹಾಗೂ |

GNANADHARE IAS KAS ACADEMY

| | |
|---|---|
| | ಸಂವಿಧಾನದ 2ನೇ ಅನುಸೂಚಿಯಲ್ಲಿ ನಿಗಧಿಪಡಿಸಿದಂತೆ ಪಡೆಯುತ್ತಾರೆ. |
| 167ನೇ ಅನುಚ್ಛೇದ | **ರಾಜ್ಯಪಾಲರು ಹಾಗೂ ಮಂತ್ರಿಮಂಡಲದ ಮಧ್ಯ ಮುಖ್ಯಮಂತ್ರಿಯ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಣೆ :**<br>ರಾಜ್ಯದ ಆಡಳಿತ ಹಾಗೂ ಕಾನೂನು ರಚನೆಗೆ ಸಂಬಂಧಿಸಿದಂತೆ ಮಂತ್ರಿಮಂಡಲದ ತೆಗೆದುಕೊಂಡ ನಿರ್ಧಾರಗಳನ್ನು ಮುಖ್ಯಮಂತ್ರಿಯು ರಾಜ್ಯಪಾಲರಿಗೆ ತಿಳಿಸುವರು, ಹಾಗೂ ರಾಜ್ಯಪಾಲರು ಪಡೆಯಬಯಸುವ ಮಾಹಿತಿಗಳನ್ನು ಒದಗಿಸುವರು.<br>ರಾಜ್ಯಪಾಲರು ನೀಡಿದ ಸಲಹೆ ಹಾಗೂ ಸೂಚನೆಗಳನ್ನು ಮಂತ್ರಿಮಂಡಲದ ಗಮನಕ್ಕೆ ತರುವುದು ಮುಖ್ಯಮಂತ್ರಿಯವರ ಕರ್ತವ್ಯವಾಗಿದೆ. |

## ಕರ್ನಾಟಕದ ಮುಖ್ಯಮಂತ್ರಿಗಳು :



## List of Chief Ministers (CM) of Karnataka

| Sl.No. | Name of Chief Ministers | From | To | Party |
|---|---|---|---|---|
| 1 | K. Chengalaraya Reddy | Oct 25, 1947 | Mar 30, 1952 | INC |
| 2 | Kengal Hanumanthaiah | Mar 30, 1952 | Aug 19, 1956 | INC |
| 3 | Kadidal Manjappa | Aug 19, 1956 | Oct 31, 1956 | INC |
| 4 | S. Nijalingappa | Nov 1, 1956 | Apr 10, 1957 | INC |
| 5 | S. Nijalingappa | Apr 10, 1957 | May 16, 1958 | INC |
| 6 | B. D. Jatti | May 16, 1958 | Mar 9, 1962 | INC |
| 7 | S. R. Kanthi | Mar 14, 1962 | Jun 20, 1962 | INC |
| 8 | S. Nijalingappa | Jun 21, 1962 | Mar 3, 1967 | INC |
| 9 | S. Nijalingappa | Mar 3, 1967 | May 29, 1968 | |
| 10 | Veerendra Patil | May 29, 1968 | Mar 18, 1971 | INC |
| | **President's rule** | Mar 19, 1971 | Mar 20, 1972 | |
| 11 | D. Devaraj Urs | Mar 20, 1972 | Dec 31, 1977 | INC |
| | **President's rule** | Dec 31, 1977 | Feb 28, 1978 | |
| 12 | D. Devaraj Urs | Feb 28, 1978 | Jan 7, 1980 | INC |
| 13 | R. Gundu Rao | Jan 12, 1980 | Jan 6, 1983 | INC |
| 14 | Ramakrishna Hegde | Jan 10, 1983 | Dec 29, 1984 | JNP |
| 15 | Ramakrishna Hegde | Mar 8, 1985 | Feb 13, 1986 | JNP |
| 16 | Ramakrishna Hegde | Feb 16, 1986 | Aug 10, 1988 | JNP |
| 17 | S. R. Bommai | Aug 13, 1988 | Apr 21, 1989 | JNP |
| | **President's rule** | Apr 21, 1989 | Nov 30, 1989 | |
| 18 | Veerendra Patil | Nov 30, 1989 | Oct 10, 1990 | INC |
| | **President's rule** | Oct 10, 1990 | Oct 17, 1990 | |
| 19 | S. Bangarappa | Oct 17, 1990 | Nov 19, 1992 | INC |
| 20 | M. Veerappa Moily | Nov 19, 1992 | Dec 11, 1994 | INC |
| 21 | H. D. Deve Gowda | Dec 11, 1994 | May 31, 1996 | JD |
| 22 | J. H. Patel | May 31, 1996 | Oct 7, 1999 | JD |
| 23 | S. M. Krishna | Oct 11, 1999 | May 28, 2004 | INC |
| 24 | Dharam Singh | May 28, 2004 | Jan 28, 2006 | INC, JD(S) |
| 25 | H. D. Kumaraswamy | Feb 3, 2006 | Oct 8, 2007 | BJP-JD(S) |
| | **President's rule** | Oct 9, 2007 | Nov 11, 2007 | |
| 26 | B. S. Yeddyurappa | Nov 12, 2007 | Nov 19, 2007 | BJP |
| | **President's rule** | Nov 20, 2007 | May 29, 2008 | |
| 27 | B. S. Yeddyurappa | May 30, 2008 | Jul 31, 2011 | BJP |
| 28 | D. V. Sadananda Gowda | Aug 4, 2011 | Jul 12, 2012 | BJP |
| 29 | Jagadish Shettar | Jul 12, 2012 | May 12, 2013 | BJP |
| 30 | Siddaramaiah | May 13, 2013 | **May 17, 2018** | INC |
| 31 | Haradanahalli Devegowda Kumaraswamy | May 19, 2018 | **Present** | JD(S) |

# ರಾಜ್ಯದ ಅಡ್ವೊಕೇಟ್ ಜನರಲ್ :

ಸಂವಿಧಾನದ 165ನೇ ವಿಧಿಯು ಅಡ್ವೊಕೇಟ್ ಜನರಲ್‌ನನ್ನು ಹೊಂದುವ ಅವಕಾಶವನ್ನು ಪ್ರತಿಯೊಂದು ರಾಜ್ಯಕ್ಕೆ ನೀಡಿದೆ. ಇವರನ್ನು ರಾಜ್ಯ ಸರ್ಕಾರದ ಪ್ರಥಮ ಕಾನೂನು ಅಧಿಕಾರಿ ಎಂದು ಕರೆಯಲಾಗುತ್ತದೆ. ಅಡ್ವೊಕೇಟ್ ಜನರಲ್ಲನ ಹುದ್ದೆ ಅಟಾರ್ನಿ ಜನರಲ್‌ನ ಹುದ್ದೆಯನ್ನು ಹೋಲುತ್ತದೆ. ಇವರ ಸ್ಥಾನಮಾನ ಹೈಕೋರ್ಟ್ ನ್ಯಾಯಾಧೀಶರ ಸ್ಥಾನಮಾನಕ್ಕೆ ಸಮನಾಗಿರುತ್ತದೆ.

## ನೇಮಕಾತಿಗಳು, ಅರ್ಹತೆಗಳು & ಅಧಿಕಾರವಧಿ :

ನೇಮಕಾತಿ : ರಾಜ್ಯಪಾಲರು ಮಂತ್ರಿಮಂಡಲದ ಸಲಹೆಯ ಮೇರೆಗೆ ಅಡ್ವೊಕೇಟ್ ಜನರಲ್‌ನನ್ನು ನೇಮಿಸುತ್ತಾರೆ. ಹೈಕೊರ್ಟ್ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಹೊಂದಿರಬೇಕಾದ ಎಲ್ಲ ಅರ್ಹತೆಗಳನ್ನು ಅಡ್ವೊಕೇಟ್ ಜನರಲ್ ಆಗ ಬಯಸುವ ವ್ಯಕ್ತಿ ಹೊಂದಿರಬೇಕು. ಆದ್ದರಿಂದ ಇವರು

1. ಭಾರತದ ಪ್ರಜೆಯಾಗಿರಬೇಕು
2. ಯಾವುದೇ ಹೈಕೋರ್ಟ್‌ನಲ್ಲಿ 10 ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು.
3. ಅಡ್ವೊಕೇಟ್ ಜನರಲ್‌ರವರು ರಾಜ್ಯಪಾಲರ ಇಚ್ಛೆಯ ಪರ್ಯಂತ ಅಧಿಕಾರದಲ್ಲಿರುತ್ತಾರೆ
4. ರಾಜ್ಯಪಾಲರಿಗೆ ರಾಜಿನಾಮೆ ಸಲ್ಲಿಸುವ ಮೂಲಕ ಇವರು ಪದತ್ಯಾಗ ಮಾಡಬಹುದು.
5. ಸಾಮಾನ್ಯವಾಗಿ ರಾಜ್ಯ ಸರ್ಕಾರ ಅಧಿಕಾರ ಕಳೆದುಕೊಂಡಾಗ ಇವರೂ ಕೂಡ ರಾಜೀನಾಮೆ ನೀಡುತ್ತಾರೆ
6. ಅಡ್ವೊಕೇಟ್ ಜನರಲ್‌ರವರ ವೇತನವನ್ನು ಸಂವಿಧಾನ ನಿರ್ದಿಷ್ಟಪಡಿಸಿಲ್ಲ.
7. ರಾಜ್ಯಪಾಲರು ನಿಗದಿಪಡಿಸಿದ ವೇತನವನ್ನು ಪಡೆಯುತ್ತಾರೆ.

## ಅಡ್ವೊಕೇಟ್ ಜನರಲ್‌ರವರ ಕಾರ್ಯಗಳು :

1. ಕಾನೂನು ವಿಷಯಕ್ಕೆ ಸಂಬಂಧಿಸಿದ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.
2. ರಾಜ್ಯಪಾಲರಿಂದ ವಹಿಸಲ್ಪಟ್ಟ ಕಾನೂನು ಸ್ವರೂಪದ ಇತರ ಕಾರ್ಯಗಳನ್ನು ನಿರ್ವಹಿಸುವುದು.
3. ಸಂವಿಧಾನ ಅಥವಾ ಇತರೆ ಯಾವುದೇ ಕಾನೂನಿಂದ ವಹಿಸಲ್ಪಟ್ಟ ಕಾರ್ಯಗಳನ್ನು ನಿರ್ವಹಿಸುವುದು.



GNANADHARE IAS KAS ACADEMY

# ರಾಜ್ಯಗಳ ಉಚ್ಚ ನ್ಯಾಯಾಲಯಗಳು :



ಹೈಕೋರ್ಟ್‌ಗಳು ಎ & ಬಿ ವರ್ಗದ ರಾಜ್ಯಗಳಲ್ಲಿ 15 ಹೈಕೋರ್ಟ್‌ಗಳು & ಸಿ ವರ್ಗದ ರಾಜ್ಯಗಳಲ್ಲಿ (ಕೊಡಗು & ದೆಹಲಿ ಬಿಟ್ಟು) 7 ಜುಡಿಷಿಯಲ್ ಕಮಿಷನರ್ಸ್ ಕೋರ್ಟಗಳು ಅಸ್ತಿತ್ವಕ್ಕೆ ಬಂದವು. 1959ರಲ್ಲಿ ರಾಜ್ಯಗಳ ಪುನರ್‌ರಚನೆಯಾದಾಗ ಹೈದಾರಾಬಾದ್, ಮಧ್ಯಭಾರತ್, ಪೆಪ್ಸು & ಸೌರಾಷ್ಟ್ರಗಳ ಹೈಕೋರ್ಟ್‌ಗಳನ್ನು ಹಾಗೂ ಅಜ್ಮೀರ್, ಭೋಪಾಲ್, ಕಛ್ & ವಿಂಧ್ಯಪ್ರದೇಶಗಳ ಜುಡಿಷಿಯಲ್ ಕೋರ್ಟ್‌ಗಳನ್ನು ರದ್ದುಗೊಳಿಸಲಾಯಿತು.

ಮೇಘಾಲಯ, ಮಣಿಪುರ & ತ್ರಿಪುರಗಳಲ್ಲಿ ಪ್ರತ್ಯೇಕ ಹೈಕೋರ್ಟ್‌ಗಳನ್ನು ಸ್ಥಾಪಿಸುವ ವಿಧೇಯಕ್ಕೆ ಸಂಸತ್ತು ಮೇ 16, 2012ರಂದು ಒಪ್ಪಿಗೆ ನೀಡಿತು. ಈಶಾನ್ಯ ಪ್ರದೇಶಗಳು (ಮರು ಸಂಘಟನೆ & ಇತರ ಸಂಬಂಧಿ) ಕಾನೂನು ತಿದ್ದುಪಡಿ ವಿದೇಯಕ 2012ರ ಅಡಿ ಹೊಸ ಹೈಕೋರ್ಟ್‌ಗಳನ್ನು ಸ್ಥಾಪಿಸಲು ಅವಕಾಶ ಮಾಡಲಾಗಿತ್ತು. ಇದರ ಅನ್ವಯ ಈ ಮೂರು ರಾಜ್ಯಗಳಲ್ಲಿ ಹೈಕೋರ್ಟ್‌ಗಳನ್ನು ಕೇಂದ್ರ ಸರ್ಕಾರ 2013ರ ಜನವರಿ 3ನೇ ವಾರದಲ್ಲಿ ರಚಿಸಿತು. ಆಂಧ್ರಪದೇಶದ ಪ್ರತ್ಯೇಕ ಹೈಕೋರ್ಟ್‌ನ್ನು ರಚಿಸಬೇಕಿದ್ದರೂ 2017ರ ಜೂನ್‌ವರೆಗೆ ರಚನೆಯಾಗಿಲ್ಲ.

GNANADHARE IAS KAS ACADEMY

| ಅನುಚ್ಛೇದಗಳು | ವಿವರಣೆ |
|---|---|
| 214ನೇ ಅನುಚ್ಛೇದ | ಪ್ರತಿಯೊಂದು ರಾಜ್ಯಕ್ಕೆ ಒಂದು ಉಚ್ಚ ನ್ಯಾಯಾಲಯವಿರತಕ್ಕದ್ದು. ಆದರೆ 2/2ಕ್ಕಿಂತ ಹೆಚ್ಚು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸಂಸತ್ತು ಒಂದೇ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಬಹುದು. |
| 215ನೇ ಅನುಚ್ಛೇದ | ಉಚ್ಚ ನ್ಯಾಯಾಲಯಗಳು ದಾಖಲೆಗಳ ನ್ಯಾಯಾಲಯಗಳಾಗಿದ್ದು, ಈ ನ್ಯಾಯಾಲಯಗಳು ನೀಡಿದ ತೀರ್ಪು & ಆದೇಶಗಳನ್ನು ನಿಂದಿಸಿದರೆ ಶಿಕ್ಷಿಸುವ ಅಧಿಕಾರವನ್ನು ಹೊಂದಿವೆ. |
| 216ನೇ ಅನುಚ್ಛೇದ | ಪ್ರತಿಯೊಂದು ಉಚ್ಚ ನ್ಯಾಯಾಲಯ ಓರ್ವ ಮುಖ್ಯ ನ್ಯಾಯಾಧೀಶರು ಹಾಗೂ ರಾಷ್ಟ್ರಪತಿಯು ಕಾಲಕಾಲಕ್ಕೆ ನಿರ್ಧರಿಸಲ್ಪಟ್ಟ ಇತರ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. |
| 217ನೇ ಅನುಚ್ಛೇದ | 217(1) : ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನನ್ನು ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರೊಡನೆ ಹಾಗೂ ಸಂಬಂಧಿಸಿದ ರಾಜ್ಯದ ರಾಜ್ಯಪಾಲರೊಡನೆ ಸಮಾಲೊಚಿಸಿ ನೇಮಕ ಮಾಡುತ್ತಾರೆ.<br>ಉಚ್ಚ ನ್ಯಾಯಾಲಯದ ಇತರೆ ನ್ಯಾಯಾಧೀಶರ ನೇಮಕದ ಸಂದರ್ಭದಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ ಸಮಾಲೊಚಿಸಿ ನೇಮಕ ಮಾಡುತ್ತಾರೆ<br>ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ವಯಸ್ಸಿನ 62ನೇ ವರ್ಷಗಳವರೆಗೆ ಅಧಿಕಾರದಲ್ಲಿರುತ್ತಾರೆ.<br>ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ತಾವು ಸಹಿ ಹಾಕಿದ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿಯವರಿಗೆ ನೀಡುವುದರ ಮೂಲಕ ತಮ್ಮ ಸ್ಥಾನದಿಂದ ನಿರ್ಗಮಿಸಬಹುದು<br>217(2) : ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳು<br>• ಭಾರತದ ನಾಗರೀಕನಾಗಿರಬೇಕು<br>• ಕನಿಷ್ಠ ಪಕ್ಷ 10 ವರ್ಷಗಳ ಕಾಲ ಭಾರತದ ಯಾವುದೇ ನ್ಯಾಯಾಲಯದಲ್ಲಿ ನ್ಯಾಯಿಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರಬೇಕು<br>• 10 ವರ್ಷಗಳ ಕಾಲ ನಿರಂತರವಾಗಿ ಉಚ್ಚ ನ್ಯಾಯಾಲಯದ ನ್ಯಾಯಾವಾದಿಯಾಗಿ ಸೇವೆ ಸಲ್ಲಿಸಿರಬೇಕು. |
| 218ನೇ ಅನುಚ್ಛೇದ | ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ದುರ್ವರ್ತನೆ ಅಥವಾ ಅಸಮರ್ಥತೆಯ ಕಾರಣದ ಆಧಾರದ ಮೇಲೆ ಸಂಸತ್ತಿನ ಪ್ರತಿಯೊಂದು ಸದನದಿಂದ 2/3 ಬಹುಮತದಿಂದ ಪದಚ್ಯುತಿ ಗೊತ್ತುವಳಿ ಅಂಗೀಕರಿಸಲ್ಪಟ್ಟರೆ |

GNANADHARE IAS KAS ACADEMY

| | |
|---|---|
| | ಶಾಸಕಾಂಗದ ತೀರ್ಮಾನದ ಅನ್ವಯ ರಾಷ್ಟ್ರಪತಿಯು ಅಂತಹ ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಸೇವೆಯಿಂದ ವಜಾಗೊಳಿಸುವರು. |
| 219ನೇ ಅನುಚ್ಛೇದ | ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡ ವ್ಯಕ್ತಿ ತನ್ನ ಸ್ಥಾನವನ್ನು ವಹಿಸಿಕೊಳ್ಳುವ ಮುಂಚೆ ರಾಜ್ಯಪಾಲರು/ರಾಜ್ಯಪಾಲರಿಂದ ನೇಮಕಗೊಂಡ ವ್ಯಕ್ತಿಯ ಸಮ್ಮುಖದಲ್ಲಿ 3ನೇ ಅನುಸೂಚಿಯ ನಮೂನೆಯಲ್ಲಿ ನೀಡಿರುವಂತೆ ಪ್ರಮಾಣವಚನವನ್ನು ಸ್ವೀಕರಿಸಿ ಅದಕ್ಕೆ ತಮ್ಮ ಸಹಿ ಹಾಕಬೇಕು |
| 220ನೇ ಅನುಚ್ಛೇದ | ಉಚ್ಚ ನ್ಯಾಯಾಲಯದ ಖಾಯಂ ನ್ಯಾಯಾಧೀಶನಾಗಿ ನಿವೃತ್ತಿ ಹೊಂದಿದ ವ್ಯಕ್ತಿ ಸರ್ವೋಚ್ಚ ನ್ಯಾಯಾಲಯ ಹಾಗೂ ಇತರೆ ಉಚ್ಚ ನ್ಯಾಯಾಲಯಗಳ ಹೊರತು ದೇಶದ ಯಾವುದೇ ನ್ಯಾಯಾಲಯದಲ್ಲಿ ನ್ಯಾಯಾವಾಧಿಯಾಗಿ ವಾದ ಮಂಡಿಸುವಂತಿಲ್ಲ ಎಂದು ನಿರ್ಬಂಧ ವಿಧಿಸಲಾಗಿದೆ. |
| 221ನೇ ಅನುಚ್ಛೇದ | ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಕಾನೂನಿನ ಮೂಲಕ ಸಂಸತ್ತು ನಿರ್ಧರಿಸಿದ ವೇತನ & ಭತ್ಯೆಗಳನ್ನು ಸಂವಿಧಾನದ 2ನೇ ಅನುಸೂಚಿಯಲ್ಲಿ ನಿಗದಿಪಡಿಸಿದಂತೆ ಪಡೆಯುವರು.<br>ಪ್ರಸ್ತುತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಮಾಸಿಕ ವೇತನ 90,000/, ಇತರ ನ್ಯಾಯಾಧೀಶರ 80,000/– ಮಾಸಿಕ ವೇತನವನ್ನು ಪಡೆಯುವರು. |
| 222ನೇ ಅನುಚ್ಛೇದ | ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಿ ನಂತರ ಒಬ್ಬ ನ್ಯಾಯಾಧೀಶನನ್ನು ಒಂದು ಉಚ್ಚ ನ್ಯಾಯಾಲಯದಿಂದ ಇತರ ಯಾವುದೇ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಬಹುದು. |
| 223ನೇ ಅನುಚ್ಛೇದ | ಮುಖ್ಯ ನ್ಯಾಯಾಧೀಶ ಕಾರಣಾಂತರ ಅನುಪಸ್ಥಿತಿಯಲ್ಲಿ ರಾಷ್ಟ್ರಪತಿಯು ಹಂಗಾಮಿ ಮುಖ್ಯ ನ್ಯಾಯಾಧೀಶರನ್ನು ನೇಮಕ ಮಾಡಬಹುದು. |
| 224ನೇ ಅನುಚ್ಛೇದ | ಉಚ್ಚ ನ್ಯಾಯಾಲಯದ ಕಾರ್ಯಭಾರವನ್ನು ಕಡಿಮೆ ಮಾಡುವ ಸಲುವಾಗಿ ರಾಷ್ಟ್ರಪತಿಯು ಉಚ್ಚ ನ್ಯಾಯಾಲಯಗಳಿಗೆ ಹೆಚ್ಚುವರಿ ಹಾಗೂ ಹಂಗಾಮಿ ನ್ಯಾಯಾಧೀಶರನ್ನು ನೇಮಕ ಮಾಡಬಹುದು. |
| 225ನೇ ಅನುಚ್ಛೇದ | ಅಸ್ತಿತ್ವದಲ್ಲಿರುವ ಉಚ್ಚ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ವಿವರಣೆ |
| 226ನೇ ಅನುಚ್ಛೇದ | ಪ್ರತಿಯೊಂದು ಉಚ್ಚ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸಂವಿಧಾನದ 3ನೇ ಭಾಗದಲ್ಲಿ ವಿವರಿಸಿರುವ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸುವುದಕ್ಕಾಗಿ ನಿರ್ದೇಶನ ಹಾಗೂ ಆದೇಶಗಳನ್ನು ನೀಡುವುದರ ಮೂಲಕ ಹೇಬಿಯಸ್ ಕಾರ್ಪಸ್, ಮ್ಯಾಂಡಮಸ್ ಕೋ ವಾರೆಂಟೋ, & ಷರ್ಷಿಯಾರರಿ ರಿಟ್‌ಗಳನ್ನು ಹೊರಡಿಸುವ ಅಧಿಕಾರಗಳನ್ನು ಹೊಂದಿದೆ. |
| 227ನೇ ಅನುಚ್ಛೇದ | ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧೀನ ನ್ಯಾಯಲಯಗಳ & ನ್ಯಾಯಾಧೀಕರಣಗಳ ಮೇಲೆ ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಉಚ್ಚ ನ್ಯಾಯಾಲಯ ಹೊಂದಿವೆ. |

| | |
|---|---|
| 228ನೇ ಅನುಚ್ಛೇದ | ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಪ್ರಕರಣದಲ್ಲಿ ಸಂವಿಧಾನ ಅರ್ಥ ವಿವರಣೆಯ ಕಾನೂನಿಗೆ ಸಂಬಂಧಿಸಿದ ಮುಖ್ಯವಾದ ಪ್ರಶ್ನೆಯನ್ನು ಒಳಗೊಂಡಿದೆ ಎಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ ಅಂತಹ ಪ್ರ ಕರಣವನ್ನು ತನ್ನಡೆಗೆ ವರ್ಗಾಯಿಸಿಕೊಂಡು ವಿಚಾರಣೆ ನಡೆಸಿ ಪ್ರಕರಣವನ್ನು ಇತ್ಯರ್ಥಪಡಿಸಬಹುದು. |
| 230ನೇ ಅನುಚ್ಛೇದ | ಸಂಸತ್ತು ಕಾನೂನಿನ ಮೂಲಕ ಯಾವುದೇ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಯಾವುದೇ ಕೇಂದ್ರಾಡಳಿತ ಪ್ರದೇಶಕ್ಕೆ ವಿಸ್ತರಿಸಬಹುದು ಅಥವಾ ಕೇಂದ್ರಾಡಳಿತ ಪ್ರದೇಶದಿಂದ ಹೊರತುಪಡಿಸಬಹುದು |
| 231ನೇ ಅನುಚ್ಛೇದ | 2/2ಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಬಹುದು |

# ಸಂವಿಧಾನದ 73ನೇ ತಿದ್ದುಪಡಿ :

- ಪಿ.ವಿ. ನರಸಿಂಹರಾವ್ ನೇತೃತ್ವದ ಕಾರ್ಯ ಸರ್ಕಾರದ ದಿಟ್ಟ ಕ್ರಮವನ್ನು ಕೈಗೊಂಡ ಪರಿಣಾಮವಾಗಿ ಸಂವಿಧಾನದ 73ನೇ ತಿದ್ದುಪಡಿಗೆ ಸಂಸತ್ತಿನ ಅಂಗೀಕಾರ 1922ರಲ್ಲಿ ದೊರೆತು, 24-4-1993ರಿಂದ ಜಾರಿಗೆ ಬಂದಿತು.
- ದಿ ಪಂಚಾಯತ್ ಶೀರ್ಷಿಕೆಯನ್ನು ಒಳಗೊಂಡ 9ನೇ ಭಾಗ & 11ನೇ ಅನುಸೂಚಿಯನ್ನು ಸೇರಿಸಲಾಯಿತು.
- ಸಂವಿಧಾನದ 243-243(ಓ) ವರೆಗೆ 16 ಹೊಸ ವಿಧಿಗಳನ್ನು ಸೇರಿಸಲಾಯಿತು.
- ಸಂವಿಧಾನದ 11ನೇ ಅನುಸೂಚಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸುವ 29 ವಿಷಯಗಳನ್ನು ನಮೂದಿಸಲಾಗಿದೆ.

| ವಿಧಿಗಳು | ವಿಷಯಗಳು |
|---|---|
| 243 | ಪರಿಭಾಷೆ |
| 243 ಎ | ಗ್ರಾಮಸಭಾ |
| 243 ಬಿ | ಪಂಚಾಯಿತಿಗಳ ರಚನೆ |
| 243 ಸಿ | ಪಂಚಾಯಿತಿಗಳ ಅಂಗರಚನೆ |
| 243 ಡಿ | ಸ್ಥಾನಗಳ ಮೀಸಲಾತಿ |

GNANADHARE IAS KAS ACADEMY

| | |
|---|---|
| 243 ಇ | ಪಂಚಾಯಿತಿಗಳ ಅವಧಿ |
| 243 ಎಫ್ | ಸದಸ್ಯತ್ವದ ಅನರ್ಹತೆಗಳು |
| 243 ಜಿ | ಪಂಚಾಯಿತಿಗಳ ಅಧಿಕಾರಗಳು & ಜವಾಬ್ದಾರಿಗಳು |
| 243 ಹೆಚ್ | ತೆರಿಗೆಗಳನ್ನು ವಿಧಿಸಲು ಪಂಚಾಯಿತಿಗಳ ಅಧಿಕಾರಗಳು & ಅವುಗಳ ನಿಧಿ |
| 243 ಐ | ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಲು ಹಣಕಾಸು ಆಯೋಗ ರಚನೆ |
| 243 ಜೆ | ಪಂಚಾಯಿತಿಗಳ ಲೆಕ್ಕಪತ್ರಗಳ ಪರಿಶೋಧನೆ |
| 243 ಕೆ | ಪಂಚಾಯಿತಿಗಳ ಚುನಾವಣೆಗಳು |
| 243 ಎಲ್ | ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯ ಆದೇಶ |
| 243 ಎಂ | ಕೆಲವು ಪ್ರದೇಶಗಳಿಗೆ ಅನ್ವಯಿಸುವುದಿಲ್ಲ. |
| 243 ಎನ್ | ಅಸ್ತಿತ್ವದಲ್ಲಿರುವ ಕಾನೂನು & ಪಂಚಾಯಿತಿಗಳ ಮುಂದುವರಿಕೆ |
| 243 ಓ | ಚುನಾವಣೆ ವಿಷಯದಲ್ಲಿ ನ್ಯಾಯಾಲಯದ ಮಧ್ಯ ಪ್ರವೇಶ ನಿಷೇಧ |

## ಸಂವಿಧಾನದ 12ನೇ ಅನುಸೂಚಿಯಲ್ಲಿ ಮುನಿಸಿಪಾಲಿಟಿಗಳು ನಿರ್ವಹಿಸಬೇಕಾದ 18 ವಿಷಯಗಳ ಜವಾಬ್ದಾರಿಗಳನ್ನು ನೀಡಲಾಗಿದೆ:

| ವಿಧಿಗಳು | ವಿಷಯಗಳು |
|---|---|
| 243 ಪಿ | ಪರಿಭಾಷೆ |
| 243 ಕ್ಯೂ | ಪೌರಸಭೆಗಳ ರಚನೆ |
| 243 ಆರ್ | ಪೌರಸಭೆ ಅಂಗರಚನೆ |
| 243 ಎಸ್ | ವಿಭಾಗ ಸಮಿತಿಗಳ ರಚನೆ & ಅಂಗರಚನೆ |
| 243 ಟಿ | ಸ್ಥಾನಗಳ ಮೀಸಲಾತಿ |
| 243 ಯೂ | ಪೌರಸಭೆಗಳ ಅಧಿಕಾರವಧಿ |
| 243 ವಿ | ಸದಸ್ಯತ್ವದ ಅನರ್ಹತೆಗಳು |
| 243 ಡಬ್ಲ್ಯೂ | ಪೌರಸಭೆಗಳ ಅಧಿಕಾರವಾಧಿ & ಜವಾಬ್ದಾರಿಗಳು |
| 243 ಎಕ್ಸ್ | ತೆರಿಗೆಗಳನ್ನು ವಿಧಿಸಲು ಪೌರಸಭೆಗಳ ಅಧಿಕಾರಗಳು & ಅವುಗಳ ವಿಧಿಗಳು |
| 243 ವೈ | ಹಣಕಾಸು ಆಯೋಗದ ರಚನೆ |
| 243 ಝಡ್ | ಪೌರಸಭೆಗಳ ಲೆಕ್ಕಪತ್ರಗಳ ಪರಿಶೋಧನೆ |
| 243 ಝಡ್ ಎ | ಪೌರಸಭೆಗಳ ಚುನಾವಣೆಗಳು |
| 243 ಝಡ್ ಬಿ | ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯ |
| 243 ಝಡ್ ಸಿ | ಕೆಲವು ಪ್ರದೇಶಗಳಿಗೆ ಅನ್ವಯವಾಗದಿರುವುದು |
| 243 ಝಡ್ ಡಿ | ಜಿಲ್ಲಾ ಯೋಜನಾ ಸಮಿತಿ |

GNANADHARE IAS KAS ACADEMY

| | |
|---|---|
| 243 ಝಡ್ ಇ | ಮಹಾನಗರ ಯೋಜನಾ ಸಮಿತಿ |
| 243 ಝಡ್ ಎಫ್ | ಜಾರಿಯಲ್ಲಿರುವ ಕಾನೂನುಗಳನ್ನು & ಅಸ್ತಿತ್ವದಲ್ಲಿರುವ ಪೌರಸಭೆಗಳನ್ನು ಮುಂದುವರೆಸುವುದು |
| 243 ಝಡ್ ಜಿ | ಚುನಾವಣಾ ವಿಷಯದಲ್ಲಿ ನ್ಯಾಯಾಲಯದ ಮಧ್ಯ ಪ್ರವೇಶಿಸುವುದರ ಪ್ರತಿಷೇಧ |

# ತುರ್ತು ಪರಿಸ್ಥಿತಿಗಳು :

ಸಂವಿಧಾನದ 18ನೇ ಭಾಗದಲ್ಲಿರುವ 325ರಿಂದ 360ನೇ ವಿಧಿಗಳು ತುರ್ತುಪರಿಸ್ಥಿತಿಗಳು ಘೋಷಣೆ ಬಗ್ಗೆ ವಿವರಗಳನ್ನು ಒಳಗೊಂಡಿದೆ.

## ತುರ್ತು ಪರಿಸ್ಥಿತಿಗಳ ವಿಧಗಳು :

| | | |
|---|---|---|
| 1 | ರಾಷ್ಟ್ರೀಯ ತುರ್ತು ಪರಿಸ್ಥಿತಿಗಳು | 352 ನೇ ವಿಧಿ |
| 2 | ರಾಜ್ಯ ತುರ್ತು ಪರಿಸ್ಥಿತಿಗಳು | 356 ನೇ ವಿಧಿ |
| 3 | ಹಣಕಾಸು ತುರ್ತು ಪರಿಸ್ಥಿತಿಗಳು | 360 ನೇ ವಿಧಿ |

## ರಾಷ್ಟ್ರೀಯ ತುರ್ತು ಪರಿಸ್ಥಿತಿ 352ನೇ ವಿಧಿ




44ನೇ ಸಂವಿಧಾನ ತಿದ್ದುಪಡಿಯ ಮೂಲಕ ಈ ಬದಲಾವಣೆಗಳನ್ನು ಮಾಡಲಾಗಿದೆ.

- ದೇಶದ/ಯಾವುದೇ ಪ್ರದೇಶದ ಭದ್ರತೆಗೆ 'ಯುದ್ಧದಿಂದ' ಅಪಾಯವಿದೆ ಎಂದು ರಾಷ್ಟ್ರಪತಿಗೆ ಮನವರಿಕೆಯಾದರೆ ದೇಶಾದ್ಯಂತ/ಯಾವುದೇ ಭಾಗದಲ್ಲಿ ತುರ್ತು ಪರಿಸ್ಥಿತಿಯನ್ನು 352(1)ನೇ ವಿಧಿಯನ್ವಯ ಘೋಷಿಸಬಹುದು. ಆದ್ದರಿಂದ Internal disturbance ಎಂಬ ಪದಗಳನ್ನು ತೆಗೆದುಹಾಕಿ Armed Rebellion ಎಂಬ ಪದಗಳನ್ನು ಸೇರಿಸಲಾಯಿತು. ಈ ಬದಲಾವಣೆ 1979ರಿಂದ ಜಾರಿಗೆ ಬಂದಿತು.



GNANADHARE IAS KAS ACADEMY

- ಪ್ರಧಾನ ಮಂತ್ರಿ & ಇತರ ಕ್ಯಾಬಿನೆಟ್ ಮಂತ್ರಿಗಳು ಲಿಖಿತ ರೂಪದಲ್ಲಿ ಶಿಫಾರಸ್ಸು ಮಾಡಿದಾಗ ಮಾತ್ರ ರಾಷ್ಟ್ರಪತಿ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು.
- ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದ ತಿಂಗಳೊಳಗೆ ಸಂಸತ್ತಿನ ಅಂಗೀಕಾರ ಪಡೆಯಬೇಕು. ಗೊತ್ತುವಳಿಯು ಪ್ರತಿ ಸದನದಲ್ಲಿ ಒಟ್ಟು ಸದಸ್ಯರ ಬಹುಮತದಿಂದ ಹಾಗೂ ಹಾಜರಿರುವ ಸದಸ್ಯರ 2/3ರಷ್ಟು ಮತಗಳಿಂದ ಅಂಗೀಕಾರವನ್ನು ಪಡೆಯಬೇಕು.
- ಒಂದು ವೇಳೆ ತುರ್ತು ಪರಿಸ್ಥಿತಿಯನ್ನು ಘೋಷಿಸಿದ ಮೇಲೆ ಲೋಕಸಭೆ ವಿಸರ್ಜನೆಯಾದರೆ, ರಾಜ್ಯ ಸಭೆಯ ಒಪ್ಪಿಗೆಯನ್ನು ಪಡೆಯಬಹುದು.
- ಸರ್ಕಾರಕ್ಕೆ ಸದುದ್ದೇಶವಿಲ್ಲವೆಂಬ ಕಾರಣ ನೀಡಿ ತುರ್ತು ಪರಿಸ್ಥಿತಿಯ ಘೋಷಣೆಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು.
- ಹೇಬಿಯಸ್ ಕಾರ್ಪಸ್ ಸ್ವರೂಪ ರಿಟ್ ಅರ್ಜಿಗಳನ್ನು ಜಾರಿ ಮಾಡಲು ಹೈಕೋರ್ಟ್‌ಗಳಿಗೆ ಇರುವ ವ್ಯಾಪ್ತಿಯನ್ನು ವಜಾ ಮಾಡಬಹುದು.
- ಈ ಸಮಯದಲ್ಲಿ ಸಂಸತ್ತಿನ ಕಾರ್ಯ ಕಲಾಪಗಳನ್ನು ಪ್ರಕಟಿಸುವ ಹಕ್ಕು ರದ್ದು ಮಾಡಬಹುದು.

## ತುರ್ತು ಪರಿಸ್ಥಿತಿಯ ಪರಿಣಾಮಗಳು :

- ತುರ್ತು ಪರಿಸ್ಥಿತಿಯ ಸಮಯದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳಿಗೆ ಹೇಗೆ ಅಧಿಕಾರ ಚಲಾಯಿಸಬೇಕೆಂದು ಆದೇಶ ನೀಡುತ್ತದೆ.
- ತುರ್ತು ಪರಿಸ್ಥಿತಿ ಜಾರಿಗೆ ಬಂದ ಮೇಲೆ 250ನೇ ವಿಧಿ ಪ್ರಕಾರ ರಾಜ್ಯ ಪಟ್ಟಿಯಲ್ಲಿರುವ ಯಾವುದೇ ವಿಷಯದ ಬಗ್ಗೆ ಕಾನೂನು ಮಾಡಲು ಸಂಸತ್ತಿಗೆ ಅಧಿಕಾರವಿದೆ.
- ಸಂಸತ್ತು ಅಧಿವೇಶನದಲ್ಲಿ ಇಲ್ಲದಿದ್ದಾಗ, ರಾಜ್ಯ ಪಟ್ಟಿಯಲ್ಲಿರುವ ಯಾವುದೇ ವಿಷಯದ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಲು ರಾಷ್ಟ್ರಪತಿಗೆ ಅಧಿಕಾರವಿದೆ.
- 354ನೇ ಪ್ರಕಾರ ತುರ್ತು ಪರಿಸ್ಥಿತಿಯ ಸಮಯದಲ್ಲಿ 268–279ರವರೆಗಿನ ವಿಧಿಗಳಲ್ಲಿ ತಿಳಿಸಿರುವ ಕೇಂದ್ರ & ರಾಜ್ಯಗಳ ನಡುವಿನ ಹಣಕಾಸು ಹಂಚಿಕೆಯಲ್ಲಿ ಮಾರ್ಪಾಡು ಮಾಡುವಂತೆ ಆದೇಶ ನೀಡುವ ಅಧಿಕಾರ ರಾಷ್ಟ್ರಪತಿಗಿದೆ.
- ತುರ್ತು ಪರಿಸ್ಥಿತಿಯು ಮುಂದುವರಿಯುವವರೆಗೂ ಪ್ರತಿ ವರ್ಷ ಸಂಸತ್ತು ತನ್ನ ಅವಧಿಯನ್ನು ವಿಸ್ತರಿಸಿಕೊಳ್ಳಬಹುದು.



GNANADHARE IAS KAS ACADEMY

- ತುರ್ತು ಪರಿಸ್ಥಿತಿ ಮುಂದುವರಿಕೆಗೆ ಕಾಲ ಮಿತಿ ಇಲ್ಲ.

## ರಾಷ್ಟ್ರ ತುರ್ತು ಪರಿಸ್ಥಿತಿ ಘೋಷಣೆಗಳು :

### ಬಾಹ್ಯ ತುರ್ತು ಪರಿಸ್ಥಿತಿ ಘೋಷಣೆ :

352ನೇ ವಿಧಿ ಪ್ರಕಾರ ಬಾಹ್ಯ ತುರ್ತು ಪರಿಸ್ಥಿತಿಯನ್ನು 2 ಬಾರಿ ಘೋಷಿಸಲಾಗಿದೆ.

- **ಮೊದಲ ಬಾರಿ :** 1962ರಲ್ಲಿ ಚೈನಾ ಆಕ್ರಮಣ ಮಾಡಿದಾಗ ಕೇಂದ್ರ ಮಂತ್ರಿ ಮಂಡಲ ಸಲಹೆ ಮೇರೆಗೆ ರಾಷ್ಟ್ರಪತಿ ಅಕ್ಟೋಬರ್ 26ರಂದು ತುರ್ತು ಪರಿಸ್ಥಿತಿ ಘೋಷಣೆ ಮಾಡಿದರು.

| | |
|---|---|
| ಅಕ್ಟೋಬರ್ 26, 1962 – ಜನವರಿ 10, 1968 | 5 ವರ್ಷ 2 ತಿಂಗಳು 15 ದಿನಗಳ ಕಾಲ ಜಾರಿಯಲ್ಲಿತ್ತು |

- **ಎರಡನೇ ಬಾರಿ :** ಭಾರತ & ಪಾಕಿಸ್ತಾನಗಳ ನಡುವೆ 1971ರ ಡಿಸೆಂಬರ್ ತಿಂಗಳಲ್ಲಿ ಯುದ್ಧ ಉಂಟಾದಾಗ ಬಾಹ್ಯ ತುರ್ತು ಪರಿಸ್ಥಿತಿಯನ್ನು ಡಿಸೆಂಬರ್ 3ರಂದು ರಾಷ್ಟ್ರಪತಿ ಘೋಷಣೆ ಮಾಡಿದರು.

| | |
|---|---|
| ಡಿಸೆಂಬರ್ 3, 1971 – ಮಾರ್ಚ್ 27, 1977 | 5 ವರ್ಷ 3 ತಿಂಗಳು 24 ದಿನಗಳ ಕಾಲ ಜಾರಿಯಲ್ಲಿತ್ತು |

### ಆಂತರಿಕ ತುರ್ತು ಪರಿಸ್ಥಿತಿ ಘೋಷಣೆ :

ಮೊದಲ ಬಾರಿಗೆ ಆಂತರಿಕ ತುರ್ತು ಪರಿಸ್ಥಿತಿಯನ್ನು 325ನೇ ವಿಧಿಯ ಪ್ರಕಾರ ಶ್ರೀಮತಿ ಇಂದಿರಾಗಾಂಧಿ ಯವರು ಜೂನ್ 25, 1975ರಂದು ಮಧ್ಯರಾತ್ರಿಯಿಂದಲೇ ಜಾರಿ ಮಾಡಿದರು.

| | |
|---|---|
| ಜೂನ್ 25, 1975 – ಮಾರ್ಚ್ 21, 1977 | 1 ವರ್ಷ 9 ತಿಂಗಳು 26 ದಿನಗಳು |

GNANADHARE IAS KAS ACADEMY

## ಆಂತರಿಕ ತುರ್ತು ಪರಿಸ್ಥಿತಿಗೆ ಮೂಲ ಕಾರಣಗಳು :

1971ರಲ್ಲಿ ಲೋಕಸಭೆಗೆ ಶ್ರೀಮತಿ ಇಂದಿರಾಗಾಂಧೀಯವರು ಆಯ್ಕೆಯಾದುದನ್ನು, ಅವರ ಪ್ರತಿಸ್ಪರ್ಧಿ, ರಾಜಾ ನಾರಾಯಣ್ ಅಲಹಾಬಾದ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಈ ನ್ಯಾಯಾಲಯ ಜೂನ್ 12, 1975ರಂದು ತೀರ್ಪು ನೀಡಿ, ಶ್ರೀಮತಿ ಇಂದಿರಾಗಾಂಧಿ ಲೋಕಸಭಾ ಸದಸತ್ವವನ್ನು ಅನೂರ್ಜಿತಗೊಳಿಸಿತು.

## ಆಂತರಿಕ ತುರ್ತು ಪರಿಸ್ಥಿತಿ ಜಾರಿಗೆ ಕೊಟ್ಟ ಕಾರಣಗಳು :

- ಗುಜರಾತ್ & ಬಿಹಾರಗಳಲ್ಲಿ ಉಂಟಾದ ಜೆ.ಪಿ. ಆಂದೋಲನ
- ರೈಲ್ವೆ ಸಿಬ್ಬಂದಿ ಮುಷ್ಕರ
- ರಾಜಕೀಯ ಪದ್ದತಿಯನ್ನು ಬಡಮೇಲು ಮಾಡುವವರ ಪ್ರಯತ್ನ

## ರಾಜ್ಯ ತುರ್ತು ಪರಿಸ್ಥಿತಿ ಘೋಷಣೆ :

- ರಾಜ್ಯಪಾಲರ ವರದಿಯ ಮೇರೆಗೆ ರಾಜ್ಯ ಸರ್ಕಾರ ಸಂವಿಧಾನದ ನಿಯಮಗಳಿಗೆ ಅನುಸಾರ ಆಡಳಿತ ನಡೆಸದೇ ಇದ್ದಾಗ, 356ನೇ ವಿಧಿಯನ್ವಯ ರಾಷ್ಟ್ರಪತಿ ಅದನ್ನು ವಜಾ ಮಾಡಿ, ತಮ್ಮ ಆಡಳಿತವನ್ನು ಘೋಷಿಸಬಹುದು. ಹೀಗೆ ಯಾವುದಾದರೂ ರಾಜ್ಯ ರಾಷ್ಟ್ರಪತಿ ಆಡಳಿತಕ್ಕೆ ಒಳಗಾಗುವುದನ್ನು ರಾಜ್ಯ ತುರ್ತು ಪರಿಸ್ಥಿತಿ ಎನ್ನುವರು.
- ರಾಷ್ಟ್ರಪತಿ ಆಡಳಿತವನ್ನು ಯಾವುದಾದರೂ ರಾಜ್ಯದಲ್ಲಿ ಘೋಷಿಸಿದ 2 ತಿಂಗಳಲ್ಲಿ ಸಂಸತ್ತಿನ ಉಭಯ ಸದನಗಳ ಅಂಗೀಕಾರ ಪಡೆಯಬೇಕು, ಇಲ್ಲದಿದ್ದರೆ ಅದು ರದ್ದಾಗುತ್ತದೆ.
- ಸಂಸತ್ತಿನ ಅಂಗೀಕಾರವಿಲ್ಲದೆ 2 ಬಾರಿ ಹೊಸ ಘೋಷಣೆಗಳ ಮೂಲಕ ರಾಷ್ಟ್ರಪತಿ ಆಡಳಿತವನ್ನು ಒರಿಸ್ಸಾ (1971) & ಬಿಹಾರ (1972) ರಲ್ಲಿ ಘೋಷಿಸಲಾಯಿತು.
- ರಾಜ್ಯಪಾಲರ ವರದಿಯಿಲ್ಲದೆ, ಕೇಂದ್ರ ಸರ್ಕಾರ ರಾಷ್ಟ್ರಪತಿ ಆಡಳಿತ ಘೋಷಿಸಬಹುದು.
- ಡಾ// ಬಿ.ಆರ್. ಅಂಬೇಡ್ಕರ್ ಪ್ರಕಾರ, ರಾಜಕೀಯ ಉದ್ದೇಶಗಳಿಗಾಗಿ ಬಳಸುವ ಸಾಧ್ಯತೆಯಿರುವುದರಿಂದ ಇದನ್ನು ಎಚ್ಚರಿಕೆಯಿಂದ & ಕೊನೆ ಅಸ್ತ್ರವಾಗಿ ಬಳಸಬೇಕೆಂದು ಹೇಳಿದ್ದಾರೆ.

GNANADHARE IAS KAS ACADEMY

- 356(4)ನೇ ವಿಧಿ ಪ್ರಕಾರ, ರಾಷ್ಟ್ರಪತಿ ಆಡಳಿತ 3 ವರ್ಷಗಳ ಕಾಲ ಜಾರಿಯಲ್ಲಿರಬಹುದಾದರೂ 44ನೇ ತಿದ್ದುಪಡಿ ಅನ್ವಯ ಬದಲಾಯಿಸಿರುವ 256(5)ನೇ ವಿಧಿ ಪ್ರಕಾರ 2 ಸಂದರ್ಭಗಳಲ್ಲಿ, 1 ವರ್ಷಕ್ಕಿಂತ ಹೆಚ್ಚುಕಾಲ ಜಾರಿಯಲ್ಲಿರುವಂತಿಲ್ಲ. ಅವುಗಳೆಂದರೆ :
    - ದೇಶಾದ್ಯಂತ/ದೇಶದ ಯಾವುದೇ ಭಾಗದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ
    - ರಾಷ್ಟ್ರಪತಿ ಆಡಳಿತವಿರುವ ರಾಜ್ಯದಲ್ಲಿ ಚುನಾವಣೆಯನ್ನು ತಕ್ಷಣ ನಡೆಸಲು ಸಾಧ್ಯವಿಲ್ಲವೆಂದು ಚುನಾವಣಾ ಆಯೋಗ ದೃಢಿಕರಿಸಿದಾಗ, 1 ವರ್ಷಕ್ಕಿಂತ ಹೆಚ್ಚುಕಾಲ ಮುಂದುವರೆಸಬಹುದು.

## ಪರಿಣಾಮಗಳು :

- ರಾಷ್ಟ್ರಪತಿ ಆಡಳಿತವನ್ನು ಘೋಷಿಸಿದ ಮೇಲೆ ಸಂಬಂಧಪಟ್ಟ ರಾಜ್ಯದ ಮಂತ್ರಿಮಂಡಲ ಪದಚ್ಯುತಿಗೊಳ್ಳುತ್ತದೆ.
- ರಾಜ್ಯದ ಆಡಳಿತ/ಕಾರ್ಯಾಂಗಾಧಿಕಾರವನ್ನು ರಾಷ್ಟ್ರಪತಿ ನಿರ್ವಹಿಸುವುದರಿಂದ ಇದನ್ನು ರಾಷ್ಟ್ರಪತಿ ಆಡಳಿತ ಎನ್ನುವರು.
- ರಾಷ್ಟ್ರಪತಿ ಆಡಳಿತ ಜಾರಿಗೆ ಬಂದ ರಾಜ್ಯದಲ್ಲಿ ರಾಜಕೀಯ ಅನುಕೂಲಕ್ಕೆ ತಕ್ಕಂತೆ ವಿಧಾನಸಭೆಯನ್ನು ವಿಸರ್ಜಿಸಬಹುದು. ಆದರೆ ವಿಸರ್ಜನೆಯಾದರೆ ಹೊಸ ವಿಧಾನಸಭೆ ಆಯ್ಕೆಯಾಗಲು ಚುನಾವಣೆ ನಡೆಯಬೇಕು.
- ರಾಷ್ಟ್ರಪತಿ ಆಡಳಿತ ಕಾಲದಲ್ಲಿ ಸಂಸತ್ತು ರಾಜ್ಯಕ್ಕೆ ಸಂಬಂಧಿಸಿದ ಕಾನೂನುಗಳನ್ನು ಮಾಡುತ್ತದೆ & ರಾಜ್ಯದ ಬಜೆಟ್‌ಗೆ ತನ್ನ ಒಪ್ಪಿಗೆಯನ್ನು ಕೊಡುತ್ತದೆ. ರಾಜ್ಯದ ಬಜೆಟ್‌ನ್ನು ರಾಜ್ಯದ ಅಧಿಕಾರಿಗಳು ಸಿದ್ದಪಡಿಸುತ್ತಾರೆ.

## ರಾಜ್ಯ ತುರ್ತು ಪರಿಸ್ಥಿತಿ ಕುರಿತಂತೆ ಸರ್ಕಾರಿಯ ಆಯೋಗದ ಶಿಫಾರಸ್ಸುಗಳು:

ಸರ್ಕಾರಿ ಆಯೋಗ ತನ್ನ ವರದಿಯಲ್ಲಿ 356ನೇ ವಿಧಿಯ ಕೆವು ಅಕ್ರಮ ಬಳಕೆಗಳನ್ನು ತಿಳಿಸಿದ್ದರೂ, ಇದನ್ನು ರದ್ದುಮಾಡಬೇಕೆಂದು ಶಿಫಾರಸ್ಸು ಮಾಡಿಲ್ಲ. ಆದರೆ ಅಕ್ರಮ ಬಳಕೆಯನ್ನು ತಡೆಯಲು ಮುಖ್ಯ ಶಿಫಾರಸ್ಸುಗಳನ್ನು ಮಾಡಿದೆ.

- 256ನೇ ವಿಧಿಯನ್ನು ಕೊನೆ ಅಸ್ತ್ರವಾಗಿ ಬಳಸಬೇಕು.

- ರಾಜ್ಯಪಾಲರ ವರದಿ ಆಧಾರದ ಮೇಲೆ ರಾಷ್ಟ್ರಪತಿ ಆಡಳಿತವನ್ನು ಘೋಷಿಸಿ ವರದಿಯನ್ನು ಪ್ರಕಟಿಸಬೇಕು.
- ರಾಷ್ಟ್ರಪತಿ ಆಡಳಿತದ ಘೋಷಣೆಗೆ ಸಂಬಂಧಿಸಿದ ವರದಿಗಳನ್ನು 2 ತಿಂಗಳೊಳಗೆ ಸಂಸತ್ತಿನಲ್ಲಿ ಮಂಡಿಸಬೇಕು.
- ಸಂಸತ್ತಿನಲ್ಲಿ ಚರ್ಚೆಯಾಗುವುದಕ್ಕೆ ಮುಂಚೆ, ವಿಧಾನಸಭೆಯನ್ನು ವಿಸರ್ಜಿಸಬೇಕು.
- **ಮೊದಲ ರಾಷ್ಟ್ರಪತಿ ಆಡಳಿತ ಕಂಡ ರಾಜ್ಯ ಪಂಜಾಬ್ : 20–06–1951 – 17–04–1952 (3022 ದಿನಗಳು)**

# ಆರ್ಥಿಕ ತುರ್ತು ಪರಿಸ್ಥಿತಿ ಘೋಷಣೆ :

ರಾಷ್ಟ್ರಪತಿಯ ಅಭಿಪ್ರಾಯದಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆಯೆಂದು ಕಂಡುಬಂದರೆ, ಸಂವಿಧಾನದ 360ನೇ ವಿಧಿ ಪ್ರಕಾರ, ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದು. ದೇಶದಲ್ಲಿ ಭ್ರಷ್ಟಾಚಾರ, ಕಪ್ಪುಹಣದ ಹಾವಳಿ & ಹಣದುಬ್ಬರ ತಾಂಡವವಾಡುತ್ತಿದ್ದರೂ ಆರ್ಥಿಕ ತುರ್ತು ಪರಿಸ್ಥಿತಿ ಇದುವರೆಗೂ ಘೋಷಿಸಿಲ್ಲ.

## ಪರಿಣಾಮಗಳು :

- ಆರ್ಥಿಕ ತುರ್ತು ಪರಿಸ್ಥಿತಿಯ ಸಮಯದಲ್ಲಿ ರಾಜ್ಯಗಳು ಕೆಲವು ಆರ್ಥಿಕ ನಿಯಮಗಳನ್ನು ಅನುಸರಿಸುವಂತೆ, ಕೇಂದ್ರ ಸರ್ಕಾರದ ಆದೇಶ ನೀಡಬಲ್ಲದು.
- ಎಲ್ಲ ವರ್ಗದ/ಕೆಲವು ವರ್ಗಗಳ ಕೇಂದ್ರ & ರಾಜ್ಯ ಸರ್ಕಾರಗಳ ಸಿಬ್ಬಂದಿಗಳ & ಸುಪ್ರಿಂ ಕೋರ್ಟ್‌ನ ಹಾಗೂ ಹೈಕೋರ್ಟ್ ನ್ಯಾಯಾಧೀಶರ ವೇತನ & ಭತ್ಯೆಗಳನ್ನು ಕಡಿಮೆ ಮಾಡುವಂತೆ ಕೇಂದ್ರವು ನಿರ್ದೇಶನ ನೀಡುವ ಅಧಿಕಾರ ಹೊಂದಿದೆ
- ರಾಜ್ಯ ಶಾಸಕಾಂಗಗಳು ಅಂಗೀಕರಿಸಿದ ಎಲ್ಲಾ ಹಣಕಾಸು ಮಸೂದೆಗಳನ್ನು ರಾಷ್ಟ್ರಪತಿಯ ಅಂಗೀಕಾರಕ್ಕೆ ಕಳುಹಿಸುವಂತೆ ಕೇಂದ್ರ ಸರ್ಕಾರ ಆದೇಶ ನೀಡಬಲ್ಲದು.

GNANADHARE IAS KAS ACADEMY

# ಮೂಲಭೂತ ಕರ್ತವ್ಯಗಳು :

- ಸಂವಿಧಾನದ 42ನೇ ತಿದ್ದುಪಡಿ ಮೂಲಕ 3–1–1977ರಿಂದ ಜಾರಿಗೆ ಬರುವಂತೆ 4ಎ ಭಾಗ & 51ಎ ಹೊಸ ವಿಧಿಯನ್ನು ಸಂವಿಧಾನದಲ್ಲಿ ಅಳವಡಿಸಿ, 10 ಮೂಲಭೂತ ಕರ್ತವ್ಯಗಳನ್ನು ನಮೂದಿಸಲಾಗಿದೆ.
- 2002ರಲ್ಲಿ ಸಂವಿಧಾನ 86ನೇ ತಿದ್ದುಪಡಿ ಮೂಲಕ, ಮತ್ತೊಂದು ಮೂಲಭೂತ ಕರ್ತವ್ಯಗಳನ್ನು ಅಳವಡಿಸಿತು.

| ಪ್ರಸ್ತುತ 11 ಮೂಲಭೂತ ಕರ್ತವ್ಯಗಳಿವೆ | |
|---|---|
| 1 | ಸಂವಿಧಾನದ ರಾಷ್ಟ್ರಧ್ವಜ & ರಾಷ್ಟ್ರಗೀತೆಯನ್ನು ಗೌರವಿಸುವುದು |
| 2 | ಸ್ವಾತಂತ್ರ್ಯ ಚಳುವಳಿಯ ಆದರ್ಶಗಳನ್ನು ಪಾಲಿಸುವುದು |
| 3 | ಭಾರತದ ಪರಮಾಧಿಕಾರ, ಏಕತೆ & ಸಮಗ್ರತೆಯನ್ನು ಕಾಯ್ದು ರಕ್ಷಿಸುವುದು |
| 4 | ಅಗತ್ಯ ಬಂದಾಗ ರಾಷ್ಟ್ರವನ್ನು ರಕ್ಷಿಸಿ, ದೇಶದ ಸೇವೆ ಮಾಡುವುದು |
| 5 | ಭಾರತೀಯರಲ್ಲಿ ಸಾಮರಾಸ್ಯ & ಸಹೋದರತ್ವ ಭಾವನೆಯನ್ನು ಬೆಳೆಸುವುದು & ಮಹಿಳೆಯರ ಗೌರವಕ್ಕೆ ಭಂಗ ತರುವ ಆಚರಣೆಗಳನ್ನು ತ್ಯಜಿಸುವುದು |
| 6 | ನಮ್ಮ ಸಂಘಟಿತ ಸಂಸ್ಕೃತಿಯ ಪರಂಪರೆಯನ್ನು ಗೌರವಿಸಿ ರಕ್ಷಿಸುವುದು |
| 7 | ಅರಣ್ಯಗಳು, ಸರೋವರಗಳು, ನದಿಗಳು & ಮೃಗಗಳು ಸೇರಿದಂತೆ ಪ್ರಕೃತಿ ಪರಿಸರವನ್ನು ರಕ್ಷಿಸಿ, ಅಭಿವೃದ್ಧಿ ಪಡಿಸುವುದು & ಜೀವಂತ ಪ್ರಾಣಿಗಳಿಗೆ ಅನುಕಂಪ ತೋರಿಸುವುದು |
| 8 | ವೈಜ್ಞಾನಿಕ & ಮಾನವೀಯತೆಯ ಗುಣಗಳನ್ನು & ವಿಚಾರಣೆ & ಸುಧಾರಣಾ ಭಾವನೆಗಳನ್ನು ಬೆಳೆಸುವುದು |
| 9 | ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು & ಹಿಂಸಾ ಮಾರ್ಗವನ್ನು ಬಿಡುವುದು |
| 10 | ವೈಯುಕ್ತಿಕ & ಸಾಮೂಹಿಕ ಚಟುವಟಿಕೆಯಲ್ಲಿ ಪ್ರವೀಣತೆಯನ್ನು ಪ್ರದರ್ಶಿಸಿ, ರಾಷ್ಟ್ರದ ಪ್ರಗತಿಗೆ ಶ್ರಮಿಸುವುದು |
| 11 | ತಂದೆ/ಪೋಷಕರು 6–14 ವರ್ಷದವರೆಗೆ ತಮ್ಮ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವುದು. |

GNANADHARE IAS KAS ACADEMY

# ಸಂವಿಧಾನದ ತಿದ್ದುಪಡಿ ವಿಧಾನಗಳು:

- ಸಂವಿಧಾನದ 20ನೇ ಭಾಗದಲ್ಲಿ ನಮೂದಿಸಲ್ಪಟ್ಟಿರುವ 368ನೇ ವಿಧಿಯು, ಸಂವಿಧಾನ ತಿದ್ದುಪಡಿ ಮಾಡುವ ಸಂಸತ್ತಿನ ಅಧಿಕಾರಗಳನ್ನು ತಿಳಿಸುತ್ತದೆ.
- ಬದಲಾದ ಪರಿಸ್ಥಿತಿ & ಅಗತ್ಯಗಳಿಗನುಸಾರವಾಗಿ ಸಂವಿಧಾನವನ್ನು ತಿದ್ದುಪಡಿ ಮಾಡಿ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ನೀಡಿದ್ದರೂ, ಸಂವಿಧಾನದ ಮೂಲ ರಚನೆಗೆ ಯವುದೇ ರೀತಿಯಾಗಿ ದಕ್ಕೆ ತರುವಂತಿಲ್ಲ.

## ತಿದ್ದುಪಡಿ ಕಾರ್ಯ ವಿಧಾನ :

1. ತಿದ್ದುಪಡಿ ಮಸೂದೆಯನ್ನು ಸಂಸತ್ತಿನ ಲೋಕಸಭೆಯಲ್ಲಾಗಲಿ/ರಾಜ್ಯಸಭೆಯಲ್ಲಾಗಲಿ ಮಂಡಿಸಬಹುದು. ಆದರೆ ರಾಜ್ಯ ಶಾಸಕಾಂಗದಲ್ಲಿ ಮಂಡಿಸುವಂತಿಲ್ಲ.
2. ಮಂತ್ರಿಯಾಗಲಿ/ಸಂಸದರಾಗಲಿ ಮಸೂದೆಯನ್ನು ಮಂಡಿಸಬಹುದು. ಇದಕ್ಕಾಗಿ ರಾಷ್ಟ್ರಾಧ್ಯಕ್ಷರ ಪೂರ್ವಾನುಮತಿ ಅಗತ್ಯವಿಲ್ಲ.
3. ತಿದ್ದುಪಡಿ ಮಸೂದೆಗೆ ಸಂಸತ್ತಿನ ಪ್ರತಿ ಸದನದಲ್ಲಿ ಒಟ್ಟು ಸದಸ್ಯರ ವಿಶೇಷ ಬಹುಮತ (ಶೇ.50ಕ್ಕಿಂತ ಹೆಚ್ಚು) ಅಂಗೀಕೃತವಾಗಬೇಕು ಹಾಗೂ ಹಾಜರಿರುವ 2/3ರಷ್ಟು ಬಹುಮತ & ಮತ ಚಲಾಯಿಸಬೇಕು.
4. ತಿದ್ದುಪಡಿ ಮಸೂದೆಯನ್ನು ಒಂದು ಸದನವು ಅಂಗೀಕರಿಸಿ ಇನ್ನೊಂದು ಸದನವು ತಿರಸ್ಕರಿಸಿದರೆ, ಸಂಸತ್ತಿನ ಜಂಟಿ ಅಧಿವೇಶನ ಕರೆಯುವಂತಿಲ್ಲ.
5. ಸಂಸತ್ತಿನ ಎರಡು ಸದನಗಳಿಂದ ಅಂಗೀಕರಿಸಲ್ಪಟ್ಟ ತಿದ್ದುಪಡಿ ಮಸೂದೆಯನ್ನು ರಾಷ್ಟ್ರಪತಿಯ ಅನುಮೋದನೆಗೆ ಕಳುಹಿಸಿದಾಗ, ತಿರಸ್ಕರಿಸುವುದಾಗಲೀ/ಮರು ಪರಿಶೀಲನೆಗೆ ಕಳುಹಿಸುವುದಾಗಲೀ ಮಾಡುವಂತಿಲ್ಲ. ಕಡ್ಡಾಯವಾಗಿ ತಮ್ಮ ಅನುಮೋದನೆಯನ್ನು ನೀಡಬೇಕು. ನಂತರ ಸಂವಿಧಾನವನ್ನು ತಿದ್ದುಪಡಿ ಮಾಡಲಾಗುವುದು.

GNANADHARE IAS KAS ACADEMY

## ತಿದ್ದುಪಡಿ ವಿಧಾನಗಳು :

- ಸಂಸತ್ತಿನ ಸರಳ ಬಹುಮತದ ಮೂಲಕ ತಿದ್ದುಪಡಿ
- ಸಂವಿಧಾನದ 368ನೇ ವಿಧಿಯನ್ವಯ ತಿದ್ದುಪಡಿ
  - ಸಂಸತ್ತಿನ ವಿಶೇಷ ಬಹುಮತದ ಮೂಲಕ ತಿದ್ದುಪಡಿ
  - ಸಂಸತ್ತಿನ ಬಹುಮತ & ರಾಜ್ಯ ಶಾಸಕಾಂಗಗಳ 1/2ರಷ್ಟು ಅನುಮೋದನೆ ಮೂಲಕ ತಿದ್ದುಪಡಿ

## ಸಂಸತ್ತಿನ ಸರಳ ಬಹುಮತದ ಮೂಲಕ ತಿದ್ದುಪಡಿ :

1. ಹೊಸ ರಾಜ್ಯಗಳ ಸ್ಥಾಪನೆ/ಸೇರ್ಪಡೆ.
2. ಹೊಸ ರಾಜ್ಯಗಳ ಸ್ಥಾಪನೆ/ರಾಜ್ಯಗಳ ಗಡಿಗಳ ಬದಲಾವಣೆ/ರಾಜ್ಯಗಳ ಹೆಸರು ಬದಲಾಣೆ
3. ರಾಜ್ಯ ವಿಧಾನ ಪರಿಷತ್ತುಗಳ ರಚನೆ/ರದ್ಧತಿ
4. ಎರಡನೇ ಅನುಸೂಚಿಯಲ್ಲಿ ವಿಷಯಗಳು
5. ಸಂಸತ್ತಿನ ಕೋರಂ/ಕನಿಷ್ಠ ಹಾಜರಾತಿ
6. ಸಂಸತ್ತಿನ ಸದಸ್ಯರ ವೇತನ & ಭತ್ಯೆ
7. ಸಂಸತ್ತಿನಲ್ಲಿ ಇಂಗ್ಲೀಷ್ ಭಾಷೆಯ ಬಳಕೆ
8. ಪೌರತ್ವ
9. ಸಂಸತ್ತಿನ & ರಾಜ್ಯಶಾಸಕಾಂಗಗಳ ಚುನಾವಣೆಗಳು
10. 5 & 6 ನೇ ಅನುಸೂಚಿಯಲ್ಲಿನ ವಿಷಯಗಳು

# ಸಂವಿಧಾನದಲ್ಲಿ ಅಧಿಕೃತ ಭಾಷೆಗಳು :

- ಸಂವಿಧಾನದ 17ನೇ ಭಾಗ & 8ನೇ ಅನುಸೂಚಿಯಲ್ಲಿ ನಮೂದಿಸಲ್ಪಟ್ಟಿರುವ 343–351ನೇ ವಿಧಿಗಳು ಅಧಿಕೃತ ಭಾಷೆಗಳ ವಿವರಣೆ ನೀಡುತ್ತದೆ.

GNANADHARE IAS KAS ACADEMY

## ಅಧಿಕೃತ ಭಾಷೆಗಳು

- ಕೇಂದ್ರ ಸರ್ಕಾರದ ಭಾಷೆ
- ರಾಜ್ಯ/ಪ್ರಾದೇಶಿಕ ಭಾಷೆಗಳು
- ನ್ಯಾಯಿಕ ಭಾಷೆ
- ಕಾನೂನಿನ ಮೂಲಪತ್ರ & ವಿಶೇಷ ನಿರ್ದೇಶಕಗಳ ಭಾಷೆ

## ಕೇಂದ್ರ ಸರ್ಕಾರದ ಭಾಷೆ :

1. ಸಂವಿಧಾನದ 343 (1)ನೇ ವಿಧಿಯನ್ವಯ, ಕೇಂದ್ರ ಸರ್ಕಾರ ಅಧಿಕೃತ ದೇವನಾಗರಿ ಲಿಪಿಯ ಹಿಂದಿಯಾಗಿದೆ. ಹಿಂದಿಯು ರಾಷ್ಟ್ರಭಾಷೆ ಎಂದು ಘೋಷಿಸಲ್ಪಟ್ಟಿದೆ.
2. ಸಂವಿಧಾನ 343(1) ನೇ ವಿಧಿಯನ್ವಯ, ಸಂವಿಧಾನ ಜಾರಿಗೆ ಬಂದಾಗಿನಿಂದ 15 ವರ್ಷಗಳವರೆಗೆ ಇಂಗ್ಲೀಷನ್ನು ಕೇಂದ್ರ ಸರ್ಕಾರದ ಅಧಿಕೃತ ಭಾಷೆ ಎಂದು ಬಳಸಲು ಅವಕಾಶವಿತ್ತು.
3. ಸಂವಿಧಾನದ 343(1)ನೇ ವಿಧಿಯನ್ವಯ, 15 ವರ್ಷಗಳ ನಂತರವೂ ಇಂಗ್ಲೀಷನ್ನು ಬಳಸಲು ಸಂಸತ್ತು ಒಂದು ಕಾನೂನು ರೂಪಿಸುವುದರ ಮೂಲಕ ಅವಕಾಶ ಕಲ್ಪಿಸಬಹುದು.

### ಅಧಿಕೃತ ಭಾಷಾ ಕಾಯ್ದೆ – 1963 :

ಸಂಸತ್ 1963ರಲ್ಲಿ ಅಧಿಕೃತ ಭಾಷಾ ಕಾಯ್ದೆ ಶಾಸನವನ್ನು ಮಾಡಿತು. ಈ ಕಾಯಿದೆಯನ್ವಯ, ಹಿಂದಿಯ ಜೊತೆಯಲ್ಲಿ ಇಂಗ್ಲೀಷನ್ನು ಕೇಂದ್ರದ ಎಲ್ಲ ಅಧಿಕೃತ ಉದ್ದೇಶಗಳಿಗೆ ಹಾಗೂ ಸಂಸತ್ತಿನ ವ್ಯವಹಾರದಲ್ಲಿ ಬಳಸಲು ಅವಕಾಶ ನೀಡಿತು. ಈ ಕಾಯಿದೆಯಿಂದಲೇ ಅನಿರ್ದಿಷ್ಟಾವಧಿಯವರೆಗೆ ಇಂಗ್ಲೀಷ್ ಬಳಸುವ ಅವಕಾಶಕ್ಕೆ ನಾಂದಿಯಾಯಿತು.

## ರಾಜ್ಯ/ಪ್ರಾದೇಶಿಕ ಭಾಷೆಗಳು :

- ಸಂವಿಧಾನದ 345ನೇ ವಿಧಿಯನ್ವಯ, ಒಂದು ರಾಜ್ಯದ ಶಾಸಕಾಂಗವು ರಾಜ್ಯದಲ್ಲಿ ಬಳಸಲಾಗುತ್ತಿರುವ ಭಾಷೆಗಳ ಪೈಕಿ ಯಾವುದಾದರೊಂದು ಹೆಚ್ಚು ಭಾಷೆಗಳನ್ನು/ ಹಿಂದಿಯನ್ನು

GNANADHARE IAS KAS ACADEMY

ಅಧಿಕೃತ ಭಾಷೆಯನ್ನಾಗಿ ಅಳವಡಿಸಿಕೊಳ್ಳಬಹುದು. ಅಲ್ಲಿಯವರೆಗೆ ಇಂಗ್ಲೀಷ್ ಆ ರಾಜ್ಯದ ಅಧಿಕೃತ ಭಾಷೆಯಾಗಿ ಮುಂದುವರೆಸಬೇಕು.

- ಸಂವಿಧಾನದ 346ನೇ ವಿಧಿಯ ಅನ್ವಯ ರಾಜ್ಯ-ರಾಜ್ಯಗಳ ನಡುವೆ/ರಾಜ್ಯಗಳು-ಒಕ್ಕೂಟದ ನಡುವೆ ಇಂಗ್ಲೀಷ್ ಸಂಪರ್ಕ ಭಾಷೆಯಾಗಿ ಮುಂದುವರೆಯುತ್ತದೆ.
- ಸಂವಿಧಾನದ 347(ಎ)ನೇ ವಿಧಿಯನ್ವಯ, ಒಂದು ರಾಜ್ಯದಲ್ಲಿ ಅಧಿಕ ಸಂಖ್ಯೆಯ ಜನರು ಹೆಚ್ಚು ಮಾತನಾಡುವ ಭಾಷೆಯನ್ನು ರಾಷ್ಟ್ರಪತಿಯು, ಆ ರಾಜ್ಯದ ಅಧಿಕೃತ ಭಾಷೆಯನ್ನಾಗಿ ಮಾನ್ಯ ಮಾಡಲು ನಿರ್ದೇಶನ ಮಾಡಬಹುದಾಗಿದೆ.

## ನ್ಯಾಯಿಕ ಭಾಷೆ :

- ಸಂವಿಧಾನದ 348(ಎ) ನೇ ವಿಧಿಯನ್ವಯ ಸರ್ವೋಚ್ಚ ನ್ಯಾಯಲಯ & ಪ್ರತಿಯೊಂದು ಉಚ್ಚ ನ್ಯಾಯಾಲಯಗಳಲ್ಲಿ ಎಲ್ಲಾ ಕಾರ್ಯ ಕಲಾಪಗಳು ಇಂಗ್ಲೀಷ್ ಭಾಷೆಯಲ್ಲಿ ನಡೆಯತಕ್ಕದ್ದು.

## ಕಾನೂನಿನ ಮೂಲಪತ್ರ ಭಾಷೆ :

- ಸಂವಿಧಾನದ 348(ಬಿ)ನೇ ವಿಧಿಯನ್ವಯ, ಕೇಂದ್ರ & ರಾಜ್ಯ ಸರ್ಕಾರಗಳ ಎಲ್ಲಾ ಮಸೂದೆಗಳು, ಕಾಯ್ದೆಗಳು, ಸುಗ್ರಿವಾಜ್ಞೆಗಳು, ಆದೇಶಗಳು, ನಿಯಮಗಳು, ಉಪನಿಯಮಗಳು ಇಂಗ್ಲೀಷ್ ಭಾಷೆಯಲ್ಲಿರತಕ್ಕದ್ದು.

## ಅನುಸೂಚಿತ ಭಾಷೆಗಳಿಗೆ ಕೇಂದ್ರ ಸರ್ಕಾರದ ಸೌಲಭ್ಯಗಳು :

1. ಕೇಂದ್ರ ಸರ್ಕಾರವು ಸೂಚಿತ ಭಾಷೆಗಳ ಬೆಳವಣಿಗೆಗೆ ಧನ ಸಹಾಯ ನೀಡುವುದು.
2. 8ನೇ ಅನುಸೂಚಿಯಲ್ಲಿ ನಮೂದಿಸದೇ ಇರುವ ಭಾಷೆಗಳ ಕೃತಿಗಳನ್ನು ಜ್ಞಾನಪೀಠ ಪ್ರಶಸ್ತಿ ಮನ್ನಣೆಗೆ ಪರಿಗಣಿಸುವುದಿಲ್ಲ.
3. ರಾಷ್ಟ್ರೀಯ ಪ್ರಶಸ್ತಿಗಳಿಗೆ ಅನುಸೂಚಿತ & ಅನುಸೂಚಿತವಲ್ಲದ ಭಾಷೆಗಳಿಗೆ ಪ್ರತ್ಯೇಕ ಸ್ಪರ್ಧೆ ಇರುತ್ತದೆ.
4. 8ನೇ ಅನುಸೂಚಿಯಲ್ಲಿ ತಿಳಿಸದೇ ಇರುವ ಭಾಷೆಗಳನ್ನು ಕೇಂದ್ರದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬಳಸುವಂತಿಲ್ಲ.
5. ಅನುಸೂಚಿತವಲ್ಲದ ಭಾಷೆಯನ್ನು ಸಂಸತ್ತಿನಲ್ಲಿ ಬಳಸಲು ಅವಕಾಶವಿಲ್ಲ.

GNANADHARE IAS KAS ACADEMY

| ಸೇರ್ಪಡೆಯಾದ ವರ್ಷ | ಸೇರ್ಪಡೆಯಾದ ಭಾಷೆಗಳ ಸಂಖ್ಯೆ | ಭಾಷೆಗಳ ಹೆಸರು |
|---|---|---|
| ಜನವರಿ 26, 1950 (ಮೂಲ ಭಾಷೆಗಳು) | 14 | 1. ಅಸ್ಸಾಮಿ<br>2. ಬೆಂಗಾಲಿ<br>3. ಗುಜರಾತಿ<br>4. ಹಿಂದಿ<br>5. ಕನ್ನಡ<br>6. ಕಾಶ್ಮೀರಿ<br>7. ಒರಿಯಾ<br>8. ಮಲಯಾಳಂ<br>9. ಪಂಜಾಬಿ<br>10. ಮರಾಠಿ<br>11. ಸಂಸ್ಕೃತ<br>12. ತಮಿಳು<br>13. ತೆಲುಗು<br>14. ಉರ್ದು |
| 21ನೇ ತಿದ್ದುಪಡಿ – 1967 | 01 | 15. ಸಿಂಧಿ |
| 71 ನೇ ತಿದ್ದುಪಡಿ – 1992 | 03 | 16. ಕೊಂಕಣಿ<br>17.ಮಣಿಪುರಿ<br>18. ನೇಪಾಳಿ |
| 92ನೇ ತಿದ್ದುಪಡಿ – 2003 | 04 | 19. ಬೋಡೋ<br>20. ಡೋಂಗ್ರಿ<br>21. ಮೈಥಿಲಿ<br>22. ಸಂತಾಲಿ |
| ಪ್ರಸ್ತುತ ಭಾಷೆಗಳ ಒಟ್ಟು ಸಂಖ್ಯೆ | 22 | |

GNANADHARE IAS ACADEMY

# ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ :

- ಭಾರತದ ಸಂವಿಧಾನದಲ್ಲಿ ನಮೂದಿಸಲ್ಪಟ್ಟಿರುವ 1ನೇ ವಿಧಿಯ ಅನ್ವಯ. ಭಾರತ ಒಕ್ಕೂಟದ ಒಂದು ರಾಜ್ಯವಾಗಿ, ಜಮ್ಮು ಕಾಶ್ಮೀರ ಪರಿಗಣಿಸಲ್ಪಟ್ಟಿದೆ. ಅಲ್ಲದೇ ಸಂವಿಧಾನದ 21ನೇ ಭಾಗದಲ್ಲಿ ನಮೂದಿಸಲ್ಪಟ್ಟಿರುವ 370ನೇ ವಿಧಿಯು ಜಮ್ಮು ಕಾಶ್ಮೀರಕ್ಕೆ ವಿಶೇಷವಾದ ಸ್ಥಾನಮಾನವನ್ನು ನೀಡಿದೆ. ಆದ್ದರಿಂದ ಭಾರತ ಸಂವಿಧಾನದ ಎಲ್ಲಾ ವಿಧಿಗಳು ಜಮ್ಮು & ಕಾಶ್ಮೀರಕ್ಕೆ ಅನ್ವಯವಾಗುವುದಿಲ್ಲ. ಭಾರತದಲ್ಲಿ ಪ್ರತ್ಯೇಕ ಸಂವಿಧಾನನ್ನು ಹೊಂದಿರುವ ಏಕೈಕ ರಾಜ್ಯವೆಂದು "ಜಮ್ಮು & ಕಾಶ್ಮೀರ" ಕರೆಯಲ್ಪಟ್ಟಿದೆ.

## ಭಾರತಕ್ಕೆ ಜಮ್ಮು ಮತ್ತು ಕಾಶ್ಮೀರದ ಸೇರ್ಪಡೆ ಪರಿಸ್ಥಿತಿ :

- ಭಾರತವು ಸ್ವಾತಂತ್ರ್ಯ ಪಡೆದಾಗ, ಜಮ್ಮು & ಕಾಶ್ಮೀರವು ಭಾರತ & ಪಾಕಿಸ್ತಾನವನ್ನು ಸೇರದೆ ಸ್ವತಂತ್ರವಾಗಿ ಉಳಿಯಿತು. ಪಾಕಿಸ್ತಾನ ಸೇನೆಯ ಬೆಂಬಲದಿಂದ ಆಜಾದ್ ಕಾಶ್ಮೀರ ಸೇನಾಪಡೆ 26–10–1947ರಂದು ಜಮ್ಮು & ಕಾಶ್ಮೀರದ ಮೇಲೆ ದಾಳಿ ಮಾಡಿತು. ಈ ತುರ್ತು ಪರಿಸ್ಥಿತಿಯಲ್ಲಿ ಅಂದಿನ ಮಹಾರಾಜ ಹರಿಸಿಂಗ್ ಭಾರತ ಸರ್ಕಾರವನ್ನು ರಕ್ಷಣೆ ಒದಗಿಸುವಂತೆ ಕೇಳಿಕೊಂಡನು. ಆಗ ಅಂದಿನ ಗೃಹ ಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲರು ಕೆಲವೊಂದು ಷರತ್ತು ವಿಧಿಸಿ, ರಕ್ಷಣೆ ನೀಡಲು ಒಪ್ಪಿಗೆ ನೀಡಿದರು.
- ಜಮ್ಮು & ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಲು, 27–10–1947ರಂದು "Instrument of Accession" ಗೆ ಜವಹಾರ್ ಲಾಲ್ ನೆಹರೂ & ರಾಜ ಹರಿಸಿಂಗ್ ಸಹಿ ಹಾಕಿದರು. ಈ ಒಪ್ಪಂದದ ಅನ್ವಯ ಜಮ್ಮು & ಕಾಶ್ಮೀರ ಭಾರತ ಒಕ್ಕೂಟ ವ್ಯವಸ್ಥೆಯ ಒಂದು ಭಾಗವಾಯಿತು. ಜಮ್ಮು & ಕಾಶ್ಮೀರದ ರಕ್ಷಣೆ, ವಿದೇಶಾಂಗ ವ್ಯವಹಾರಗಳು & ಸಂಪರ್ಕ ವಿಷಯಗಳನ್ನು ಭಾರತ ಸರ್ಕಾರಕ್ಕೆ ಒಪ್ಪಿಸಿತು.
- ಜಮ್ಮು & ಕಾಶ್ಮೀರವು, ಆಜಾದ್ ಕಾಶ್ಮೀರ ಸೇನಾ ಪಡೆಯ ದಾಳಿಯ ಪರಿಣಾಮವಾಗಿ, ಹುಂಜ, ಗಿಲ್‌ಗಿಟ್, ಬಾಲ್ಟಿಸ್ತಾನ್ ಪ್ರದೇಶಗಳನ್ನು ಕಳೆದುಕೊಂಡಿತು.

GNANADHARE IAS KAS ACADEMY

## ಜಮ್ಮು ಮತ್ತು ಕಾಶ್ಮೀರದ ಪ್ರತ್ಯೇಕ ಸಂವಿಧಾನ ರಚನೆ ಮತ್ತು ಜಾರಿ :

- 1951ರಲ್ಲಿ ಸಂವಿಧಾನ ರಚನಾ ಸಭೆ ಆಯ್ಕೆ ಮಾಡಲಾಯಿತು.
- ಭಾರತದ ಒಕ್ಕೂಟದಲ್ಲಿ ಜಮ್ಮು & ಕಾಶ್ಮೀರ ವಿಲೀನವಾದುದನ್ನು ಸಂವಿಧಾನ ರಚನಾ ಸಭೆಯು ಫೆಬ್ರವರಿ 1954ರಲ್ಲಿ ಅನುಮೋದಿಸಿತು.
- 26–1–1957ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತ್ಯೇಕ ಸಂವಿಧಾನ ಜಾರಿಗೆ ಬಂದಿತು. ಜಮ್ಮು ಮತ್ತು ಕಾಶ್ಮೀರದ ಮುಖ್ಯಸ್ಥನನ್ನು "ರಾಜ್ಯಪಾಲ" ಎನ್ನುವರು.

## ಸಂವಿಧಾನದ ಲಕ್ಷಣಗಳು :

1. ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ.
2. ಜಮ್ಮು ಮತ್ತು ಕಾಶ್ಮೀರದ ಜನತೆಗೆ ನ್ಯಾಯ, ಸ್ವಾತಂತ್ರ್ಯ, ಸಮಾನತರ, ಭ್ರಾತೃತ್ವದ ಭದ್ರತೆ ಒದಗಿಸುತ್ತದೆ.
3. ಆಗಸ್ಟ್ 15, 1947ರಂದು ಆಡಳಿತಕ್ಕೆ ಒಳ ಪಟ್ಟಿದ್ದ ಎಲ್ಲಾ ಭೂ ಭಾಗವನ್ನು ಜಮ್ಮು ಮತ್ತು ಕಾಶ್ಮೀರ ಒಳಗೊಂಡಿರುತ್ತದೆ.
4. ರಾಜ್ಯ ನಿರ್ದೇಶಕ ತತ್ವಗಳನ್ನು ಒಳಗೊಂಡಿದ್ದು, ಇವುಗಳನ್ನು ನ್ಯಾಯಾಲಯದ ಮೂಲಕ ಅನುಷ್ಠಾನಗೊಳಿಸುವಂತಿಲ್ಲ.
5. ವಿಧಾನಸಭೆ & ವಿಧಾನ ಪರಿಷತ್ತುಗಳನ್ನೊಳಗೊಂಡ, ದ್ವಿಸದನ ಪದ್ಧತಿಯನ್ನು ಹೊಂದಿರುತ್ತದೆ.
6. ರಾಷ್ಟ್ರಪತಿಯಿಂದ 5 ವರ್ಷಗಳ ಅವಧಿಗೆ ನೇಮಿಸಲ್ಪಡುವ ರಾಜ್ಯಪಾಲರು ರಾಜ್ಯ ಕಾರ್ಯಾಂಗದ ಅಧಿಕಾರಿಗಳನ್ನು ಹೊಂದಿರುತ್ತಾರೆ.
7. ಒಬ್ಬ ಮುಖ್ಯ ನ್ಯಾಯಾಧೀಶ & ಎರಡು/ಹೆಚ್ಚು ನ್ಯಾಯಾಧೀಶರನ್ನೊಳಗೊಂಡ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಿದೆ.
8. ರಾಜ್ಯಪಾಲರ ಆಡಳಿತಕ್ಕೆ ಅವಕಾಶ ನೀಡಿದೆ.
9. ಉರ್ದು ಭಾಷೆಯನ್ನು ಆಡಳಿತ ಭಾಷೆ ಎಂದು ಘೋಷಿಸಿದೆ.
10. ಸಂವಿಧಾನದ ತಿದ್ದುಪಡಿಗೆ ಅವಕಾಶ ನೀಡಿದೆ.

## ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗದಿರುವ ಭಾರತ ಸಂವಿಧಾನದ ವಿಧಿಗಳು :

1. ಸಂಸತ್ತು ತನ್ನ ರೆಸಿಡ್ಯುಯರಿ/ಶೇಷಾಧಿಕಾರಿಗಳನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಚಲಾಯಿಸುವಂತಿಲ್ಲ.
2. ಭಾರತ ಸಂವಿಧಾನದಲ್ಲಿ ನಮೂದಿಸಲ್ಪಟ್ಟಿರುವ ಮೂಲಭೂತ ಹಕ್ಕುಗಳಲ್ಲಿ 16(3) & 31(ಸಿ) ವಿಧಿಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ.
3. ರಾಜ್ಯ ನಿರ್ದೇಶಕ ತತ್ವಗಳು (ಭಾಗ–4) ಮೂಲಭೂತ ಕರ್ತವ್ಯಗಳು (ಭಾಗ–4A) ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ.
4. ಮುನ್ನಚ್ಚರಿಕೆ ಬಂಧನ ಕಾಯ್ದೆಯನ್ನು ಮಾಡುವ ಅಧಿಕಾರ ರಾಜ್ಯ ಶಾಸಕಾಂಗಕ್ಕೆ ಇದ್ದು, ಸಂಸತ್ತು ಹಸ್ತಕ್ಷೇಪ ಮಾಡುವಂತಿಲ್ಲ.
5. ಕೇಂದ್ರಾಡಳಿತ ಪ್ರದೇಶಗಳು (ಭಾಗ–8) ಅನುಸೂಚಿತ ಪ್ರದೇಶ & ಬುಡಕಟ್ಟು ಪ್ರದೇಶಗಳು (ಭಾಗ–10), ನ್ಯಾಯಾಧೀಶರುಗಳು (ಭಾಗ–15 A) ಇವುಗಳು ಈ ರಾಜ್ಯಕ್ಕೆ ಅನ್ವಯಿಸುವುದಿಲ್ಲ.
6. ಭಾರತ ಸಂವಿಧಾನದ 352ನೇ ವಿಧಿಯನ್ವಯ ಘೋಷಿಸಲಾಯಿತು. ರಾಷ್ಟ್ರಿಯ ತುರ್ತು ಪರಿಸ್ಥಿತಿ, ಜಮ್ಮು ಮತ್ತು ಕಾಶ್ಮೀರಕ್ಕೆ ಅನುಮತಿಯಿಲ್ಲದೇ ಅನ್ವಯಿಸದು.
7. ಭಾರತ ಸಂವಿಧಾನದ 360, 360ಎ, 365 ವಿಧಿಗಳು ಈ ರಾಜ್ಯಕ್ಕೆ ಅನ್ವಯಿಸದು.

# ಪಂಚಾಯತ್ ರಾಜ್ಯ ವ್ಯವಸ್ಥೆ :

## ಸಂವಿಧಾನದ 73ನೇ ತಿದ್ದುಪಡಿ ಅನ್ವಯ ಪಂಚಾಯತ್ ರಾಜ್ಯ ವ್ಯವಸ್ಥೆ :

ಗ್ರಾಮೀಣ ಸ್ಥಳೀಯ ಸರ್ಕಾರಗಳನ್ನು ಬಲಪಡಿಸಲು ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಪ್ರಯತ್ನಿಸಿ, ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸಿದ್ಧಪಡಿಸಿದರು. ಆದರೆ ಇದಕ್ಕೆ ರಾಜ್ಯಸಭೆಯಲ್ಲೆ ಬೆಂಬಲ ದೊರೆಯಲಿಲ್ಲ. ಸರ್ಕಾರ ದಿಟ್ಟ ಕ್ರಮವನ್ನು ಕೈಗೊಂಡಿತು. ಪರಿಣಾಮವಾಗಿ ಸಂವಿಧಾನದ 73ನೇ ತಿದ್ದುಪಡಿಗೆ ಸಂಸತ್ತಿನ ಅಂಗೀಕಾರ 1992ರಲ್ಲಿ ದೊರೆತು ಏಪ್ರಿಲ್ 24, 1993ರಿಂದ ಜಾರಿಗೆ ಬಂದಿತು. ಏಪ್ರಿಲ್ 24ರಂದು ಪ್ರತಿವರ್ಷ ಪಂಚಾಯತ್ ರಾಜ್ ದಿನವನ್ನು ದೇಶದಲ್ಲಿ ಆಚರಿಸಲಾಗುತ್ತಿದೆ. ಈ ಪದ್ಧತಿಯ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸುವುದು & ಬಲವರ್ಧನೆ ಬಗ್ಗೆ ಕ್ರಮಗಳನ್ನು ಕೈಗೊಳ್ಳುವಂತೆ ಮಾಡುವುದು ಇದರ ಉದ್ದೇಶವಾಗಿದೆ.

GNANADHARE IAS KAS ACADEMY

| | |
|---|---|
| 243 | ಜಿಲ್ಲೆ, ಗ್ರಾಮಸಭಾ, ಪಂಚಾಯತ್ ಮುಂತಾದ ಪದಗಳಿಗೆ ಅರ್ಥ ಕೊಡಲಾಗಿದೆ. |
| 243 ಎ | ಗ್ರಾಮಸಭೆಯ ರಚನೆ ಅಧಿಕಾರಿಗಳ ಬಗ್ಗೆ ವಿವರಣೆ |
| 243 ಬಿ | **ಪಂಚಾಯಿತಿಗಳ ರಚನೆ :**<br>1. ಗ್ರಾಮ ಮಟ್ಟ – ಗ್ರಾಮ ಪಂಚಾಯಿತಿ<br>2. ಮಧ್ಯಂತರ ಮಟ್ಟ – ತಾಲ್ಲೂಕು ಪಂಚಾಯಿತಿ<br>3. ಜಿಲ್ಲಾ ಮಟ್ಟ – ಜಿಲ್ಲಾ ಪಂಚಾಯಿತಿ<br>20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇಲ್ಲದ ರಾಜ್ಯದಲ್ಲಿ ತಾಲ್ಲೂಕು ಪಂಚಾಯಿತಿಗಳನ್ನು ರಚಿಸಬೇಕಾಗಿಲ್ಲ. |
| 243 ಸಿ | ಪಂಚಾಯಿತಿಗಳ ಅಂಗರಚನೆ |
| 243 ಡಿ | ಪಂಚಾಯಿತಿಗಳ ಸ್ಥಾನಗಳಲ್ಲಿ ಮೀಸಲಾತಿ |
| 243 ಇ | ಪಂಚಾಯಿತಿಗಳ ಅಧಿಕಾರ ಅವಧಿ 5 ವರ್ಷಗಳು |
| 243 ಎಫ್ | **ಪಂಚಾಯತ್ ಸದಸ್ಯರ ಅರ್ಹತೆ/ಅನರ್ಹತೆಗಳು:**<br>ಪಂಚಾಯತ್ ಸದಸ್ಯರ ಅರ್ಹತೆ ಬಗ್ಗೆ ನಿಯಮಗಳನ್ನು ಹೊಂದಿದೆ. 21 ವರ್ಷ ತುಂಬಿದ ಎಲ್ಲರೂ ಸದಸ್ಯರಾಗಲು ಅರ್ಹತೆ ಪಡೆದಿದ್ದಾರೆ. ಅನರ್ಹತೆ ಬಗ್ಗೆ ರಾಜ್ಯ ಶಾಸಕಾಂಗ ಕಾನೂನನ್ನು ರಚಿಸಬಹುದು. |
| 243 ಜಿ | ಪಂಚಾಯಿತಿಗಳ ಅಧಿಕಾರಿಗಳು, ಪ್ರಾಧಿಕಾರ & ಜವಾಬ್ದಾರಿಗಳು |
| 243 ಹೆಚ್ | ತೆರಿಗೆಗಳನ್ನು ವಿಧಿಸುವ ಪಂಚಾಯಿತಿಗಳ ಅಧಿಕಾರಿಗಳು & ನಿಧಿಗಳು |
| 243 ಐ | ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಲು ರಾಜ್ಯ ಹಣಕಾಸು ಆಯೋಗದ ರಚನೆ |
| 243 ಜೆ | ಪಂಚಾಯಿತಿಗಳ ಲೆಕ್ಕಪತ್ರಗಳ ಪರಿಶೋಧನೆ |
| 243 ಕೆ | **ಪಂಚಾಯಿತಿಗಳಿಗೆ ಚುನಾವಣೆಗಳು :**<br>ಪಂಚಾಯತಿಗಳ ಚುನಾವಣೆಗಳನ್ನು ನಡೆಸಲು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಿ, ಮೇಲ್ವಿಚಾರಣೆ ಹಾಗೂ ನಿರ್ದೇಶನ ನೀಡಲು ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ಇದೆ. ರಾಜ್ಯ ಚುನಾವಣಾಧಿಕಾರಿಗಳನ್ನು ರಾಜ್ಯಪಾಲರು ನೇಮಿಸುತ್ತಾರೆ. ರಾಜ್ಯ ಶಾಸಕಾಂಗದ ಕಾನೂನಿಗೆ ಅನುಗುಣವಾಗಿ ಚುಣಾವಣಾಧಿಕಾರಿಯ ಸೇವಾಯ ನಿಯಮಗಳನ್ನು & ಅವಧಿಯನ್ನು ರಾಜ್ಯಪಾಲರು ತೀರ್ಮಾನಿಸುತ್ತಾರೆ. ಹೈಕೋರ್ಟಿನ ನ್ಯಾಯಾಧೀಶರ ಪದಚ್ಯುತಿಗೆ ನಮೂದಿಸಿರುವ ಕಾರಣಗಳ ಆಧಾರದ ಮೇಲೆ & ಅನಾನುಕೂಲವಾಗುವಂತೆ ಇವರ ಸೇವಾ ನಿಯಮಗಳನ್ನು ಬದಲಾಯಿಸುವಂತಿಲ್ಲ. |
| 243 ಎಲ್ | ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕೇಂದ್ರಾಡಳಿತ ಪ್ರದೇಶಕ್ಕೂ ವಿಸ್ತರಿಸುವ ರಾಷ್ಟ್ರಪತಿಯವರ ಅಧಿಕಾರ |
| 243 ಎಂ | ನಾಗಾಲ್ಯಾಂಡ್, ಮೇಘಾಲಯ, ಮಿಜೋರಾಂ, ಮಣಿಪುರ, ರಾಜ್ಯದ ಗುಡ್ಡಗಾಡು |

| | |
|---|---|
| | ಪ್ರದೇಶ, ಪಶ್ಚಿಮ ಬಂಗಾಳದಲ್ಲಿನ ಡಾರ್ಜಲಿಂಗ್ ಜಿಲ್ಲಾ ಗುಡ್ಡಗಾಡು ಪ್ರದೇಶಗಳಿಗೆ ಸಂವಿಧಾನದ 10ನೇ ಭಾಗ ಅನ್ವಯಿಸುವುದಿಲ್ಲ. |
| 243 ಎನ್ | 1992ರ ಮುಂಚೆ ಜಾರಿಯಲ್ಲಿರುವ ಕಾನೂನುಗಳನ್ನು & ಅಸ್ತಿತ್ವದಲ್ಲಿರುವ ಪಂಚಾಯಿತಿಗಳನ್ನು ಮುಂದುವರೆಸುವುದು. |
| 243 ಓ | **ಪಂಚಾಯತ್ ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯ ಪ್ರವೇಶಿಸುವುದರ ನಿಷೇಧ:** ಪಂಚಾಯಿತಿ ಕ್ಷೇತ್ರಗಳ ವಿಂಗಡನೆ ಅಥವಾ ಅವುಗಳಿಗೆ ಸ್ಥಾನಗಳನ್ನು ಗೊತ್ತುಪಡಿಸುವ ಕಾನೂನನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ರಾಜ್ಯದ ಕಾನೂನು ಪ್ರಕಾರ ರಚಿತಗೊಂಡ ಪ್ರಾಧಿಕಾರದಲ್ಲಿ ಸದಸ್ಯರ ಆಯ್ಕೆಯನ್ನು ಪ್ರಶ್ನಿಸಲು ಅವಕಾಶವಿದೆ. |

## 243 ಜಿ – 11ನೇ ಅನುಸೂಚಿಯಲ್ಲಿ ಪಂಚಾಯಿತಿಗಳ ಅಧಿಕಾರಿಗಳು, ಪ್ರಾಧಿಕಾರ & ಜವಾಬ್ದಾರಿಗಳನ್ನು ಕೊಡಲಾಗಿದೆ.

| ಕ್ರ.ಸಂ | ಅಧಿಕಾರಿಗಳು, ಪ್ರಾಧಿಕಾರ & ಜವಾಬ್ದಾರಿಗಳು |
|---|---|
| 1 | ಕೃಷಿ |
| 2 | ಭೂ ಅಭಿವೃದ್ಧಿ, ಭೂಸುಧಾರಣಾ ಕಾಯ್ದೆಗಳ ಅನುಷ್ಠಾನ |
| 3 | ಸಣ್ಣ ನೀರಾವರಿ & ಜಲ ನಿರ್ವಹಣೆ |
| 4 | ಹೈನುಗಾರಿಕೆ & ಕೋಳಿ ಸಾಕಾಣಿಕೆ |
| 5 | ಮೀನುಗಾರಿಕೆ |
| 6 | ಸಾಮಾಜಿಕ ಹಾಗೂ ಕೃಷಿ ಅರಣ್ಯ |
| 7 | ಸಣ್ಣ ಅರಣ್ಯಗಳ ಉತ್ಪನ್ನ |
| 8 | ಸಣ್ಣ ಕೈಗಾರಿಕೆಗಳು (ಆಹಾರ ಸಂಸ್ಕರಣ ಕೈಗಾರಿಕೆ ಸೇರಿದಂತೆ) |
| 9 | ಖಾದಿ & ಗ್ರಾಮೀಣ ಕೈಗಾರಿಕೆಗಳು |
| 10 | ಗ್ರಾಮೀಣ ವಸತಿ |
| 11 | ಕುಡಿಯುವ ನೀರು |
| 12 | ಸೌದೆ & ಮೇವು |
| 13 | ರಸ್ತೆಗಳು, ಸೇತುವೆಗಳು & ಇತರ ಸಂಪರ್ಕಗಳು |
| 14 | ಗ್ರಾಮೀಣ ವಿದ್ಯುಚ್ಛಕ್ತಿಕರಣ (ವಿದ್ಯುಚ್ಛಕ್ತಿ ವಿತರಣೆ ಸೇರಿದಂತೆ) |
| 15 | ಸಂಪ್ರದಾಯೇತರ ಇಂಧನ ಮೂಲಗಳು |


GNANADHARE IAS KAS ACADEMY

| | |
|---|---|
| 16 | ಬಡತನ ನಿರ್ಮೂಲನ ಯೋಜನೆ |
| 17 | ಶಿಕ್ಷಣ (ಪ್ರೈಮರಿ & ಸೆಕೆಂಡರಿ ಶಾಲೆಗಳು ಸೇರಿದಂತೆ) |
| 18 | ತಾಂತ್ರಿಕ ತರಬೇತಿ ಹಾಗೂ ವೃತ್ತಿಪರ ಶಿಕ್ಷಣ |
| 19 | ವಯಸ್ಕರ & ಅನೌಪಚಾರಿಕ ಶಿಕ್ಷಣ |
| 20 | ಗ್ರಂಥಾಲಯಗಳು |
| 21 | ಸಾಂಸ್ಕೃತಿಕ ಚಟುವಟಿಕೆಗಳು |
| 22 | ಮಾರುಕಟ್ಟೆಗಳು ಹಾಗೂ ಜಾತ್ರೆಗಳು |
| 23 | ಆರೋಗ್ಯ & ನೈರ್ಮಲ್ಯ (ಆಸ್ಪತ್ರೆಗಳು & ಪ್ರಾಥಮಿಕ ಕೇಂದ್ರಗಳು ಸೇರಿದಂತೆ) |
| 24 | ಕುಟುಂಬ ಕಲ್ಯಾಣ |
| 25 | ಮಹಿಳೆಯರ & ಮಕ್ಕಳ ಅಭಿವೃದ್ಧಿ |
| 26 | ಸಮಾಜ ಕಲ್ಯಾಣ (ವಿಕಲಚೇತನರ & ಬುದ್ಧಿಮಾಂದ್ಯರ ಕಲ್ಯಾಣ ಸೇರಿದಂತೆ) |
| 27 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ & ಹಿಂದುಳಿದ ವರ್ಗಗಳ ಕಲ್ಯಾಣ |
| 28 | ಸಾರ್ವಜನಿಕ ವಿತರಣಾ ಪದ್ಧತಿ |
| 29 | ಸಮುದಾಯ ಆಸ್ತಿಗಳ ಸಂರಕ್ಷಣೆ |

## ಕೇಂದ್ರ & ರಾಜ್ಯಗಳ ನಡುವಿನ ಸಂಬಂಧಗಳು :

| ಅನುಚ್ಛೇದಗಳು | ವಿವರಣೆ |
|---|---|
| 245ನೇ ಅನುಚ್ಛೇದ | 245(1) : ಸಂಸತ್ತು ಇಡೀ ದೇಶಕ್ಕೆ ಅಥವಾ ದೇಶದ ಯಾವುದೇ ಭಾಗಕ್ಕೆ ಅನ್ವಯವಾಗುವಂತೆ ಕಾನೂನುಗಳನ್ನು ರೂಪಿಸಬಹುದು & ರಾಜ್ಯ ವಿಧಾನಮಂಡಲವು ಸಮಗ್ರ ರಾಜ್ಯಕ್ಕೆ ಅಥವಾ ರಾಜ್ಯದ ಯಾವುದೇ ಭಾಗಕ್ಕೆ ಅನ್ವಯವಾಗುವಂತೆ ಕಾನೂನುಗಳನ್ನು ರೂಪಿಸಬಹುದು<br>245(2) : ಸಂಸತ್ತು ರಚಿಸಿದ ಯಾವುದೇ ಕಾನೂನು ತನ್ನ ವ್ಯಾಪ್ತಿ ಮೀರಿ ಜಾರಿಯಲ್ಲಿದೆ ಎಂಬ ಕಾರಣದ ಆಧಾರದ ಅಸಿಂಧು ಎಂದು ಭಾವಿಸುವಂತಿಲ್ಲ. |
| 246ನೇ ಅನುಚ್ಛೇದ | 246(1) : ಕೇಂದ್ರ ಪಟ್ಟಿಯಲ್ಲಿರುವ ಯಾವುದೇ ವಿಷಯದ ಮೇಲೆ ಸಂಸತ್ತು ಕಾನೂನು ರೂಪಿಸುವ ಅನನ್ಯ ಅಧಿಕಾರ ಹೊಂದಿದೆ.<br>246(2) : ಸಂಸತ್ತು ಹಾಗೂ ಯಾವುದೇ ರಾಜ್ಯ ವಿಧಾನಮಂಡಲದ ಅಧಿಕಾರ ಹಂಚಿಕೆಯು 3ನೇ ಪಟ್ಟಿಯಾದ ಸಮವರ್ತಿ ಪಟ್ಟಿಯ ಯಾವುದೇ ವಿಷಯದ ಮೇಲೆ ಕಾನೂನು ರಚಿಸುವ ಅಧಿಕಾರ ಹೊಂದಿದೆ.<br>246(3) : ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯಾದ ರಾಜ್ಯ ಪಟ್ಟಿಯ ಯಾವುದೇ ವಿಷಯದ ಮೇಲೆ ಕಾನೂನು ರಚಿಸುವ ಅನನ್ಯವಾದ |

| | |
|---|---|
| | ಅಧಿಕಾರ ಹೊಂದಿದೆ.<br>243(4) : ಒಂದು ರಾಜ್ಯದಲ್ಲಿ ಒಳಗೊಂಡಿರದ ದೇಶದ ಯಾವುದೇ ಭಾಗಕ್ಕೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಪಟ್ಟಿಯಲ್ಲಿನ ವಿಷಯವಾಗಿದ್ದರೂ ಸಂಸತ್ತು ಕಾನೂನು ಮಾಡುವ ಅಧಿಕಾರವನ್ನು ಹೊಂದಿದೆ. |
| 247ನೇ ಅನುಚ್ಛೇದ | ಸಂಸತ್ತು ಮಾಡಿದ ಕಾನೂನು & ಕೇಂದ್ರ ಪಟ್ಟಿಯಲ್ಲಿರುವ ವಿಷಯಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನುಗಳ ನಿರ್ವಹಣೆಗಾಗಿ ಸಂಸತ್ತು ಕಾನೂನಿನ ಮೂಲಕ ಹೆಚ್ಚು ನ್ಯಾಯಾಲಯಗಳನ್ನು ಸ್ಥಾಪಿಸಬಹುದು. |
| 248ನೇ ಅನುಚ್ಛೇದ | ಸಮವರ್ತಿ ಪಟ್ಟಿ ಹಾಗೂ ರಾಜ್ಯಪಟ್ಟಿಯಲ್ಲಿ ಹೆಸರಿಸಲಾರದ ಉಳಿಕೆಯ ಅಧಿಕಾರಗಳ ಮೇಲೆ ಕಾನೂನು ಮಾಡುವ ಅಧಿಕಾರವನ್ನು ಸಂಸತ್ತು ಹೊಂದಿದೆ. |
| 249ನೇ ಅನುಚ್ಛೇದ | ರಾಜ್ಯಸಭೆ 2/3 ಹಿತದೃಷ್ಟಿಯಿಂದ ಒಂದು ಗೊತ್ತುವಳಿಯನ್ನು ಅಂಗೀಕರಿಸಿ ರಾಷ್ಟ್ರೀಯ ಹಿತದೃಷ್ಟಿಯಿಂದ ರಾಜ್ಯಪಟ್ಟಿಯ ಯಾವುದೇ ವಿಷಯದ ಮೇಲೆ ಕಾನೂನು ರಚಿಸಬಹುದು. ಕಾನೂನು ಒಂದು ವರ್ಷದವರೆಗೆ ಜಾರಿಯಲ್ಲಿರುತ್ತದೆ. |
| 250ನೇ ಅನುಚ್ಛೇದ | ತುರ್ತುಪರಿಸ್ಥಿತಿ ಘೋಷಣೆ ಜಾರಿಯಲ್ಲಿರುವಾಗ ಸಂಸತ್ತು ರಾಜ್ಯಪಟ್ಟಿಯ ಯಾವುದೇ ವಿಷಯದ ಮೇಲೆ ಕಾನೂನು ರಚಿಸಬಹುದು. ತುರ್ತು ಪರಿಸ್ಥಿತಿ ರದ್ದುಗೊಂಡ 6 ತಿಂಗಳವರೆಗೆ ಮಾತ್ರ ಕಾನೂನು ಜಾರಿಯಲ್ಲಿರುತ್ತದೆ |
| 251ನೇ ಅನುಚ್ಛೇದ | ರಾಷ್ಟ್ರೀಯ ಹಿತದೃಷ್ಟಿಯಿಂದ ರಾಜ್ಯಪಟ್ಟಿಯ ವಿಷಯದ ಮೇಲೆ ರಾಜ್ಯಸಭೆ ರಚಿಸಿದ ಕಾನೂನು ಹಾಗೂ ತುರ್ತುಪರಿಸ್ಥಿತಿಯ ಘೋಷಣೆಯ ಸಂದರ್ಭದಲ್ಲಿ ರಾಜ್ಯಪಟ್ಟಿಯ ವಿಷಯದ ಮೇಲಿನ ಸಂಸತ್ತು ರಚಿಸಿದ ಕಾನೂನುಗಳ ನಡುವೆ ಘರ್ಷಣೆ ಉಂಟಾದರೆ ರಾಜ್ಯದ ಕಾನೂನು ಅನೂರ್ಜಿತಗೊಳ್ಳುವುದು. |
| 252ನೇ ಅನುಚ್ಛೇದ | 2/2ಕ್ಕಿಂತ ಹೆಚ್ಚು ರಾಜ್ಯಗಳು ಒಂದು ಗೊತ್ತುವಳಿಯನ್ನು ಅಂಗೀಕರಿಸಿ, ರಾಜ್ಯಪಟ್ಟಿಯ ಯಾವುದೇ ವಿಷಯದ ಮೇಲೆ ಕಾನೂನು ರಚಿಸಲು ವಿನಂತಿಸಿಕೊಂಡರೆ ಸಂಸತ್ತು ಆ ರಾಜ್ಯಗಳಿಗೆ ಅನ್ವಯಿಸಿ ರಾಜ್ಯಪಟ್ಟಿಯ ವಿಷಯದ ಮೇಲೆ ಕಾನೂನು ರಚಿಸಬಹುದು |
| 253ನೇ ಅನುಚ್ಛೇದ | ಭಾರತ ಪರದೇಶಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದ, ಒಡಂಬಡಿಕೆ ಹಾಗೂ ಅಂತಾರಾಷ್ಟ್ರೀಯ ಸಮ್ಮೇಳನ, ಸಂಘ ಅಥವಾ ಪ್ರಾಧಿಕಾರ ತೆಗೆದುಕೊಂಡ ಯಾವುದೇ ನಿರ್ಣಯವನ್ನು ಕಾರ್ಯಗತಗೊಳಿಸುವುದಕ್ಕಾಗಿ ಇಡೀ ದೇಶಕ್ಕೆ ಅಥವಾ ದೇಶದ ಯಾವುದೇ ಭಾಗಕ್ಕೆ ಅನ್ವಯಿಸುವಂತೆ ಸಂಸತ್ತು ಕಾನೂನು ರಚಿಸಬಹುದು. |
| 254ನೇ ಅನುಚ್ಛೇದ | 254(1) : ಸಮವರ್ತಿ ಪಟ್ಟಿ ಹಾಗೂ ರಾಜ್ಯಪಟ್ಟಿಯಲ್ಲಿನ ರಾಜ್ಯದ ಕಾನೂನುಗಳು ಸಂಸತ್ತಿನ ಕಾನೂನಿಗೆ ವಿರುದ್ಧವಾಗಿದ್ದರೆ ರಾಜ್ಯದ ಕಾನೂನು |

| | |
|---|---|
| | ಅನುರ್ಜಿತಗೊಂಡು ಸಂಸತ್ತು ಪಾಸು ಮಾಡಿದ ಕಾನೂನು ಜಾರಿಯಲ್ಲಿ ಬರುವುದು.<br>245(2) : ರಾಷ್ಟ್ರಪತಿಯವರ ಪೂರ್ವಾನುಮತಿ ಪಡೆದು ಸಮವರ್ತಿ ಪಟ್ಟಿ ಹಾಗೂ ರಾಜ್ಯಪಟ್ಟಿಯ ವಿಷಯದ ಮೇಲೆ ರಾಜ್ಯ ಕಾನೂನು ರಚಿಸಿದ್ದರೆ ರಾಜ್ಯದ ಕಾನೂನು ಸಂಸತ್ತಿನ ಕಾನೂನಿಗೆ ವ್ಯತಿರಿಕ್ತವಾಗಿದ್ದರೂ ರಾಜ್ಯದ ಕಾನೂನು ಅನುರ್ಜಿತಗೊಳ್ಳಲಾರದು. |
| 200ನೇ ಅನುಚ್ಛೇದ | ವಿಧಾನಮಂಡಲದಿಂದ ಅಂಗೀಕೃತವಾದ ಮಸೂದೆಯು ರಾಜ್ಯಪಾಲರ ಅಂಕಿತಕ್ಕೆ ಬಂದಾಗ ರಾಜ್ಯಪಾಲರು ಮಸೂದೆಯನ್ನು ರಾಷ್ಟ್ರಪತಿಯವರ ಪರ್ಯಾಲೋಚನೆಗಾಗಿ ಕಾಯ್ದಿರಿಸಬಹುದು. |
| 201ನೇ ಅನುಚ್ಛೇದ | ರಾಷ್ಟ್ರಪತಿಯವರ ಪರ್ಯಾಲೋಚನೆಗಾಗಿ ವಿಧಾನಮಂಡಲದಿಂದ ಬಂದ ಮಸೂದೆಗೆ ರಾಷ್ಟ್ರಪತಿಯವರು ತಮ್ಮ ಒಪ್ಪಿಗೆಯನ್ನು ನೀಡಬಹುದು ಅಥವಾ ತಡೆಹಿಡಿಯಬಹುದು ಅಥವಾ ಹಿಂದಿರುಗಿಸಬಹುದು. ಹೀಗೆ ಹಿಂದಿರುಗಿದ ಮಸೂದೆಯನ್ನು ತಿದ್ದುಪಡಿಯೊಂದಿಗೆ ಅಥವಾ ತಿದ್ದುಪಡಿಯಿಲ್ಲದೇ ಪುನಃ ಅಂಗೀಕರಿಸಿದರೆ ಪುನಃ ಮಸೂದೆಯನ್ನು ರಾಷ್ಟ್ರಪತಿಯವರ ಪರ್ಯಾಲೋಚನೆಗಾಗಿ ಒಪ್ಪಿಸಬೇಕು. |

## ಆಡಳಿತಾತ್ಮಕ ಸಂಬಂಧಗಳು :

| ಅನುಚ್ಛೇದಗಳು | ವಿವರಣೆ |
|---|---|
| 256ನೇ ಅನುಚ್ಛೇದ | ಪ್ರತಿಯೊಂದು ರಾಜ್ಯ ಸರ್ಕಾರ ತನ್ನ ಅಧಿಕಾರ ಹಾಗೂ ಕಾರ್ಯಗಳನ್ನು ಚಲಾಯಿಸಿದಾಗ ಸಂಸತ್ತಿನ ಕಾನೂನುಗಳನ್ನು ಅನುಸರಿಸಿ ಚಲಾಯಿಸಬೇಕು. ಕೇಂದ್ರವು ರಾಜ್ಯಗಳಿಗೆ ಈ ಸಂಬಂಧ ನಿರ್ದೇಶನ ನೀಡಬಹುದು. |
| 257ನೇ ಅನುಚ್ಛೇದ | ಪ್ರತಿಯೊಂದು ರಾಜ್ಯ ಸರ್ಕಾರವು ರಾಜ್ಯ ಕಾರ್ಯಾಂಗ ಅಧಿಕಾರವನ್ನು ಕೇಂದ್ರ ಕಾರ್ಯಾಂಗ ಅಧಿಕಾರ ಚಲಾವಣೆಗೆ ದಕ್ಕೆಯಾಗದಂತೆ ಚಲಾಯಿಸಬೇಕು.<br>ಈ ಸಂಬಂಧ ಕೇಂದ್ರವು ರಾಜ್ಯಗಳಿಗೆ ಕೇಂದ್ರ ನಿರ್ದೇಶನ ನೀಡಬಹುದು.<br>ಉದಾ : ಜಲಮಾರ್ಗಗಳು, ರಾಷ್ಟ್ರೀಯ ಹೆದ್ದಾರಿಗಳು, ನೌಕಾ ಸಯನಿಕ, ವಾಯುಬಲಗಳ ಕಾಮಗಾರಿಗೆ ಸಂಬಂಧಿಸಿದಂತೆ ಸಂಪರ್ಕ ಸಾಧನಗಳ ನಿರ್ಮಾಣ & ನಿರ್ವಹಣೆ ಹಾಗೂ ರೈಲ್ವೇ ಮಾರ್ಗಗಳ ರಕ್ಷಣೆಗಾಗಿ ರಾಜ್ಯಗಳಿಗೆ ಕೇಂದ್ರ ನಿರ್ದೇಶನ ನೀಡಬಹುದು. |
| 258ನೇ ಅನುಚ್ಛೇದ | ರಾಷ್ಟ್ರಪತಿಯು ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಪಡೆದು, ರಾಜ್ಯ ಸರ್ಕಾರಕ್ಕೆ ಅಥವಾ ಅದರ ಅಧಿಕಾರಿಗಳಿಗೆ ಕೇಂದ್ರ ಕಾರ್ಯಾಂಗ ಅಧಿಕಾರ ಇರುವ |

| | |
|---|---|
| | ಯಾವುದೇ ವಿಷಯಕ್ಕೆ ಸಂಬಂಧಿಸದಂತೆ ಷರತ್ತು ರಹಿತವಾಗಿ ರಾಜ್ಯ ಸರ್ಕಾರಕ್ಕೆ ವಹಿಸಿಕೊಡಬಹುದು. |
| 2598(ಎ)ನೇ ಅನುಚ್ಛೇದ | ರಾಜ್ಯದ ರಾಜ್ಯಪಾಲನು ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದು ಕೇಂದ್ರಕ್ಕೆ ಅಥವಾ ಕೇಂದ್ರದ ಅಧಿಕಾರಿಗಳಿಗೆ ಆ ರಾಜ್ಯ ಕಾರ್ಯಂಗ ಅಧಿಕಾರ ವ್ಯಾಪ್ತಿಯ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಗಳನ್ನು ಷರತ್ತು ರಹಿತವಾಗಿ ರಾಜ್ಯ ಸರ್ಕಾರಕ್ಕೆ ವಹಿಸಿಕೊಡಬಹುದು. |
| 261ನೇ ಅನುಚ್ಛೇದ | 261(1) : ಕೇಂದ್ರದ & ಪ್ರತಿಯೊಂದು ರಾಜ್ಯದ ಸಾರ್ವಜನಿಕ ಕಾರ್ಯಗಳಲ್ಲಿ & ದಾಖಲೆಗಳಿಗೆ & ನ್ಯಾಯಾಂಗೀಯ ವಿಷಯಗಳಿಗೆ ಇಡೀ ದೇಶಾದ್ಯಂತ ಪೂರ್ಣ ವಿಶ್ವಾಸ & ಮಾನ್ಯತೆ ಇರತಕ್ಕದ್ದು.<br>253(2) : ಕೇಂದ್ರ ಹಾಗೂ ರಾಜ್ಯಗಳ ಸಾರ್ವಜನಿಕ ಕಾರ್ಯಗಳು & ದಾಖಲೆಗಳಿಗೆ & ನ್ಯಾಯಾಂಗೀಯ ವಿಷಯಗಳಿಗೆ ಯಾವ ರೀತಿಯಲ್ಲಿ ಷರತ್ತುಗಳ ಮೇಲೆ ರುಜುವಾತು ಪಡಿಸಬೇಕು & ಅವುಗಳ ಪರಿಣಾಮಗಳನ್ನು ನಿರ್ಧರಿಸಬೇಕು ಎಂಬುದನ್ನು ಸಂಸತ್ತು ನಿರ್ಧರಿಸಿದ ಕಾನೂನಿನಂತೆ ಇರತಕ್ಕದ್ದು.<br>261(3) : ದೇಶದ ಯಾವುದೇ ಭಾಗದಲ್ಲಿ ಸಿವಿಲ್ ನ್ಯಾಯಾಲಯಗಳು ಕೊಟ್ಟ ತೀರ್ಪುಗಳು ಅಥವಾ ಮಾಡಿದ ಆದೇಶಗಳು ದೇಶದ ಯಾವುದೇ ಭಾಗದಲ್ಲಿ ಕಾನೂನಿಗನುಗುಣವಾಗಿ ಜಾರಿಗೊಳ್ಳಲು ಯೋಗ್ಯವಾಗಿರತಕ್ಕದ್ದು. |
| 262ನೇ ಅನುಚ್ಛೇದ | ಅಂತರರಾಜ್ಯ ನದಿ/ನದಿ ಕಣಿವೆಗಳ ಜಲವಿವಾದವನ್ನು ಬಗೆಹರಿಸಲು ಸಂಸತ್ತು ಕಾನೂನು ರಚಿಸಬಹುದು |
| 263ನೇ ಅನುಚ್ಛೇದ | ರಾಜ್ಯ ರಾಜ್ಯಗಳ ನಡುವೆ ಉಂಟಾಗುವ ವಿವಾದಗಳ ವಿಚರಣೆ ಮಾಡುವ & ಸಲಹೆ ನೀಡುವ ಕೇಂದ್ರ-ರಾಜ್ಯ, ರಾಜ್ಯ-ರಾಜ್ಯಗಳ ನಡುವಿನ ಸಾಮಾನ್ಯ ಹಿತಾಸಕ್ತಿಯನ್ನು ಹೊಂದಿರುವ ವಿಷಯಗಳ ಬಗ್ಗೆ ತನಿಖೆ ಮಾಡುವ & ಚರ್ಚಿಸಲು ರಾಷ್ಟ್ರಪತಿಯವರು ಅಂತರರಾಜ್ಯ ಮಂಡಲಯನ್ನು ಸ್ಥಾಪಿಸಬಹುದು. |
| 155ನೇ ಅನುಚ್ಛೇದ | ರಾಷ್ಟ್ರಪತಿಯು ರಾಜ್ಯಗಳಿಗೆ ರಾಜ್ಯಪಾಲರನ್ನು ನೇಮಿಸುವ ಮೂಲಕ ರಾಜ್ಯಾಡಳಿತದಲ್ಲಿ ರಾಜ್ಯಪಾಲರು ಕೇಂದ್ರದ ಪ್ರತಿನಿಧಿಯಂತೆ ಕಾರ್ಯ ನಿರ್ವಹಿಸುತ್ತಾರೆ. |
| | ರಾಜ್ಯ ಸರ್ಕಾರ ಸಂವಿಧಾನಕ್ಕನುಗುಣವಾಗಿ ಆಡಳಿತ ನಡೆಸದೇ ಇದ್ದಾಗ ಕೇಂದ್ರವು ರಾಷ್ಟ್ರಪತಿಯ ಮುಖಾಂತರ ಅಂತಹ ರಾಜ್ಯಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತವನ್ನು ನಡೆಸಬಹುದು. |
| 356ನೇ ಅನುಚ್ಛೇದ | ಬಾಹ್ಯ ಆಕ್ರಮಣ ಹಾಗೂ ಆಂತರಿಕ ಗಲಭೆಗಳಿಂದ ರಾಜ್ಯಗಳನ್ನು ರಕ್ಷಿಸುವ ಹೊಣೆ ಕೇಂದ್ರ ಸರ್ಕಾರಕ್ಕೆ ಇದೆ. |
| 355ನೇ ಅನುಚ್ಛೇದ | ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಜ್ಯಗಳಿಗೆ ರಾಜ್ಯಗಳಿಗೆ ಕೇಂದ್ರವು |

| | |
|---|---|
| | ನಿರ್ದೇಶನ ನೀಡಬಹುದು |
| 353ನೇ ಅನುಚ್ಛೇದ | ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ & ಬುಡಕಟ್ಟು ಕಲ್ಯಾಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸರ್ಕಾರವು ರಾಜ್ಯಗಳಿಗೆ ನಿರ್ದೇಶನ ನೀಡಬಹುದು |
| 339ನೇ ಅನುಚ್ಛೇದ | ರಾಜ್ಯದಲ್ಲಿರುವ ಭಾಷಾ ಅಲ್ಪಸಂಖ್ಯಾತರ ಮಕ್ಕಳು ಅವರವರ ಮಾತೃಭಾಷೆಯಲ್ಲಿಯೇ ಶಿಕ್ಷಣ ಪಡೆಯಲು ಕ್ರಮಕೈಗೊಳ್ಳುವಂತೆ ರಾಜ್ಯಗಳಿಗೆ ರಾಷ್ಟ್ರಪತಿಯು ನಿರ್ದೇಶನ ನೀಡಬಹುದು |
| 350(ಎ)ನೇ ಅನುಚ್ಛೇದ | ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಾಗ ಗಲಭೆಗಳು ಉಂಟಾದಾಗ ಕೇಂದ್ರವು ರಾಜ್ಯಗಳಿಗೆ ಅಗತ್ಯವಿರುವ ಪೋಲಿಸ್ ಅಥವಾ ರಕ್ಷಣಾ ಪಡೆಗಳನ್ನು ರವಾನಿಸಿ ರಾಜ್ಯಗಳು ಕಾನೂನು ಸುವ್ಯವಸ್ಥೆ ಕಾಪಾಡಲು ನೆರವು ನೀಡುತ್ತದೆ. |
| 312ನೇ ಅನುಚ್ಛೇದ | ಅಖಿಲ ಭಾರತ ಸೇವೆಗಳಾದ IAS, IPS & IFS ಗಳಂತಹ ಸೇವೆಗಳನ್ನು ಕೇಂದ್ರವು ರಾಜ್ಯಗಳಿಗೆ ಒದಗಿಸುವುದರ ಮುಖಾಂತರ ದೇಶದಲ್ಲಿ ಏಕರೂಪದ ಆಡಳಿತಾತ್ಮಕ ವ್ಯವಸ್ಥೆಗೆ ಕೇಂದ್ರ ಪ್ರಯತ್ನಿಸುತ್ತದೆ. |

## ಹಣಕಾಸಿನ ಸಂಬಂಧಗಳು :

| ಅನುಚ್ಛೇದಗಳು | ವಿವರಣೆ |
|---|---|
| 265ನೇ ಅನುಚ್ಛೇದ | ಕಾನೂನಿನ ಅಧಿಕಾರ ಪಡೆಯದೇ, ತೆರಿಗೆಗಳನ್ನು ವಿಧಿಸುವಂತಿಲ್ಲ |
| 268ನೇ ಅನುಚ್ಛೇದ | ಕೇಂದ್ರ ವಿಧಿಸಿ, ರಾಜ್ಯಗಳು ವಸೂಲಿ ಮಾಡಿ ಉಪಯೋಗಿಸಿಕೊಳ್ಳುವ ತೆರಿಗೆಗಳು<br>ಕೇಂದ್ರ ಪಟ್ಟಿಯ ವಿಷಯಗಳಾದ ಸ್ಟಾಂಪ್ ಸುಂಕಗಳು, ಔಷಧಿ & ಪ್ರಸಾಧನ ತಯಾರಿಕೆಯ ಮೇಲಿನ ಅಬಕಾರಿ ಸುಂಕಗಳನ್ನು ಕೇಂದ್ರವೇ ವಿಧಿಸಿ ರಾಜ್ಯಗಳು ಸಂಗ್ರಹಿಸಿ ವಿನಿಯೋಗಿಸಿಕೊಳ್ಳುತ್ತವೆ. |
| 269ನೇ ಅನುಚ್ಛೇದ | ಕೇಂದ್ರವೇ ವಿಧಿಸಿ ಸಂಗ್ರಹಿಸಿ ರಾಜ್ಯಗಳಿಗೆ ಹಂಚಲ್ಪಡುವ ತೆರಿಗೆಗಳು :<br>ಉದಾ : ರೈಲು ಪ್ರಯಾಣ & ಸರಕು ಸಾಗಾಣಿಕೆಗಳ ಮೇಲಿನ ತೆರಿಗೆ, ಎಸ್ಟೇಟ್ ಸುಂಕ, ಸೀಮಾ ಸುಂಕಗಳು, ಷೇರು ಪೇಟೆ ವ್ಯವಹಾರಕ್ಕೆ ಸಂಬಂಧಿಸಿದ ತೆರಿಗೆಗಳು, ಅಂತರರಾಜ್ಯ ವ್ಯಾಪಾರದ ಮೇಲಿನ ತೆರಿಗೆಗಳನ್ನು ಕೇಂದ್ರವೇ ಸಂಗ್ರಹಿಸಿ ವಿನಿಯೋಗಿಸಿಕೊಳ್ಳುತ್ತದೆ. |
| 270ನೇ ಅನುಚ್ಛೇದ | ಕೇಂದ್ರವೇ ವಿಧಿಸಿ ಕೇಂದ್ರ & ರಾಜ್ಯಗಳ ಮಧ್ಯ ಹಂಚಲ್ಪಡುವ ತೆರಿಗೆಗಳು :<br>ಉದಾ : ಆದಾಯ ತೆರಿಗೆಯನ್ನು ಕೇಂದ್ರವೇ ವಿಧಿಸಿ ಕೇಂದ್ರ & ರಾಜ್ಯಗಳ ಮಧ್ಯ ಹಂಚಲ್ಪಡುವ ತೆರಿಗೆಗಳು. |
| 271ನೇ ಅನುಚ್ಛೇದ | 269 ಹಾಗೂ ಆದಾಯ ತೆರಿಗೆಯ ಮೇಲೆ ಒಕ್ಕೂಟದ ಉದ್ದೇಶಗಳಿಗಾಗಿ |

| | |
|---|---|
| | ಸಂಸತ್ತು Surcharge ವಿಧಿಸಬಹುದು. ಹೀಗೆ ವಿಧಿಸಿದ Surcharge ಭಾರತ ಸಂಚಿತ ನಿಧಿಯ ಭಾಗವಾಗಿರುವುದು |
| 273ನೇ ಅನುಚ್ಛೇದ | ಸೆಣಬು & ಸೆಣಬಿನ ಉತ್ಪನ್ನಗಳ ಮೇಲೆ ಅಸ್ಸಾಂ, ಬಿಹಾರ್, ಒರಿಸ್ಸಾ, ಪಶ್ಚಿಮ ಬಂಗಾಳದಲ್ಲಿ ವಿಧಿಸುವ ರಫ್ತು ಸುಂಕದ ಬದಲಾಗಿ ವಿಧಿಸಬಹುದಾದ ತೆರಿಗೆಗಳು ಮೇಲಿನ 4 ರಾಜ್ಯಗಳಿಗೆ ಅನುದಾನಗಳಾಗಿ ಭಾರತದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು. |
| 274ನೇ ಅನುಚ್ಛೇದ | ರಾಜ್ಯಗಳು ಹಿತಾಸಕ್ತಿ ಹೊಂದಿರುವ ತೆರಿಗೆ, ಸಂಬಂಧವಾದ ವಿಧೇಯಕಗಳಿಗೆ ರಾಷ್ಟ್ರಪತಿಯ ಪೂರ್ವ ಶಿಫಾರಸ್ಸು ಅಗತ್ಯ. |
| 275ನೇ ಅನುಚ್ಛೇದ | ಅನಸೂಚಿತ ಬುಡಕಟ್ಟು ಕಲ್ಯಾಣಭಿವೃದ್ಧಿ, ಅನುಸೂಚಿತ ಪ್ರದೇಶಗಳ ಅಭಿವೃದ್ಧಿ, ರಾಜ್ಯವನ್ನು ಸಮರ್ಥಗೊಳಿಸುವ ಅಭಿವೃದ್ಧಿ ಯೋಜನೆಗಳ ವೆಚ್ಚ ಭರಿಸಲು ಕೇಂದ್ರವು ಭಾರತ ಸಂಚಿತ ನಿಧಿಯಿಂದ ಕೆಲವು ರಾಜ್ಯಗಳಿಗೆ ಅನುದಾನಗಳನ್ನು ನೀಡಬಹುದು. |
| 280ನೇ ಅನುಚ್ಛೇದ | ಕೇಂದ್ರ ಹಾಗೂ ರಾಜ್ಯಗಳ ಮಧ್ಯ ಹಣಕಾಸು ಬಗೆಗೆ ಶಿಫಾರಸ್ಸು ಮಾಡಲು 5 ವರ್ಷಗಳಿಗಾಗಿ 'ಹಣಕಾಸು ಆಯೋಗ'ವನ್ನು ನೇಮಸುವರು. |
| 289ನೇ ಅನುಚ್ಛೇದ | ಕೇಂದ್ರದ ತೆರಿಗೆಳಿಂದ ರಾಜ್ಯದ ಸ್ವತ್ತು & ಆದಾಯಕ್ಕೆ ವಿನಾಯಿತಿ ನೀಡಲಾಗಿದೆ. |

GNANADHARE IAS KAS ACADEMY

# ಒಕ್ಕೂಟದ & ರಾಜ್ಯಗಳ ಅಧೀನದಲ್ಲಿರುವ ಸೇವೆಗಳು

| ಅನುಚ್ಛೇದಗಳು | ವಿವರಣೆ |
|---|---|
| 308ನೇ ಅನುಚ್ಛೇದ | ಕೇಂದ್ರ & ರಾಜ್ಯಗಳ ಅಧೀನದಲ್ಲಿನ ಸೇವೆಗಳ ಬಗೆಗ ಸಂಬಂಧಿಸಿದಂತೆ ರಾಜ್ಯ ಎಂಬ ಪದವು ಜಮ್ಮು & ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ. |
| 309ನೇ ಅನುಚ್ಛೇದ | ಕೇಂದ್ರಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿ ಹಾಗೂ ರಾಜ್ಯಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರು ಅಥವಾ ಅವರು ನಿರ್ದೇಶಿಸಿದ ವ್ಯಕ್ತಿಯ ನಿರ್ದೇಶನದಲ್ಲಿ ಕೇಂದ್ರ & ರಾಜ್ಯ ಸೇವೆ ಸಲ್ಲಿಸುವ ವ್ಯಕ್ತಿಗಳ ನೇಮಕಾತಿ ಹಾಗೂ ಸೇವಾ ಷರತ್ತುಗಳನ್ನು ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ರಚಿಸಬಹುದು |
| 310ನೇ ಅನುಚ್ಛೇದ | ಕೇಂದ್ರ ರಕ್ಷಣಾ ಪಡೆಯ ಅಥವಾ ನಾಗರಿಕ ಸೇವೆಯ ಅಖಿಲ ಭಾರತ ಸೇವೆಯ ಪ್ರತಿಯೊಬ್ಬ ಕೇಂದ್ರ ಸೇವೆಯ ನೌಕರನು ರಾಷ್ಟ್ರಪತಿಯವರ ಇಷ್ಟಪರ್ಯಂತ ಹುದ್ದೆಯಲ್ಲಿರತಕ್ಕದ್ದು. ರಾಜ್ಯ ಸಿವಿಲ್ ಸೇವೆಯ ಸದಸ್ಯರಾಗಿರುವ ಅಥವಾ ರಾಜ್ಯದ ಅಧೀನದಲ್ಲಿ ವ್ಯಕ್ತಿಯು ಆಯಾ ರಾಜ್ಯದ ರಾಜ್ಯಪಾಲರ ಇಷ್ಟಪರ್ಯಂತ ಹುದ್ದೆಯಲ್ಲಿರತಕ್ಕದ್ದು. |
| 311ನೇ ಅನುಚ್ಛೇದ | ಕೇಂದ್ರ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ, ರಾಜ್ಯ ಸಿವಿಲ್ ಸೇವೆಯ ನೌಕರ ಹಾಗೂ ಕೇಂದ್ರ ಅಥವಾ ರಾಜ್ಯ ಅಧೀನದಲ್ಲಿ ಸಿವಿಲ್ ಹುದ್ದೆಯನ್ನು ಹೊಂದಿದ ಯಾವುದೇ ವ್ಯಕ್ತಿ ಯಾರ ಪ್ರಾಧಿಕಾರಿಯಿಂದ ನೇಮಕಗೊಂಡಿರುವನೋ ಆ ಪ್ರಾಧಿಕಾರಿಗರ ಅಧೀನನಾಗಿರುವ ಪ್ರಾಧಿಕಾರಿಯು ಅವನ್ನು ವಜಾ ಮಾಡುವಂತಿಲ್ಲ.<br>ಯಾವುದೇ ಹುದ್ದೆಯನ್ನು ಹೊಂದಿದ ವ್ಯಕ್ತಿಗೆ ಅವನ ವಿರುದ್ಧದ ಅಪಾದನೆಯನ್ನು ತಿಳಿಸಿ ಆಪಾದನೆಗಳಿಗೆ ಸಂಬಂಧಿಸಿದಂತೆ ಅಹವಾಲಗಳನ್ನು ಹೇಳಿಕೊಳ್ಳಲು ಯುಕ್ತ ಅವಕಾಶಗಳನ್ನು ನೀಡದೇ ವಜಾ ಮಾಡತಕ್ಕದ್ದಲ್ಲ ಅಥವಾ ತೆಗೆದು ಹಾಕುವಂತಿಲ್ಲ. ವಿಚಾರಣೆಯ ನಂತರ ಸಾಕ್ಷಾಧಾರಗಳ ಮೇಲೆ ದಂಡನೆಯನ್ನು ವಿಧಿಸಬಹುದು. ಆದರೆ ವ್ಯಕ್ತಿಗೆ ವಿಧಿಸಿದ ದಂಡನೆಯ ವಿರುದ್ಧ ಮನವಿ ಸಲ್ಲಿಸಲು ಯಾವುದೇ ಅವಕಾಶ ಇರುವುದಿಲ್ಲ. |
| 312ನೇ ಅನುಚ್ಛೇದ | ಕೇಂದ್ರ & ರಾಜ್ಯಗಳಿಗೆ ಒಂದೇ ರೀತಿಯ ಒಂದು ಅಥವಾ ಹೆಚ್ಚಿನ ಅಖಿಲ ಭಾರತ ಸೇವೆಗಳನ್ನು ಸೃಷ್ಟಿಸುವುದಕ್ಕಾಗಿ ರಾಜ್ಯಸಭೆಯು ರಾಷ್ಟ್ರದ ಹಿತಾದೃಷ್ಟಿಯಿಂದ ಅವಶ್ಯವೆಂದು ರಾಜ್ಯಸಭೆಯಲ್ಲಿ 2/3 ಬಹುಮತದಿಂದ ಗೊತ್ತುವಳಿ ಒಂದನ್ನು ಪಾಸು ಮಾಡಿದರೆ ಸಂಸತ್ತು ಕಾನೂನು ಮೂಲಕ ಹೊಸ ಅಖಿಲ ವಾರತ ಸೇವೆಯನ್ನು ಸೃಷ್ಟಿಸಬಹುದು.<br>ಸಂವಿಧಾನದ 14ನೇ ಭಾಗದ ಒಂದನೇಯ ಅಧ್ಯಾಯದ ಅನುಚ್ಛೇದಗಳಿಗೆ ಒಳಪಟ್ಟು ಯಾವುದೇ ಸೇವೆಗೆ ನೇಮಕಾತಿ ಮಾಡುವುದನ್ನು & |

| | |
|---|---|
| | ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ಸಂಸತ್ತು ರೂಪಿಸುವುದು |
| 312(ಎ)ನೇ ಅನುಚ್ಛೇದ | ಕೆಲವು ಸೇವೆಗಳ ಅಧಿಕಾರಿಗಳ ಸೇವಾ ಷರತ್ತುಗಳನ್ನು ಬದಲಾವಣೆಗೊಳಿಸಲು ಅಥವಾ ರದ್ದುಪಡಿಸಲು ಸಂಸತ್ತು ಕಾನೂನು ರೂಪಿಸಬಹುದು |

## ತುರ್ತುಪರಿಸ್ಥಿತಿಯ ಅಧಿಕಾರಗಳು :

| ತುರ್ತು ಪರಿಸ್ಥಿಯ ವಿಧ | ಸಂವಿಧಾನದ ಅನುಚ್ಛೇದ | ಘೋಷಿಸಲು ಕಾರಣಗಳು | ಘೋಷಿಸುವವರು | ಶಾಸಕಾಂಗದ ಅನುಮೋದನೆ | ಘೋಷಣೆಯ ಪರಿಣಾಮಗಳು |
|---|---|---|---|---|---|
| ರಾಷ್ಟ್ರೀಯ ತುರ್ತುಪರಿಸ್ಥಿತಿ | 352 | ಭಾರತ ಅಥವಾ ಅದರ ರಾಜ್ಯ ಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಯುದ್ಧದಿಂದಾಗಲಿ ಅಥವಾ ಬಾಹ್ಯ ಆಕ್ರಮಣ ದಿಂದಾಗಲೀ ಅಥವಾ ಸಶಸ್ತ್ರ ದಂಗೆಯಿಂದ ಬೆದರಿಕೆಯ ಗಂಭಿರ ತುರ್ತು ಪರಿಸ್ಥಿತಿ ಉಂಟಾದರೆ ಅಥವಾ ಉಂಟಾಗಬಹುದೆ ಂಬ ಮನವರಿಕೆಯಾದರೆ | ಪ್ರಧಾನ ಮಂತ್ರಿ ಹಾಗೂ ಮಂತ್ರಿ ಮಂಡಳದ ಲಿಖಿತ ಶಿಫಾರಸ್ಸಿನ ಅನ್ವಯ ಭಾರತದ ರಾಷ್ಟ್ರಪತಿಗಳು | ಘೋಷಣೆಯಾದ ಒಂದು ತಿಂಗಳೊಳಗಾಗಿ ಸಂಸತ್ತಿನ ಉಭಯ ಸದನಗಳಿಂದ ಘೋಷಿಸಲ್ಪಟ್ಟ ತುರ್ತು ಪರಿಸ್ಥಿತಿಗೆ ಅನುಮೋದನೆ ದೊರೆಯಬೇಕು. ಲೋಕಸಭೆ ಅಸ್ತಿತ್ವದಲ್ಲಿರದಿದ್ದರೆ ಲೋಕಸಭೆ ರಚನೆಯಾಗಿ ಅಧೀವೇಶನ ಸೇರಿದ 30ದಿನಗಳ ಒಳಗಾಗಿ ಲೋಕಸಭೆ ಒಪ್ಪಿಗೆ ನೀಡಬೇಕು. ಅಲ್ಲದೇ ಈ ಮೊದಲೇ ರಾಜ್ಯಸಭೆಯಿಂದ ತುರ್ತು ಪರಿಸ್ಥಿತಿಗೆ ಅನುಮೋದನೆ ದೊರೆಯಬೇಕು. ಪ್ರತಿ 6 ತಿಂಗಳಿಗೊಮ್ಮೆ | ರಾಜ್ಯಗಳು ತಮ್ಮ ಕಾರ್ಯಾಂಗ ಅಧಿಕಾರವನ್ನು ಯಾವ ರೀತಿ ಚಲಾಯಿಸಬೇಕೆಂದು ಕೇಂದ್ರ ಸರ್ಕಾರ ನಿರ್ದೇಶನ ಮಾಡುತ್ತದೆ. ರಾಜ್ಯಪಟ್ಟಿಯ ಯಾವುದೇ ವಿಷಯದ ಮೇಲೆ ಸಂಸತ್ತು ಕಾನೂನು ಮಾಡಬಹುದು ಹಾಗೂ ರಾಷ್ಟ್ರಪತಿಗಳು ಸುಗ್ರಿವಾಜ್ಞೆಗಳನ್ನು ಹೊರಡಿಸಬಹುದು. ಕೇಂದ್ರ ಹಾಗೂ ರಾಜ್ಯಗಳ ನಡುವಿನ ಹಣಕಾಸು ಹಂಚಿಕೆಯಲ್ಲಿ ರಾಷ್ಟ್ರಪತಿಯವರು ಮಾರ್ಪಾಡು ಮಾಡಬಹುದು. ಸಂವಿಧಾನದ 20 & 21ನೇ ವಿಧಿಯ ಮೂಲಭೂತ |

GNANADHARE IAS KAS ACADEMY

| | | | | | |
|---|---|---|---|---|---|
| | | | | ಅನುಮೋದನೆ ನೀಡುವುದರ ಮೂಲಕ ಸಂಸತ್ತು ಅನಿರ್ದಿಷ್ಟ ಕಾಲದವರೆಗೆ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸಬೇಕು | ಹಕ್ಕುಗಳನ್ನು ಹೊರತುಪಡಿಸಿ ಉಳಿದ ಮೂಲಭೂತ ಹಕ್ಕುಗಳ ಮೇಲೆ ನಿರ್ಬಂಧ ಹೇರಬಹುದು. ತುರ್ತು ಪರಿಸ್ಥಿತಿ ಮುಂದುವರೆಯುವವರೆಗೂ ಲೋಕಸಭೆಯ ಕಾಲಾವಧಿಯನ್ನು ಒಂದು ಸಲಕ್ಕೆ ಒಂದು ವರ್ಷದ ವರೆಗೆ ವಿಸ್ತರಿಸಬಹುದು |
| ರಾಜ್ಯ ತುರ್ತು ಪರಿಸ್ಥಿತಿ ಅಥವಾ ಸಂವಿಧಾನಾತ್ಮಕ ತುರ್ತು ಪರಿಸ್ಥಿತಿ | 356 | ರಾಜ್ಯಸರ್ಕಾರಗಳು ಸಂವಿಧಾನಕ್ಕನುಗುಣವಾಗಿ ಆಡಳಿತ ನಡೆಸುವಲ್ಲಿ ವಿಫಲವಾದಾಗ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದು ಬಿದ್ದಾಗ ರಾಜ್ಯದಲ್ಲಿ ಯಾವುದೇ ರಾಜಕೀಯ ಪಕ್ಷಗಳು ಸರಕಾರವನ್ನು ರಚಿಸಲು ಅಸಮರ್ಥರಾದಾಗ | ಸಂಬಂಧಪಟ್ಟ ರಾಜ್ಯದ ರಾಜ್ಯಪಾಲರ ಶಿಪಾರಸ್ಸಿನ ಅನ್ವಯ ಭಾರತದ ರಾಷ್ಟ್ರಪತಿಗಳು ತಮ್ಮ ಆಳ್ವಿಕೆಯನ್ನು ಘೋಷಿಸಿ ವಿಧಾನಸಭೆಯನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಡಬಹುದು ಅಥವಾ ವಿಸರ್ಜಿಸಬಹುದು | ರಾಜ್ಯ ತುರ್ತು ಪರಿಸ್ಥಿತಿ ಘೋಷಣೆಯಾದ 2 ತಿಂಗಳೊಳಗಾಗಿ ಸಂಸತ್ತಿನಿಂದ ಅನುಮೋದನೆ ಪಡೆದುಕೊಳ್ಳಬೇಕು. ಇಲ್ಲವಾದರೆ ರದ್ದುಗೊಳ್ಳುವುದು. ಹೀಗೆ ಅನುಮೋದನೆ ದೊರೆತ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ. ನಂತರವೂ ಮುಂದುವರೆಯಬೇಕಾದರೆ ಮತ್ತೆ ಗರಿಷ್ಠ 1 ವರ್ಷಗಳ ಕಾಲ ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಬಹುದು ರಾಜ್ಯದಲ್ಲಿ ಚುನಾವಣೆಯನ್ನು ನಡೆಸಲು ಅಸಾಧ್ಯವೆಂದು ಚುನಾವಣಾ ಆಯೋಗ | ರಾಜ್ಯ ಮಂತ್ರಿಮಂಡಲ ರದ್ದುಗೊಳ್ಳುವುದು. ರಾಜ್ಯಪಾಲರು ರಾಷ್ಟ್ರಪತಿಯವರ ಪರವಾಗಿ ರಾಜ್ಯದ ಆಡಳಿತವನ್ನು ನಡೆಸುವರು ಕೇಂದ್ರವೂ ರಾಜ್ಯಪಾಲರಿಗೆ ಸಲಹೆಗಾರರನ್ನು ನೇಮಿಸಬಹುದು. ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಬಹುದು ಅಥವಾ ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಡಬಹುದು. ರಾಜ್ಯ ಪಟ್ಟಿಯ ಯಾವುದೇ ವಿಷಯದ ಮೇಲೆ ಸಂಸತ್ತು ಕಾನೂನು ರಚಿಸಬಹುದು ರಾಜ್ಯದ ಆಯವ್ಯಯಗಳನ್ನು ಸಂಸತ್ತು ಅನುಮೊದಿಸುತ್ತದೆ. ಲೋಕಸಭೆ ಅಧಿವೇಶನದಲ್ಲಿ ಇಲ್ಲದಾಗ ರಾಜ್ಯದ ಸಂಚಿತ ನಿಧಿಯಿಂದ |

GNANADHARE IAS KAS ACADEMY

| | | | | | |
|---|---|---|---|---|---|
| | | | | ತೀರ್ಮಾನಿಸಿದಾಗ & ರಾಷ್ಟ್ರೀಯ ತುರ್ತುಪರಿಸ್ಥಿತಿಗಳ ಸಂದರ್ಭದಲ್ಲಿ ರಾಜ್ಯ ತುರ್ತುಪರಿಸ್ಥಿತಿ ಯನ್ನು 3 ವರ್ಷಗಳ ವರೆಗೆ ವಿಸ್ತರಿಸಬಹುದು | ಖರ್ಚು ಮಾಡಲು ರಾಷ್ಟ್ರಪತಿಯವರು ಆದೇಶ ಹೊರಡಿಸಬಹುದು ನಂತರ ಲೋಕಸಭೆ ಅಧಿವೇಶನ ಸೇರಿದಾಗ ಒಪ್ಪಿಗೆ ಪಡೆದುಕೊಳ್ಳಬೇಕು |
| ಹಣಕಾಸಿನ/ ಆರ್ಥಿಕ ತುರ್ತುಪರಿಸ್ಥಿತಿ | 360 | ದೇಶದ ಆರ್ಥಿಕ ಭದ್ರತೆಗೆ ಗಂಡಾಂತರ ಒದಗಿಸಿದಾಗ ಅಥವಾ ದೇಶದಲ್ಲಿ ಹಣಕಾಸಿನ ದುಸ್ಥಿತಿ ತಲೆದೋರಿದಾಗ | ಕೇಂದ್ರ ಮಂತ್ರಿಮಂಡಲದ ಶಿಫಾರಸ್ಸಿನ ಅನ್ವಯ ಭಾರತದ ರಾಷ್ಟ್ರಪತಿಗಳು | ಹಣಕಾಸಿನ ತುರ್ತು ಪರಿಸ್ಥಿತಿ ಘೋಷಣೆಯಾದ 2 ತಿಂಗಳೊಳಗೆ ಸಂಸತ್ತಿನ ಉಭಯ ಸದನಗಳಿಂದ ಅಂಗೀಕಾರ ಪಡೆಯಬೇಕು ಇಲ್ಲವಾದರೆ ರದ್ದುಗೊಳ್ಳುವುದು ಒಮ್ಮೆ ಸಂಸತ್ತಿನಿಂದ ಅನುಮೋದನೆಗೊಂಡ' ಹಣಕಾಸಿನ ತುರ್ತು ಪರಿಸ್ಥಿತಿ ನಂತರ ಮುಂದುವರೆಯಲು ಸಂಸತ್ತಿನ ಅನುಮತಿ ಬೇಕಾಗಿಲ್ಲ | ರಾಜ್ಯಗಳು ಕೆಲವೊಂದು ಆರ್ಥಿಕ ನಿಯಮಗಳನ್ನು ಪಾಲಿಸುವಂತೆ ಕೇಂದ್ರವು ನಿರ್ದೇಶನ ಮಾಡಬಹುದು. ರಾಜ್ಯ ಸರ್ಕಾರಿ ನೌಕರರ ವೇತನ ಹಾಗೂ ಭತ್ಯೆಗಳನ್ನು ಕಡಿತಗೊಳಿಸುವಂತೆ ಕೇಂದ್ರವು ಆದೇಶಿಸಬಹುದು. ರಾಜ್ಯ ಶಾಸಕಾಂಗ ಅಂಗೀಕರಿಸಿದ ಹಣಕಾಸು ಮಸೂದೆಗಳನ್ನು ರಾಷ್ಟ್ರಪತಿಗಳ ಒಪ್ಪಿಗೆಗೆ ಕಳುಹಿಸುವಂತೆ ಕೇಂದ್ರವು ಆದೇಶಿಸಬಹುದು. ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರನ್ನು ಒಳಗೊಂಡ ಕೇಂದ್ರ ಸರ್ಕಾರದ ಯಾವುದೇ ಶ್ರೇಣಿಯ ನೌಕರರ ವೇತನ ಹಾಗೂ ಭತ್ಯೆಗಳನ್ನು ಕಡಿತಗೊಳಿಸುವಂತೆ ರಾಷ್ಟ್ರಪತಿಯರು ಆದೇಶಿಸಬಹುದು |

GNANADHARE IAS KAS ACADEMY

## ದೇಶದಲ್ಲಿ 325ನೇ ವಿಧಿಯ ರಾಷ್ಟ್ರೀಯ ತುರ್ತುಪರಿಸ್ಥಿತಿಯ ಘೋಷಣೆಗಳು:

| ಕ್ರ.ಸಂ | ಆ ಅವಧಿಯಲ್ಲಿದ್ದ ಪ್ರಧಾನಮಂತ್ರಿ | ಯಿಂದ | ವರೆಗೆ | ಘೋಷಣೆಯ ಕಾರಣ |
|---|---|---|---|---|
| 1 | ಜವಾಹರ್‌ಲಾಲ್ ನೆಹರೂ | 26 ಅಕ್ಟೋಬರ್ 1962 | 10 ಜನವರಿ 1968 | ಭಾರತದ ಉತ್ತರ ಗಡಿ ಪ್ರದೇಶದ ಮೇಲೆ ಚೀನಾ ದಾಳಿ ಮಾಡಿದಾಗ ಬಾಹ್ಯ ತುರ್ತುಪರಿಸ್ಥಿತಿಯನ್ನು ಘೋಷಿಸಲಾಗಿತ್ತು. ಇದು 5 ವರ್ಷ 2 ತಿಂಗಳು 15 ದಿನಗಳ ಕಾಲ ಜಾರಿಯಲ್ಲಿತ್ತು. |
| 2 | ಶ್ರೀಮತಿ ಇಂದಿರಾ ಗಾಂಧಿ | 3 ಡಿಸೆಂಬರ್ 1971 | 27 ಮಾರ್ಚ್ 1977 | 1971ರಲ್ಲಿ ಪಾಕಿಸ್ತಾನ ಹಾಗೂ ಭಾರತದ ನಡುವಿನ ಯುದ್ಧದಿಂದಾದ ಬಾಹ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು. 5 ವರ್ಷ 3 ತಿಂಗಳು 14 ದಿನಗಳ ಕಾಲ ಜಾರಿಯಲ್ಲಿತ್ತು. |
| 3 | ಶ್ರೀಮತಿ ಇಂದಿರಾ ಗಾಂಧಿ | 25 ಜೂನ್ 1975 | 21 ಮಾರ್ಚ್ 1977 | ಇಂದಿರಾ ಗಾಂಧಿಯವರ ಲೋಕಸಭೆಯ ಸದಸ್ಯತ್ವ ಆಯ್ಕೆಯನ್ನು 1971ರಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯ ಅನುರ್ಜಿತಗೊಳಿಸಿತು. ಪ್ರಧಾನಮಂತ್ರಿ ಸ್ಥಾನವನ್ನು ಉಳಿಸಿಕೊಳ್ಳಲು ಆಂತರಿಕ ಗಲಭೆಯ ಕಾರಣಗಳ ನೆಪವೊಡ್ಡಿ ದೇಶದಲ್ಲಿ ಆಂತರಿಕ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು. ಇದು 1 ವರ್ಷ 8 ತಿಂಗಳು 26 ದಿನಗಳ ಕಾಲ ಜಾರಿಯಲ್ಲಿತ್ತು. |

GNANADHARE IAS KAS ACADEMY

## ಕರ್ನಾಟಕದಲ್ಲಿ ರಾಷ್ಟ್ರಪತಿಗಳ ಆಡಳಿತ :

| ಕಾಲಾವಧಿ | | ಮುಖ್ಯಮಂತ್ರಿಗಳು | ರಾಜ್ಯಪಾಲರು | ರಾಷ್ಟ್ರಪತಿಗಳು |
|---|---|---|---|---|
| ಯಿಂದ | ವರೆಗೆ | | | |
| 19 ಮಾರ್ಚ್ 1971 | 20 ಮಾರ್ಚ್ 1972 | ಶ್ರೀ ವೀರೇಂದ್ರ ಪಾಟೀಲ್ | ಶ್ರೀ ಧರ್ಮವೀರ | ಶ್ರೀ ವಿ.ವಿ.ಗಿರಿ |
| 31 ಡಿಸೆಂಬರ್ 1977 | 28 ಫೆಬ್ರವರಿ 1978 | ಶ್ರೀ ಡಿ. ದೇವರಾಜ್ ಅರಸ್ | ಶ್ರೀ ಗೋವಿಂದ ನಾರಾಯಣ | ಶ್ರೀ ಬಿ.ಡಿ ಜತ್ತಿ |
| 21 ಏಪ್ರಿಲ್ 1989 | 30 ನವೆಂಬರ್ 1989 | ಶ್ರೀ ಎಸ್. ಆರ್. ಬೊಮ್ಮಾಯಿ | ಶ್ರೀ ವೆಂಕಟಸುಬ್ಬಯ್ಯ | ಶ್ರೀ ಆರ್. ವೆಂಕಟರಾಮನ್ |
| 10 ಅಕ್ಟೋಬರ್ 1990 | 17 ಅಕ್ಟೋಬರ್ 1990 | ಶ್ರೀ ವೀರೇಂದ್ರ ಪಾಟೀಲ್ | ಶ್ರೀ ಭಾನುಪ್ರತಾಪ್ ಸಿಂಗ್ | ಶ್ರೀ ಆರ್. ವೆಂಕಟರಾಮನ್ |
| 09 ಅಕ್ಟೋಬರ್ 2007 | 11 ನವೆಂಬರ್ 2007 | ಶ್ರೀ. ಹೆಚ್.ಡಿ. ಕುಮಾರ ಸ್ವಾಮಿ | ಶ್ರೀ ರಾಮೇಶ್ವರ ಠಾಕೂರ್ | ಶ್ರೀ ಪ್ರತಿಭಾ ಪಾಟೀಲ್ |
| 20 ನವೆಂಬರ್ 2007 | 29 ಮೇ 2008 | ಶ್ರೀ ಬಿ.ಎಸ್. ಯಡಿಯೂರಪ್ಪ | ಶ್ರೀ ರಾಮೇಶ್ವರ ಠಾಕೂರ್ | ಶ್ರೀ ಪ್ರತಿಭಾ ಪಾಟೀಲ್ |

# ಭಾರತದ ಲೆಕ್ಕ ನಿಯಂತ್ರಕ & ಮಹಾ ಲೆಕ್ಕ ಪರಿಶೋಧಕರು :

| ಅನುಚ್ಛೇದಗಳು | ವಿವರಣೆ |
|---|---|
| 148ನೇ ಅನುಚ್ಛೇದ | 148(1) : ಭಾರತದ ಮಹಾ ಲೆಕ್ಕ ನಿಯಂತ್ರಕ & ಮಹಾ ಲೆಕ್ಕ ಪರಿಶೋಧಕರ ಸ್ಥಾನದ ಅಸ್ತಿತ್ವದ ಬಗ್ಗೆ ವಿವರಿಸುತ್ತದೆ.<br>• CAGಯವರು ಭಾರತದ ರಾಷ್ಟ್ರಪತಿಗಳಿಂದ ನೇಮಕಗೊಳ್ಳುವರು<br>• ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಅಧಿಕಾರದಿಂದ ತೆಗೆದುಹಾಕಲು ಅನುಸರಿಸುವ ವಿಧಾನವನ್ನೇ ಅನುಸರಿಸಿ |

| | |
|---|---|
| | CAGಯವರನ್ನು ತೆಗೆದುಹಾಕಲಾಗುತ್ತದೆ.<br>148(2) : CAGಯವರು ತಮ್ಮ ಸ್ಥಾನದ ಅಧಿಕಾರವನ್ನು ವಹಿಸಿಕೊಳ್ಳುವ ಮುಂಚೆ ರಾಷ್ಟ್ರಪತಿ/ ರಾಷ್ಟ್ರಪತಿಯವರಿಂದ ನೇಮಕಗೊಂಡ ವ್ಯಕ್ತಿಯ ಸಮ್ಮುಖದಲ್ಲಿ 3ನೇ ಅನುಸೂಚಿಯ ನಮೂನೆಯಲ್ಲಿ ನೀಡಿರುವಂತೆ ಪ್ರಮಾಣವಚನವನ್ನು ಸ್ವೀಕರಿಸಿ ಅದಕ್ಕೆ ತಮ್ಮ ಸಹಿ ಹಾಕಬೇಕು.<br>148(3) : ಸಂವಿಧಾನದ 2ನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಸತ್ತು ಕಾನೂನಿನ ಮೂಲಕ CAGಯವರ ವೇತನ ಹಾಗೂ ಸೇವಾ ಷರತ್ತುಗಳನ್ನು ನಿರ್ಧರಿಸುತ್ತದೆ.<br>148(4) : CAGಯವರು ತಮ್ಮ ಸ್ಥಾನದ ನಿವೃತ್ತಿಯ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಾವುದೇ ಹುದ್ದೆಯನ್ನು ವಹಿಸಿಕೊಳ್ಳುವುದರ ಮೇಲೆ ನಿರ್ಬಂಧ ವಿಧಿಸಲಾಗಿದೆ.<br>148(5) : ಸಂವಿಧಾನ ಹಾಗೂ ಸಂಸತ್ತು ಮಾಡಿದ ಕಾಯ್ದೆಗಳಿಗೆ ಒಳಪಟ್ಟು ಭಾರತೀಯ ಲೆಕ್ಕ ಪರೊಶೋಧನೆ & ಲೆಕ್ಕ ಪತ್ರಗಳ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಸೇವಾ ಷರತ್ತುಗಳು, CAGಯವರ ಅಧಿಕಾರಗಳು, ರಾಷ್ಟ್ರಪತಿಯವರು CAGಯವರ ಜೊತೆ ಸಮಾಲೋಚಿಸಿದಂತೆ ನಿಯಾಮವಳಿಗಳು ಇರತಕ್ಕದ್ದು.<br>148(6) : CAGಯವರ ಹಾಗೂ CAGಯವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಿಗೆ ವೇತನ, ನಿವೃತ್ತಿ ವೇತನ ಹಾಗೂ ಭತ್ಯೆಗಳು ಸೇರಿದಂತೆ CAGಯವರ ಕಚೇರಿಯ ಆಡಳಿತದ ಎಲ್ಲಾ ವೆಚ್ಚವನ್ನು ಭಾರತದ ಸಂಚಿತ ನಿಧಿಯಿಂದ ಭರಿಸಲಾಗುತ್ತದೆ. |
| 149ನೇ ಅನುಚ್ಛೇದ | **CAG ಯವರ ಕರ್ತವ್ಯಗಳು & ಅಧಿಕಾರಗಳು :**<br>CAGಯು ಕೇಂದ್ರ & ಎಲ್ಲ ರಾಜ್ಯಗಳ & ಇತರ ಯಾವುದೇ ಪ್ರಾಧಿಕಾರದ & ಸಂಸ್ಥೆಗಳ ಸಂಬಂಧದಲ್ಲಿ ಸಂಸತ್ತು ಮಾಡಿದ ಕಾನೂನಿನ್ವಯ ನಿಗದಿಪಡಿಸಿದ ಕರ್ತವ್ಯಗಳನ್ನು ಮಾಡತಕ್ಕದ್ದು & ಅಧಿಕಾರವನ್ನು ಚಲಾಯಿಸತಕ್ಕದ್ದು. |
| 150ನೇ ಅನುಚ್ಛೇದ | **ಕೇಂದ್ರ & ರಾಜ್ಯಗಳ ಲೆಕ್ಕಗಳ ನಮೂನೆ :**<br>CAGಯವರ ಸಲಹೆಯ ಮೇರೆಗೆ ರಾಷ್ಟ್ರಪತಿಯು ನಿಗದಿಪಡಿಸಿದ ನಮೂನೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ಲೆಕ್ಕಗಳನ್ನು ಇಡುವರು. |
| 151ನೇ ಅನುಚ್ಛೇದ | 151(1) : CAGಯವರು ಕೇಂದ್ರಕ್ಕೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯನ್ನು ರಾಷ್ಟ್ರಪತಿಯವರಿಗೆ ಒಪ್ಪಿಸುವರು ಆ ವರದಿಯನ್ನು ಸಂಸತ್ತಿನ ಮುಂದೆ ಇಡಲು ಕ್ರಮಕೈಗೊಳ್ಳುವರು.<br>151(2) : ರಾಜ್ಯದ ಲೆಕ್ಕ ಪತ್ರಗಳಿಗೆ ಸಂಬಂಧಿಸಿದಂತೆ CAGಯವರು ತಮ್ಮ |

| | |
|---|---|
| | ವರದಿಯನ್ನು ಆ ರಾಜ್ಯದ ರಾಜ್ಯಪಾಲರಿಗೆ ಒಪ್ಪಿಸುವರು. ರಾಜ್ಯಪಾಲರು ಆ ವರದಿಯನ್ನು ರಾಜ್ಯ ವಿಧಾನಮಂಡಲದ ಮುಂದೆ ಇಡಲು ಕ್ರಮ ಕೈಗೊಳ್ಳುವರು. |

# ಸಂವಿಧಾನದ ತಿದ್ದುಪಡಿಗಳು :

## 1. ಸಂವಿಧಾನದ ಮೊದಲನೇ ತಿದ್ದುಪಡಿ ಕಾಯ್ದೆ – 1951 :

ಸಂವಿಧಾನದ ಮೊದಲನೆಯ ತಿದ್ದುಪಡಿ ಕಾಯ್ದೆಯು 18 ಜೂನ್ 1951 ರಂದು ಜಾರಿಗೆ ಬಂದಿತು.

- ಭೂಸುಧಾರಣಾ ಕಾಯ್ದೆಗಳಿಗೆ ಸಂವಿಧಾನಾತ್ಮಕ ರಕ್ಷಣೆ ನೀಡಲು ಸಂವಿಧಾನಕ್ಕೆ 9ನೇ ಅನುಸೂಚಿಯನ್ನು ಸೇರಿಸಲಾಯಿತು.
- ಸಂವಿಧಾನದ 15ನೇ ವಿಧಿಗೆ (4ನೇ) ಉಪವಿಧಿಯನ್ನು ಸೇರಿಸಿ ಸಾಮಾಜಿಕವಾಗಿ & ಶೈಕ್ಷಣಿಕವಾಗಿ ಹಿಂದುಳಿದ ಯಾವುದೇ ವರ್ಗಗಳ ಹಾಗೂ ಪರಿಶಿಷ್ಟ ಜಾತಿ, ಪಂಗಡಗಳ ಸಲುವಾಗಿ ರಾಜ್ಯವು ವಿಶೇಷ ನಿಯಾಮವಳಿಗಳನ್ನು ರೂಪಿಸುವ ಅವಕಾಶ ನೀಡಲಾಯಿತು.
- ಸಂವಿಧಾನದ 19ನೇ ವಿಧಿಯ (2ನೇ) ಉಪವಿಧಿಗೆ ರಾಷ್ಟ್ರಭದ್ರತೆ, ವಿದೇಶಗಳೊಡನೆ ಸ್ನೇಹ ಸಂಬಂಧಗಳನ್ನು, ಸಾರ್ವಜನಿಕ ಶಿಸ್ತು ಹಾಗೂ ಅಪರಾಧಗ್ಯೆಯಲು ಪ್ರೇರೇಪಣೆ ಎಂಬಂತಹ ಪದಗಳನ್ನು ಸೇರಿಸಿ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಕೆಲವು ಯುಕ್ತ ನಿರ್ಬಂಧನೆಗಳನ್ನು ವಿಧಿಸಲಾಗಿದೆ.
- ಸಾರ್ವಜನಿಕ ಹಿತದೃಷ್ಟಿಯಿಂದ ಆಸ್ತಿಯ ಹಕ್ಕಿನ ಮೇಲೆ ಯುಕ್ತ ನಿರ್ಬಂಧನೆಗಳನ್ನು ವಿಧಿಸುವ ಸಲುವಾಗಿ ಸಂವಿಧಾನಕ್ಕೆ 31ಎ ಹಾಗೂ 31ಬಿ ಉಪವಿಧಿಗಳನ್ನು ಸೇರಿಸಲಾಯಿತು.
- 31ಎ ವಿಧಿಯನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಖಾಸಗಿ ಆಸ್ತಿಯ ಸರಿಯಾದ ನಿರ್ವಹಣೆಯ ಉದ್ದೇಶದಿಂದ ಪರಿಮಿತ ಅವಧಿಗೆ ರಾಜ್ಯವೇ ವಹಿಸಿಕೊಳ್ಳುವ ಅವಕಾಶ ನೀಡಲಾಗಿದೆ.
- 31ಎ ಉಪವಿಧಿಯನ್ವಯ 31ಬಿ ಉಪವಿಧಿಯ ವ್ಯಾಪ್ತಿಗೊಳಪಟ್ಟು ಸಂವಿಧಾನದ 9ನೇ ಅನುಸೂಚಿಯಲ್ಲಿರುವ ಯಾವುದೇ ವಿಷಯಗಳನ್ನು (ಭೂ ಸುಧಾರಣಾ ಕಾಯ್ದೆಗಳನ್ನು) ನ್ಯಾಯಾಲಯಗಳು ಪರಾಮರ್ಶಿಸುವಂತಿಲ್ಲ ಹಾಗೂ ಅಸಿಂಧುಗೊಳಿಸುವಂತಿಲ್ಲ.

GNANADHARE IAS KAS ACADEMY

## 2. ಸಂವಿಧಾನದ 2ನೇ ತಿದ್ದುಪಡಿ ಕಾಯ್ದೆ – 1952 :

ಸಂವಿಧಾನದ 2ನೇ ತಿದ್ದುಪಡಿ ಕಾಯ್ದೆಯು ಮೇ 1, 1953ರಂದು ಜಾರಿಗೆ ಬಂದಿತು.

- ಸಂವಿಧಾನದ 81(1)(ಬಿ) ಉಪವಿಧಿಯನ್ನು ತಿದ್ದುಪಡಿ ಮಾಡಲಾಗಿ, ಈ ಮೊದಲಿದ್ದ ಲೋಕಸಭೆಯ ಚುನಾಯಿತ ಸದಸ್ಯರ ಸಂಖ್ಯೆ 500ಕ್ಕಿಂತ ಹೆಚ್ಚಿರಬಾರದು ಹಾಗೂ ಲೋಕಸಭೆಯ ಒಬ್ಬ ಸದಸ್ಯನು 7,50,000 ಜನರನ್ನು ಪ್ರತಿನಿಧಿಸತಕ್ಕದ್ದು ಎಂಬ ನಿಯಮವನ್ನು ರದ್ದು ಮಾಡಲಾಯಿತು.
- ಹೆಚ್ಚುತ್ತಿರುವ ಜನಸಂಖ್ಯೆಯ ಹಿನ್ನೆಲೆಯಲ್ಲಿ ಲೋಕಸಭೆಯ ಒಬ್ಬ ಸದಸ್ಯನು 7,50,000ಕ್ಕಿಂತ ಹೆಚ್ಚಿನ ಜನತೆಯನ್ನು ಪ್ರತಿನಿಧಿಸಲು ಅವಕಾಶ ಮಾಡಿ ಕೊಡಲಾಯಿತು.

## 3. ಸಂವಿಧಾನದ 3ನೇ ತಿದ್ದುಪಡಿ ಕಾಯ್ದೆ – 1954 :

ಸಂವಿಧಾನದ 3ನೇ ತಿದ್ದುಪಡಿ ಕಾಯ್ದೆಯು 22 ಫೆಬ್ರವರಿ 1955ರಂದು ಸಂಸತ್ತಿನಿಂದ ಪಾಸಾಗಿ ರಾಷ್ಟ್ರಪತಿಯವರ ಅಂಕಿತದೊಂದಿಗೆ 22 ಫೆಬ್ರವರಿ 1955ರಂದು ಜಾರಿಗೆ ಬಂದಿತು.

- 3ನೇ ತಿದ್ದುಪಡಿಯು ಸಂವಿಧಾನದ 7ನೇ ಅನುಸೂಚಿಯ ಸಮವರ್ತಿ ಪಟ್ಟಿಯ 33ನೇ ಕ್ರಮಾಂಕಕ್ಕೆ ಉತ್ಪಾದನೆಗಳಿಗಾಗಿ ಆಮದು ಮಾಡಿಕೊಂಡಿರುವ ಬಗೆಯ ಸರಕುಗಳು ಆಹಾರದ ಎಣ್ಣೆಬೀಜಗಳು, ಎಣ್ಣೆಯನ್ನೊಳಗೊಂಡ ಆಹಾರ ಪದಾರ್ಥಗಳು, ದನಗಳ ಮೇವು ಹಿಂಡಿಗಳು, ಕಚ್ಚಾ ಹತ್ತಿ & ಹತ್ತಿಕಾಳು, ಕಚ್ಚಾ ಸೆಣಬು ರಾಜ್ಯಪಟ್ಟಿಯಲ್ಲಿದ್ದ ಈ ವಿಷಯವನ್ನು ಸಮವರ್ತಿ ಪಟ್ಟಿಗೆ ವರ್ಗಾಯಿಸಲಾಯಿತು.

## 4. ಸಂವಿಧಾನದ 4ನೇ ತಿದ್ದುಪಡಿ ಕಾಯ್ದೆ – 1955 :

ಸಂವಿಧಾನದ 4ನೇ ತಿದ್ದುಪಡಿ ಕಾಯ್ದೆಯು 27 ಏಪ್ರಿಲ್ 1955ರಂದು ಜಾರಿಗೆ ಬಂದಿತು.

- ಆಸ್ತಿಯ ಹಕ್ಕು ವ್ಯಾಪಾರ & ವಾಣಿಜ್ಯಗಳಿಗೆ ಸಂಬಂಧಿಸಿದಂತೆ 31 & 31ಎ ವಿಧಿಗಳನ್ನು ತಿದ್ದುಪಡಿ ಮಾಡಲಾಗಿ 31ನೇ ವಿಧಿಯನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ಸ್ವತ್ತನ್ನು ರಾಜ್ಯವು ರಾಷ್ಟ್ರೀಕರಣಗೊಳಿಸುವ ಅಧಿಕಾರವನ್ನು ಪಡೆಯಿತು. ಸಂವಿಧಾನದ 31ಎ ವಿಧಿಗೆ ತಿದ್ದುಪಡಿ ಮಾಡುವುದರ ಮೂಲಕ ಸಂವಿಧಾನದ 9ನೇ ಅನುಸೂಚಿಗೆ 7 ಕಾಯ್ದೆಗಳನ್ನು ಸೇರ್ಪಡೆ ಮಾಡಲಾಯಿತು.

- ಸಂವಿಧಾನದ 305ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ಆಸ್ತಿತ್ವದಲ್ಲಿರುವ ಕಾನೂನುಗಳ & ರಾಜ್ಯದ ಏಕಸಾಮ್ಯದ ಬಗ್ಗೆ ಉಪಬಂಧಿಸುವ ಕಾನೂನುಗಳ ಉಳಿಸುವಿಕೆಗೆ ಅವಕಾಶ ಕಲ್ಪಿಸಲಾಯಿತು.

## 5. ಸಂವಿಧಾನದ 5ನೇ ತಿದ್ದುಪಡಿ ಕಾಯ್ದೆ – 1955 :

ಸಂವಿಧಾನದ 4ನೇ ತಿದ್ದುಪಡಿ ಕಾಯ್ದೆಯು 24 ಡಿಸೆಂಬರ್ 1955ರಂದು ಜಾರಿಗೆ ಬಂದಿತು.

- ಸಂವಿಧಾನದ 3ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ರಾಜ್ಯಗಳ ಹೆಸರು ಹಾಗೂ ಗಡಿ ರೇಖೆಗಳ ಬದಲಾಯಿಸುವಿಕೆ ಬಗ್ಗೆ ರಾಜ್ಯ ಶಾಸಕಾಂಗ ಅಭಿಪ್ರಾಯ ನೀಡಲು ರಾಷ್ಟ್ರಪತಿಗಳು ಕಾಲಾವಧಿ ನಿಗದಿಪಡಿಸಲು ಅವಕಾಶ ನೀಡಿತು. ನಿಗದಿಪಡಿಸಿದ ಅವಧಿಯೊಳಗೆ ರಾಜ್ಯಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಇಲ್ಲದಿದ್ದರೆ ಅವುಗಳ ಅಭಿಪ್ರಾಯಕ್ಕೆ ಕಾಯದೆ ರಾಜ್ಯಗಳ ಹೆಸರು ಹಾಗೂ ಗಡಿರೇಖೆಗಳ ಬದಲಾಯಿಸುವಿಕೆಗೆ ಕಾಯ್ದೆಯನ್ನು ಮಾಡುವ ಅಧಿಕಾರವನ್ನು ಸಂಸತ್ತು ಪಡೆಯಿತು

## 6. ಸಂವಿಧಾನದ 6ನೇ ತಿದ್ದುಪಡಿ ಕಾಯ್ದೆ – 1956 :

ಸಂವಿಧಾನದ 6ನೇ ತಿದ್ದುಪಡಿ ಕಾಯ್ದೆಯು 11 ಸೆಪ್ಟಂಬರ್ 1956ರಂದು ಜಾರಿಗೆ ಬಂದಿತು.

- ಕೇಂದ್ರ –ರಾಜ್ಯಗಳ ಮಧ್ಯದ ಅಧಿಕಾರ ಹಂಚಿಕೆಯನ್ನು ವಿವರಿಸುವ 9ನೇ ಅನುಸೂಚಿಯ ಕೇಂದ್ರಪಟ್ಟಿಗೆ 92ಎ ಕ್ರಮಾಂಕವನ್ನು ಸೇರಿಸಿ 286ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ಅಂತರಾಜ್ಯ ಮಾರಾಟ ತೆರಿಗೆಯನ್ನು ಕೇಂದ್ರ ವಿಷಯವನ್ನಾಗಿಸಿ ತೆರಿಗೆ ವಿಧಿಸುವ ಅಧಿಕಾರವನ್ನು ಕೇಂದ್ರ ಸರ್ಕಾರ ನೀಡಲಾಯಿತು. ಸಂವಿಧಾನದ 269ನೇ ತಿದ್ದುಪಡಿಯನ್ನು ಮಾಡಿ ಕೇಂದ್ರ ವಿಧಿಸಿದ ಅಂತರಾಜ್ಯ ಮಾರಾಟ ಮೇಲಿನ ತೆರಿಗೆಯನ್ನು ರಾಜ್ಯಗಳಿಗೆ ಹಂಚಲು ಅವಕಾಶ ನೀಡಲಾಯಿತು.

## 7. ಸಂವಿಧಾನದ 7ನೇ ತಿದ್ದುಪಡಿ ಕಾಯ್ದೆ – 1956 :

ಸಂವಿಧಾನದ 4ನೇ ತಿದ್ದುಪಡಿ ಕಾಯ್ದೆಯು 1 ನವೆಂಬರ್ 1956ರಂದು ಜಾರಿಗೆ ಬಂದಿತು.

- ಈ 7ನೇ ತಿದ್ದುಪಡಿಯು ಮೊದಲಿದ್ದ ರಾಜ್ಯಗಳ ವರ್ಗೀಕರಣವನ್ನು ರದ್ದು ಮಾಡಿ ರಾಜ್ಯಗಳ ಪುನರ್ ರಚನಾ ಆಯೋಗದ ಶಿಫಾರಸಿನ್ವ ಅನ್ವಯ ಭಾಷಾವಾರು 14 ರಾಜ್ಯಗಳ ರಚನೆಗೆ ಅವಕಾಶ ಕಲ್ಪಿಸಿತು.

GNANADHARE IAS KAS ACADEMY

- ಸಂವಿಧಾನದ 81, 82, 131, 168(1)(ಎ), 170(1), 171(1), 220, 222, 224, 231, 232, 298, 49, 241(1), 298, 272, 271 ವಿಧಿಗಳಿಗೆ ತಿದ್ದುಪಡಿ ಮಾಡಲಾಯಿತು.

## 8. ಸಂವಿಧಾನದ 8ನೇ ತಿದ್ದುಪಡಿ ಕಾಯ್ದೆ – 1959 :

ಸಂವಿಧಾನದ 4ನೇ ತಿದ್ದುಪಡಿಯ ಕಾಯ್ದೆಯು 5 ಜನವರಿ 1960ರಂದು ಜಾರಿಗೆ ತರಲಾಯಿತು.

- 8ನೇ ತಿದ್ದುಪಡಿ ಕಾಯ್ದೆಯ ಅನ್ವಯ ಸಂವಿಧಾನದ 334ನೇ ವಿಧಿಗೆ ತಿದ್ದುಪಡಿ ಮಾಡಿ ಲೋಕಸಭೆ & ರಾಜ್ಯ ವಿಧಾನ ಸಭೆಯಲ್ಲಿ ಅನುಸೂಚಿತ ಜಾತಿ (SC) ಅನುಸೂಚಿತ ಬುಡಕಟ್ಟು (ST) ಹಾಗೂ ಆಂಗ್ಲೋ ಇಂಡಿಯನ್ ಸಮುದಾಯದವರಿಗೆ 10 ವರ್ಷಗಳ ಕಾಲ (ಅಂದರೆ 1970ರವರೆಗೆ) ಸ್ಥಾನಗಳ ಮೀಸಲಾತಿಯನ್ನು ಮುಂದುವರೆಸಲಿಕ್ಕೆ ಅವಕಾಶ ಕಲ್ಪಿಸಲಾಯಿತು.

## 9. ಸಂವಿಧಾನದ 9ನೇ ತಿದ್ದುಪಡಿ ಕಾಯ್ದೆ – 1960 :

ಸಂವಿಧಾನದ 9ನೇ ತಿದ್ದುಪಡಿ ಕಾಯ್ದೆಯು 17 ಜನವರಿ 1961ರಂದು ಜಾರಿಗೆ ಬಂದಿತು.

- ಸಂವಿಧಾನದ ಮೊದಲನೇ ಅನುಸೂಚಿಗೆ ತಿದ್ದುಪಡಿ ಮಾಡಿ ಪಾಕಿಸ್ತಾನ ಹಾಗೂ ಭಾರತದ ಮಧ್ಯ ನಡೆದ ಪಶ್ಚಿಮಬಂಗಾಳದ ಬೇರುಬಾರಿ, ಅಸ್ಸಾಂ, ಪಂಜಾಬ್ ಹಾಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ತ್ರಿಪುರದ ಕೆಲವೊಂದು ಭೂ ಪ್ರದೇಶಗಳನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಲಾಯಿತು.

## 10. ಸಂವಿಧಾನದ 10ನೇ ತಿದ್ದುಪಡಿ ಕಾಯ್ದೆ – 1961 :

ಸಂವಿಧಾನದ 10ನೇ ತಿದ್ದುಪಡಿ ಕಾಯ್ದೆಯು 11 ಆಗಸ್ಟ್ 1961ರಂದು ಜಾರಿಗೆ ಬಂದಿತು.

- ಸಂವಿಧಾನದ ಮೊದಲನೇ ಅನುಸೂಚಿ ಹಾಗೂ 240ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ದಾದ್ರಾ & ನಗರವೇಲಿಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಂಡು ಕೇಂದ್ರಾಡಳಿತ ಪ್ರದೇಶವನ್ನಾಗಿಸಲಾಯಿತು.

## 11. ಸಂವಿಧಾನದ 11ನೇ ತಿದ್ದುಪಡಿ ಕಾಯ್ದೆ – 1961 :

ಸಂವಿಧಾನದ 11ನೇ ತಿದ್ದುಪಡಿ ಕಾಯ್ದೆಯ ಡಿಸೆಂಬರ್ 19 1961ರಂದು ಜಾರಿಗೆ ಬಂದಿತು.



GNANADHARE IAS KAS ACADEMY

- ಸಂವಿಧಾನದ 71(3)ನೇ ಉಪವಿಧಿಯ ಅವಕಾಶವನ್ನು ಬಳಸಿಕೊಂಡು ಉಪರಾಷ್ಟ್ರಪತಿ ಚುನಾವಣೆಯ 66(1) ನೇ ಉಪವಿಧಿಗೆ ತಿದ್ದುಪಡಿ ಮಾಡಲಾಯಿತು.
- ಉಪರಾಷ್ಟ್ರಪತಿಯವರನ್ನು ಸಂಸತ್ತಿನ ಉಭಯ ಸದನಗಳ ಸದಸ್ಯರನ್ನು ಒಳಗೊಂಡ ಒಂದು ಚುನಾಯಿತ ಗಣದ ಸದಸ್ಯರು ಚುನಾಯಿಸುತ್ತಾರೆ ಎಂದು ಮಾಡಲಾಯಿತು. ಈ ಮೊದಲು ಸಂಯುಕ್ತ ಅಧಿವೇಶನದಲ್ಲಿ ಸಭೆ ಸೇರಿದ ಸಂಸತ್ತಿನ ಉಭಯ ಸದಸ್ಯರುಗಳಿಂದ ಉಪರಾಷ್ಟ್ರಪತಿಯವರು ಆಯ್ಕೆಗೊಳ್ಳುತ್ತಿದ್ದರು.

## 12. ಸಂವಿಧಾನದ 12ನೇ ತಿದ್ದುಪಡಿ ಕಾಯ್ದೆ – 1962 :

ಸಂವಿಧಾನದ 12ನೇ ತಿದ್ದುಪಡಿ ಕಾಯ್ದೆಯು 20 ಡಿಸೆಂಬರ್ 1961ರಂದು ಜಾರಿಗೆ ಬಂದಿತು.

- ಸಂವಿಧಾನದ 240 ಹಾಗೂ ಮೊದಲನೆಯ ಅನುಸೂಚಿಗೆ ತಿದ್ದುಪಡಿ ಮಾಡಲಾಗಿ ಗೋವಾ, ದಾಮನ್ & ದೀವ್‌ಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಂಡು ಕೇಂದ್ರಾಡಳಿತ ಪ್ರದೇಶವನ್ನಾಗಿಸಲಾಯಿತು.

## 13. ಸಂವಿಧಾನದ 13ನೇ ತಿದ್ದುಪಡಿ ಕಾಯ್ದೆ – 1962 :

ಸಂವಿಧಾನದ 13ನೇ ತಿದ್ದುಪಡಿ ಕಾಯ್ದೆಯು 20 ಡಿಸೆಂಬರ್ 1961ರಂದು ಜಾರಿಗೆ ಬಂದಿತು.

- ಈ ತಿದ್ದುಪಡಿಯನ್ವಯ ನಾಗಾಲ್ಯಾಂಡ್‌ಕ್ಕೆ ಭಾರತದ 16ನೇ ರಾಜ್ಯದ ಸ್ಥಾನಮಾನವನ್ನು ನೀಡಿ 371ನೇ ವಿಧಿಗೆ 371 ಎ ವಿಧಿಯನ್ನು ಸೇರಿಸಿ ನಾಗಾಲ್ಯಾಂಡ್ ರಾಜ್ಯಕ್ಕೆ ವಿಶೇಷ ಸ್ಥಾನಮಾನವನ್ನು ನೀಡಲಾಯಿತು. ಈ ವಿಶೇಷ ಸ್ಥಾನಮಾನದನ್ವಯ ನಾಗಾಲ್ಯಾಂಡ್ ರಾಜ್ಯದ ವಿಧಾನಸಭೆಯು ಒಂದು ನಿರ್ಣಯದ ಮೂಲಕ ತೀರ್ಮಾನಿಸದ ಹೊರತು ಈ ಕೆಳಗಿನ ವಿಷಯಕ್ಕೆ ಸಂಬಂಧಿಸಿದ ಸಂಸತ್ತಿನ ಯಾವುದೇ ಕಾಯ್ದೆಗಳು ನಾಗಾಲ್ಯಾಂಡ್ ರಾಜ್ಯಕ್ಕೆ ಅನ್ವಯಿಸುವುದಿಲ್ಲ.
  - ನಾಗಾರಾಜನ ಧಾರ್ಮಿಕ ಅಥವಾ ಸಾಮಾಜಿಕ ಆಚರಣೆಗಳು
  - ನಾಗಾರಾಜನ ರೂಢಿಜನ್ಯ ಕಾನೂನು & ಪ್ರಕ್ರಿಯೆ
  - ನಾಗಾರಾಜನ ರೂಢಿಜನ್ಯ ಕಾನೂನಿಗೆ ಅನುಸಾರವಾಗಿ ತೀರ್ಮಾನಗಳನ್ನು ಮಾಡಬೇಕಾದ ಸಂದರ್ಭವನ್ನು ಒಳಗೊಂಡು ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯದ ಆಡಳಿತ
  - ಭೂಮಿ & ಸಂಪನ್ಮೂಲಗಳ ಒಡೆತನ ಹಾಗೂ ವರ್ಗಾವಣೆ



GNANADHARE IAS KAS ACADEMY

- ಅಲ್ಲದೇ 317 ಎ ವಿಧಿಯು ನಾಗಾಲ್ಯಾಂಡ್ ರಾಜ್ಯದ ರಾಜ್ಯಪಾಲರಿಗೆ ಕೆಲವೊಂದು ವಿಶೇಷ ಅಧಿಕಾರಗಳನ್ನು ನೀಡಿದೆ.

## 14. ಸಂವಿಧಾನದ 14ನೇ ತಿದ್ದುಪಡಿ ಕಾಯ್ದೆ – 1962

ಸಂವಿಧಾನದ 14ನೇ ತಿದ್ದುಪಡಿ ಕಾಯ್ದೆಯು 16 ಆಗಸ್ಟ್ 1962ರಿಂದ ಪೂರ್ವಾನ್ವಯವಾಗುವಂತೆ 28 ಡಿಸೆಂಬರ್ 1962ರಂದು ಜಾರಿಗೆ ಬಂದಿತು.

- ಸಂವಿಧಾನದ 240ನೇ ವಿಧಿಗೆ ಹಾಗೂ 1ನೇ ಅನುಸೂಚಿಗೆ ತಿದ್ದುಪಡಿ ಮಾಡಲಾಗಿ ಕಾರೈಕಲ್, ಮಾಹೆ, ಪುದುಚೇರಿ & ಯಾನಮ್‌ಗಳನ್ನು ಒಟ್ಟುಗೂಡಿಸಿ 'ಪಾಂಡೀಚೇರಿ'ಯನ್ನು ರಚಿಸಿ ಭಾರತ ಒಕ್ಕೂಟಕ್ಕೆ ಸೇರಿಸಿಕೊಂಡು ಕೇಂದ್ರಾಡಳಿತ ಪ್ರದೇಶವನ್ನಾಗಿಸಲಾಯಿತು.
- ಸಂವಿಧಾನದ 81ನೇ (1)(ಬಿ) ಉಪವಿಧಿಗೆ ತಿದ್ದುಪಡಿ ಮಾಡಿ ಕೇಂದ್ರಾಡಳಿತ ಪ್ರದೇಶಗಳಿಗೆ ಲೋಕಸಭೆಯಲ್ಲಿ ನಿಗಧಿಪಡಿಸಲಾದ ಸ್ಥಾನಗಳ ಸಂಖ್ಯೆಯನ್ನು 20–25ಕ್ಕೆ ಹೆಚ್ಚಿಸಲಾಯಿತು
- ಸಂವಿಧಾನಕ್ಕೆ 239ಎ ವಿಧಿಯನ್ನು ಸೇರಿಸಿ, ಗೋವಾ, ಹಿಮಾಚಲ್ ಪ್ರದೇಶ, ಮಣಿಪುರ, ತ್ರಿಪುರ & ಪಾಂಡೀಚೇರಿ ಕೇಂದ್ರಾಡಳಿತ ಪ್ರದೇಶಗಳಿಗೆ ಸ್ಥಳಿಯ ವಿಧಾನಮಂಡಲಗಳನ್ನು ರಚಿಸಿಕೊಳ್ಳಲು ಅಥವಾ ಮಂತ್ರಿಮಂಡಲವನ್ನು ಅಥವಾ ಎರಡನ್ನೂ ರಚಿಸಲು ಅವಕಾಶ ಕಲ್ಪಿಸಲಾಯಿತು

## 15. ಸಂವಿಧಾನದ 15ನೇ ತಿದ್ದುಪಡಿ ಕಾಯ್ದೆ – 1963 :

ಸಂವಿಧಾನದ 15ನೇ ತಿದ್ದುಪಡಿ ಕಾಯ್ದೆಯು 05 ಅಕ್ಟೋಬರ್ 1963ರಂದು ಜಾರಿಗೆ ಬಂದಿತು.

- ಸಂವಿಧಾನ 217ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ನಿವೃತ್ತಿಯ ವಯಸ್ಸನ್ನು 60–62ಕ್ಕೆ ಹೆಚ್ಚಿಸಲಾಯಿತು.
- ಸಂವಿಧಾನಕ್ಕೆ 124(2ಎ) ಉಪವಿಧಿಯನ್ನು ಸೇರಿಸಿ ಸರ್ವೋಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ವಯಸ್ಸನ್ನು ಸಂಸತ್ತಿನ ಕಾನೂನಿನ ಮೂಲಕ ಉಪಬಂಧಿಸಬಹುದಾದ ಪ್ರಾಧಿಕಾರಿಯು ಉಪಬಂಧಿಸಬಹುದಾದಂತಹ ರೀತಿಯಲ್ಲಿ ನಿರ್ಧರಿಸತಕ್ಕದ್ದು ಎಂದು ಮಾಡಲಾಯಿತು.
- ಸಂವಿಧಾನಕ್ಕೆ 217(3) ಉಪವಿಧಿಯನ್ನು ಸೇರಿಸಿ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ವಯಸ್ಸಿನ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ರಾಷ್ಟ್ರಪತಿಯ ಭಾರತದ ಮುಖ್ಯ ನ್ಯಾಯಾಧೀಶರೊಡನೆ ಸಮಲೋಚಿಸಿದ ತರುವಾಯ ವಿವಾದವನ್ನು ತೀರ್ಮಾನಿಸತಕ್ಕದ್ದು & ರಾಷ್ಟ್ರಪತಿಗಳ ತೀರ್ಮಾನವು ಅಂತಿಮವಾಗಿರತಕ್ಕದ್ದು.

GNANADHARE IAS KAS ACADEMY

- ಸಂವಿಧಾನದ 222(2)ನೇ ಉಪವಿಧಿಯನ್ನು ಸೇರಿಸಿ ವರ್ಗಾವಣೆಯಾದ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ಪರಿಹಾರ ಭತ್ಯೆಗೆ ಅವಕಾಶ ಮಾಡಿಕೊಡಲಾಯಿತು. ನ್ಯಾಯಾಧೀಶರು ತಮ್ಮ 62 ವರ್ಷ ವಯಸ್ಸಿನ ನಿವೃತ್ತಿಯ ನಂತರ ಅದೇ ನ್ಯಾಯಾಲಯದಲ್ಲಿ ಹೆಚ್ಚುವರಿ ಅಥವಾ ಹಂಗಾಮಿ ನ್ಯಾಯಾಧೀಶನಾಗಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಲಾಯಿತು.

## 16. ಸಂವಿಧಾನದ 16ನೇ ತಿದ್ದುಪಡಿ ಕಾಯ್ದೆ – 1963 :

ಸಂವಿಧಾನದ 15ನೇ ತಿದ್ದುಪಡಿ ಕಾಯ್ದೆಯು 5 ಅಕ್ಟೋಬರ್ 1963ರಂದು ಜಾರಿಗೆ ಬಂದಿತು.

- ಸಂವಿಧಾನದ 19ನೇ ವಿಧಿಯ ಸ್ವಾತಂತ್ರ್ಯದ ಹಕ್ಕಿನ 19(2), (3) ಹಾಗೂ (4)ನೇ ಉಪವಿಧಿಗಳಿಗೆ ಭಾರತದ ಸಾರ್ವಭೌಮತ್ವ & ಅಖಂಡತೆಯ ಸಲುವಾಗಿ ಎಂಬ ವಾಕ್ಯವನ್ನು ಸೇರಿಸುವುದರ ಮುಖಾಂತರ 19(1)ನೇ ಉಪವಿಧಿಯ ಸ್ವಾತಂತ್ರ್ಯದ ಹಕ್ಕನ್ನು ಭಾರತದ ಸಾರ್ವಭೌಮತ್ವ ಹಾಗೂ ಅಖಂಡತೆಯ ಸಲುವಾಗಿ ಸಂಸತ್ತು ಮೊಟಕುಗೊಳಿಸಬಹುದು ಎಂದು ತಿಳಿಸಲಾಗಿದೆ.
- ಸಂವಿಧಾನದ 3ನೇ ಅನುಸೂಚಿಗೆ ತಿದ್ದುಪಡಿ ಮಾಡಲಾಗಿ ಕೇಂದ್ರ ಹಾಗೂ ರಾಜ್ಯ ಮಂತ್ರಿಗಳು, ಸಂಸತ್ತು ಹಾಗೂ ರಾಜ್ಯ ಶಾಸಕಾಂಗಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರು, ಭಾರತದ ಲೆಕ್ಕ ನಿಯಂತ್ರಕ & ಮಹಾ ಲೆಕ್ಕ ಪರಿಶೋಧಕರು ಅಧಿಕಾರ ಗೋಪ್ಯತಾ ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ಭಾರತದ ಸಾರ್ವಭೌಮತ್ವವನ್ನು ಹಾಗೂ ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದು ಪ್ರಮಾಣ ವಚನ ಸ್ವೀಕರಿಸಬೇಕು.

## 17. ಸಂವಿಧಾನದ 17ನೇ ತಿದ್ದುಪಡಿ ಕಾಯ್ದೆ – 1964 :

ಸಂವಿಧಾನದ 17ನೇ ತಿದ್ದುಪಡಿ ಕಾಯ್ದೆಯು 20 ಜೂನ್ 1964ರಂದು ಜಾರಿಗೆ ಬಂದಿತು.

- ಸಂವಿಧಾನದ 31ಎ ವಿಧಿಯಲ್ಲಿರುವ 'ಎಸ್ಟೇಟ್' ಎಂಬ ಪದವನ್ನು ಪುನರ್ ವ್ಯಾಖ್ಯಾನಿಸಿಲಾಗಿದೆ, ಭೂಸುಧಾರಣೆ ಕಾಯ್ದೆಯನ್ವಯ ಪರಮಾಧಿಯ ಮಿತಿಯೊಳಗಿರುವ ಯಾವುದೇ ಭೂಮಿಯನ್ನು ವಶಪಡಿಸಿಕೊಂಡರೆ ಕಾನೂನಿನ ಅನ್ವಯ ಮಾರುಕಟ್ಟೆಯ ಮೌಲ್ಯಕ್ಕೆ ಕಡಿಮೆ ಇಲ್ಲದ ದರದಲ್ಲಿ ನಷ್ಟ ಪರಿಹಾರವನ್ನು ಸಂದಾಯ ಮಾಡಲು ರಾಜ್ಯ ಕ್ರಮ ಕೈಗೊಳ್ಳತಕ್ಕದೆಂದು ನಿರ್ದೇಶಿಸಲಾಯಿತು.
- ಅಲ್ಲದೇ ಸಂವಿಧಾನದ 9ನೇ ಅನುಸೂಚಿಗೆ 21–64ರ ವರೆಗಿನ ಎಂಟ್ರಿಗಳನ್ನು ಸೇರಿಸಲಾಯಿತು.

## 18. ಸಂವಿಧಾನದ 18ನೇ ತಿದ್ದುಪಡಿ ಕಾಯ್ದೆ – 1964 :

ಸಂವಿಧಾನದ 18ನೇ ತಿದ್ದುಪಡಿ ಕಾಯ್ದೆಯು 27 ಆಗಸ್ಟ್ 1966ರಂದು ಜಾರಿಗೆ ಬಂದಿತು.

- ಸಂವಿಧಾನದ 3ನೇ ವಿಧಿಗೆ ತಿದ್ದುಪಡಿ ಮಾಡಿ 'ರಾಜ್ಯ' ಎಂಬ ಪದಕ್ಕೆ ಸ್ಪಷ್ಟೀಕರಣ ನೀಡಲಾಯಿತು. ಯಾವುದೇ ಒಂದು ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ಒಂದು ಭಾಗವನ್ನು ಇತರ ಯಾವುದೇ ರಾಜ್ಯಕ್ಕೆ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸೇರಿಸಿ ಒಂದು ನೂತನ ರಾಜ್ಯವನ್ನಾಗಲಿ, ಒಂದು ನೂತನ ಕೇಂದ್ರಾಡಳಿತ ಪ್ರದೇಶವನ್ನಾಗಲಿ ರಚಿಸುವಂತಹ ಅಧಿಕಾರವನ್ನು ಹೊಂದಿರುವಂತೆ ಮಾಡಲಾಯಿತು.
- ರಾಜ್ಯ ಎಂಬ ಪದದಲ್ಲಿ ಕೇಂದ್ರಾಡಳಿತ ಪ್ರದೇಶವೂ ಸೇರುವಂತೆ ಮಾಡಲಾಯಿತು.

## 19. ಸಂವಿಧಾನದ 19ನೇ ತಿದ್ದುಪಡಿ ಕಾಯ್ದೆ – 1966 :

ಸಂವಿಧಾನದ 19ನೇ ತಿದ್ದುಪಡಿ ಕಾಯ್ದೆಯು 11 ಡಿಸೆಂಬರ್ 1966ರಲ್ಲಿ ಜಾರಿಗೆ ಬಂದಿತು.

- ಸಂವಿಧಾನದ 324(1)ನೇ ಉಪವಿಧಿಗೆ ತಿದ್ದುಪಡಿ ಮಾಡಲಾಯಿತು. ಸಂಸತ್ತು ಹಾಗೂ ರಾಜ್ಯ ವಿಧಾನ ಮಂಡಲಗಳಿಗೆ ನಡೆಯುವಂತಹ ಚುನಾವಣೆಗಳಿಂದ ಅಥವಾ ಚುನಾವಣೆಗಳ ಸಂಬಂಧದಲ್ಲಿ ಉದ್ಭವಿಸುವ ಸಂದೇಹಗಳನ್ನು, ವಿವಾದಗಳನ್ನು ಇತ್ಯರ್ಥಪಡಿಸುವುದಕ್ಕಾಗಿ ನೇಮಕ ಮಾಡುತ್ತಿದ್ದ "ಚುನಾವಣಾ ನ್ಯಾಯಾಧೀಕರಣ"ಗಳನ್ನು ರದ್ದುಪಡಿಸಲಾಯಿತು.
- ಚುನಾವಣಾ ವಿವಾದಗಳನ್ನು ಇತ್ಯರ್ಥಪಡಿಸುವುದಕ್ಕಾಗಿ ಉಚ್ಚನ್ಯಾಯಾಲಯಗಳಿಗೆ ಅಧಿಕಾರ ನೀಡಲಾಯಿತು.

## 20. ಸಂವಿಧಾನದ 20ನೇ ತಿದ್ದುಪಡಿ ಕಾಯ್ದೆ – 1966 :

ಸಂವಿಧಾನದ 20ನೇ ತಿದ್ದುಪಡಿ ಕಾಯ್ದೆಯು 22 ಡಿಸೆಂಬರ್ 1966ರಂದು ಜಾರಿಗೆ ಬಂದಿತು

- ಚಂದ್ರಮೋಹನ v/s ಉತ್ತರಪ್ರದೇಶ ರಾಜ್ಯ ಪ್ರಕರಣದಲ್ಲಿ ಉತ್ರಪ್ರದೇಶ ಜಿಲ್ಲಾ ನ್ಯಾಯಾಧೀಶರ ನೇಮಕಾತಿಯನ್ನು ಸರ್ವೋಚ್ಛ ನ್ಯಾಯಾಲಯ ಅಸಿಂಧು ಎಂದು ಘೋಷಿಸಿತು. ಈ ನೇಮಕಾತಿಯನ್ನು ಕ್ರಮಬದ್ಧಗೊಳಿಸಲು ಸಂವಿಧಾನಕ್ಕೆ 233 ಎ ವಿಧಿಯನ್ನು ಸೇರಿಸಲಾಯಿತು.

GNANADHARE IAS KAS ACADEMY

## 21. ಸಂವಿಧಾನದ 21ನೇ ತಿದ್ದುಪಡಿ ಕಾಯ್ದೆ – 1967 :

ಸಂವಿಧಾನದ 21ನೇ ತಿದ್ದುಪಡಿ ಕಾಯ್ದೆಯು 10 ಏಪ್ರಿಲ್ 1967ರಂದು ಜಾರಿಗೆ ಬಂದಿತು.

- ಸಂವಿಧಾನದ 8ನೇ ಅನುಸೂಚಿಯಲ್ಲಿ ತಿದ್ದುಪಡಿ ಮಾಡಲಾಗಿ "ಸಿಂಧಿ" ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ 8ನೇ ಅನುಸೂಚಿಗೆ ಸೇರಿಸಲಾಯಿತು. ಇದರಿಂದಾಗಿ ಅಧಿಕೃತ ಭಾಷೆಗಳ ಸಂಖ್ಯೆ 15ಕ್ಕೆ ಏರಿತು.

## 22. ಸಂವಿಧಾನದ 22ನೇ ತಿದ್ದುಪಡಿ ಕಾಯ್ದೆ – 1969 :

ಸಂವಿಧಾನದ 22ನೇ ತಿದ್ದುಪಡಿ ಕಾಯ್ದೆಯು 25 ಸೆಪ್ಟಂಬರ್ 1969ರಂದು ಜಾರಿಗೆ ಬಂದಿತು.

- ಸಂವಿಧಾನದ 10ನೇ ಭಾಗಕ್ಕೆ 244ಎ ವಿಧಿಯನ್ನು ಸೇರಿಸಲಾಗಿ ಅಸ್ಸಾಂನಲ್ಲಿರುವ ಕೆಲವು ಬುಡಕಟ್ಟು ಪ್ರದೇಶಗಳನ್ನೊಳಗೊಂಡ ಸ್ವಾಯತ್ತ ಮೇಘಾಲಯ ರಾಜ್ಯ ರಚನೆ & ಮೇಘಾಲಯಕ್ಕೆ ಸ್ಥಳಿಯ ವಿಧಾನಮಂಡಲ ಅಥವಾ ಎರಡನ್ನು ರಚಿಸಿಕೊಳ್ಳಲು ಅವಕಾಶ ಕಲ್ಪಿಸಲಾಯಿತು.
- ಸಂವಿಧಾನದ 275 ನೇ ವಿಧಿಗೆ (1ಎ) ಉಪವಿಧಿಯನ್ನು ಸೇರಿಸಿ ಅಸ್ಸಾಂನಿಂದ ಬೇರ್ಪಟ್ಟು ಸ್ಥಾಪನೆಯಾಗುವ ಮೇಘಾಲಯ ರಾಜ್ಯದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿ ಯೋಜನೆಗಳಿಗೆ ರಾಷ್ಟ್ರಪತಿಯ ಆದೇಶದ ಮೂಲಕ ನಿಗಧಿಪಡಿಸಿದ ಮೊತ್ತವನ್ನು ಅಸ್ಸಾಂ ಹಾಗೂ ಮೇಘಾಲಯ ರಾಜ್ಯಗಳ ನಡುವೆ ಸಮನಾಗಿ ಹಂಚಬೇಕು. ಅಲ್ಲದೇ ಮೇಘಾಲಯ ರಾಜ್ಯದ ಆಡಳಿತ ಮಟ್ಟವನ್ನು ಅಸ್ಸಾಂ ರಾಜ್ಯದ ಉಳಿದ ಭಾಗದ ಆಡಳಿತದ ಮಟ್ಟಕ್ಕೆ ಏರಿಸುವುದಾಗಿ ಮೇಘಾಲಯ ರಾಜ್ಯದ ರಾಜಸ್ವಗಳು ಸಹಾಯಾನುದಾನಗಾಳಾಗಿ ಭಾರತ ಸಂಚಿತ ನಿಧಿಯಿಂದ ಒದಗಿಸತಕ್ಕದ್ದು ಎಂದು ಮಾಡಲಾಯಿತು.
- ಸಂವಿಧಾನಕ್ಕೆ 317ಬಿ ವಿಧಿಯನ್ನು ಅಳವಡಿಸಿ ಅಸ್ಸಾಂ ರಾಜ್ಯಕ್ಕೆ ವಿಶೇಷ ಸ್ಥಾನಮಾನಗಳನ್ನು ನೀಡಲಾಯಿತು

## 23. ಸಂವಿಧಾನದ 23ನೇ ತಿದ್ದುಪಡಿ ಕಾಯ್ದೆ – 1969 :

ಸಂವಿಧಾನದ 23ನೇ ತಿದ್ದುಪಡಿ ಕಾಯ್ದೆಯು 23 ಜನವರಿ 1970ರಂದು ಜಾರಿಗೆ ಬಂದಿತು

- ಸಂವಿಧಾನದ 330 ಹಾಗೂ 332 & 334 ವಿಧಿಗಳಿಗೆ ತಿದ್ದುಪಡಿ ಮಾಡಲಾಗಿ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳಿಗೆ ಹಾಗೂ ಆಂಗ್ಲೋ ಇಂಡಿಯನ್ನರಿಗೆ ಸ್ಥಾನಗಳ ಮೀಸಲಾತಿಯ ವಿಶೇಷ ಪ್ರಾತಿನಿಧ್ಯತೆಯನ್ನು ಮತ್ತೆ 10 ವರ್ಷಗಳ ಕಾಲ ಅಂದರೆ 1980ರ ವರೆಗೆ ವಿಸ್ತರಿಸಲಾಯಿತು.

GNANADHARE IAS KAS ACADEMY

- ಸಂವಿಧಾನದ 333ನೇ ವಿಧಿಗೆ ತಿದ್ದುಪಡಿ ಮಾಡಿ ಆಂಗ್ಲೋ–ಇಂಡಿಯನ್ ಸಮುದಾಯದ ಒಬ್ಬ ಸದಸ್ಯನನ್ನು ರಾಜ್ಯಪಾಲರು ವಿಧಾನ ಸಭೆಗೆ ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸುತ್ತಾರೆ.

## 24. ಸಂವಿಧಾನದ 24ನೇ ತಿದ್ದುಪಡಿ ಕಾಯ್ದೆ – 1971 :

ಸಂವಿಧಾನದ 24ನೇ ತಿದ್ದುಪಡಿ ಕಾಯ್ದೆಯು 05 ನವೆಂಬರ್ 1971ರಂದು ಜಾರಿಗೆ ಬಂದಿತು

- ಸಂವಿಧಾನದ 13ನೇ ವಿಧಿಗೆ(4)ನೇ ಉಪವಿಧಿಯನ್ನು ಸೇರಿಸಿ 368ನೇ ವಿಧಿಯ (1)ನೇ ಉಪವಿಧಿಯನ್ನು ಬದಲಾವಣೆ ಮಾಡಲಾಗಿ ಮೂಲಭೂತ ಹಕ್ಕುಗಳನ್ನೊಳಗೊಂಡ ಸಂವಿಧಾನದ ಯಾವುದೇ ಭಾಗಕ್ಕೆ ತಿದ್ದುಪಡಿ ಮಾಡುವ ಅಧಿಕಾರವನ್ನು ಸಂಸತ್ತಿಗೆ ನೀಡಲಾಯಿತು. ಇದಕ್ಕೂ ಮೊದಲು 1967ರಲ್ಲಿ ಗೋಲಕನಾಥ v/s ಪಂಜಾಬ್ ರಾಜ್ಯ ಪ್ರಕರಣದಲ್ಲಿ ಸಂವಿಧಾನದ ಮೂಲಭೂತ ಹಕ್ಕುಗಳನ್ನು ತಿದ್ದುಪಡಿ ಅಧಿಕಾರ ಸಂಸತ್ತಿಗೆ ಇಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿತು.
- 368(2)ನೇ ಉಪವಿಧಿಗೆ ತಿದ್ದುಪಡಿ ಮಾಡಲಾಗಿ ಸಂಸತ್ತಿನಿಂದ ಪಾಸಾದ ಮಸೂದೆಯನ್ನು ರಾಷ್ಟ್ರಪತಿಯವರು ತಡೆ ಹಿಡಿಯದೇ ಕಡ್ಡಾಯವಾಗಿ ತಮ್ಮ ಅಂಗೀಕಾರ ನೀಡಬೇಕೆಂದು ಮಾಡಲಾಯಿತು.

## 25. ಸಂವಿಧಾನದ 25ನೇ ತಿದ್ದುಪಡಿ ಕಾಯ್ದೆ – 1971 :

ಸಂವಿಧಾನದ 25ನೇ ತಿದ್ದುಪಡಿ ಕಾಯ್ದೆಯು 20 ಏಪ್ರಿಲ್ 1972ರಿಂದ ಜಾರಿಗೆ ಬಂದಿತು.

- ಸಂವಿಧಾನದ 39(ಎ) & 39(ಬಿ) ಉಪವಿಧಿಗಳ ರಾಜ್ಯನೀತಿ ನಿರ್ದೇಶಕ ತತ್ವಗಳ ಅನುಷ್ಠಾನದ ಸಂದರ್ಭದಲ್ಲಿ ಸಂವಿಧಾನದ 14 ವಿಧಿಯು ಕಾನೂನು ಎದುರು ಸಮಾನತೆ 19ನೇ ವಿಧಿಯ ಷಟ್ ಸ್ವಾತಂತ್ರ್ಯ ಹಕ್ಕು ಹಾಗೂ 31ನೇ ವಿಧಿಯ ಆಸ್ತಿಯ ಹಕ್ಕುಗಳು ಮೊಟಕುಗೊಂಡರೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಎಂದು ಮಾಡಲಾಯಿತು.

## 26. ಸಂವಿಧಾನದ 42ನೇ ತಿದ್ದುಪಡಿ ಕಾಯ್ದೆ – 1976 :

ಸಂವಿಧಾನದ 42ನೇ ತಿದ್ದುಪಡಿ ಕಾಯ್ದೆಯು 18 ಡಿಸೆಂಬರ್ 1976ರಿಂದ ಜಾರಿಗೆ ಬಂದಿತು.

- ಸಂವಿಧಾನದ ಪ್ರಸ್ತಾವನೆ ತಿದ್ದುಪಡಿ ಮಾಡಿ ಸಮಾಜವಾದಿ, ಜಾತ್ಯತೀತ ಹಾಗೂ ಅಖಂಡತೆ ಎಂಬ ಪದಗಳನ್ನು ಪ್ರಸ್ತಾವನೆಗೆ ಸೇರಿಸಲಾಯಿತು.

GNANADHAREIAS KAS ACADEMY

- ಸಂವಿಧಾನದ 31ನೇ ವಿಧಿಗೆ ಉಪ ಶೀರ್ಷಿಕೆಯಾಗಿ ಕೆಲವು ಕಾನೂನುಗಳನ್ನು ಉಳಿಸುವುದು. “Savings of certain Laws” ಎಂಬುದನ್ನು ಸೇರಿಸಲಾಯಿತು.
- ಸಂವಿಧಾನವು 31 ವಿಧಿಯಲ್ಲಿನ 39(ಎ)(ಬಿ) ವಿಧಿಗಳ ಬದಲಾಗಿ 4ನೇ ಭಾಗದಲ್ಲಿ ವಿವರಿಸಲಾದ ಎಲ್ಲ ರಾಜ್ಯ ನಿರ್ದೇಶಕ ತತ್ವಗಳು ಅಥವಾ ಆ ಪೈಕಿ ಯಾವುದೇ ತತ್ವ ಸೇರಿಸಿ ರಾಜ್ಯ ನಿರ್ದೇಶಕ ತತ್ವಗಳ ಅನುಷ್ಠಾನಕ್ಕೆ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿದರೂ ನ್ಯಾಯಾಲಯದಲ್ಲಿ ಪ್ರಶ್ನಿಸುವುದನ್ನು ತಡೆಯಲಾಯಿತು. ಇದರಿಂದ ಮೂಲಭೂತ ಹಕ್ಕುಗಳಿಗಿಂತ ರಾಜ್ಯ ನಿರ್ದೇಶಕ ತತ್ವಗಳಿಗೆ ಹೆಚ್ಚಿನ ಮಹತ್ವ ದೊರೆಯಿತು.
- ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಉಳಿಸಲು 31ಡಿ ವಿಧಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.
- ಸಂವಿಧಾನಕ್ಕೆ 3ನೇ 32ಎ ವಿಧಿಯನ್ನು ಸೇರಿಸಿ ಸಂವಿಧಾನಾತ್ಮಕ ಪರಿಹಾರದ ಹಕ್ಕಿನ ಮೂಲಕ ರಾಜ್ಯದ ಕಾನೂನುಗಳ ಸಂವಿಧಾನಾತ್ಮಕ ಸಿಂಧೂತ್ವವನ್ನು ಪರಾಮರ್ಶಿಸತಕ್ಕದ್ದಲ್ಲ ಎಂದು ಮಾಡಲಾಯಿತು.
- ಸಂವಿಧಾನದ ಭಾಗಕ್ಕೆ 39(ಎಫ್) ವಿಧಿಗೆ ತಿದ್ದುಪಡಿ ಮಾಡಲಾಗಿ ಆರೋಗ್ಯಕರವಾದ ರೀತಿಯಲ್ಲಿ & ಸ್ವಾತಂತ್ರ್ಯ ಹಾಗೂ ಒಳ್ಳೆಯ ವಾತಾವರಣದಲ್ಲಿ ಅಭಿವೃದ್ಧಿ ಹೊಂದಲು ಮಕ್ಕಳಿಗೆ ಅವಕಾಶವನ್ನು ನೀಡಿ ಬಾಲಕರಿಗೆ ಹಾಗೂ ಯುವಕರಿಗೆ ಶೋಷಣೆಯ & ನೈತಿಕ ಹಾಗೂ ಐಹಿಕ ಪತನದ ವಿರುದ್ಧ ಸಂರಕ್ಷಣೆ ಒದಗಿಸಲು ರಾಜ್ಯ ಕ್ರಮಕೈಗೊಳ್ಳುವಂತೆ ನಿರ್ದೇಶಿಸಲಾಯಿತು.
- ಸಂವಿಧಾನಕ್ಕೆ 39ಎ ವಿಧಿಯನ್ನು ಸೇರಿಸಿ ಸಮಾನ ನ್ಯಾಯ & ಉಚಿತ ಕಾನೂನು ನೆರವಿನ ಅವಕಾಶವನ್ನು ಒದಗಿಸಲಾಯಿತು.
- ಸಂವಿಧಾನಕ್ಕೆ 43ಎ ವಿಧಿಯನ್ನು ಸೇರಿಸಿ ರಾಜ್ಯವು ಸೂಕ್ತ ಕಾನೂನು ರಚಿಸುವ ಮೂಲಕ ಕೈಗಾರಿಕೆಗಳ ಆಡಳಿತ ವ್ಯವಸ್ಥೆಯಲ್ಲಿ ಕೆಲಸಗಾರರು ಭಾಗವಹಿಸುವುದನ್ನು ಖಾತರಿಪಡಿಸುವುದಕ್ಕಾಗಿ ಕ್ರಮಕೈಗೊಳ್ಳುವಂತೆ ನಿರ್ದೇಶಿಸಲಾಯಿತು.
- ಸಂವಿಧಾನಕ್ಕೆ 43ಎ ವಿಧಿಯನ್ನು ಸೇರಿಸಿ ರಾಜ್ಯವು ದೇಶದ ಪರಿಸರವನ್ನು ಸಂರಕ್ಷಿಸಲು & ಸುಧಾರಿಸಲು ಹಾಗೂ ಅರಣ್ಯ & ವನ್ಯಜೀವಿಗಳನ್ನು ರಕ್ಷಿಸಲು ಪ್ರಯತ್ನಿಸತಕ್ಕದ್ದೆಂದು ಮಾಡಲಾಯಿತು.
- ಸ್ವರ್ಣಸಿಂಗ್ ಕಮಿಟಿಯ ಶಿಫಾರಿಸ್ಸಿನ ಆಧಾರದ ಮೇಲೆ ಸಂವಿಧಾನಕ್ಕೆ 4ಎ ಭಾಗವನ್ನು ಸೇರಿಸಿ ಪ್ರಜೆಗಳು ಪಾಲಿಸಬೇಕಾದ 10 ಮೂಲಭೂತ ಕರ್ತವ್ಯಗಳನ್ನು ಅದರಲ್ಲಿ ಅಳವಡಿಸಲಾಯಿತು.

- ಸಂವಿಧಾನದ 74ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ರಾಷ್ಟ್ರಪತಿಯು ತನ್ನ ಕಾರ್ಯಗಳನ್ನು ನಿರ್ವಹಿಸುವಾಗ ಮಂತ್ರಿಮಂಡಲದ ಸಲಹೆಗನುಸಾರವಾಗಿ ಕಾರ್ಯ ನಿರ್ವಹಿಸಬೇಕು ಎಂದು ಮಾಡಲಾಯಿತು.
- 312 ವಿಧಿಗೆ ತಿದ್ದುಪಡಿ ಮಾಡಿ ಅಖಿಲ ಭಾರತ ಸೇವೆಗಳಲ್ಲಿ ಅಖಿಲ ಭಾರತ ನ್ಯಾಯಿಕ ಸೇವೆಗಳನ್ನು ಸೃಷ್ಟಿ ಮಾಡಬಯಸುವ ಅಧಿಕಾರವನ್ನು ರಾಜ್ಯಸಭೆಗೆ ನೀಡಲಾಯಿತು.

## 27. ಸಂವಿಧಾನದ 44ನೇ ತಿದ್ದುಪಡಿ ಕಾಯ್ದೆ – 1978 :

ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಾಡಿದ 42ನೇ ತಿದ್ದುಪಡಿಯಿಂದ ಸಂವಿಧಾನದಲ್ಲಿ ಮಾಡಿದ ಬದಲಾವಣೆಯನ್ನು ಸಂವಿಧಾನದಿಂದ ತೆಗೆದುಹಾಕಲು ಮುರಾರ್ಜಿ ದೇಸಾಯಿ ಜನತಾ ಸರ್ಕಾರ 1978ರಲ್ಲಿ ಸಂವಿಧಾನದ 44ನೇ ತಿದ್ದುಪಡಿ ಮಾಡಿತು.

- ಸಂವಿಧಾನದ 19(1)(ಎಫ್) ಉಪವಿಧಿಯಲ್ಲಿನ ಆಸ್ತಿಯನ್ನು ಸಂಪಾದಿಸುವ, ಹೊಂದುವ ಹಾಗೂ ಪರಬಾರೆ ಮಾಡುವ ಸ್ವಾತಂತ್ರ್ಯವನ್ನು ಸಂವಿಧಾನದಿಂದ ತೆಗೆದಹಾಕಲಾಯಿತು.
- ಸಂವಿಧಾನದ 30ನೇ ವಿಧಿಗೆ(1ಎ) ಉಪವಿಧಿಯನ್ನು ಸೇರಿಸುವ ಮೂಲಕ ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿದ & ಆಡಳಿತ ನಡೆಸುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯ ಆಸ್ತಿಯನ್ನು ಕಡ್ಡಾಯವಾಗಿ ವಶಪಡಿಸಿಕೊಳ್ಳುವ ಯಾವುದೇ ಕಾನೂನನ್ನು ಮಾಡುವಾಗ ರಾಜ್ಯವು ಕಾನೂನಿನ ಮೂಲಕ ನಿರ್ಧರಿಸಿದ ಮೊತ್ತವನ್ನು 30(1) ರ ಮೇರೆಗೆ ಖಾತ್ರಿಗೊಳಿಸಿದ ಹಕ್ಕನ್ನು ನಿರ್ಬಂಧಿಸುವುದಿಲ್ಲವೆಂದು ಅಥವಾ ರದ್ದುಪಡಿಸುವುದಿಲ್ಲ ಎಂದು ಪ್ರಮಾಣೀಕರಿಸಬೇಕು.
- 31ನೇ ವಿಧಿಯು ಆಸ್ತಿಯ ಹಕ್ಕನ್ನು ಸಂವಿಧಾನದಿಂದ ತೆಗೆದು ಹಾಕಿ 300ಎ ವಿಧಿಯನ್ನು ಸಂವಿಧಾನಕ್ಕೆ ಸೇರಿಸಿದಾಗ ಕಾನೂನಿನ ಅಧಿಕಾರವಿಲ್ಲದೇ ವ್ಯಕ್ತಿಗಳ ಸ್ವತ್ತನ್ನು ಕಸಿದುಕೊಳ್ಳುವಂತಿಲ್ಲ ಎಂದು ಆಸ್ತಿಯ ಹಕ್ಕನ್ನು ಕಾನೂನು ಬದ್ಧ ಹಕ್ಕನ್ನಾಗಿಸಲಾಯಿತು.
- ಸಂವಿಧಾನದ 38ನೇ ವಿಧಿಗೆ (2)ನೇ ಉಪವಿಧಿಯನ್ನು ಸೇರಿಸಿ, ರಾಜ್ಯವು ವ್ಯಕ್ತಿ, ವ್ಯಕ್ತಿಗಳಲ್ಲಿ ಮಾತ್ರವಲ್ಲದೇ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವ ಜನರ ಸಮೂಹಗಳ ಸ್ಥಾನಮಾನ, ಸೌಲಭ್ಯ & ಅವಕಾಶಗಳಲ್ಲಿರುವ ಅಸಮಾನತೆಯನ್ನು ತೆಗೆದು ಹಾಕಲು ಪ್ರಯತ್ನಿಸತಕ್ಕದ್ದು ಅದರಲ್ಲೂ ವಿಶೇಷವಾಗಿ ಆದಾಯದಲ್ಲಿನ ಅಸಮಾನತೆಯನ್ನು ಕಡಿಮೆ ಮಾಡಲು ಪ್ರಯತ್ನಿಸತಕ್ಕದ್ದು.
- ರಾಷ್ಟ್ರಪತಿ ಅಥವಾ ಉಪರಾಷ್ಟ್ರಪತಿ ಚುನಾವಣೆಗೆ ಸಂಬಂಧಿಸಿದಂತೆ 71ನೇ ವಿಧಿಗೆ ತಿದ್ದುಪಡಿ ಮಾಡಲಾಯಿತು

GNANADHARE IAS KAS ACADEMY

- ಸಂವಿಧಾನದ 374ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ಮಂತ್ರಿಮಂಡಲ ನೀಡಿದ ಸಲಹೆಯನ್ನು ಪುನರ್ ಪರಿಶೀಲಿಸುವಂತೆ ರಾಷ್ಟ್ರಪತಿಯವರು ಒತ್ತಾಯ ಪಡಿಸಬಹುದು & ಅಂತರ್ ಪುನರ್ ಪರಿಶೀಲನೆಯ ತರುವಾಯ ನೀಡಿದ ಸಲಹೆಗೆ ಅನುಸಾರವಾಗಿ ರಾಷ್ಟ್ರಪತಿಯವರು ಕಾರ್ಯ ನಿರ್ವಹಿಸತಕ್ಕದ್ದೆಂದು ಮಾಡಲಾಯಿತು.
- ಸಂವಿಧಾನದ 352ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ರಾಷ್ಟ್ರಪತಿಯವರು ಘೋಷಿಸುವ ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿನ "ಆಂತರಿಕ ಅಶಾಂತಿಯಿಂದ" ಎಂಬುದರ ಬದಲಾಗಿ ದೇಶದ ಯಾವುದೇ ಭಾಗದಲ್ಲಿ "ಸಶಸ್ತ್ರ ದಂಗೆ" ಯಿಂದ ಎಂಬ ಪದವನ್ನು ಸೇರಿಸಲಾಯಿತು. ಇದನ್ನು ರಾಷ್ಟ್ರೀಯ ತುರ್ತು ಪರಿಸ್ಥಿತಿಯ ದುರುಪಯೋಗವಾಗುವುದನ್ನು ತಡೆಯಲು ಸೇರಿಸಲಾಯಿತು.
- ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಘೋಷಣೆಯ ಸಂದರ್ಭದಲ್ಲಿ ಸಂವಿಧಾನದ 20 & 21ನೇ ವಿಧಿಯ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸದಂತೆ ಸಂವಿಧಾನದ 359(1ಎ) ವಿಧಿಗೆ ತಿದ್ದುಪಡಿ ಮಾಡಲಾಯಿತು.

## 28. ಸಂವಿಧಾನದ 45ನೇ ತಿದ್ದುಪಡಿ ಕಾಯ್ದೆ – 1980 :

ಸಂವಿಧಾನದ 334ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ಲೋಕಸಭೆ ಹಾಗೂ ರಾಜ್ಯವಿಧಾನ ಸಭೆಗಳಲ್ಲಿ ಮತ್ತೆ 10 ವರ್ಷಗಳ ಕಾಲ ಸ್ಥಾನಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬೇಕು. 30 ವರ್ಷಗಳು ಎಂಬ ಪದಗಳಿಗೆ ಬದಲಾಗಿ 40 ವರ್ಷಗಳು ಎಂಬ ಶಬ್ದವನ್ನು ಸೇರಿಸಲಾಯಿತು.

## 29. ಸಂವಿಧಾನದ 52ನೇ ತಿದ್ದುಪಡಿ ಕಾಯ್ದೆ – 1985 :

ಸಂವಿಧಾನದ 52ನೇ ತಿದ್ದುಪಡಿ ಕಾಯ್ದೆಯು 01 ಮಾರ್ಚ್ 1985ರಿಂದ ಜಾರಿಗೆ ಬಂದಿತು.

- ಸಂಸತ್ತಿನ ಸದಸ್ಯರ ಅನರ್ಹತೆಗೆ ಸಂಬಂಧಿಸಿದ ಸಂವಿಧಾನದ 101(3)(ಎ) ಉಪವಿಧಿ, 102ನೇ ವಿಧಿ ಹಾಗೂ ರಾಜ್ಯವಿಧಾನ ಮಂಡಳದ ಸದಸ್ಯರ ಅನರ್ಹತೆಗೆ ಸಂಬಂಧಿಸಿದ 190(3)(ಎ) & 191ನೇ ವಿಧಿಗಳಿಗೆ ತಿದ್ದುಪಡಿ ಮಾಡಲಾಗಿ ಸಂವಿಧಾನಕ್ಕೆ 102(2) ಹಾಗೂ 191(2) ನೇ ಉಪವಿಧಿಗಳನ್ನು ಸೇರಿಸುವುದರೊಂದಿಗೆ ಪಕ್ಷಾಂತರ ಕಾರಣದಿಂದ ಉಂಟಾಗುವ ಅನರ್ಹತೆಗೆ ಸಂಬಂಧಿಸಿ ಉಪಬಂಧಗಳನ್ನೊಳಗೊಂಡ 10ನೇ ಅನುಸೂಚಿಯನ್ನು ಸಂವಿಧಾನಕ್ಕೆ ಸೇರ್ಪಡೆ ಮಾಡಲಾಯಿತು

GNANADHARE IAS KAS ACADEMY

## 30. ಸಂವಿಧಾನದ 53ನೇ ತಿದ್ದುಪಡಿ ಕಾಯ್ದೆ – 1986 :

ಸಂವಿಧಾನದ 53ನೇ ತಿದ್ದುಪಡಿ ಕಾಯ್ದೆಯು 14 ಆಗಸ್ಟ್ 1986ರಿಂದ ಜಾರಿಗೆ ಬಂದಿತು.

- ಸಂವಿಧಾನಕ್ಕೆ 371 ಜಿ ವಿಧಿಯನ್ನು ಸೇರಿಸಿ ಮಿಜೋರಾಂ ರಾಜ್ಯಕ್ಕೆ ವಿಶೇಷ ಸ್ಥಾನಮಾನವನ್ನು ನೀಡಲಾಯಿತು.
- ಮೀಜೋರಾಂ ರಾಜ್ಯದ ವಿಧಾನ ಸಭೆಯು ಒಂದು ನಿರ್ಣಯದ ಮೂಲಕ ತೀರ್ಮಾನಿಸದ ಹೊರತು ಸಂಸತ್ತಿನ ಯಾವುದೇ ಕಾಯ್ದೆಯು ಈ ಕೆಳಗಿನವುಗಳಿಗೆ ಅನ್ವಯಿಸುವುದಿಲ್ಲ.
    - ಮಿಜೋಗಳ ಧಾರ್ಮಿಕ ಅಥವಾ ಸಾಮಾಜಿಕ ಆಚರಣೆಗಳು
    - ಮಿಜೋ ರೂಢಿಜನ್ಯ ಕಾನೂನು & ಪ್ರಕ್ರಿಯೆ
    - ಮಿಜೋ ರೂಢಿಜನ್ಯ ಕಾನೂನಿಗೆ ಅನುಸಾರವಾಗಿ ಸಿವಿಲ್ & ಕ್ರಿಮಿನಲ್ ನ್ಯಾಯಾಡಳಿತ
    - ಭೂಮಿಯ ಒಡೆತನ ಹಾಗೂ ವರ್ಗಾವಣೆ
    - 371 ಜಿ ವಿಧಿಯನ್ವಯ ಮಿಜೋರಾಂ ರಾಜ್ಯದ ವಿಧಾನಸಭೆಯು 41ಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.

## 31. ಸಂವಿಧಾನದ 54ನೇ ತಿದ್ದುಪಡಿ ಕಾಯ್ದೆ – 1986 :

ಸಂವಿಧಾನದ 54ನೇ ತಿದ್ದುಪಡಿ ಕಾಯ್ದೆಯು 1 ಏಪ್ರಿಲ್ 1986ರಿಂದ ಜಾರಿಗೆ ಬಂದಿತು.

- ಸಂವಿಧಾನದ 125(1)ನೇ ಉಪವಿಧಿ ಹಾಗೂ 221(1)ನೇ ಉಪವಿಧಿಗಳಿಗೆ ತಿದ್ದುಪಡಿ ಮಾಡಿ ಸಂಸತ್ತು ಸೂಕ್ತ ಕಾನೂನು ಮಾಡುವುದರ ಮೂಲಕ ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ವೇತನ & ಭತ್ಯೆಗಳನ್ನು ಹೆಚ್ಚಿಸುವ ಅಧಿಕಾರವನ್ನು ನೀಡಲಾಯಿತು. ಹಾಗೂ 2ನೇ ಅನುಸೂಚಿಯ ಡಿ ಭಾಗಕ್ಕೆ ತಿದ್ದುಪಡಿ ಮಾಡಲಾಯಿತು.

## 32. ಸಂವಿಧಾನದ 55ನೇ ತಿದ್ದುಪಡಿ ಕಾಯ್ದೆ – 1986 :

ಸಂವಿಧಾನದ 52ನೇ ತಿದ್ದುಪಡಿ ಕಾಯ್ದೆಯು 20 ಫೆಬ್ರವರಿ 1987ರಿಂದ ಜಾರಿಗೆ ಬಂದಿತು.

- ಸಂವಿಧಾನಕ್ಕೆ 371ಹೆಚ್ ವಿಧಿಯನ್ನು ಸೇರಿಸಿ ಅರುಣಾಚಲ ಪ್ರದೇಶಕ್ಕೆ ವಿಶೇಷ ಸ್ಥಾನಮಾನವನ್ನು ನೀಡಲಾಯಿತು. ಕಾನೂನು ಸುವ್ಯವಸ್ಥೆ ಕಾಪಾಡಲು ಅರುಣಾಚಲ ಪ್ರದೇಶದ ರಾಜ್ಯಪಾಲರಿಗೆ ವಿಶೇಷ ಜವಾಬ್ದಾರಿಗಳನ್ನು ನೀಡಲಾಯಿತು.

GNANADHARE IAS KAS ACADEMY

- ಅರುಣಾಚಲ ಪ್ರದೇಶ ರಾಜ್ಯದ ವಿಧಾನಸಭೆಯು 30ಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.

## 33. ಸಂವಿಧಾನದ 56ನೇ ತಿದ್ದುಪಡಿ ಕಾಯ್ದೆ – 1987 :

ಸಂವಿಧಾನದ 56ನೇ ತಿದ್ದುಪಡಿ ಕಾಯ್ದೆಯು 20 ಮೇ 1987 ರಿಂದ ಜಾರಿಗೆ ಬಂದಿತು.

- ಸಂವಿಧಾನಕ್ಕೆ 371 ಐ ವಿಧಿಯನ್ನು ಸೇರಿಸಿ ಗೋವಾ ರಾಜ್ಯ ವಿಧಾನಸಭೆಯು 30ಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.

## 34. ಸಂವಿಧಾನದ 57ನೇ ತಿದ್ದುಪಡಿ ಕಾಯ್ದೆ – 1987 :

ಸಂವಿಧಾನದ 332ನೇ ವಿಧಿಗೆ (3ಎ) ಉಪವಿಧಿಯನ್ನು ಸೇರಿಸಿ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಂ ಹಾಗೂ ನಾಗಾಲ್ಯಾಂಡ್ ರಾಜ್ಯ ವಿಧಾನಸಭೆಗಳಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳಲ್ಲಿ ಮೀಸಲಾತಿ ಅವಕಾಶವನ್ನು ಕಲ್ಪಿಸಲಾಯಿತು.

## 35. ಸಂವಿಧಾನದ 60ನೇ ತಿದ್ದುಪಡಿ ಕಾಯ್ದೆ – 1988 :

ಸಂವಿಧಾನದ 60ನೇ ತಿದ್ದುಪಡಿ ಕಾಯ್ದೆಯು 20 ಡಿಸೆಂಬರ್ 1988ರಿಂದ ಜಾರಿಗೆ ಬಂದಿತು.

- ಸಂವಿಧಾನಕ್ಕೆ 276(2)ನೇ ಉಪವಿಧಿಗೆ ತಿದ್ದುಪಡಿ ಮಾಡಿ ಸ್ಥಳೀಯ ಸಂಸ್ಥೆಗಳು ವೃತ್ತಿ, ವ್ಯಾಪಾರ & ಉದ್ಯೋಗಗಳ ಮೇಲೆ ವಿಧಿಸುವ ತೆರಿಗೆಗಳನ್ನು 500 ರೂ. ಗಳಿಂದ 2500 ರೂ.ಗಳಿಗೆ ಹೆಚ್ಚಿಸಲಾಯಿತು.

## 36. ಸಂವಿಧಾನದ 63ನೇ ತಿದ್ದುಪಡಿ ಕಾಯ್ದೆ – 1989:

ಸಂವಿಧಾನದ 356ನೇ ವಿಧಿಗೆ ತಿದ್ದುಪಡಿ ಮಾಡಲಾಗಿ 11 ಮೇ 1987ರಿಂದ ಮತ್ತೆ 6 ತಿಂಗಳವರೆಗೆ ಪಂಜಾಬನಲ್ಲಿ ರಾಷ್ಟ್ರಪತಿಯವರ ಆಡಳಿತವನ್ನು ಮುಂದುವರೆಸಲು ಅವಕಾಶ ನೀಡಲಾಯಿತು.

GNANADHARE IAS KAS ACADEMY

## 37. ಸಂವಿಧಾನದ 65ನೇ ತಿದ್ದುಪಡಿ ಕಾಯ್ದೆ 1990:

ಸಂವಿಧಾನದ 65ನೇ ತಿದ್ದುಪಡಿ ಕಾಯ್ದೆಯು 07 ಜೂನ್ 1990ರಿಂದ ಜಾರಿಗೆ ಬಂದಿತು.

- ಸಂವಿಧಾನದ 338ನೇ ವಿಧಿಗೆ ತಿದ್ದುಪಡಿ ಮಾಡಲಾಗಿ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ಸಲುವಾಗಿ ವಿಶೇಷ ಅಧಿಕಾರಿಯ ಬದಲಾಗಿ "ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು" ರಚಿಸಲು ಅವಕಾಶ ಮಾಡಿಕೊಡಲಾಯಿತು.

## 38. ಸಂವಿಧಾನದ 67ನೇ ತಿದ್ದುಪಡಿ ಕಾಯ್ದೆ – 1990 :

ಸಂವಿಧಾನದ 67ನೇ ತಿದ್ದುಪಡಿ ಕಾಯ್ದೆಯು 4 ಅಕ್ಟೊಬರ್ 1990ರಂದು ಜಾರಿಗೆ ಬಂದಿತು.

- ಸಂವಿಧಾನದ 356(4)ನೇ ಉಪವಿಧಿಗೆ ತಿದ್ದುಪಡಿ ಮಾಡಿ ಪಂಜಾಬ್‌ನಲ್ಲಿ ಸಂವಿಧಾನಾತ್ಮಕ ತುರ್ತುಪರಿಸ್ಥಿತಿಯ ಹೇರಿಕೆಯನ್ನು 3 ವರ್ಷ 6 ತಿಂಗಳಿನಿಂದ 4 ವರ್ಷದವರೆಗೆ ವಿಸ್ತರಿಸಲಾಯಿತು.

## 39. ಸಂವಿಧಾನದ 68ನೇ ತಿದ್ದುಪಡಿ ಕಾಯ್ದೆ 1991 :

ಸಂವಿಧಾನದ 68ನೇ ತಿದ್ದುಪಡಿ ಕಾಯ್ದೆಯು 12 ಮಾರ್ಚ್ 1991ರಿಂದ ಜಾರಿಗೆ ಬಂದಿತು.

- ಸಂವಿಧಾನದ 356(4)ನೇ ಉಪವಿಧಿಗೆ ತಿದ್ದುಪಡಿ ಮಾಡಿ ಪಂಜಾಬ್‌ನಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು 4 ರಿಂದ 5 ವರ್ಷದವರೆಗೆ ವಿಸ್ತರಿಸಲಾಯಿತು.

## 40. ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆ 1992 :

ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಯು 24 ಏಪ್ರಿಲ್ 1993ರಂದು ಜಾರಿಗೆ ಬಂದಿತು.

- "ಪಂಚಾಯಿತಿಗಳು" ಎಂಬ ಶೀರೋನಾಮೆಯ 9ನೇ ಭಾಗವನ್ನು ಸಂವಿಧಾನಕ್ಕೆ ಅಳವಡಿಸಿ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ನೀಡಲಾಯಿತು.
- 9ನೇ ಭಾಗದ 243–243(ಓ)ವರೆಗಿನ 16 ವಿಧಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ವಿವರಿಸಲಾಗಿದ್ದು ಸಂವಿಧಾನಕ್ಕೆ 11ನೆ ಅನುಸೂಚಿಯನ್ನು ಸೇರಿಸಿ ಪಂಚಾಯತಿಗಳಿಗೆ ಸಂಬಂಧಿಸಿದ 29 ವಿಷಯಗಳ ಅಧಿಕಾರದ ವಿವರಣೆಯನ್ನು ನೀಡಲಾಗಿದೆ.

GNANADHARE IAS KAS ACADEMY

| | |
|---|---|
| 243 ಎ | ಗ್ರಾಮಸಭೆಯ ರಚನೆ ಅಧಿಕಾರಿಗಳ ಬಗ್ಗೆ ವಿವರಣೆ |
| 243 ಬಿ | ಪಂಚಾಯಿತಿಗಳ ರಚನೆ :<br>• ಗ್ರಾಮ ಮಟ್ಟ – ಗ್ರಾಮ ಪಂಚಾಯಿತಿ<br>• ಮಧ್ಯಂತರ ಮಟ್ಟ – ತಾಲ್ಲೂಕು ಪಂಚಾಯಿತಿ<br>• ಜಿಲ್ಲಾ ಮಟ್ಟ – ಜಿಲ್ಲಾ ಪಂಚಾಯಿತಿ |
| 243 ಸಿ | ಪಂಚಾಯಿತಿಗಳ ಅಂಗರಚನೆ |
| 243 ಡಿ | ಪಂಚಾಯಿತಿಗಳ ಸ್ಥಾನಗಳಲ್ಲಿ ಮೀಸಲಾತಿ |
| 243 ಇ | ಪಂಚಾಯಿತಿಗಳ ಅಧಿಕಾರ ಅವಧಿ 5 ವರ್ಷಗಳು |
| 243 ಎಫ್ | ಪಂಚಾಯತ್ ಸದಸ್ಯರ ಅನರ್ಹತೆಗಳು |
| 243 ಜಿ | ಪಂಚಾಯಿತಿಗಳ ಅಧಿಕಾರಿಗಳು, ಪ್ರಾಧಿಕಾರ & ಜವಾಬ್ದಾರಿಗಳು |
| 243 ಹೆಚ್ | ತೆರಿಗೆಗಳನ್ನು ವಿಧಿಸುವ ಪಂಚಾಯಿತಿಗಳ ಅಧಿಕಾರಿಗಳು & ನಿಧಿಗಳು |
| 243 ಐ | ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಸಲು ರಾಜ್ಯ ಹಣಕಾಸು ಆಯೋಗದ ರಚನೆ |
| 243 ಜೆ | ಪಂಚಾಯಿತಿಗಳ ಲೆಕ್ಕಪತ್ರಗಳ ಪರಿಶೋಧನೆ |
| 243 ಕೆ | ಪಂಚಾಯಿತಿಗಳಿಗೆ ಚುನಾವಣೆಗಳು |
| 243 ಎಲ್ | ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕೇಂದ್ರಾಡಳಿತ ಪ್ರದೇಶಕ್ಕೂ ವಿಸ್ತರಿಸುವ ರಾಷ್ಟ್ರಪತಿಯವರ ಅಧಿಕಾರ |
| 243 ಎಂ | ನಾಗಾಲ್ಯಾಂಡ್, ಮೇಘಾಲಯ, ಮಿಜೋರಾಂ, ಮಣಿಪುರ, ರಾಜ್ಯದ ಗುಡ್ಡಗಾಡು ಪ್ರದೇಶ, ಪಶ್ಚಿಮ ಬಂಗಾಳದಲ್ಲಿನ ಡಾರ್ಜಲಿಂಗ್ ಜಿಲ್ಲಾ ಗುಡ್ಡಗಾಡು ಪ್ರದೇಶಗಳಿಗೆ ಸಂವಿಧಾನದ 10ನೇ ಭಾಗ ಅನ್ವಯಿಸುವುದಿಲ್ಲ. |
| 243 ಎನ್ | 1992ರ ಮುಂಚೆ ಜಾರಿಯಲ್ಲಿರುವ ಕಾನೂನುಗಳನ್ನು & ಅಸ್ತಿತ್ವದಲ್ಲಿರುವ ಪಂಚಾಯಿತಿಗಳನ್ನು ಮುಂದುವರೆಸುವುದು. |
| 243 ಓ | ಪಂಚಾಯತ್ ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯ ಪ್ರವೇಶಿಸುವುದರ ನಿಷೇಧ |

## 41. ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ 1992 :

ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆಯು 1 ಜೂನ್ 1993ರಂದು ಜಾರಿಗೆ ಬಂದಿತು.

- "ಪೌರಸಭೆಗಳು" ಎಂಬ ಶಿರೋನಾಮೆಯ 10ನೇ ಭಾಗವನ್ನು ಸಂವಿಧಾನಕ್ಕೆ ಸೇರಿಸಿ, ನಗರ, ಸ್ಥಳಿಯ ಸರ್ಕಾರಗಳ ಪೌರ ಸಭೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನಗಳನ್ನು ಒದಗಿಸಲಾಯಿತು.
- ನಗರ ಪಾಲಿಕೆಗಳ ವ್ಯವಸ್ಥೆಗಾಗಿ ಸಂವಿಧಾನಕ್ಕೆ 12ನೇ ಅನುಸೂಚಿಯನ್ನು ಸೇರಿಸಲಾಯಿತು. 12ನೇ ಅನುಸೂಚಿಯು ಪೌರಸಭೆಗಳ ವ್ಯಾಪ್ತಿಯ 18 ವಿಷಯಗಳ ಬಗ್ಗೆ ವಿವರಣೆ ಹೊಂದಿದೆ
- ಸಂವಿಧಾನದ 243ಪಿ–243ಝುಡ್‌ಜಿ ವರೆಗಿನ 18 ವಿಧಿಗಳಲ್ಲಿ ಮುನ್ಸಿಪಲ್ ಸಂಸ್ಥೆಯ ಬಗ್ಗೆ ವಿವರಣೆ ಹೊಂದಿದೆ.

| ಅನುಚ್ಛೇದಗಳು | ವಿವರಣೆ |
|---|---|
| 243 ಪಿ | ಮುನಿಸಿಪಲ್ ಪ್ರದೇಶ, ಮುನಿಸಿಪಾಲಿಟಿ, ಮೆಟ್ರೋಪಾಲಿಟನ್ ಪ್ರದೇಶ ಮುಂತಾದ ಪದಗಳ ಅರ್ಥವನ್ನು ತಿಳಿಸಿತ್ತದೆ. |
| 243 ಕ್ಯೂ | ಪ್ರತಿಯೊಂದು ರಾಜ್ಯದಲ್ಲಿ ಕೆಳಗಿನವುಗಳು ರಚನೆಯಾಗಬೇಕು<br>• ನಗರ ಪಂಚಾಯ್ತಿ<br>• ಮುನಿಸಿಪಲ್ ಕೌನ್ಸಿಲ್<br>• ನಗರಪಾಲಿಕೆ |
| 243 ಆರ್ | ಮುನಿಸಿಪಲ್ ಸರ್ಕಾರಗಳ ಪ್ರತಿನಿಧಿಗಳು ವಾರ್ಡ್‌ಗಳಿಂದ ನೇರವಾಗಿ ಆಯ್ಕೆಯಾಗಬೇಕು. ಇತರ ಕೆಲವರು ಸದಸ್ಯರು ಸದಸ್ಯರಾಗಲು ರಾಜ್ಯಶಾಸಕಾಂಗ ಕಾನೂನು ಮಾಡಬಹುದು. ಮುನಿಸಿಪಲ್ ಆಡಳಿತದ ಬಗ್ಗೆ ಜ್ಞಾನ ಅಥವಾ ಅನುಭವ ಹೊಂದಿರುವ ವ್ಯಕ್ತಿಗಳನ್ನು ಮುನಿಸಿಪಲ್ ಸರ್ಕಾರಗಳ ಸದಸ್ಯರನ್ನಾಗಿ ಮಾಡಬಹುದು. ಆದರೆ ಇವರಿಗೆ ಮತದಾನ ಹಕ್ಕು ಇರುವುದಿಲ್ಲ. ಗ್ರಾಮೀಣ ಸರ್ಕಾರಗಳಲ್ಲಿರುವಂತೆ, ನಗರ ಪ್ರದೇಶ ಸರ್ಕಾರಗಳಲ್ಲೂ ಸಂಬಂಧಪಟ್ಟ ಸಂಸತ್ ಹಾಗೂ ರಾಜ್ಯ ಶಾಸಕಾಂಗದ ಸದಸ್ಯರು ಪ್ರಾತಿನಿಧ್ಯತೆ ಪಡೆಯಲು ಅವಕಾಶದವಿದೆ. ಮುನಿಸಿ ಪಾಲಿಟಿ ಅಧ್ಯಕ್ಷನ ಆಯ್ಕೆ ವಿಧಾನವನ್ನು ರಾಜ್ಯ ಶಾಸಕಾಂಗ ನಿರ್ಧರಿಸುತ್ತದೆ. |
| 243 ಎಸ್ | ವಾರ್ಡ್ ಕಮಿಟಿಗಳ ರಚನೆ ಬಗ್ಗೆ ತಿಳಿಸುತ್ತದೆ. |
| 243 ಟಿ | ಗ್ರಾಮೀಣ ಸರ್ಕಾರಗಳಲ್ಲಿರುವಂತೆ ಇಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆಯರು ಹಾಗೂ ಹಿಂದುಳಿದವರಿಗೆ ಸದಸ್ಯ ಸ್ಥಾನಗಳನ್ನು & ಅಧ್ಯಕ್ಷ ಸ್ಥಾನಗಳನ್ನು ಮೀಸಲಿಡಲು ರಾಜ್ಯಕ್ಕೆ ಅಧಿಕಾರವಿದೆ. |

GNANADHARE IAS KAS ACADEMY

| | |
|---|---|
| 243 ಯು | ಮೊದಲನೇ ಸಭೆ ಸೇರಿದ ದಿನದಿಂದ 5 ವರ್ಷಗಳು ಇವುಗಳ ಅಧಿಕಾರ ಅವಧಿ. ಇವುಗಳ ಅವಧಿ ಮುಗಿಯುವುದಕ್ಕೆ ಮುಂಚೆ ರಚಿಸಬೇಕು & ವಿಸರ್ಜನೆಯಾದರೆ 6 ತಿಂಗಳೊಳಗೆ ಚುನಾವಣೆ ನಡೆಸಬೇಕು. |
| 243 ವಿ | ಸದಸ್ಯರ ಅನರ್ಹತೆ ಬಗ್ಗೆ ತಿಳಿಸುತ್ತದೆ. ಸದಸ್ಯರಿಗೆ 21 ವರ್ಷ ತುಂಬಿದರೆ ಅನರ್ಹತೆಗೊಳಿಸುವಂತಿಲ್ಲ. |
| 243 ಡಬ್ಲ್ಯೂ | ಸರ್ಕಾರಗಳ ಅಧಿಕಾರಗಳು ಹಾಗೂ ಜವಾಬ್ದಾರಿಗಳನ್ನು ನಮೂದಿಸಲಾಗಿದೆ. ಗ್ರಾಮೀಣ ಸರ್ಕಾರಗಳಂತೆ ಇವುಗಳೂ ಆರ್ಥಿಕ ಪ್ರಗತಿಗೆ & ಸಾಮಾಜಿಕ ನ್ಯಾಯಕ್ಕೆ ಯೋಜನೆಗಳನ್ನು ಜಾರಿಗೆ ತರಬೇಕು.<br>ನಗರ ಪ್ರದೇಶಗಳ ಯೋಜನೆ<br>ಭೂ ಬಳಕೆ ಹಾಗೂ ಕಟ್ಟಡಗಳ ಬಗ್ಗೆ ನಿಯಂತ್ರಣ<br>ಆರ್ಥಿಕ & ಸಾಮಾಜಿಕ ಅಭಿವೃದ್ದಿಗೆ ಯೋಜನೆ<br>ರಸ್ತೆಗಳು & ಸೇತುವೆಗಳು |
| 243 ಎಕ್ಸ್ | ತೆರಿಗೆ ವಿಧಿಸುವ ಅಧಿಕಾರ & ಸರ್ಕಾರದ ಅನುದಾನದ ಬಗ್ಗೆ ತಿಳಿಸುತ್ತದೆ |
| 243 ವೈ | ರಾಜ್ಯದ ಹಣಕಾಸು ಆಯೋಗ ಈ ಸ್ಥಳಿಯ ಸರ್ಕಾರ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಿ, ಬೇಕಾದ ಶಿಫಾರಸುಗಳನ್ನು ಮಾಡುವುದು |
| 243 ಝಡ್ | ಲೆಕ್ಕ ಪರಿಶೋಧನೆಗೆ ಸಂಬಂಧಿಸಿದ್ದು |
| 243 ಝಡ್ಎ | ಚುನಾವಣೆಗಳನ್ನು ನಡೆಸುವ ಹಾಗೂ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗಕ್ಕೆ ಇದೆ. |
| 243 ಝಡ್ಬಿ | ಸಂವಿಧಾನದ IXA ಭಾಗ ಕೇಂದ್ರಾಡಳಿತ ಪ್ರದೇಶಗಳಿಗೂ ಅನ್ವಯಿಸುತ್ತದೆ. |
| 243 ಝಡ್ಸಿ | ಸಂವಿಧಾನದ 244ನೇ ವಿಧಿಯಲ್ಲಿ ತಿಳಿಸಿರುವ ಅನುಸೂಚಿತ & ಬುಡಕಟ್ಟು ಪ್ರದೇಶಗಳಿಗೆ IXA ಭಾಗ ಅನ್ವಯವಾಗುವುದಿಲ್ಲ. |
| 243 ಝಡ್ಡಿ | ಜಿಲ್ಲಾ ಯೋಜನಾ ಸಮಿತಿ ರಚನೆ ಬಗ್ಗೆ ತಿಳಿಸುತ್ತದೆ. ಈ ಸಮಿತಿಯ ಅಧ್ಯಕ್ಷ ಇದು ಸಿದ್ದಪಡಿಸಿದ ಅಭಿವೃದ್ಧಿ ಯೋಜನೆಯನ್ನು ರಾಜ್ಯಸರ್ಕಾರಕ್ಕೆ ಒಪ್ಪಿಸಬೇಕು |
| 243 ಝಡ್ಇ | ಪ್ರತಿಯೊಂದು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ಒಂದು ಮೆಟ್ರೋಪಾಲಿಟನ್ ಯೋಜನಾ ಸಮಿತಿ ಇರಬೇಕು. ಇದು ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯಸರ್ಕಾರಕ್ಕೆ ಒಪ್ಪಿಸಬೇಕು. ಈ ಎರಡೂ ಸಮಿತಿಗಳ ರಚನೆ ಬಗ್ಗೆ ಶಾಸಕಾಂಗ ಕಾನೂನು ಮಾಡುತ್ತದೆ. |
| 243 ಝಡ್ಎಫ್ | ಅಸ್ತಿತ್ವದಲ್ಲಿರುವ ಕಾನೂನುಗಳನ್ನು 1 ವರ್ಷದವರೆಗೆ ಮುಂದುವರೆಸಬಹುದು |
| 243 ಝಡ್ಜಿ | ಚುನಾವಣಾ ತಕರಾರು ಅರ್ಜಿಗಳನ್ನು ರಾಜ್ಯಸರ್ಕಾರ ಸ್ಥಾಪಿಸಿದ ಪ್ರಾಧಿಕಾರದಲ್ಲಿ ಪ್ರಶ್ನಿಸಬಹುದು. |

## ಉಪಸಂಹಾರ :

ಪಂಚಾಯತ್‌ರಾಜ್ ಪದ್ಧತಿ ಅಸ್ತಿತ್ವಕ್ಕೆ ಬಂದ ಮೇಲೆ ದೇಶದಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳುತ್ತಿದೆ & ಪ್ರಜೆಗಳು ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಪಿ.ಡಿ.ಓ.ಗಳ ಜೊತೆ ಸಹಕರಿಸಿ ಗ್ರಾಮೀಣ ಅಭಿವೃದ್ಧಿಗೆ ಶ್ರಮಿಸಬೇಕು. ನಗರ ಪ್ರದೇಶ ಸರ್ಕಾರಗಳೂ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಸಂವಿಧಾನದ 74ನೇ ತಿದ್ದುಪಡಿ ಇವುಗಳ ಬಲವರ್ಧನೆ ಪೂರಕವಾಗಿದ್ದರೂ, ವಿವಿಧ ರಾಜ್ಯಗಳಲ್ಲಿ ಗೊಂದಲಗಳು & ದೋಷಗಳು ಉಂಟಾಗಿವೆ. ಇತ್ತೀಚಿನ ವರ್ಷಗಳಲ್ಲಿ ನಗರೀಕರಣ ಹೆಚುತ್ತಿದೆ. ಇದರಿಂದಾಗಿ ಜನಸಂಖ್ಯೆಯ ಹೆಚ್ಚಳ & ಮೂಲಭೂತ ಸೌಕರ್ಯಗಳ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. 2050ರ ವೇಳೆಗೆ ಶೇ.50ರಷ್ಟು ಜನಸಂಖ್ಯೆ ನಗರಗಳಲ್ಲಿ ವಾಸಿಸುವರೆಂದು ಅಂದಾಜು ಮಾಡಲಾಗಿದೆ.

## 42. ಸಂವಿಧಾನದ 83ನೇ ತಿದ್ದುಪಡಿ ಕಾಯ್ದೆ 2000 :

ಸಂವಿಧಾನದ 83ನೇ ತಿದ್ದುಪಡಿ ಕಾಯ್ದೆಯು 8 ಸೆಪ್ಟಂಬರ್ 2000ರಂದು ಜಾರಿಗೆ ಬಂದಿತು.

- ಸಂವಿಧಾನದ 335ನೇ ವಿಧಿಗೆ ತಿದ್ದುಪಡಿ ಮಾಡಿ ಈ ಕೆಳಗಿನ ಅಂಶವನ್ನು ಸೇರಿಸಲಾಯಿತು. ಕೇಂದ್ರ ಅಥವಾ ರಾಜ್ಯ ಸೇವೆಯ ನೌಕರ ಬಡ್ತಿ ವಿಷಯದಲ್ಲಿ ಮೀಸಲಾತಿಗಾಗಿ ಅನುಸೂಚಿತ ಜಾತಿಗಳ & ಅನುಸೂಚಿತ ಪಂಗಡಗಳ ಅನುಕೂಲಕ್ಕಾಗಿ ಯಾವುದೇ ಪರೀಕ್ಷೆಯಲ್ಲಿ ಅರ್ಹತಾದಾಯಕ ಅಂಕಗಳನ್ನು ಸಡಿಲಗೊಳಿಸಬಹುದು ಅಥವಾ ಮೌಲ್ಯಮಾಪನ ಮಟ್ಟವನ್ನು ಕಡಿಮೆಗೊಳಿಸಬಹುದು.

## 43. ಸಂವಿಧಾನದ 86ನೇ ತಿದ್ದುಪಡಿ ಕಾಯ್ದೆ 2002 :

ಸಂವಿಧಾನಕ್ಕೆ 21ಎ ವಿಧಿಯನ್ನು ಸೇರಿಸಿ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಿತು.

- ಈ ವಿಷಯದಲ್ಲಿ ರಾಜ್ಯವು ಸೂಕ್ತ ಕಾನೂನು ಮಾಡುವುದರ ಮೂಲಕ 6–14 ವಯಸ್ಸಿನ ಎಲ್ಲ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕಿನ ಅಡಿಯಲ್ಲಿ ನೀಡಲು ಕ್ರಮಕೈಗೊಳ್ಳಲಾಯಿತು.
- 14 ವಯಸ್ಸಿನ ಎಲ್ಲ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕೆಂದು ನಿರ್ದೇಶಿಸುವ 45ನೆ ವಿಧಿಗೆ ತಿದ್ದುಪಡಿ ಮಾಡಿ 6 ವಯಸ್ಸಿನೊಳಗಿನ ಎಲ್ಲ ಮಕ್ಕಳಿಗೆ ಬಾಲ್ಯಪೂರ್ವ ಶಿಕ್ಷಣವನ್ನು ರಾಜ್ಯವು ಒದಗಿಸಲು ಕ್ರಮಕೈಗೊಳ್ಳತಕ್ಕದೆಂದು ನಿರ್ದೇಶಿಸಲಾಯಿತು.
- ಸಂವಿಧಾನದ ಮೂಲಭೂತ ಕರ್ತವ್ಯಗಳ 51ಎ ವಿಧಿಗೆ (ಕೆ) ಉಪವಿಧಿಯನ್ನು ಸೇರಿಸಿ 6–14 ವಯಸ್ಸಿನ ತಮ್ಮ ಎಲ್ಲ ಮಕ್ಕಳಿಗೆ ಶಿಕ್ಷಣವನ್ನು ಪಡೆಯಲು ಅವಕಾಶ ಕಲ್ಪಿಸುವುದು ಪ್ರತಿಯೊಬ್ಬ ಪಾಲಕರ ಮೂಲಭೂತ ಕರ್ತವ್ಯವನ್ನಾಗಿಸಲಾಯಿತು.

## 44. ಸಂವಿಧಾನದ 87ನೇ ತಿದ್ದುಪಡಿ ಕಾಯ್ದೆ 2003 :

ಸಂವಿಧಾನದ 81, 82, 170 ಹಾಗೂ 330ನೇ ವಿಧಿಗಳಿಗೆ ತಿದ್ದುಪಡಿ ಮಾಡಿ 1991ರ ಜನಗಣತಿಯ ಬದಲಾಗಿ 201ನೇ ಇಸವಿಯ ಜನಗಣತಿಯ ಆಧಾರದ ಮೇಲೆ ಲೋಕಸಭೆ ಹಾಗೂ ರಾಜ್ಯವಿಧಾನ ಸಭೆಗಳ ಕ್ಷೇತ್ರ ಮರು ವಿಂಗಡನೆ ಮಾಡಬೇಕೆಂದು ನಿರ್ಧರಿಸಲಾಯಿತು.

## 45. ಸಂವಿಧಾನದ 88ನೇ ತಿದ್ದುಪಡಿ ಕಾಯ್ದೆ 2003 :

- ಸಂವಿಧಾನಕ್ಕೆ 268ಎ ವಿಧಿಯನ್ನು ಸೇರಿಸಿ ಕೇಂದ್ರ ಸರ್ಕಾರ ವಿಧಿಸುವ ಸೇವಾ ತೆರಿಗೆಯನ್ನು ಕೇಂದ್ರ ಹಾಗೂ ರಾಜ್ಯಗಳೆರಡೂ ಸಂಗ್ರಹಿಸಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಯಿತು.
- ಸಂವಿಧಾನದ 7ನೇ ಅನುಸೂಚಿಗೆ ತಿದ್ದುಪಡಿ ಮಾಡಿ ಕೇಂದ್ರಪಟ್ಟಿಗೆ 92ಸಿ ಕ್ರಮಸಂಖ್ಯೆಯಾಗಿ "ಸೇವೆಗಳ ಮೇಲಿನ ತೆರಿಗೆ" ಎಂಬುದನ್ನು ಸೇರಿಸಲಾಯಿತು.

## 46. ಸಂವಿಧಾನದ 89ನೇ ತಿದ್ದುಪಡಿ ಕಾಯ್ದೆ 2003 :

- ಸಂವಿಧಾನದ 338ನೇ ವಿಧಿಗೆ ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗವನ್ನು ರಚಿಸಲು ಅವಕಾಶ ಕಲ್ಪಿಸಲಾಯಿತು.
- ಸಂವಿಧಾನಕ್ಕೆ 338ಎ ವಿಧಿಯನ್ನು ಸೇರಿಸುವುದರ ಮುಖಾಂತರ ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು ರಚಿಸಲು ಅವಕಾಶ ಕಲ್ಪಿಸಲಾಯಿತು.

## 47. ಸಂವಿಧಾನದ 90ನೇ ತಿದ್ದುಪಡಿ ಕಾಯ್ದೆ 2003 :

- ಸಂವಿಧಾನದ 332(6) ಉಪವಿಧಿಗೆ ತಿದ್ದುಪಡಿ ಮಾಡಿ ಅಸ್ಸಾಂ ರಾಜ್ಯ ವಿಧಾನ ಸಭೆಯಲ್ಲಿ ಅನುಸೂಚಿತ ಪಂಗಡ & ಅನುಸೂಚಿತ ಪಂಗಡೇತರ ಪ್ರತಿನಿಧಿಸುವಿಕೆಯು ಬೋಡೋಲ್ಯಾಂಡ್ ಜಿಲ್ಲೆಯನ್ನು ಒಳಗೊಂಡಿರುತ್ತದೆ. ಇದು ಬೋಡೋ ರಾಷ್ಟ್ರೀಯ ಮಂಡಲಿಯಲ್ಲಿ ಸಾಮಾನ್ಯ ವರ್ಗಗಳ ಹಕ್ಕುಗಳ ರಕ್ಷಣೆಯ ಪಾಲನೆಗೆ ಸಂಬಂಧಿಸಿದೆ.

## 48. ಸಂವಿಧಾನದ 91ನೇ ತಿದ್ದುಪಡಿ ಕಾಯ್ದೆ 2003 :

GNANADHARE IAS KAS ACADEMY

- ಸಂವಿಧಾನದ 75(1)ನೇ ಉಪವಿಧಿ(1ಎ) ಉಪವಿಧಯನ್ನು ಸೇರಿಸಿ ಪ್ರಧಾನ ಮಂತ್ರಿಯನ್ನೊಳಗೊಂಡಂತೆ ಕೇಂದ್ರ ಮಂತ್ರಿ ಮಂಡಲದ ಗಾತ್ರ ಲೋಕಸಭೆಯ ಒಟ್ಟು ಸದಸ್ಯರ ಶೇಕಡಾ 15ನ್ನು ಮೀರಿಬಾರದಂತೆ ನಿರ್ಬಂಧಿಸಲಾಯಿತು.
- ಸಂವಿಧಾನದ 164(1)ನೇ ಉಪವಿಧಿಗೆ (1ಎ) ಉಪವಿಧಿಯನ್ನು ಸೇರಿಸಿ ಮುಖ್ಯಮಂತ್ರಿಗಳನ್ನು ಒಳಗೊಂಡ ರಾಜ್ಯ ಮಂತ್ರಿ ಮಂಡಲದ ಗಾತ್ರ ರಾಜ್ಯ ವಿಧಾನ ಸಭೆಯ ಒಟ್ಟು ಸದಸ್ಯರ 15%ನ್ನು ಮೀರಬಾರದು ಅಥವಾ ಮುಖ್ಯಮಂತ್ರಿಯನ್ನು ಒಳಗೊಂಡ ಕನಿಷ್ಠ 12 ಜನ ಸಚಿವರನ್ನು ರಾಜ್ಯ ಮಂತ್ರಿಮಂಡಲ ಹೊಂದಿರಬೇಕೆಂದು ನಿರ್ಧರಿಸಲಾಯಿತು.
- ಸಂವಿಧಾನದ 361ನೇ ವಿಧಿಗೆ(ಬಿ) ಉಪವಿಧಿಯನ್ನು ಸೇರಿಸಲಾಯಿತು. ಅಲ್ಲದೇ ಸಂವಿಧನದ 10ನೇ ಅನುಸೂಚಿಗೆ ತಿದ್ದುಪಡಿ ಮಾಡಿ ರಾಜಕೀಯ ಪಕ್ಷಗಳಲ್ಲಿನ ಭ್ರಷ್ಟಾಚಾರ ತಡೆಗಟ್ಟಲು ಪಕ್ಷಾಂತರ ಹೊಂದಿದ ಶಾಸಕಾಂಗದ ಸದಸ್ಯರನ್ನು ಸದಸ್ಯತ್ವ ಸ್ಥಾನದಿಂದ ಅನರ್ಹಗೊಂಡ ನಂತರ ಯಾವುದೇ ಹುದ್ದೆಯನ್ನು ಹೊಂದುವಂತಿಲ್ಲ ಎಂದು ಮಾಡಲಾಯಿತು.

## 49. ಸಂವಿಧಾನದ 92ನೇ ತಿದ್ದುಪಡಿ ಕಾಯ್ದೆ 2003 :

- ಸಂವಿಧಾನದ 8ನೇ ಅನುಸೂಚಿಗೆ ತಿದ್ದುಪಡಿ ಮಾಡಿ 'ಬೋಡೊ ಡೋಗ್ರಿ" ಮೈಥಿಲಿ ಭಾಷೆಗಳನ್ನು ಅಂಗೀಕೃತ ಭಾಷೆಗಳ ಪಟ್ಟಿಯನ್ನು ಒಳಗೊಂಡ ಸಂವಿಧಾನದ 8ನೆ ಅನುಸೂಚಿಗೆ ಸೇರಿಸಲಾಯಿತು. ಇದರಿಂದಾಗಿ ಸಂವಿಧಾನದಲ್ಲಿ ಅನುಸೂಚಿತ ಭಾಷೆಗಳ ಸಂಖ್ಯೆ 18–22ಕ್ಕೆ ಏರಿದಂತಾಯಿತು.

## 50. ಸಂವಿಧಾನದ 93ನೇ ತಿದ್ದುಪಡಿ ಕಾಯ್ದೆ 2005 :

- ಸಂವಿಧಾನದ 15ನೇ ಅನುಸೂಚಿಗೆ (5)ನೇ ಉಪವಿಧಿಯನ್ನು ಸೇರಿಸಿ ಅಲ್ಪಸಂಖ್ಯಾತರು ನಡೆಸುವ ವಿದ್ಯಾಸಂಸ್ಥೆಗಳನ್ನು ಹೊರತು ಪಡಿಸಿ ಖಾಸಗಿ ಅನುದಾನ ರಹಿತವಿದ್ಯಾ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಮೀಸಲಾತಿಗೆ ಅವಕಾಶ ನೀಡಲಾಯಿತು.

GNANADHARE IAS KAS ACADEMY

## 51. ಸಂವಿಧಾನದ 93ನೇ ತಿದ್ದುಪಡಿ ಕಾಯ್ದೆ 2006 :

ಸಂವಿಧಾನದ 93ನೇ ತಿದ್ದುಪಡಿ ಕಾಯ್ದೆಯು 12 ಜೂನ್ 2006ರಂದು ಜಾರಿಗೆ ಬಂದಿತು.

- ಸಂವಿಧಾನದ 164(1)ನೇ ಉಪವಿಧಿಯಡಿಯಲ್ಲಿರುವ ಬಿಹಾರ ರಾಜ್ಯದ ಹೆಸರನ್ನು ತೆಗೆದುಹಾಕಿ ಛತ್ತೀಸ್‌ಗಡ ಹಾಗೂ ಜಾರ್ಖಂಡ ರಾಜ್ಯದ ಹೆಸರುಗಳನ್ನು ಸೇರಿಸಲಾಯಿತು. ಸಂವಿಧಾನದ 164(1)ನೇ ಉಪವಿಧಿಯನ್ವಯ ಜಾರ್ಖಂಡ, ಮಧ್ಯಪ್ರದೇಶ, ಛತ್ತೀಸ್‌ಗಡ ಹಾಗೂ ಒರಿಸ್ಸಾ ರಾಜ್ಯಗಳಲ್ಲಿ ಬುಡಕಟ್ಟು ಆದಿವಾಸಿ ಜನಾಂಗದ ಜನರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಒಬ್ಬ ಸಚಿವನನ್ನು ಕಡ್ಡಾಯವಾಗಿ ನೇಮಿಸಬೇಕೆಂದು ಸ್ಪಷ್ಟಪಡಿಸುತ್ತದೆ.

ಸಂವಿಧಾನಕ್ಕೆ 108 ತಿದ್ದುಪಡಿಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗಿದ್ದರೂ 94 ತಿದ್ದುಪಡಿ ಮಸೂದೆಗಳಿಗೆ ಮಾತ್ರ ರಾಷ್ಟ್ರಪತಿಯವರು ತಮ್ಮ ಅಂಗೀಕಾರ ನೀಡಿದ್ದಾರೆ. ಪ್ರಸ್ತುತ 94 ತಿದ್ದುಪಡಿಗಳು ಮಾತ್ರ ಕಾಯ್ದೆಗಳಾಗಿ ಜಾರಿಯಲ್ಲಿವೆ.

# ಸಂವಿಧಾನಾತ್ಮಕ ಸಂಸ್ಥೆಗಳು :-

# ಚುನಾವಣಾ ಆಯೋಗ :

ನಮ್ಮ ಸಂವಿಧಾನದ 15ನೇ ಭಾಗದಲ್ಲಿನ 324ನೇ ವಿಧಿಯು ಸ್ವತಂತ್ರ & ನಿರ್ಭೀತ ಚುನಾವಣಾ ಆಯೋಗದ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಚುನಾವಣಾ ಆಯೋಗವು ಸಂಸತ್ತಿನ, ರಾಜ್ಯ ಶಾಸನ ಸಭೆಗಳ, ರಾಷ್ಟ್ರಾಧ್ಯಕ್ಷ ಹಾಗೂ ಉಪರಾಷ್ಟ್ರಾಧ್ಯಕ್ಷರ ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ ಹಾಗೂ ನಿಯಂತ್ರಣಾಧಿಕಾರವನ್ನು ಹೊಂದಿದೆ. ಭಾರತದಲ್ಲಿ ಕೇಂದ್ರ ಹಾಗೂ ರಾಜ್ಯಗಳು ಒಂದೇ ಚುನಾವಣೆ ಆಯೋಗವನ್ನು ಹೊಂದಿದೆ. ಭಾರತದ ಚುನಾವಣಾ ಆಯೋಗವು ಸ್ಥಳೀಯ ಸರ್ಕಾರಗಳಿಗೆ ಚುನಾವಣೆ ನಡೆಸುವುದಿಲ್ಲ. ಪ್ರತ್ಯೇಕ ರಾಜ್ಯ ಚುನಾವಣಾ ಆಯೋಗಗಳು ಸ್ಥಳೀಯ ಸರ್ಕಾರಗಳೀಗೆ ಚುನಾವಣೆ ನಡೆಸುತ್ತದೆ.

## ರಚನೆ :

ಸಂವಿಧಾನದ 324ನೇ ವಿಧಿಯು ಚುನಾವಣಾ ಆಯೋಗದ ರಚನೆಯನ್ನು ವಿವರಿಸುತ್ತದೆ. ಚುನಾವಣಾ ಆಯೋಗವು ಮುಖ್ಯ ಆಯುಕ್ತರು ಹಾಗೂ ರಾಷ್ಟ್ರಾಧ್ಯಕ್ಷರು ಕಾಲಕಾಲಕ್ಕೆ

ನಿಗಧಿಪಡಿಸಬುದಾದ ಇತರ ಚುನಾವಣಾ ಆಯುಕ್ತರುಗಳನ್ನು ಹೊಂದಿರುತ್ತದೆ. ಚುನಾವಣಾ ಆಯೋಗವು 1950–1989ರವರೆಗೆ ಏಕ ಸದಸ್ಯ ಆಯೋಗವಾಗಿ ಕಾರ್ಯ ನಿರ್ವಹಿಸಿತು. ಈ ಸಂದರ್ಭದಲ್ಲಿ ಆಯೋಗವು ಮುಖ್ಯ ಚುನಾವಣಾ ಆಯುಕ್ತರನ್ನು ಮಾತ್ರ ಹೊಂದಿತ್ತು. ಮೊದಲ ಬಾರಿಗೆ ರಾಷ್ಟ್ರಾಧ್ಯಕ್ಷರು ಅಕ್ಟೋಬರ್ 16, 1989ರಂದು ಎಸ್.ಎಸ್. ಧನೋವಾ & ವಿ.ಎಸ್.ಸೀಗೆಲ್ ಎಂಬ ಇಬ್ಬರು ವ್ಯಕ್ತಿಗಳನ್ನು ಚುನಾವಣಾ ಆಯುಕ್ತರನ್ನು ನೇಮಕ ಮಾಡಿದರು. ಜನವರಿ 11, 1990ರಂದು ರಾಷ್ಟ್ರಾಧ್ಯಕ್ಷರು ಹೊಸದಾಗಿ ನೇಮಕವಾಗಿದ್ದ ಇಬ್ಬರು ಆಯುಕ್ತರ ಹುದ್ದೆಗಳನ್ನು ರದ್ದುಪಡಿಸಿದರು. ಪ್ರಧಾನಿ ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಕ್ಟೋಬರ್ 1, 1993ರಂದು ತ್ರಿಸದಸ್ಯ ಚುನಾವಣಾ ಆಯೋಗವನ್ನು ರಚಿಸಿತು. ಅಂದಿನಿಂದ ಇಂದಿನವರೆಗೆ ಚುನಾವಣಾ ಆಯೋಗವು ಒಬ್ಬರು ಮುಖ್ಯ ಚುನಾವಣಾ ಆಯುಕ್ತರು ಹಾಗೂ ಇತರ ಇಬ್ಬರು ಚುನಾವಣಾ ಆಯುಕ್ತರನ್ನು ಒಳಗೊಂಡಿದೆ. ಆಯೋಗದ ಮೂವರು ಸದಸ್ಯರ ಅಧಿಕಾರ, ವೇತನ & ಇತರೆ ಸೌಲಭ್ಯಗಳು ಸಮನಾಗಿರುತ್ತದೆ. ಮುಖ್ಯ ಆಯುಕ್ತರು ಹಾಗೂ ಇತರ ಆಯುಕ್ತರ ನಡುವೆ ಭಿನ್ನಾಭಿಪ್ರಾಯ ಉಂಟಾದಾಗ ಬಹುಮತ ತತ್ವದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಲಾಗುತ್ತದೆ. ತ್ರಿಸದಸ್ಯ ಆಯೋಗದಲ್ಲಿ ಮುಖ್ಯ ಚುನಾವಣಾ ಆಯುಕ್ತರು ಅಧ್ಯಕ್ಷರಂತೆ ಕೆಲಸ ಮಾಡುತ್ತಾರೆ.

## ನೇಮಕ :

ಚುನಾವಣಾ ಆಯೋಗ ಸದಸ್ಯರನ್ನು ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಸಲಹೆಯ ಮೇರೆಗೆ ನೇಮಕ ಮಾಡುತ್ತಾರೆ. ಚುನಾವಣಾ ಆಯೋಗಕ್ಕೆ ಸಹಾಯ ಮಾಡಲು ರಾಷ್ಟ್ರಾಧ್ಯಕ್ಷರು ಪ್ರಾದೇಶಿಕ ಆಯುಕ್ತರನ್ನು ನೇಮಿಸುತ್ತಾರೆ. ಪ್ರದೇಶಿಕ ಆಯುಕ್ತರುಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರು ಚುನಾವಣಾ ಆಯೋಗದೊಂದಿಗೆ ಸಮಾಲೋಚನೆ ನಡೆಸುತ್ತಾರೆ.

## ಅಧಿಕಾರವಧಿ :

ಚುನಾವಣಾ ಆಯೋಗದ ಸದಸ್ಯರ ಅವಧಿ 6 ವರ್ಷಗಳು. ಆದರೆ ಅವಧಿ ಮುಗಿಯುವುದಕ್ಕೆ ಮೊದಲು 65 ವರ್ಷಗಳು ತುಂಬಿದರೆ ಹುದ್ದೆಯಿಂದ ನಿವೃತ್ತಿಯಾಗಬೇಕಾಗುತ್ತದೆ. ಅಧಿಕಾರಾವಧಿಗೆ ಸಂಬಂಧಿಸಿದಂತೆ ಈ ನಿಯಮ ಜನವರಿ 1, 1996ರಿಂದ ಜಾರಿಗೆ ಬಂದಿದೆ. ಪ್ರಾದೇಶಿಕ ಆಯುಕ್ತರ ಅಧಿಕಾರವಧಿಯನ್ನು ರಾಷ್ಟ್ರಾಧ್ಯಕ್ಷರು ನಿರ್ಧರಿಸುತ್ತಾರೆ.

## ಸೇವಾ ನಿಯಮ :

ಚುನಾವಣಾ ಆಯೋಗದ ಸದಸ್ಯರು ಹಾಗೂ ಪ್ರಾದೇಶಿಕ ಆಯುಕ್ತರ ಸೇವಾ ನಿಯಮಗಳನ್ನು ಸಂಸತ್ತು ನಿರ್ಧರಿಸುತ್ತದೆ. ಚುನಾವಣಾ ಆಯೋಗದ ಸದಸ್ಯರ ನಿಯಮಗಳನ್ನು ಅನಾನುಕೂಲವಾಗುವಂತೆ ಬದಲಾಯಿಸುವಂತಿಲ್ಲ.

## ವೇತನ, ಪಿಂಚಣಿ & ಇತರೆ ಭತ್ಯೆಗಳು :

ಚುನಾವಣಾ ಆಯೋಗದ ಸದಸ್ಯರಿಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಸ್ಥಾನಮಾನವನ್ನು ನೀಡಲಾಗಿದೆ. ಆದ್ದರಿಂದ ಆಯೋಗದ ಸದಸ್ಯರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ದೊರೆಯುವ ವೇತನ, ಪಿಂಚಣಿ & ಇತರೆ ಸೌಲಭ್ಯಗಳನ್ನು ಪಡೆಯುತ್ತಾರೆ. ಇವರ ವೇತನ, ಪಿಂಚಣಿ ಹಾಗೂ ಇತರೆ ಭತ್ಯೆಗಳನ್ನು ಭಾರತದ ಸಂಚಿತ ನಿಧಿಯಿಂದ ನೀಡಲಾಗುತ್ತದೆ.

## ಪದಚ್ಯುತಿ :

ಚುನಾವಣಾ ಆಯೋಗದ ಸದಸ್ಯರನ್ನು ಅತ್ಯಂತ ಸುಲಭವಾಗಿ ವಜಾ ಮಾಡಲು ಸಾಧ್ಯವಿಲ್ಲ. ಮುಖ್ಯ ಚುನಾವಣಾ ಆಯುಕ್ತರನ್ನು ಪದಚ್ಯುತಿಗೊಳಿಸಲು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವ ಆಧಾರ & ವಿಧಾನವನ್ನು ಅನುಸರಿಸಬೇಕು. ಮುಖ್ಯ ಚುನಾವಣಾ ಆಯುಕ್ತರ ಶಿಫಾರಸ್ಸಿನ ಮೇರೆಗೆ ಮಾತ್ರ ರಾಷ್ಟ್ರಾಧ್ಯಕ್ಷರು ಇತರೆ ಚುನಾವಣಾ ಆಯುಕ್ತರು ಹಾಗೂ ಪ್ರಾದೇಶಿಕ ಆಯುಕ್ತರುಗಳನ್ನು ಅಧಿಕಾರದಿಂದ ತೆಗೆದುಹಾಕಬಹುದು.

## ಚುನಾವಣಾ ಆಯೋಗದ ಅಧಿಕಾರ & ಕಾರ್ಯಗಳು :

1. ಮತದಾರರ ಪಟ್ಟಿಗಳ ಸಿದ್ದತೆ ಹಾಗೂ ಪರಿಷ್ಕರಣೆಗಳ ಪರಿಶೀಲನೆ & ನಿರ್ದೇಶನ
2. ಸಂಸತ್ತು, ರಾಜ್ಯ ಶಾಸಕಾಂಗ, ರಾಷ್ಟ್ರಾಧ್ಯಕ್ಷರು & ಉಪ ರಾಷ್ಟ್ರಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆಗಳನ್ನು ನಡೆಸುವುದು
3. ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡುವುದು
4. ರಾಜಕೀಯ ಪಕ್ಷಗಳಿಗೆ ಚುನಾವಣಾ ಚಿನ್ಹೆಗಳನ್ನು ನೀಡುವುದು.
5. ಪಕ್ಷಗಳಿಗೆ ನೀಡಲಾಗುವ ಮಾನ್ಯತೆ & ಚಿನ್ಹೆಗಳಿಗೆ ಸಂಬಂಧಿಸಿದಂತೆ ಉಂಟಾಗುವ ವಿವಾದಗಳನ್ನು ಇತ್ಯರ್ಥಪಡಿಸುವುದು



GNANADHARE IAS KAS ACADEMY

6. ಚುನಾವಣಾ ವ್ಯವಸ್ಥೆಗಳಿಗೆ ಸಂಬಂಧಿಸಿದ ವಿವಾದಗಳನ್ನು ವಿಚಾರಣೆ ನಡೆಸಲು ಅಧಿಕಾರಿಗಳನ್ನು ನೇಮಿಸುವುದು.
7. ಸಂಸತ್ ಸದಸ್ಯರ ಅನರ್ಹತೆಗೆ ಸಂಬಂಧಿಸಿದಂತೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡುವುದು.
8. ಚುನಾವಣಾ ನೀತಿ ಸಂಹಿತೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು.
9. ರಾಜ್ಯ ಶಾಸನಸಭೆಗಳ ಸದಸ್ಯರ ಸನರ್ಹತೆಗೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ಸಲಹೆ ನೀಡುವುದು.
10. ರಾಜಕೀಯ ಪಕ್ಷಗಳನ್ನು ನೋಂದಾಯಿಸಿಕೊಳ್ಳುವುದು.
11. ರಾಜಕೀಯ ಪಕ್ಷಗಳಿಗೆ ರಾಷ್ಟ್ರೀಯ ಅಥವಾ ಪ್ರಾದೇಶಿಕ ಸ್ಥಾನಮಾನವನ್ನು ನೀಡುವುದು.
12. ನಕಲು ಮತದಾನ, ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವುದು ಮುಂತಾದ ಚುನಾವಣಾ ಅಕ್ರಮಗಳು ಸಂಭವಿಸಿದಾಗ ಚುನಾವಣೆಗಳನ್ನು ರದ್ದುಪಡಿಸುವುದು.
13. ಚುನಾವಣೆ ನಡೆಸಲು ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುವಂತೆ ರಾಷ್ಟ್ರಾಧ್ಯಕ್ಷರು ಹಾಗೂ ರಾಜ್ಯಪಾಲರನ್ನು ವಿನಂತಿಸಿಕೊಳ್ಳುವುದು.
14. ಮತದಾರರ ಪಟ್ಟಿಗಳ ವಿಶೇಷ ಪರಿಷ್ಕರಣೆಗೆ ಆದೇಶ ನೀಡುವುದು.
15. ರಾಜ್ಯ ಶಾಸನ ಸಭೆಗಳಿಗೆ ಚುನಾವಣೆ ನಡೆಸಲು ಅಧಿಸೂಚನೆಗಳನ್ನು ಹೊರಡಿಸುವಂತೆ ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡುವುದು.
16. ಸಂಸತ್ತಿನ ಚುನಾವಣೆಗಳನ್ನು ನಡೆಸಲು ಅಧಿಸೂಚನೆಗಳನ್ನು ಹೊರಡಿಸುವಂತೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡುವುದು.
17. ಚುನಾವಣೆಗಳನ್ನು ಮುಂದೂಡುವುದು.
18. ಸಂಸತ್ತು & ರಾಜ್ಯ ಶಾಸಕಾಂಗಗಳಿಗೆ ಉಪ ಚುನಾವಣೆ ನಡೆಸುವುದು.
19. ಮರು ಚುನಾವಣೆ ನಡೆಸುವುದು.
20. ಮತಗಳ ಎಣಿಕೆ.
21. ಚುನಾವಣಾ ಫಲಿತಾಂಶವನ್ನು ತಡೆಹಿಡಿಯುವುದು.
22. ಚುನಾವಣಾ ಫಲಿತಾಂಶವನ್ನು ಪ್ರಕಟಿಸುವುದು.
23. ಚುನಾವಣೆಯ ನಂತರ ಸದನದ ರಚನೆಗೆ ಅಧಿಸೂಚನೆಗೆ ಹೊರಡಿಸಬಹುದು.
24. ರಾಜ್ಯಗಳ & ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾಧಿಕಾರಿಗಳ ಹುದ್ದೆಗಳಿಗೆ ಹೆಸರುಗಳನ್ನು ಸೂಚಿಸುವುದು.
25. ಪ್ರಾದೇಶಿಕ ಆಯುಕ್ತರ ಹುದ್ದೆಗಳನ್ನು ಹೆಸರುಗಳನ್ನು ಸೂಚಿಸುವುದು.

GNANADHARE IAS KAS ACADEMY

## ಚುನಾವಣಾ ಪ್ರಕ್ರಿಯೆ :

1. ರಾಷ್ಟ್ರಾಧ್ಯಕ್ಷರು ಚುನಾವಣಾ ಆಯೋಗದ ಶಿಫಾರಸ್ಸಿನ ಮೇರೆಗೆ ಲೋಕಸಭಾ ಚುನಾವಣೆಯ ಅಧಿಸೂಚನೆ ಹೊರಡಿಸುತ್ತಾರೆ.
2. ರಾಜ್ಯ ವಿಧಾನ ಸಭೆಗೆ ಚುನಾವಣೆ ನಡೆಸಲು ರಾಜ್ಯಪಾಲರು ಚುನಾವಣಾ ಆಯೋಗದ ಶಿಫಾರಸ್ಸಿನ ಮೇರೆಗೆ ಪ್ರಕಟಣೆ ಹೊರಡಿಸುತ್ತಾರೆ.
3. ಚುನಾವಣೆಗೆ ಸ್ಪರ್ಧಿಸ ಬಯಸುವ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ & ವಾಪಸ್ಸು ಪಡೆಯುವ ದಿನಾಂಕಗಳನ್ನು ಗೊತ್ತುಪಡಿಸಲಾಗುತ್ತದೆ.
4. ಚುನಾವಣಾ ಆಯೋಗವು ನಾಮಪತ್ರಗಳನ್ನು ಪರಿಶೀಲಿಸಿ, ಅಪೂರ್ಣವಾದವುಗಳನ್ನು ತಿರಸ್ಕರಿಸುತ್ತದೆ.
5. ನಾಮಪತ್ರಗಳನ್ನು ವಾಪಸ್ಸು ಪಡೆದ 20 ದಿನಗಳ ನಂತರ ಚುನಾವಣಾ ನಡೆಯುತ್ತದೆ.
6. ನಾಮಪತ್ರ ಪರಿಶೀಲನೆಗಾಗಿ ಚುನಾವಣಾ ಆಯೋಗದಿಂದ ಅಭ್ಯರ್ಥಿಗಳ ಹೆಸರು ಪ್ರಕಟವಾದ ಮೇಲೆ ಚುನಾವಣಾ ಪ್ರಚಾರವನ್ನು ಆರಂಭಿಸಲಾಗುತ್ತದೆ.
7. ಮತದಾನ ನಡೆಯುವುದಕ್ಕೆ 48 ಗಂಟೆಗಳ ಮುಂಚೆ ಬಹಿರಂಗ ಚುನಾವಣಾ ಪ್ರಚಾರವನ್ನು ನಿಲ್ಲಿಸಬೇಕು.
8. ಲೋಕಸಭಾ ಸ್ಥಾನಗಳಿಗೆ ಅಭ್ಯರ್ಥಿಸುವ 10 ಸಾವಿರ ರೂ.ಗಳ ಠೇವಣಿಯನ್ನು ಹಾಗೂ ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು 5 ಸಾವಿರ ರೂ.ಗಳ ಠೇವಣಿಯನ್ನು ಕಟ್ಟಬೇಕು. ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಇದರಲ್ಲಿ ಅರ್ಧದಷ್ಟು ಮೊತ್ತದ ಠೇವಣಿ ಕಟ್ಟಬೇಕು.
9. ಚುನಾವಣೆಯಲ್ಲಿ ಸೋತ ಅಭ್ಯರ್ಥಿ ಸಿಂಧುತ್ವ ಪಡೆದ ಒಟ್ಟು ಮತಗಳಲ್ಲಿ 1/6ಕ್ಕಿಂತ ಹೆಚ್ಚು ಮತಗಳನ್ನು ಪಡೆದರೆ ಮಾತ್ರ ಠೇವಣಿಗಳನ್ನು ವಾಪಸ್ಸು ಪಡೆಯಬಹುದು.
10. ನಿರ್ಭಿತ & ಮುಕ್ತ ಚುನಾವಣೆಗಳನ್ನು ನಡೆಸುವುದು
11. ಚುನಾವಣೆ ನಡೆದ 30 ದಿನಗಳೊಳಗೆ ಚುನಾವಣಾ ವೆಚ್ಚದ ಲೆಕ್ಕವನ್ನು ಜಿಲ್ಲಾ ಚುನಾವಣಾಧಿಕಾರಿಗೆ ಒಪ್ಪಿಸಬೇಕು.
12. ಮತಗಳ ಎಣಿಕೆ
13. ಚುನಾವಣಾ ಫಲಿತಾಂಶಗಳನ್ನು ಪ್ರಕಟಿಸುವುದು
14. ಚುನಾವಣಾ ಫಲಿತಾಂಶಗಳನ್ನು ಘೋಷಣೆಯ ನಂತರ ಹೊಸ ಲೋಕಸಭೆ/ವಿಧಾನಸಭೆ ಅಸ್ತಿತ್ವಕ್ಕೆ ಬಂದಿದೆ ಎಂದು ಚುನಾವಣಾ ಆಯೋಗದ ಅಧಿಸೂಚನೆಯನ್ನು ಹೊರಡಿಸುವುದು.

# ಚುನಾವಣೆಗಳು & ಚುನಾವಣಾ ಆಯೋಗ :

| ಅನುಚ್ಛೇದಗಳು | ವಿವರಣೆ |
|---|---|
| 324ನೇ ಅನುಚ್ಛೇದ | **ಚುನಾವಣೆಗಳ ಮೇಲ್ವಿಚಾರಣೆ, ನಿರ್ದೇಶನ & ನಿಯಂತ್ರಣ ಮಾಡುವ ಚುನಾವಣಾ ಆಯೋಗದ ಅಧಿಕಾರ:**<br>324(1) : ಸಂಸತ್ತು, ರಾಜ್ಯ ವಿಧಾನಮಂಡಲ, ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಹುದ್ದೆಗಳ ಪಟ್ಟಿ ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಕೆ, ಎಲ್ಲ ಚುನಾವಣೆಗೆ ಸಂಬಂಧಿಸಿದಂತೆ ನಿರ್ವಹಣೆಯ ಮೇಲ್ವಿಚಾರಣೆ & ನಿಯಂತ್ರಣದ ಅಧಿಕಾರ ಸಂವಿಧಾನದಲ್ಲಿ ಹೆಸರಿಸಲಾದ ಚುನಾವಣಾ ಅಯೋಗದದಲ್ಲಿ ಇರತಕ್ಕದ್ದು.<br>324(2) : ಚುನಾವಣಾ ಆಯೋಗವು ಓರ್ವ ಮುಖ್ಯ ಚುನಾವನಾ ಆಯುಕ್ತರು & ರಾಷ್ಟ್ರಪತಿಯು ಕಾಲಕಾಲಕ್ಕೆ ನಿರ್ಧರಿಸುವಂತಹ ಇತರ ಚುನಾವಣಾ ಆಯುಕ್ತರನ್ನು ಹೊಂದಿರತಕ್ಕದ್ದು. ಮುಖ್ಯ ಚುನಾವಣಾ ಆಯುಕ್ತರು ಹಾಗೂ ಇತರ ಚುನಾವಣಾ ಆಯುಕ್ತರನ್ನು ಭಾರತದ ರಾಷ್ಟ್ರಪತಿಯು ನೇಮಕ ಮಾಡುತ್ತಾರೆ<br>324(3) : ಮುಖ್ಯ ಚುನಾವಣಾ ಆಯುಕ್ತರು ಚುನಾವಣಾ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವರು.<br>324(4) : ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯ ಮುಂಚೆ ರಾಜ್ಯ ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣೆಗೆ ಮುಂಚೆ ರಾಷ್ಟ್ರಪತಿಯು ಚುನಾವಣಾ ಆಯೋಗದೊಡನೆ ಸಮಾಲೋಚಿಸಿ ನಂತರ ಚುನಾಚಣೆಯ ಮತದಾರರ ಪಟ್ಟಿ ತಯಾರಿಕೆ, ಮೇಲ್ವಿಚಾರಣೆ ನಿರ್ದೇಶನ & ನಿಯಂತ್ರಣ ಕಾರ್ಯಕ್ಕಾಗಿ ಆಯೋಗಕ್ಕೆ ಸಹಾಯ ಮಾಡಲು ಅವಶ್ಯವಿರುವ ಪ್ರಾದೇಶಿಕ ಚುನಾವಣಾ ಆಯುಕ್ತರನ್ನು ರಾಷ್ಟ್ರಪತಿ ನೇಮಕ ಮಾಡುತ್ತಾರೆ.<br>324(5) : ಸಂಸತ್ತು ಮಾಡಿದ ಕಾನೂನಿನ ವ್ಯಾಪ್ತಿಗೆ ಒಳಪಟ್ಟು ಚುನಾವಣಾ ಆಯುಕ್ತರ ಹಾಗೂ ಪ್ರಾದೇಶಿಕ ಆಯುಕ್ತರ ಸೇವಾ ಷರತ್ತುಗಳು & ಅಧಿಕಾರಧಿಯನ್ನು ರಾಷ್ಟ್ರಪತಿಯವರು ನಿರ್ಧರಿಸುವರು.<br>ಮುಖ್ಯ ಚುನಾವಣಾ ಆಯುಕ್ತರನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಅಧಿಕಾರದಿಂದ ತೆಗೆದುಹಾಕುವ ವಿಧಾನವನ್ನು ಅನುಸರಿಸಿ ದುವರ್ತನೆ & ಅಸಮರ್ಥತೆಯ ಕಾರಣಗಳ ಆಧಾರದ ಮೇಲೆ ಅಧಿಕಾರದಿಂದ ತೆಗೆದುಹಾಕಬಹುದು.<br>324(6) : ಚುನಾವಣಾ ಆಯೋಗವು ತನ್ನ ಕಾರ್ಯಗಳನ್ನು ನಿರ್ವಹಿಸಿವುದಕ್ಕೆ |

GNANADHARE IAS ACADEMY

| | |
|---|---|
| | ಅವಶ್ಯವಾದ ಸಿಬ್ಬಂದಿಯನ್ನು ರಾಷ್ಟ್ರಪತಿ ಹಾಗೂ ರಾಜ್ಯಪಾಲರು ಒದಗಿಸತಕ್ಕದ್ದು. |
| 325ನೇ ಅನುಚ್ಛೇದ | ಚುನಾವಣೆಗಳನ್ನು ನಡೆಸಲು ಅವಶ್ಯವಿರುವ ಮತದಾರರ ಪಟ್ಟಿಯಲ್ಲಿ ಸೇರಿಸಲು ವ್ಯಕ್ತಿಯ ಧರ್ಮ, ಮೂಲವಂಶ, ಜಾತಿ & ಲಿಂಗ ಇವುಗಳ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ & ಇವುಗಳ ಆಧಾರದ ಮೇಲೆ ಮತದಾರರ ಪಟ್ಟಿಯಲ್ಲಿ ತನ್ನ ಹೆಸರು ಸೇರಿಸುವಂತೆ ಒತ್ತಾಯಿಸಬಾರದು. |
| 326ನೇ ಅನುಚ್ಛೇದ | ನಿವಾಸಿಯಲ್ಲದ, ಮಾನಸಿಕ ಅಸ್ವಸ್ಥ, ಅಪರಾಧ, ಭ್ರಷ್ಟಾಚಾರ ಅಥವಾ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಅಂಶಗಳನ್ನು ಹೊರತುಪಡಿಸಿ 18 ವರ್ಷ ಪೂರೈಸಿದ ಎಲ್ಲ ನಾಗರಿಕರು ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಯ ಚುನಾವಣೆಯಲ್ಲಿ ಮತದಾರನಾಗಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳಲು ಹಕ್ಕು ಹೊಂದಿರುವನು. |
| 327ನೇ ಅನುಚ್ಛೇದ | ಸಂವಿಧಾನದ ಅನುಚ್ಛೇದಗಳಿಗೆ ಒಳಪಟ್ಟು ಸಂಸತ್ತು ಕಾನೂನಿನ ಮೂಲಕ ಮತದಾರರ ಪಟ್ಟಿ ತಯಾರಿಕೆ, ಚುನಾವಣಾ ಕ್ಷೇತ್ರಗಳ ವ್ಯಾಪ್ತಿ ನಿರ್ಣಯ, ಸಂಸತ್ತು ಹಾಗೂ ರಾಜ್ಯವಿಧಾನ ಮಂಡಲಿಗಳ ಕ್ರಮಬದ್ದ ರಚನೆ, ಚುನಾವಣೆಯ ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ಕಾಲಕಾಲಕ್ಕೆ ಕಾನೂನುಗಳನ್ನು ರಚಿಸಬಹುದು. |
| 328ನೇ ಅನುಚ್ಛೇದ | ಸಂವಿಧಾನದ ಅನುಚ್ಛೇದಗಳಿಗೆ ಒಳಪಟ್ಟು ಸಂಸತ್ತು ಕಾನೂನು ಮಾಡಿರದ ರಾಜ್ಯ ವಿಧಾನಮಂಡಲವ ಕಾನೂನಿನ ಮೂಲಕ ಮತದಾರರ ಪಟ್ಟಿಯ ತಯಾರಿಕೆ ವಿಧಾನಮಂಡಲದ ಎರಡು ಸದನಗಳ ಕ್ರಮಬದ್ದ ರಚನೆಯ ಖಾತ್ರಿಗೊಳಿಸುವುದಕ್ಕೆ ಅವಶ್ಯವಾದ ಚುನಾವಣಾ ವಿಷಯಗಳಿಗೆ ಸಂಬಂಧಪಟ್ಟಂತೆ ವಿಧಾನಮಂಡಲ ಕಾಲಕಾಲಕ್ಕೆ ಉಪಬಂಧಗಳನ್ನು ರಚಿಸಿಬಹುದು. |
| 329ನೇ ಅನುಚ್ಛೇದ | ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ ಅಥವಾ ಚುನಾವಣಾ ಕ್ಷೇತ್ರಗಳ ಸ್ಥಾನ ಹಂಚಿಕೆ, 327 ಹಾಗೂ 328 ವಿಧಿಯನ್ವಯ ರೂಪಿಸಿದ ಕಾನೂನುಗಳ ಸಿಂಧುತ್ವವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. |

GNANADHARE IAS KAS ACADEMY

## ಭಾರತದ ಮುಖ್ಯ ಚುನಾವಣಾ ಆಯುಕ್ತರು :

| ಕ್ರ.ಸಂ | ಆಯುಕ್ತರ ಹೆಸರು | ಅಧಿಕಾರ ಅವಧಿ | |
|---|---|---|---|
| | | ಯಿಂದ | ವರೆಗೆ |
| 1 | ಸುಕುಮಾರ್ ಸೇನ್ | 21–03–1950 | 19–12–1958 |
| 2 | ಕೆ.ವಿ.ಕೆ ಸುಂದರಂ | 20–12–1958 | 30–09–1967 |
| 3 | ಎಸ್.ಪಿ. ಸೇನ್ ವರ್ಮಾ | 01–10–1967 | 30–09–1972 |
| 4 | ಡಾ. ನಾಗೇಂದ್ರ ಸಿಂಗ್ | 01–10–1972 | 06–02–1973 |
| 5 | ಟಿ. ಸ್ವಾಮಿನಾಥನ್ | 07–02–1973 | 17–06–1977 |
| 6 | ಎಸ್. ಎಲ್. ಶಕಧರ್ | 18–06–1977 | 17–06–1982 |
| 7 | ಆರ್.ಕೆ. ತ್ರಿವೇಧಿ | 18–06–1982 | 31–12–1985 |
| 8 | ಆರ್.ವ್ಹಿ.ಎಸ್. ಪೆರಿಶಾಸ್ತ್ರಿ | 01–01–1986 | 25–11–1990 |
| 9 | ಶ್ರೀಮತಿ ವ್ಹಿ.ಎಸ್. ರಮಾದೇವಿ | 26–11–1990 | 11–12–1990 |
| 10 | ಟಿ.ಎನ್. ಶೇಷನ್ | 12–12–1990 | 11–12–1996 |
| 11 | ಎಂ.ಎಸ್. ಗಿಲ್ | 12–12–1996 | 13–06–2001 |
| 12 | ಜೆ.ಎಸ್. ಲಿಂಗ್ಡೋ | 14–06–2001 | 07–02–2004 |
| 13 | ಟಿ.ಎಸ್. ಕೃಷ್ಣಮೂರ್ತಿ | 08–02–2004 | 15–05–2005 |
| 14 | ಬಿ.ಬಿ. ಟಂಡನ್ | 16–05–2005 | 29–06–2006 |
| 15 | ಎನ್. ಗೋಪಾಲಸ್ವಾಮಿ | 30–06–2006 | 20–04–2009 |
| 16 | ನವೀನ್ ಚಾವ್ಲಾ | 21–04–2009 | 29–07–2010 |
| 17 | ಎಸ್.ವೈ. ಖುರೇಶಿ | 30–07–2010 | – |

GNANADHARE IAS KAS ACADEMY

# ಕೇಂದ್ರ ಲೋಕಸೇವಾ ಆಯೋಗ :




ಕೇಂದ್ರ ಲೋಕಸೇವಾ ಆಯೋಗವು ಅಖಿಲ ಭಾರತ ಹಾಗೂ ಕೇಂದ್ರ ಸೇವೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡುವ ಸಂಸ್ಥೆಯಾಗಿದೆ. ಸಂವಿಧಾನದ 315ನೇ ವಿಧಿಯನ್ವಯ ಈ ಆಯೋಗವನ್ನು ಸೃಷ್ಟಿಮಾಡಲಾಗಿದೆ. ಕೇಂದ್ರ ಲೋಕಸೇವಾ ಆಯೋಗವು ರಾಜ್ಯ ಸರ್ಕಾರಗಳ ವಿನಂತಿಯ ಮೇರೆಗೆ ನೇಮಕಾತಿಗೆ ಸಂಬಂಧಿಸಿದ ರಾಜ್ಯ ಸರ್ಕಾರಗಳ ಅಗತ್ಯಗಳನ್ನು ಪೂರೈಸುವ ಅಧಿಕಾರವನ್ನು ಹೊಂದಿದೆ.

## ಒಟ್ಟು ಸದಸ್ಯರ ಸಂಖ್ಯೆ :

ಕೇಂದ್ರ ಲೋಕಸೇವಾ ಆಯೋಗವು ಒಬ್ಬ ಅಧ್ಯಕ್ಷ & ಇತರ ಸದಸ್ಯರುಗಳನ್ನು ಹೊಂದಿರುತ್ತದೆ. ಸಂವಿಧಾನವು ಆಯೋಗದ ಸದಸ್ಯರ ಸಂಖ್ಯೆಯನ್ನು ನಿಗಧಿ ಪಡಿಸಿಲ್ಲ. ಆಯೋಗದ ಸದಸ್ಯರ ಸಂಖ್ಯೆಯನ್ನು ರಾಷ್ಟ್ರಾಧ್ಯಕ್ಷರು ನಿರ್ಧರಿಸುತ್ತಾರೆ. ಕೇಂದ್ರ ಲೋಕಸೇವಾ ಆಯೋಗವು ಸಾಮಾನ್ಯವಾಗಿ ಅಧ್ಯಕ್ಷರನ್ನೊಳಗೊಂಡ 11 ಮಂದಿ ಸದಸ್ಯರನ್ನು ಹೊಂದಿರುತ್ತದೆ.

## ನೇಮಕಾತಿ :

ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸಚಿವ ಸಂಪುಟದ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಆಯೋಗದ ಅರ್ಧದಷ್ಟು ಸದಸ್ಯರು ಕೇಂದ್ರ ಅಥವಾ ರಾಜ್ಯ ಸರ್ಕಾರದಲ್ಲಿ ಕನಿಷ್ಠ 10 ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು. ಸಂವಿಧಾನವು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರ ಸೇವಾ ನಿಯಮಗಳನ್ನು ನಿರ್ಧರಿಸುವ ಅಧಿಕಾರವನ್ನು ರಾಷ್ಟ್ರಾಧ್ಯಕ್ಷರಿಗೆ ನೀಡಿದೆ.

ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರ ಹುದ್ದೆ ತೆರವಾದಾಗ ಅಥವಾ ಗೈರುಹಾಜರಾದಾಗ ಅಧ್ಯಕ್ಷರಿಗೆ ತಮ್ಮ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದಿದ್ದಾಗ ರಾಷ್ಟ್ರಾಧ್ಯಕ್ಷರು ಲೋಕಸೇವಾ ಆಯೋಗದ ಸದಸ್ಯರಲ್ಲಿಯೇ ಒಬ್ಬರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಬಹುದು. 1963ರ 15ನೇ ಸಂವಿಧಾನ ತಿದ್ದುಪಡಿ ಕಾಯ್ದೆಯು ಕೇಂದ್ರ ಲೋಕಸೇವಾ ಆಯೋಗಕ್ಕೆ ಹಂಗಾಮಿ ಅಧ್ಯಕ್ಷರನ್ನು

ನೇಮಿಸಲು ಅವಕಾಶ ಮಾಡಿಕೊಡುತ್ತದೆ. ಹಂಗಾಮಿ ಅಧ್ಯಕ್ಷರು ಅಧ್ಯಕ್ಷರಾಗಿ ನೇಮಕಗೊಂಡ ವ್ಯಕ್ತಿಯು ಅಧಿಕಾರವನ್ನು ವಹಿಸಿಕೊಳ್ಳುವವರೆಗೆ ಅಥವಾ ಅಧ್ಯಕ್ಷರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥನಾಗಿ ಅಧಿಕಾರ ಸ್ವೀಕರಿಸುವವರೆಗೆ ಕಾರ್ಯನಿರ್ವಹಿಸುತ್ತಾರೆ

## ಅಧಿಕಾರವಧಿ :

ಕೇಂದ್ರ ಲೋಕಸೇವಾ ಆಯೋಗದ ಸದಸ್ಯರು 6 ವರ್ಷಗಳ ಕಾಲ ಅಥವಾ 65 ವರ್ಷಗಳು ತುಂಬುವವರೆಗೆ ಅಧಿಕಾರದಲ್ಲಿರುತ್ತಾರೆ. ರಾಷ್ಟ್ರಾಧ್ಯಕ್ಷರಿಗೆ ರಾಜಿನಾಮೆ ಸಲ್ಲಿಸುವ ಮೂಲಕ ಅವಧಿಗೆ ಮುನ್ನವೇ ಅಧಿಕಾರದಿಂದ ನಿರ್ಗಮಿಸಬಹುದು.

## ವೇತನ :

ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು & ಸದಸ್ಯರ ವೇತನವನ್ನು ಕಾಲಕಾಲಕ್ಕೆ ಸಂಸತ್ತು ನಿರ್ಧರಿಸುತ್ತದೆ. ಇವರ ವೇತನ, ಪಿಂಚಣಿ ಹಾಗೂ ಇತರೆ ಭತ್ಯೆಗಳನ್ನು ಭಾರತ ಸಂಚಿತ ನಿಧಿಯಿಂದ ನೀಡಲಾಗುತ್ತದೆ.

## ಪದಚ್ಯುತಿ :

ಆಯೋಗದ ಅಧ್ಯಕ್ಷ & ಸದಸ್ಯರು ದಿವಾಳಿಯಾಗಿದ್ದರೆಂದು ತೀರ್ಮಾನಿಸಲ್ಪಟ್ಟರೆ ಅಥವಾ ತಮ್ಮ ಅಧಿಕಾರದ ಅವಧಿಯಲ್ಲಿ ವೇತನ ಪಡೆಯುವ ಬೇರೆ ಹುದ್ದೆಯಲ್ಲಿದ್ದರೆ ಅಥವಾ ಸೇವೆಯಲ್ಲಿ ಮುಂದುವರೆಯಲು ಅಸಮರ್ಥರು ಎಂದು ಅಭಿಪ್ರಾಯಪಟ್ಟರೆ ರಾಷ್ಟ್ರಾಧ್ಯಕ್ಷರು ಇವರನ್ನು ಪದಚ್ಯುತಿಗೊಳಿಸಬಹುದು.

ಅಧ್ಯಕ್ಷರು ಹಾಗೂ ಸದಸ್ಯರನ್ನು ಅನುಚಿತ ವರ್ತನೆಯ ಆಧಾರದ ಮೇಲೆಯೂ ರಾಷ್ಟ್ರಧ್ಯಕ್ಷರು ಪದಚ್ಯುತಿಗೊಳಿಸಬಹುದು. ಆದರೆ ಈ ಸಂಬಂಧ ಸರ್ವೋಚ್ಚ ನ್ಯಾಯಲಯವು ವಿಚಾರಣೆಯನ್ನು ನಡೆಸಿ ಶಿಫಾರಸು ಮಾಡಬೇಕು.



GNANADHARE IAS KAS ACADEMY

## ಕಾರ್ಯಗಳು :

1. ಆಯೋಗವು ಅಖಿಲ ಭಾರತ ಸೇವೆಗಳು, ಕೇಂದ್ರ ಸೇವೆಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅವಶ್ಯಕವಾದ ಸೇವೆಗಳಿಗೆ ಅಥವಾ ಎಲ್ಲಾ ಕಾರ್ಯಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತದೆ.
2. ರಾಜ್ಯಪಾಲರ ವಿನಂತಿಯ ಮೇರೆಗೆ ರಾಷ್ಟ್ರಾಧ್ಯ ಕ್ಷರ ಅನುಮೋದನೆಯೊಂದಿಗೆ ರಾಜ್ಯ ಸೇವೆಗಳಿಗೆ ಸಂಬಂಧಿಸಿದ ಕೆಲವು ಅಥವಾ ಎಲ್ಲಾ ಕಾರ್ಯಗಳನ್ನು ಕೇಂದ್ರ ಲೋಕಸೇವಾ ಆಯೋಗವು ನಿರ್ವಹಿಸುತ್ತದೆ.
3. ಆಯೋಗವು ನೇಮಕಾತಿ ವಿಧಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುತ್ತದೆ.
4. ಆಯೋಗವು ಬಡ್ತಿ ನೀಡಲು ಅನುಸರಿಸಬೇಕಾದ ತತ್ವಗಳ ಬಗೆಗ ಕೇಂದ್ರ ಸರ್ಕಾರಕ್ಕೆ ಸಳುಹೆ ನೀಡುತ್ತದೆ.
5. ಆಯೋಗವು ಒಂದು ಸೇವೆಯಿಂದ ಇನ್ನೊಂದು ಸೇವೆಗೆ ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುತ್ತದೆ.
6. ಆಯೋಗವು ಶಿಸ್ತು ಕ್ರಮಕ್ಕೆ ಸಂಬಂಧಿಸಿದ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ನೀಡುತ್ತದೆ.
7. ಆಯೋಗವು ಸೇವಾವಧಿಯನ್ನು ವಿಸ್ತಿರಿಸುವುದಕ್ಕೆ ಹಾಗೂ ಕೆಲವು ನಿವೃತ್ತ ಅಧಿಕಾರಿಗಳ ಮರನೇಮಕಾತಿಗೆ ಸಂಬಂದಿಸಿದ ಸಲಹೆಗಳನ್ನು ನೀಡುತ್ತದೆ.
8. ತನ್ನ ಕಾರ್ಯಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸುತ್ತದೆ.
9. ಆಯೋಗವು ರಾಷ್ಟ್ರಾಧ್ಯಕ್ಷರು ಇಚ್ಚಿಸಿದ್ದಲ್ಲಿ, ನಾಗರೀಕ ಸೇವಾ ವರ್ಗಕ್ಕೆ ಸಂಬಂಧಿಸಿದ ಯಾವುದೇ ಸಲಹೆಯನ್ನು ನೀಡುತ್ತದೆ.

## ಜಂಟಿ ಲೋಕಸೇವಾ ಆಯೋಗ :

ಭಾರತ ಸಂವಿಧಾನವು 2/2ಕ್ಕಿಂತ ಹೆಚ್ಚು ರಾಜ್ಯಗಳಿಗೆ ಒಂದು ಜಂಟಿ ಲೋಕಸೇವಾ ಆಯೋಗವನ್ನು ಸ್ಥಾಪಿಸಲು ಅವಕಾಶ ನೀಡುತ್ತದೆ. ಕೇಂದ್ರ ಲೋಕಸೇವಾ ಆಯೋಗ ಹಾಗೂ ರಾಜ್ಯ ಲೋಕಸೇವಾ ಆಯೋಗಗಳು ಸಂವಿಧಾನದಿಂದ ನೇರವಾಗಿ ರಚಿಸಲ್ಪಡುತ್ತದೆ. ಸಂಬಂಧಪಟ್ಟ ರಾಜ್ಯ ಶಾಸನ ಸಭೆಗಳ ವಿನಂತಿಯ ಮೇರೆಗೆ ಸಂಸತ್ತಿನ ಕಾಯ್ದೆಯ ಮೂಲಕ ಜಂಟಿ ಲೋಕಸೇವಾ ಆಯೋಗವನ್ನು ಸ್ಥಾಪಿಸಬಹುದು. ಹೀಗೆ ಜಂಟಿ ಲೋಕಸೇವಾ ಆಯೋಗವು ಒಂದು ಶಾಸನಾತ್ಮಕ ಸಂಸ್ಥೆಯೇ ಹೊರತು ಸಂವಿಧಾನದ ಸಂಸ್ಥೆ ಅಲ್ಲ. 1966ರಲ್ಲಿ ಪಂಜಾಬನ್ನು ವಿಭಜಿಸಿ ಪ್ರತ್ಯೇಕ ರಾಜ್ಯವನ್ನು ರಚಿಸಿದ ನಂತರ ಸ್ವಲ್ಪ ಕಾಲದವರೆಗೆ ಪಂಜಾಬ್ & ಹರಿಯಾಣ ಈ ಎರಡೂ ರಾಜ್ಯಗಳು ಒಂದು ಜಂಟಿ ಲೋಕಸೇವಾ ಆಯೋಗವನ್ನು ಹೊಂದಿದ್ದವು.

ಜಂಟಿ ಲೋಕಸೇವಾ ಆಯೋಗಗಳ ಅಧ್ಯಕ್ಷರು & ಸದಸ್ಯರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಅವರು 6 ವರ್ಷಗಳ ಅವಧಿ ಅಥವಾ 62 ವರ್ಷ ವಯಸ್ಸು, ಯಾವುದು ಮೊದಲಾಗುತ್ತದೆಯೋ ಅಲ್ಲಿಯವರೆಗೆ ಅಧಿಕಾರದಲ್ಲಿರುತ್ತಾರೆ. ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ಅಮಾನತುಗೊಳಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗೆ ಇದೆ. ಅಧ್ಯಕ್ಷರು ಹಾಗೂ ಸದಸ್ಯರು ರಾಷ್ಟ್ರಾಧ್ಯಕ್ಷರಿಗೆ ರಾಜೀನಾಮೆ ನೀಡುವುದರ ಮೂಲಕ ಪದತ್ಯಾಗ ಮಾಡಬಹುದು.

ಜಂಟಿ ಲೋಕಸೇವಾ ಆಯೋಗದ ಸದಸ್ಯರ ಸಂಖ್ಯೆಯನ್ನು & ಅವರ ಸೇವಾ ನಿಯಮಗಳನ್ನು ರಾಷ್ಟ್ರಾಧ್ಯಕ್ಷರು ನಿರ್ಧರಿಸುತ್ತಾರೆ. ಜಂಟಿ ರಾಜ್ಯ ಲೋಕಸೇವಾ ಆಯೋಗವು ತನ್ನ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಸಂಬಂಧಪಟ್ಟ ಎರಡೂ ರಾಜ್ಯಗಳ ರಾಜ್ಯಪಾಲರಿಗೆ ಸಲ್ಲಿಸಬೇಕು. ಈ ವರದಿಯನ್ನು ಇಬ್ಬರೂ ರಾಜ್ಯಪಾಲರು ತಮ್ಮ ತಮ್ಮ ರಾಜ್ಯ ಶಾಸನಸಭೆಗಳ ಮುಂದೆ ಮಂಡಿಸಬೇಕು.

## ರಾಜ್ಯ ಲೋಕಸೇವಾ ಆಯೋಗ :

ಸಂವಿಧಾನದ 315ನೇ ವಿಧಿಯು ಪ್ರತಿಯೊಂದು ರಾಜ್ಯಕ್ಕೆ ತನ್ನದೇ ಆದ ಲೋಕಸೇವಾ ಆಯೋಗವನ್ನು ಹೊಂದಲು ಅವಕಾಶ ನೀಡಿದೆ. ರಾಜ್ಯ ಲೋಕಸೇವಾ ಆಯೋಗವು ರಾಜ್ಯಸೇವೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡುತ್ತದೆ.

KARNATAKA PUBLIC SERVICE COMMISSION

ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು

KPSC

### ಒಟ್ಟು ಸದಸ್ಯರ ಸಂಖ್ಯೆ :

ರಾಜ್ಯ ಲೋಕಸೇವಾ ಆಯೋಗವು ಒಬ್ಬ ಅಧ್ಯಕ್ಷ & ಇತರ ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಸಂವಿಧಾನವು ಆಯೋಗದ ಸದಸ್ಯರ ಸಂಖ್ಯೆಯನ್ನು ನಿರ್ದಿಷ್ಟಪಡಿಸಿಲ್ಲ. ಆಯೋಗದ ಸದಸ್ಯ ಸಂಖ್ಯೆ & ಸೇವಾ ನಿಯಮಗಳನ್ನು ರಾಜ್ಯಪಾಲರು ನಿರ್ಧರಿಸುತ್ತಾರೆ.

### ನೇಮಕಾತಿ :

ರಾಜ್ಯಪಾಲರು ರಾಜ್ಯ ಮಂತ್ರಿ ಮಂಡಲದ ಸಲಹೆಯ ಮೇರೆಗೆ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸುತ್ತಾರೆ. ಆಯೋಗದ ಅರ್ಧದಷ್ಟು ಸದಸ್ಯರು ರಾಜ್ಯ ಸರ್ಕಾರದಲ್ಲಿ ಕನಿಷ್ಟ 10 ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು.

GNANADHARE IAS KAS ACADEMY

ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರ ಹುದ್ದೆ ತೆರವಾದಾಗ ಅಥವಾ ಗೈರುಹಾಜರಾದಾಗ ಅಧ್ಯಕ್ಷರಿಗೆ ತಮ್ಮ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದಿದ್ದಾಗ ರಾಜ್ಯ ಲೋಕಸೇವಾ ಅಯೋಗದ ಸದಸ್ಯರಲ್ಲಿಯೇ ಒಬ್ಬರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಬಹುದು. 1963ರ 15ನೇ ಸಂವಿಧಾನ ತಿದ್ದುಪಡಿ ಕಾಯ್ದೆಯು ರಾಜ್ಯ ಲೋಕಸೇವಾ ಆಯೋಗಕ್ಕೆ ಹಂಗಾಮಿ ಅಧ್ಯಕ್ಷರನ್ನು ನೇಮಿಸಲು ಅವಕಾಶ ಮಾಡಿಕೊಡುತ್ತದೆ. ಹಂಗಾಮಿ ಅಧ್ಯಕ್ಷರು ಅಧ್ಯಕ್ಷರಾಗಿ ನೇಮಕಗೊಂಡ ವ್ಯಕ್ತಿಯು ಅಧಿಕಾರವನ್ನು ವಹಿಸಿಕೊಳ್ಳುವವರೆಗೆ ಅಥವಾ ಅಧ್ಯಕ್ಷರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥನಾಗಿ ಅಧಿಕಾರ ಸ್ವೀಕರಿಸುವವರೆಗೆ ಹಂಗಾಮಿ ಅಧ್ಯಕ್ಷರು ಕಾರ್ಯನಿರ್ವಹಿಸುತ್ತಾರೆ.

## ಅಧಿಕಾರವಧಿ :

ರಾಜ್ಯ ಲೋಕಸೇವಾ ಆಯೋಗದ ಸದಸ್ಯರು 6 ವರ್ಷಗಳ ಕಾಲ ಅಥವಾ 65 ವರ್ಷಗಳು ತುಂಬುವವರೆಗೆ ಅಧಿಕಾರದಲ್ಲಿರುತ್ತಾರೆ. ರಾಜ್ಯಪಾಲರಿಗೆ ರಾಜೀನಾಮೆ ಸಲ್ಲಿಸುವ ಮೂಲಕ ಅವಧಿಗೆ ಮುನ್ನವೇ ಅಧಿಕಾರದಿಂದ ನಿರ್ಗಮಿಸಬಹುದು.

## ಪದಚ್ಯುತಿ :

ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು ಅಥವಾ ಸದಸ್ಯರ ದುರ್ನಡತೆಯ ಬಗ್ಗೆ ಸುಪ್ರಿಂಕೋರ್ಟ್ ವಿಚಾರಣೆ ನಡೆಸಿ, ಅಪಾದನೆಗೆ ಒಳಗಾಗಿವವರನ್ನು ಪದಚ್ಯುತಿಗೊಳಿಸಬೇಕೆಂದು ವರದಿ ಸಲ್ಲಿಸಿದರೆ ರಾಷ್ಟ್ರಾಧ್ಯಕ್ಷರು ಕ್ರಮ ಕೈಗೊಳ್ಳುತ್ತಾರೆ. ವಿಚಾರಣೆಯ ಸಮಯದಲ್ಲಿ ಅಧ್ಯಕ್ಷರು ಅಥವಾ ಸದಸ್ಯರನ್ನು ರಾಜ್ಯಪಾಲರು ಅಮಾನತ್ತಿನಲ್ಲಿಡಬಹುದು. ಅಲ್ಲದೇ ರಾಜ್ಯ ಲೋಕಸೇವಾ ಆಯೋಗದ ದಿವಾಳಿಯಾಗಿದ್ದರೆಂದು ತೀರ್ಮಾನಿಸಲ್ಪಟ್ಟರೆ ಅಥವಾ ತಮ್ಮ ಅಧಿಕಾರದ ಅವಧಿಯಲ್ಲಿ ವೇತನ ಪಡೆಯುವ ಬೇರೆ ಹುದ್ದೆಯಲ್ಲಿದ್ದರೆ ಅಥವಾ ಸೇವೆಯಲ್ಲಿ ಮುಂದುವರೆಯಲು ಅಸಮರ್ಥರು ಎಂದು ಅಭಿಪ್ರಾಯಪಟ್ಟರೆ ರಾಷ್ಟ್ರಾಧ್ಯಕ್ಷರು ಇವರನ್ನು ಪದಚ್ಯುತಿಗೊಳಿಸಬಹುದು.

## ಸೇವಾ ನಿಯಮಗಳು :

ಆಯೋಗದ ಅಧ್ಯಕ್ಷರು ಅಥವಾ ಸದಸ್ಯರ ಸೇವಾ ನಿಯಮಗಳನ್ನು ರಾಜ್ಯಪಾಲರೇ ನಿರ್ಧರಿಸುತ್ತಾರೆ. ಸದಸ್ಯರ ನೇಮಕದ ನಂತರ ಅವರಿಗೆ ಅನಾನುಕೂಲವಾಗುವಂತೆ ಸೇವಾ ನಿಯಮಗಳನ್ನು ಬದಲಾಯಿಸುವಂತಿಲ್ಲ.

## ವೇತನ:

ಆಯೋಗದ ಅಧ್ಯಕ್ಷರು ಅಥವಾ ಸದಸ್ಯರ ವೇತನವನ್ನು ಕಾಲಕಾಲಕ್ಕೆ ಶಾಸಕಂಗವು ನಿರ್ಧರಿಸುತ್ತದೆ. ಇವರ ವೇತನ, ಪಿಂಚಣಿ ಹಾಗೂ ಇತರೆ ಭತ್ಯೆಗಳನ್ನು ರಾಜ್ಯದ ಸಂಚಿತ ನಿಧಿಯಿಂದ ನೀಡಲಾಗುತ್ತದೆ.

# ಲೋಕಸೇವಾ ಆಯೋಗಗಳು :

| ಅನುಚ್ಛೇದಗಳು | ವಿವರಣೆ |
|---|---|
| 315ನೇ ಅನುಚ್ಛೇದ | 315(1) : ಒಕ್ಕೂಟಕ್ಕೆ ಒಂದು ಹಾಗೂ ಪ್ರತಿಯೊಂದು ರಾಜ್ಯಕ್ಕೂ ಒಂದೊಂದು ಲೊಕಸೇವಾ ಆಯೋಗ ಇರತಕ್ಕದ್ದು.<br>315(2) : ರಾಜ್ಯ ವಿಧಾನಮಂಡಲಗಳು ಒಂದು ನಿರ್ಣಯವನ್ನು ಅಂಗೀಕರಿಸಿದರೆ ಸಂಸತ್ತು ಆ ವಿಷಯಗಳಿಗಾಗಿ ಸೂಕ್ತ ಕಾನೂನು ರಚಿಸುವುದರೊಂದಿಗೆ 2/2ಕ್ಕಿಂತ ರಾಜ್ಯಗಳಿಗೆ ಒಂದೇ ಜಂಟಿ ಲೋಕಸೇವಾ ಆಯೋಗವನ್ನು ರಚಿಸಬಹುದು.<br>315(3) : ರಾಜ್ಯದ ರಾಜ್ಯಪಾಲರು ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದಂತೆ ಕೇಂದ್ರ ಲೋಕಸೇವಾ ಆಯೋಗದ ಸಹಾಯ ಬಯಸಿದರೆ ಕೇಂದ್ರ ಲೋಕಸೇವಾ ಆಯೋಗವು ರಾಷ್ಟ್ರಪತಿಯವರ ಅನುಮೋದನೆ ಪಡೆದು ಸಹಾಯ ಮಾಡಬಹುದು. |
| 316ನೇ ಅನುಚ್ಛೇದ | 316(1) : ಕೇಂದ್ರ ಹಾಗೂ ಜಂಟಿ ಲೋಕಸೇವಾ ಆಯೋಗಗಳ ಅಧ್ಯಕ್ಷ ಹಾಗೂ ಸದಸ್ಯರನ್ನು ಭಾರತದ ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ. ಹಾಗೂ ರಾಜ್ಯ ಲೋಕಸೇವಾ ಆಯೋಗಗಳ ಅಧ್ಯಕ್ಷ ಹಾಗೂ ಸದಸ್ಯರನ್ನು ರಾಜ್ಯದ ರಾಜ್ಯಪಾಲರು ನೇಮಕ ಮಾಡುತ್ತಾರೆ. ಪ್ರತಿಯೊಂದು ಲೋಕಸೇವಾ ಆಯೋಗದ ಸದಸ್ಯರಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಅರ್ಧದಷ್ಟು ಸದಸ್ಯರು ಕೇಂದ್ರ ಅಥವಾ ರಾಜ್ಯ ಸರ್ಕಾರದಲ್ಲಿ ಕನಷ್ಠ ಪಕ್ಷ 10 ವರ್ಷ ಸೇವೆ ಸಲ್ಲಿಸಿದವರಾಗಿರಬೇಕು.<br>316(1ಎ) : ಕೇಂದ್ರ ಹಾಗೂ ರಾಜ್ಯ ಲೋಕಸೇವಾ ಆಯೋಗದ ಸದಸ್ಯರು ಕಾರಣಾಂತರಗಳಿಂದ ಗೈರುಹಾಜರಾದರೆ ಕೇಂದ್ರ ಹಾಗೂ ಜಂಟೀ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿ ಹಾಗೂ ರಾಜ್ಯ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಆಯೋಗದ ಸದಸ್ಯರಲ್ಲೇ ಒಬ್ಬರನ್ನು ಲೋಕಸೇವಾ ಆಯೋಗದ ಅಧ್ಯಕ್ಷ ಸ್ಥಾನದ ಕರ್ತವ್ಯಗಳನ್ನು ನೆರವೇರಿಸಲು ನೇಮಿಸಬಹುದು. |

GNANADHARE IAS KAS ACADEMY

| | |
|---|---|
| | 316(2) : ಕೇಂದ್ರ ಲೋಕಸೇವಾ ಆಯೋಗದ ಸದಸ್ಯರು ತಾವು ಅಧಿಕಾರ ವಹಿಸಿಕೊಂಡ ದಿನದಿಂದ 6ವರ್ಷಗಳವರೆಗೆ ಅಥವಾ ತಮ್ಮ ವಯಸ್ಸಿನ 65 ವರ್ಷಗಳವರೆಗೆ ಅಧಿಕಾರದಲ್ಲಿರುತ್ತಾರೆ.<br>ರಾಜ್ಯ ಲೋಕಸೇವಾ ಆಯೋಗ ಹಾಗೂ ಜಂಟೀ ಲೋಕಸೇವಾ ಆಯೋಗದ ತಾವು ಅಧಿಕಾರ ವಹಿಸಿಕೊಂಡ ದಿನದಿಂದ 6ವರ್ಷಗಳವರೆಗೆ ಅಥವಾ ತಮ್ಮ ವಯಸ್ಸಿನ 62 ವರ್ಷಗಳವರೆಗೆ ಅಧಿಕಾರದಲ್ಲಿರುತ್ತಾರೆ.<br>ಕೇಂದ್ರ ಲೋಕಸೇವಾ ಆಯೋಗ ಜಂಟೀ ಲೋಕಸೇವಾ ಆಯೋಗದ ಸದಸ್ಯರು ರಾಷ್ಟ್ರಪತಿಯವರಿಗೆ ಹಾಗೂ ರಾಜ್ಯ ಲೋಕಸೇವಾ ಆಯೋಗದ ಸದಸ್ಯರು ರಾಜ್ಯಪಾಲರಿಗೆ ತಾವು ಸಹಿ ಮಾಡಿದ ರಾಜೀನಾಮೆ ಪತ್ರವನ್ನು ನೀಡುವ ಮೂಲಕ ತಮ್ಮ ಸ್ಥಾನದಿಂದ ನಿರ್ಗಮಿಸಬಹುದು |
| 317ನೇ ಅನುಚ್ಛೇದ | ಕೇಂದ್ರ ಲೋಕಸೇವಾ ಆಯೋಗ ಹಾಗೂ ಜಂಟೀ ಲೋಕಸೇವಾ ಆಯೋಗದ ಯಾವುದೇ ಸದಸ್ಯರ ದುವರ್ತನೆಯ ಕಾರಣದ ಮೇಲೆ ರಾಷ್ಟ್ರಪತಿ, ರಾಜ್ಯ ಲೋಕಸೇವಾ ಆಯೋಗ ಸದಸ್ಯರ ದುವರ್ತನೆಯ ಆದಾರದ ಮೇಲೆ ರಾಜ್ಯಪಾಲರು ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಪಡೆದು ಅಧಿಕಾರದಿಂದ ತೆಗೆಯಬಹುದು.<br>ಲೋಕಸೇವಾ ಆಯೋಗ ಅಧ್ಯಕ್ಷ ಹಾಗೂ ಸದಸ್ಯರಲ್ಲಿ ಯಾರಾದರೂ ದಿವಾಳಿ ಎಂದು ನಿರ್ಣಾಯಿಸಲ್ಪಟ್ಟರೆ, ಬೇರೆ ವೇತನ ಪಡೆಯುವ ಯಾವುದೇ ಉದ್ಯೋಗದಲ್ಲಿ ತೊಡಗಿದ್ದರೆ, ಮಾನಸಿಕವಾಗಿ & ಶಾರೀರಿಕವಾಗಿ ದೌರ್ಬಲ್ಯದ ಕಾರಣದ ಆದಾರದ ಮೇಲೆ ರಾಷ್ಟ್ರಪತಿಯು ಅಂತಹ ಅಧ್ಯಕ್ಷ & ಸದಸ್ಯರನ್ನು ಒಂದು ಆದೇಶದ ಮೂಲಕ ಅಧಿಕಾರದಿಂದ ತೆಗೆದುಹಾಕಬಹುದು. |
| 318ನೇ ಅನುಚ್ಛೇದ | ಕೇಂದ್ರ ಲೋಕಸೇವಾ ಆಯೋಗ ಹಾಗೂ ಜಂಟೀ ಲೋಕಸೇವಾ ಆಯೋಗದ ಸಂದರ್ಭದಲ್ಲಿ ರಾಷ್ಟ್ರಪತಿಯು ಹಾಗೂ ರಾಜ್ಯ ಲೋಕಸೇವಾ ಆಯೋಗದ ಸಂದರ್ಭದಲ್ಲಿ ರಾಜ್ಯಪಾಲರು ಆಯೋಗದ ಸದಸ್ಯರ ಸಂಖ್ಯೆಯನ್ನು & ಅವರ ಸೇವಾ ಷರತ್ತುಗಳನ್ನು & ಆಯೋಗದ ಸಿಬ್ಬಂದಿಯ ಸಂಖ್ಯೆ & ಅವರ ಸೇವಾ ಷರತ್ತುಗಳ ಬಗ್ಗೆ ನಿಬಂಧನೆಗಳನ್ನು ಮಾಡಬಹುದು |
| 319ನೇ ಅನುಚ್ಛೇದ | ಲೋಕಸೇವಾ ಆಯೋಗದ ಸದಸ್ಯರು ಸದಸ್ಯರಾಗಿರುವುದು ನಿಂತ ಮೇಲೆ ಕೇಂದ್ರ & ರಾಜ್ಯ ಸರ್ಕಾರದ ಅಧೀನದ ಯಾವುದೇ ಉದ್ಯೋಗವನ್ನು ಪಡೆಯಲು ನಿಷೇಧಿಸಲಾಗಿದೆ. |
| 320ನೇ ಅನುಚ್ಛೇದ | **ಲೋಕಸೇವಾ ಆಯೋಗದ ಕಾರ್ಯಗಳು:**<br>320(1) : ಒಕ್ಕೂಟದ ಸೇವೆಗಳಿಗೆ ಕೇಂದ್ರ ಲೋಕಸೇವಾ ಆಯೋಗ ರಾಜ್ಯಸೇವೆಗಳಿಗೆ ರಾಜ್ಯ ಲೋಕಸೇವಾ ಆಯೋಗ ನೇಮಕಾತಿಗಳಿಗಾಗಿ ಪರೀಕ್ಷೆ ನಡೆಸುವುದು<br>320(2) : ಯಾವುದೇ 2/82ಕ್ಕಿಂತ ಹೆಚ್ಚು ರಾಜ್ಯಗಳು ಯಾವುದೇ ಸೇವೆಗಳಿಗೆ |

| | |
|---|---|
| | ವಿಶೇಷ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಅಗತ್ಯವಾಗಿರುವ ನೇಮಕಾತಿ ಯೋಜನೆಯನ್ನು ರೂಪಿಸುವುದಕ್ಕಾಗಿ & ಜಾರಿಗೆ ತರುವುದಕ್ಕಾಗಿ ಕೇಂದ್ರ ಲೋಕಸೇವಾ ಆಯೋಗವನ್ನು ಕೋರಿದರೆ ಆ ರಾಜ್ಯಗಳಿಗೆ ಸಹಾಯ ಮಾಡುವುದು ಕೇಂದ್ರ ಲೋಕಸೇವಾ ಆಯೋಗದ ಕರ್ತವ್ಯವಾಗಿದೆ.<br>320(3) : ರಾಜ್ಯ ಲೋಕಸೇವಾ ಆಯೋಗದ ಸಂದರ್ಭನುಸಾರ ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಲೋಕಸೇವಾ ಆಯೋಗದೊಡನೆ ಸಮಾಲೋಚಿಸಬಹುದು<br>• ಸಿವಿಲ್ ಸೇವೆಗಳಿಗೆ ಅಥವಾ ಸಿವಿಲ್ ಹುದ್ದೆಗಳ ನೇಮಕಾತಿಗಳಿಗೆ ಸಂಬಂಧಪಟ್ಟ ವಿಧಾನಗಳ ವಿಷಯಗಳ ಬಗ್ಗೆ.<br>• ಸಿವಿಲ್ ಸೇವೆಗಳಿಗೆ & ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡುವಲ್ಲಿ & ಬಡ್ತಿಗಳನ್ನು ನೀಡುವಲ್ಲಿ, ಒಂದು ಸೇವೆಯಿಂದ ಇನ್ನೊಂದು ಸೇವೆಗೆ ವರ್ಗಾವಣೆ ಮಾಡುವಲ್ಲಿ ಅನುಸರಿಸಬೇಕಾದ ತತ್ವಗಳು ಹಾಗೂ ಅಭ್ಯರ್ಥಿಗಳ ಸೂಕ್ತತೆಯ ಬಗ್ಗೆ.<br>• ಕೇಂದ್ರ ಹಾಗೂ ಸರ್ಕಾರಿ ನೌಕರ ನಿರ್ವಹಿಸಿದ ಕಾರ್ಯಗಳ ಬಗ್ಗೆ ಅವರ ವಿರುದ್ಧ ಹೂಡಲಾದ ಕಾನೂನು ಮೊಕದ್ದಮೆಯಲ್ಲಿ ಪ್ರತಿ ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ತಗುಲುವ ಯಾವುದೇ ವೆಚ್ಚವನ್ನು ಭಾರತ ಸಂಚಿತ ನಿಧಿಯಿಂದ ಅಥವಾ ಸಂದರ್ಭನುಸಾರ ರಾಜ್ಯ ಸಂಚಿತ ನಿಧಿಯಿಂದ ಸಂದಾಯ ಮಾಡಬೇಕೆಂದು ಮಾಡಿದ ದಾವೆಗಳ ಬಗ್ಗೆ.<br>• ಕೇಂದ್ರ ಹಾಗೂ ಸರ್ಕಾರಿ ನೌಕರರು ಸಿವಿಲ್ ಹುದ್ದೆಯಲ್ಲಿ ಸೇವೆ ಸಲ್ಲಿಸುವಾಗ ವ್ಯಕ್ತಿಗೆ ಉಂಟಾದ ಹಾನಿಯ ಸಂದರ್ಭದಲ್ಲಿ ನಿವೃತ್ತಿ ವೇತನ ಸಂದಾಯದ ದಾವೆ & ನೀಡಬೇಕಾದ ಮೊತ್ತ ಎಷ್ಟು ಎಂಬುದರ ಬಗ್ಗೆ.<br>• ರಾಷ್ಟ್ರಪತಿ ಹಾಗೂ ರಾಜ್ಯಪಾಲರು ಸಂದರ್ಭಕ್ಕನುಸಾರವಾಗಿ ಲೋಕಸೇವಾ ಆಯೋಗದ ಸಲಹೆಯನ್ನು ಕೇಳಿದಾಗ ನೀಡುವುದು ಲೋಕಸೇವಾ ಆಯೋಗದ ಕರ್ತವ್ಯ. |
| 321ನೇ ಅನುಚ್ಛೇದ | ಸಂಸತ್ತು ಅಥವಾ ರಾಜ್ಯ ವಿಧಾನಮಂಡಲ ಸಂದರ್ಭಕ್ಕನುಸಾರ ಕೇಂದ್ರ ಲೋಕಸೇವಾ ಆಯೋಗ ಹಾಗೂ ರಾಜ್ಯ ಲೋಕಸೇವಾ ಆಯೋಗಗಳ ಹೆಚ್ಚಿನ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕಾನೂನುಗಳನ್ನು ರೂಪಿಸುವುದು. |
| 322ನೇ ಅನುಚ್ಛೇದ | ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಿಗೆ ಹಾಗೂ ಸಿಬ್ಬಂದಿಗೆ ವೇತನ, ಭತ್ಯೆ ಹಾಗೂ ನಿವೃತ್ತಿ ವೇತನಗಳನ್ನು ಭಾರತ ಸಂಚಿತ ನಿಧಿಯಿಂದ ಸಂದಾಯ ಮಾಡಲಾಗುತ್ತದೆ. ರಾಜ್ಯ ಲೋಕಸೇವಾ ಆಯೋಗದ ಸದಸ್ಯರ & ಸಿಬ್ಬಂದಿಯ ವೇತನ, ಭತ್ಯೆ ಹಾಗೂ ನಿವೃತ್ತಿ ವೇತನವನ್ನು ರಾಜ್ಯ ಸಂಚಿತ ನಿಧಿಯಿಂದ |

GNANADHARE IAS KAS ACADEMY

| | |
|---|---|
| | ಭರಿಸಲಾಗುತ್ತದೆ. |
| 323ನೇ ಅನುಚ್ಛೇದ | 323(1) : ಕೇಂದ್ರ ಲೋಕಸೇವಾ ಆಯೋಗ ತಾನು ಪ್ರತಿ ವರ್ಷ ಮಾಡಿದ ಕಲಸದ ಬಗ್ಗೆ ವರದಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸುವುದು. ರಾಷ್ಟ್ರಪತಿಯವರು ಆ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸಲು ಕ್ರಮಕೈಗೊಳ್ಳುವುದು.<br>323(2) : ರಾಜ್ಯ ಲೋಕಸೇವಾ ಆಯೋಗವು ತಾನು ಪ್ರತಿ ವರ್ಷ ಮಾಡಿದ ಕೆಲಸದ ಬಗ್ಗೆ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸುವುದು ಹಾಗೂ ಜಂಟಿ ಲೋಕಸೇವಾ ಆಯೋಗವು ಯಾವ ರಾಜ್ಯಗಳ ಅವಶ್ಯಕತೆಗಳ ಪೂರೈಕೆಗಾಗಿ ಇದೆಯೋ ಅಂತಹ ಪ್ರತಿಯೊಂದು ರಾಜ್ಯದ ರಾಜ್ಯಪಾಲರಿಗೆ ಪ್ರತಿ ವರ್ಷದ ವಾರ್ಷಿಕ ವರದಿಯನ್ನು ಒಪ್ಪಿಸುವುದು. ರಾಜ್ಯಪಾಲರು ಆಯೋಗದ ವರದಿಯನ್ನು ರಾಜ್ಯ ವಿಧಾನಮಂಡಲದ ಮುಂದೆ ಇರಿಸಲು ಕ್ರಮಕೈಗೊಳ್ಳುವುದು. |

## ಹಣಕಾಸು ಆಯೋಗ :

ಸಂವಿಧಾನದ 280ನೇ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರು ಪ್ರತಿ 5 ವರ್ಷಗಳಿಗೊಮ್ಮೆ ಹಣಕಾಸು ಆಯೋಗವನ್ನು ರಚಿಸುತ್ತಾರೆ.

### ಕಾರ್ಯಗಳು :

1. ಕೇಂದ್ರ ಹಾಗೂ ರಾಜ್ಯ ನಡುವಣ ಆದಾಯದ ಹಂಚಿಕೆಗೆ ಸಂಬಂಧಿಸಿದಂತೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡುತ್ತದೆ.
2. ಯಾವ ನಿಯಮಗಳನ್ನು ಅನುಸರಿಸಿ ಕೇಂದ್ರವು ಭಾರತದ ಸಂಚಿತ ನಿಧಿಯಿಂದ ರಾಜ್ಯಗಳಿಗೆ ಧನಸಹಾಯ ಮಾಡಬೇಕು ಎಂಬುದರ ಬಗೆಗೆ ರಾಷ್ಟ್ರಾಧ್ಯಕ್ಷರಿಗೆ ಸಲಹೆ ನೀಡುತ್ತದೆ.
3. ಉತ್ತಮ ಹಣಕಾಸು ಸ್ಥಿತಿಯನ್ನು ಕಾಪಾಡಲು ರಾಷ್ಟ್ರಾಧ್ಯಕ್ಷರು ಕೇಳುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸಲಹೆ ನೀಡುತ್ತದೆ.

ಆಯೋಗವು ತಮಗೆ ಸಲ್ಲಿಸುವ ವರದಿಯನ್ನು ರಾಷ್ಟ್ರಾಧ್ಯಕ್ಷರು ಸಂಸತ್ತಿನಲ್ಲಿ ಮಂಡಿಸುತ್ತಾರೆ. ಈ ಆಯೋಗದ ಸಲಹೆಗಳನ್ನು ಕೇಂದ್ರ ಸರ್ಕಾರ ಒಪ್ಪಬಹುದು ಅಥವಾ ತಿರಸ್ಕರಿಸಬಹುದು. ಶ್ರೀ. ವೈ.ವಿ.ರೆಡ್ಡಿಯವರು 14ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದಾರೆ.



GNANADHARE IAS KAS ACADEMY

# ಹಣಕಾಸಿನ ಆಯೋಗಗಳು :

| ಕ್ರ.ಸಂ | ಹಣಕಾಸು ಆಯೋಗ | ರಚನೆಯಾದ ವರ್ಷ | ಅಧ್ಯಕ್ಷತೆ | ಕಾಲಾವಧಿ |
|---|---|---|---|---|
| 1 | 1ನೇ ಆಯೋಗ | 1951 | ಕೆ.ಸಿ. ನಿಯೋಗಿ | 1952–1957 |
| 2 | 2ನೇ ಆಯೋಗ | 1956 | ಕೆ. ಸಂತನಮ್ | 1957–1962 |
| 3 | 3ನೇ ಆಯೋಗ | 1960 | ಎ.ಕೆ ಚಂದಾ | 1962–1966 |
| 4 | 4ನೇ ಆಯೋಗ | 1964 | ಪಿ.ವ್ಹಿ. ರಾಜಮನ್ನಾರ | 1966–1969 |
| 5 | 5ನೇ ಆಯೋಗ | 1968 | ಮಹಾವೀರ ತ್ಯಾಗಿ | 1969–1974 |
| 6 | 6ನೇ ಆಯೋಗ | 1972 | ಕೆ. ಬ್ರಹ್ಮಾನಂದ ರೆಡ್ಡಿ | 1974–1979 |
| 7 | 7ನೇ ಆಯೋಗ | 1977 | ಜೆ.ಎಂ. ಶೀಲ್ಲೇಟ್ | 1979–1984 |
| 8 | 8ನೇ ಆಯೋಗ | 1983 | ವೈ.ಬಿ ಚವ್ಹಾಣ್ | 1984–1989 |
| 9 | 9ನೇ ಆಯೋಗ | 1987 | ಎನ್. ಕೆ. ಸಾಳ್ವೆ | 1989–1995 |
| 10 | 10ನೇ ಆಯೋಗ | 1992 | ಕೆ.ಸಿ. ಪಂತ್ | 1995–2000 |
| 11 | 11ನೇ ಆಯೋಗ | 1998 | ಎ.ಎಂ. ಖುಸ್ರೊ | 2000–2005 |
| 12 | 12ನೇ ಆಯೋಗ | 2003 | ಸಿ. ರಂಗರಾಜನ್ | 2005–2010 |
| 13 | 13ನೇ ಆಯೋಗ | 2007 | ವಿಜಯ ಕೇಳ್ಕರ್ | 2010–2015 |
| 14 | 14ನೇ ಆಯೋಗ | | ವೈ.ವಿ. ರೆಡ್ಡಿ | 2015–2020 |
| 15 | 15ನೇ ಆಯೋಗ | | ಎನ್.ಕೆ. ಸಿಂಗ್ | 2020–2025 |

GNANADHARE IAS KAS ACADEMY

# ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ :

1990ರಲ್ಲಿ ಜಾರಿಗೆ ಬಂದ 65ನೇ ತಿದ್ದುಪಡಿ ಕಾಯ್ದೆಯನ್ವಯ, 338ನೇ ವಿಧಿಯನ್ನು ತಿದ್ದುಪಡಿ ಮಾಡಲಾಗಿ, ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ವಿಶೇಷ ಅಧಿಕಾರಿಯ ಸ್ಥಾನದಲ್ಲಿ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು ರಚಿಸಲು ಅವಕಾಶ ಕಲ್ಪಿಸಲಾಯಿತು. ಈ ಅಯೋಗವು ಅಧ್ಯಕ್ಷ, ಉಪಾಧ್ಯಕ್ಷ ಹಾಗೂ 5 ಮಂದಿ ಇತರೆ ಸದಸ್ಯರುಗಳನ್ನು ಒಳಗೊಂಡಿತ್ತು. ಇವರನ್ನು ಮಂತ್ರಿಮಂಡಲದ ಸಲಹೆಯ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಕ ಮಾಡುತ್ತಿದ್ದರು. 2003ರಲ್ಲಿ ಜಾರಿಗೆ ಬಂದ 89ನೇ ಸಂವಿಧಾನ ತಿದ್ದುಪಡಿ ಕಾಯ್ದೆಯನ್ವಯ 338ನೇ ವಿಧಿಯನ್ನು ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು

1. ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ
2. ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ

ಎಂದು ಇಬ್ಭಾಗ ಮಾಡಿ, ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕ ಆಯೋಗಗಳನ್ನು ಅಸ್ತಿತ್ವಕ್ಕೆ ತರಲಾಯಿತು. ಪರಿಶಿಷ್ಟ ಜಾತಿಗಳ ಪ್ರತ್ಯೇಕ ಆಯೋಗವು 2004ರಲ್ಲಿ ಅಸ್ತಿತ್ವಕ್ಕೆ ಬಂದಿತು.

ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗವು ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ ಹಾಗೂ ಇತರೆ 3 ಸದಸ್ಯರುಗಳನ್ನು ಹೊಂದಿದೆ. ಇವರನ್ನು ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಸಲಹೆಯ ಮೆರೆಗೆ ನೇಮಿಸುತ್ತಾರೆ. ಇವರ ಅಧಿಕಾರವಧಿ & ಸೇವಾ ನಿಯಮಗಳನ್ನು ರಾಷ್ಟ್ರಾಧ್ಯಕ್ಷರು ನಿರ್ಧರಿಸುತ್ತಾರೆ. ಅಯೋಗದ ಸದಸ್ಯರ ಅಧಿಕಾರವಧಿ 3 ವರ್ಷಗಳು.

## ಅಯೋಗದ ಕಾರ್ಯಗಳು :

1. ಪರಿಶಿಷ್ಟ ಜಾತಿಗಳಿಗೆ ಸಂವಿಧಾನ ಹಾಗೂ ಕಾನೂನುಗಳು ನೀಡಿರುವ ರಕ್ಷಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಪರಿಶೀಲಿಸುತ್ತದೆ & ಅವುಗಳು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂದು ಮೌಲ್ಯಮಾಪನ ಮಾಡುತ್ತದೆ.
2. ಪರಿಶಿಷ್ಟ ಜಾತಿಗಳ ಹಕ್ಕು & ರಕ್ಷಣೆಗೆ ತೊಂದರೆಯಾದಲ್ಲಿ ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತದೆ.
3. ಪರಿಶಿಷ್ಟ ಜಾತಿಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ನೀಡುತ್ತದೆ.

4. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ವರ್ಗಗಳ ಅಭಿವೃದ್ಧಿಯನ್ನು ಎಷ್ಟರ ಮಟ್ಟಿಗೆ ಸಾಧಿಸಿವೆ ಎಂದು ಮೌಲ್ಯಮಾಪನ ಮಾಡುತ್ತದೆ.
5. ಪರಿಶಿಷ್ಟ ಜಾತಿಗಳ ರಕ್ಷಣೆ, ಕಲ್ಯಾಣ ಹಾಗೂ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಸಂವಿಧಾನದಿಂದ ನೀಡಲ್ಪಟ್ಟ ರಕ್ಷಣೋಪಾಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುವುದು.
6. ಪರಿಶಿಷ್ಟ ಜಾತಿಗಳ ರಕ್ಷಣೆ, ಅಭಿವೃದ್ಧಿ ಹಾಗೂ ಪ್ರಗತಿಯನ್ನು ಸಾಧಿಸಲು ರಾಷ್ಟ್ರಾಧ್ಯಕ್ಷರು ವಹಿಸುವ ಇತರ ಕಾರ್ಯಗಳನ್ನು ನಿರ್ವಹಿಸುವುದು.

## ಆಯೋಗದ ಅಧಿಕಾರಗಳು :

1. ಭಾರತದ ಯವುದೇ ಭಾಗದಲ್ಲಿರುವ ಯಾವುದೇ ವ್ಯಕ್ತಿಯನ್ನು ತನ್ನ ಮುಂದೆ ಹಾಜರಾಗುವಂತೆ ಸಮನ್ಸ್ ನೀಡುವುದು.
2. ದಾಖಲೆಗಳನ್ನು ಒದಗಿಸುವಂತೆ ಆಜ್ಞೆ ಮಾಡುವುದು.
3. ಸಾಕ್ಷ್ಯಗಳನ್ನು ಸ್ವೀಕರಿಸುವುದು.
4. ಸಾಕ್ಷ್ಯ ಹಾಗೂ ದಾಖಲೆಳನ್ನು ಪರೀಕ್ಷಿಸುವಂತೆ ಅಜ್ಞಾಪಿಸುವುದು.
5. ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಗಳನ್ನು ತರಿಸಿಕೊಳ್ಳುವುದು.
6. ರಾಷ್ಟ್ರಾಧ್ಯಕ್ಷರು ನಿರ್ಧರಿಸುವ ಇತರ ವಿಷಯಗಳನ್ನು ಪರೀಕ್ಷಿಸಲು ಆದೇಶ ನೀಡುವುದು.

# ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ :

2003ರಲ್ಲಿ ಜಾರಿಗೆ ಬಂದ 89ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಪ್ರಕಾರ 338ನೇ ವಿಧಿಯನ್ನು ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗವನ್ನು ಇಬ್ಭಾಗ ಮಾಡಿ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕ ಆಯೋಗಗಳನ್ನು ರಚಿಸಲು ಅವಕಾಶ ಕಲ್ಪಿಸಲಾಯಿತು. 89ನೇ ತಿದ್ದುಪಡಿ ಮೂಲಕ ಸಂವಿಧಾನಕ್ಕೆ 338-ಎ ವಿಧಿಯನ್ನು ಸೇರಿಸಿ ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕ ರಾಷ್ಟ್ರೀಯ ಆಯೋಗವನ್ನು ರಚಿಸಲಾಯಿತು. ಅದನ್ನು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗ ಎಂದು ಕರೆಯಲಾಯಿತು. ಪರಿಶಿಷ್ಟ ಪಂಗಡಗಳ ಪ್ರತ್ಯೇಕ ರಾಷ್ಟ್ರೀಯ ಆಯೋಗವು 2004ರಲ್ಲಿ ಅಸ್ತಿತ್ವಕ್ಕೆ ಬಂದಿತು.

ಆಯೋಗವು ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ ಹಾಗೂ ಇತರೆ 3 ಪೂರ್ಣಕಾಲಿಕ ಸದಸ್ಯರುಗಳನ್ನು ಹೊಂದಿದೆ. ಆಯೋಗದ ಅಧಿಕಾರವಧಿ & ಸೇವಾ ನಿಯಮಗಳನ್ನು ರಾಷ್ಟ್ರಾಧ್ಯಕ್ಷರು ನಿರ್ಧರಿಸುತ್ತಾರೆ. ಆಯೋಗದ ಸದಸ್ಯರ ಅಧಿಕಾರವಧಿ 3 ವರ್ಷಗಳು.

## ಆಯೋಗದ ಕಾರ್ಯಗಳು :

1. ಪರಿಶಿಷ್ಟ ಪಂಗಡಗಳಿಗೆ ಸಂವಿಧಾನ ಹಾಗೂ ಕಾನೂನುಗಳು ನೀಡಿರುವ ರಕ್ಷಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಪರಿಶೀಲಿಸುವುದು & ಅವುಗಳು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂದು ಮೌಲ್ಯಮಾಪನ ಮಾಡುತ್ತದೆ.
2. ಪರಿಶಿಷ್ಟ ಪಂಗಡಗಳ ಹಕ್ಕು & ರಕ್ಷಣೆಗೆ ತೊಂದರೆಯಾದಲ್ಲಿ ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತದೆ.
3. ಪರಿಶಿಷ್ಟ ಪಂಗಡಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ನೀಡುತ್ತದೆ.
4. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ವರ್ಗಗಳ ಅಭಿವೃದ್ಧಿಯನ್ನು ಎಷ್ಟರ ಮಟ್ಟಿಗೆ ಸಾಧಿಸಿವೆ ಎಂದು ಮೌಲ್ಯಮಾಪನ ಮಾಡುತ್ತದೆ.
5. ಪರಿಶಿಷ್ಟ ಪಂಗಡಗಳ ರಕ್ಷಣೆ, ಕಲ್ಯಾಣ ಹಾಗೂ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಸಂವಿಧಾನದಿಂದ ನೀಡಲ್ಪಟ್ಟ ರಕ್ಷಣೋಪಾಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುವುದು.
6. ಪರಿಶಿಷ್ಟ ಪಂಗಡಗಳ ರಕ್ಷಣೆ, ಅಭಿವೃದ್ಧಿ ಹಾಗೂ ಪ್ರಗತಿಯನ್ನು ಸಾಧಿಸಲು ರಾಷ್ಟ್ರಾಧ್ಯಕ್ಷರು ವಹಿಸುವ ಇತರ ಕಾರ್ಯಗಳನ್ನು ನಿರ್ವಹಿಸುವುದು

GNANADHARE IAS KAS ACADEMY

## ಆಯೋಗದ ಅಧಿಕಾರಗಳು :

1. ಭಾರತದ ಯವುದೇ ಭಾಗದಲ್ಲಿರುವ ಯಾವುದೇ ವ್ಯಕ್ತಿಯನ್ನು ತನ್ನ ಮುಂದೆ ಹಾಜರಾಗುವಂತೆ ಸಮನ್ಸ್ ನೀಡುವುದು.
2. ದಾಖಲೆಗಳನ್ನು ಒದಗಿಸುವಂತೆ ಆಜ್ಞೆ ಮಾಡುವುದು.
3. ಸಾಕ್ಷ್ಯಗಳನ್ನು ಸ್ವೀಕರಿಸುವುದು.
4. ಸಾಕ್ಷ್ಯ ಹಾಗೂ ದಾಖಲೆಳನ್ನು ಪರೀಕ್ಷಿಸುವಂತೆ ಅಜ್ಞಾಪಿಸುವುದು.
5. ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಗಳನ್ನು ತರಿಸಿಕೊಳ್ಳುವುದು.
6. ರಾಷ್ಟ್ರಾಧ್ಯಕ್ಷರು ನಿರ್ಧರಿಸುವ ಇತರ ವಿಷಯಗಳನ್ನು ಪರೀಕ್ಷಿಸಲು ಆದೇಶ ನೀಡುವುದು

## ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗ :

ಮಂಡಲ್ ಪ್ರಕರಣದ ತೀರ್ಪಿನಲ್ಲಿ ಸುಪ್ರಿಂಕೋರ್ಟ್ ನೀಡಿದ ನಿರ್ದೇಶನದ ಪ್ರಕಾರ, ಕೇಂದ್ರದಲ್ಲಿ ಶಾಶ್ವತವಾಗಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಿರುವ ಉದ್ದೇಶದಿಂದ ಭಾರತ ಸರ್ಕಾರವು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗ ಕಾಯ್ದೆ, 1993ನ್ನು ಪಾಸು ಮಾಡಿತು. ಸಾಮಾಜಿಕವಾಗಿ & ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಸ್ಥಿತಿಗತಿಗಳು & ಈ ವರ್ಗಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು, ಅವುಗಳ ಅಭಿವೃದ್ಧಿಗಾಗಿ ಸೂಕ್ತ ಶಿಫಾರಸು ಮಾಡಲು ಒಂದು ಆಯೋಗವನ್ನು ಸ್ಥಾಪಿಸಲು ಸಂವಿಧಾನದ 340ನೇ ವಿಧಿ ಅವಕಾಶ ಮಾಡಿಕೊಡುತ್ತದೆ.

ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗ ಕಾಯ್ದೆ ಏಪ್ರಿಲ್ 2, 1993ರಲ್ಲಿ ಜಾರಿಗೆ ಬಂದಿತು. ಈ ಕಾಯ್ದೆಯನ್ವಯ ಆಯೋಗವು 5 ಮಂದಿ ಸದಸ್ಯರನ್ನು ಹೊಂದಿರತಕ್ಕದ್ದು. 5 ಮಂದಿ ಸದಸ್ಯರ ಪೈಕಿ ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್ ನಿವೃತ್ತ ಅಥವಾ ಸೇವೆಯಲ್ಲಿರುವ ನ್ಯಾಯಾಧೀಶರು ಆಯೋಗದ ಅಧ್ಯಕ್ಷರಾಗುತ್ತಾರೆ.

ಒಬ್ಬ ಸಮಾಜ ವಿಜ್ಞಾನಿ, ಹಿಂದುಳಿದವರ್ಗಗಳ ಬಗೆಗೆ ವಿಶೇಷ ಜ್ಞಾನವನ್ನು ಹೊಂದಿದ ಇಬ್ಬರು ವ್ಯಕ್ತಿಗಳು ಹಾಗೂ ಒಬ್ಬ ಸದಸ್ಯ ಕಾರ್ಯದರ್ಶಿ ಇವರು ಆಯೋಗದ 4 ಮಂದಿ ಇತರ ಸದಸ್ಯರಾಗಿರುತ್ತಾರೆ.

GNANADHARE IAS KAS ACADEMY

# ಸಂವಿಧಾನೇತರ ಸಂಸ್ಥೆಗಳು :

## ರಾಷ್ಟ್ರೀಯ ಅಭಿವೃದ್ಧಿ ಮಂಡಳಿ :

ಭಾರತ ಸರ್ಕಾರದ ಕಾರ್ಯಾಂಗದ ಗೊತ್ತುವಳಿಯ ಮೂಲಕ 1952ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯನ್ನು ಸ್ಥಾಪಿಸಲಾಯಿತು. ಮೊದಲನೇ ಪಂಚವಾರ್ಷಿಕ ಯೋಜನೆಯ ಕರಡು ಕೂಡ ಈ ಮಂಡಲಿಯನ್ನು ಸ್ಥಾಪಿಸಲು ಸಲಹೆ ನೀಡಿತ್ತು.

ಯೋಜನಾ ಆಯೋಗದಂತೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯೂ ಕೂಡ ಸಂವಿಧಾನಾತ್ಮಕ ಸಂಸ್ಥೆಯೂ ಅಲ್ಲ, ಶಾಸನೀಯ ಸಂಸ್ಥೆಯೂ ಅಲ್ಲ. ರಾಷ್ಟ್ರೀಯ ಅಭಿವೃದ್ಧಿ ಮಂಡಲಿಗೆ ಸಂವಿಧಾನದ 263ನೇ ವಿಧಿಯ ಅಡಿಯಲ್ಲಿ  ಸಂವಿಧಾನಾತ್ಮಕ ಸ್ಥಾನಮಾನ ನೀಡಬೇಕು ಹಾಗೂ ರಾಷ್ಟ್ರೀಯ ಆರ್ಥಿಕ ಹಾಗೂ ಅಭಿವೃದ್ಧಿ ಮಂಡಲಿ ಎಂದು ಮರು ನಾಮಕರಣ ಮಾಡಬೇಕೆಂದು ಸರ್ಕಾರಿ ಆಯೋಗವು ಶಿಫಾರಸ್ಸು ಮಾಡಿದೆ.

### ರಚನೆ :

ಪ್ರಧಾನ ಮಂತ್ರಿಯು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಕೇಂದ್ರ ಸಂಪುಟ ದರ್ಜೆಯ ಎಲ್ಲ ಸಚಿವರು, ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಮಂತ್ರಿಗಳು, ಯೋಜನಾ ಆಯೋಗದ ಸದಸ್ಯರು ಇವರುಗಳು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದಾರೆ. 1967ಕ್ಕಿಂತ ಮುಂಚಿತವಾಗಿ ಗೃಹ, ಹಣಕಾಸು, ರಕ್ಷಣೆ, ವಿದೇಶಾಂಗ ವ್ಯವಹಾರಗಳು ಮುಂತಾದ ಆಯ್ದ ಸಂಪುಟ ದರ್ಜೆಯ ಸಚಿವರು ಮಾತ್ರ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದರು.

### ಉದ್ದೇಶ & ಗುರಿಗಳು :

1. ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಗಳ ಸಹಕಾರವನ್ನು ಪಡೆಯುವುದು
2. ರಾಷ್ಟ್ರೀಯ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುವ & ಒಗ್ಗೂಡಿಸುವ ಮೂಲಕ ಯೋಜನೆಗಳಿಗೆ ಬೆಂಬಲ ನೀಡುವುದು
3. ಎಲ್ಲ ಪ್ರಮುಖ ಕ್ಷೇತ್ರಗಳಿಗೆ ಸಂಬಂಧಿಸಿದ ಸಾಮಾನ್ಯ ಆರ್ಥಿಕ ನೀತಿಗಳನ್ನು ಪ್ರೋತ್ಸಾಹಿಸುವುದು.
4. ದೇಶದ ಎಲ್ಲಾ ಭಾಗಗಳು ಸಮತೋಲನ ಹಾಗೂ ಶೀಘ್ರವಾಗಿ ಅಭಿವೃದ್ಧಿ ಹೊಂದುವಂತೆ ನೋಡಿಕೊಳ್ಳುವುದು.

## ಕಾರ್ಯಗಳು :

1. ರಾಷ್ಟ್ರೀಯ ಯೋಜನೆಯನ್ನು ರೂಪಿಸಲು ಅಗತ್ಯವಾದ ಮಾರ್ಗದರ್ಶಿ ಸೂತ್ರಗಳನ್ನು ನಿಗದಿ ಪಡಿಸುವುದು.
2. ಯೋಜನಾ ಆಯೋಗವು ರೂಪಿಸಿದ ರಾಷ್ಟ್ರೀಯ ಯೋಜನೆಗಳನ್ನು ಪರಿಗಣಿಸುವುದು
3. ಯೋಜನೆಗಳನ್ನು ಅನುಷ್ಠಾನಗೊಳಿಸಲು ಬೇಕಾದ ಸಂಪನ್ಮೂಲಗಳನ್ನು ಅಂದಾಜು ಮಾಡುವುದು ಹಾಗೂ ಸಂಪನ್ಮೂಲಗಳನ್ನು ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸುವುದು
4. ರಾಷ್ಟ್ರೀಯ ಯೋಜನೆಯ ಕಾರ್ಯಾಚರಣೆಯನ್ನು ಕಾಲಕಾಲಕ್ಕೆ ಪರಿಶೀಲಿಸುವುದು
5. ರಾಷ್ಟ್ರೀಯ ಯೋಜನೆಯಲ್ಲಿ ನಿರ್ಧರಿಸಲಾದ ಗುರಿ ಸಾಧಿಸಲು ಅಗತ್ಯವಾದ ಕ್ರಮಗಳನ್ನು ಶಿಫಾರಸು ಮಾಡುವುದು
6. ಯೋಜನೆಯ ಕರಡು ಪ್ರತಿಯನ್ನು ಅನುಮೋದಿಸುವುದು.

## ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಒಂದು “ಸೂಪರ್ ಕ್ಯಾಬಿನೆಟ್” :

ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಯೋಜನಾ ಆಯೋಗಗಳ ನಡುವೆ, ವಿಶೇಷವಾಗಿ ಯೋಜನೆಗಳಿಗೆ ಸಂಬಂಧಿಸಿದ ವಿಷಯದಲ್ಲಿ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತದೆ. ಇದು ಯೋಜನಾ ನೀತಿಗಳು & ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಯೋಜನಾ ಆಯೋಗಗಳ ನಡುವೆ ಸಮನ್ವಯತೆ ಉಂಟು ಮಾಡುತ್ತದೆ. ಈ ದಿಶೆಯಲ್ಲಿ ಯೋಜನಾ ಆಯೋಗವು ಬಹುತೇಕ ಯಶಸ್ವಿಯಾಗಿದೆ. ಅಲ್ಲದೇ ಯೋಜನಾ ಆಯೋಗವು ರಾಷ್ಟ್ರೀಯ ಮಹತ್ವ ಪಡೆದ ವಿಷಯಗಳನ್ನು ಚರ್ಚಿಸಲು ಕೇಂದ್ರ ಹಾಗೂ ರಾಜ್ಯಗಳಿಗೆ ಒಂದು ಪ್ರಮುಖ ವೇದಿಕೆಯಾಗಿದೆ. ಇದು ಸಂಯುಕ್ತ ವ್ಯವಸ್ಥೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಜವಬ್ದಾರಿಗಳನ್ನು ಹಂಚುವ ಸಾಧನವೂ ಹೌದು.

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸ್ಥಾನಮಾನಕ್ಕೆ ಸಂಬಂಧಿಸಿದ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳು ವ್ಯಕ್ತವಾಗಿರುವುದನ್ನು ಗಮನಿಸಬಹುದು. ಒಂದು ಕಡೆ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯನ್ನು ಸೂಪರ್ ಕ್ಯಾಬಿನೆಟ್ ಎಂದು ಕರೆದರೆ ಇನ್ನೊಂದು ಕಡೆ ಇದನ್ನು ರಬ್ಬರ್ ಸ್ಟಾಂಪ್ ಎಂದು ಕರೆಯುತ್ತಾರೆ.

## ಸೂಪರ್ ಕ್ಯಾಬಿನೆಟ್ ಎಂದು ಕರೆಯಲು ಕಾರಣಗಳು :

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ರಚನೆಯೇ ಇದನ್ನು ಸೂಪರ್ ಕ್ಯಾಬಿನೆಟ್ ಮಾಡಿದೆ ಎಂದು ಹೇಳಬಹುದು. ಪ್ರಧಾನಿಯು ಇದರ ಅಧ್ಯಕ್ಷರಾದರೆ ಸಂಪುಟ ದರ್ಜೆಯ ಎಲ್ಲ ಸಚಿವರು ಹಾಗೂ ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳು ಇದರ ಸದಸ್ಯರಾಗುತ್ತಾರೆ. ಇಂತಹ ಮಹತ್ವದ ರಚನೆಯನ್ನು ಹೊಂದಿರುವುದರಿಂದ ಇದು ಕೇವಲ ಸಲಹಾ ಸಂಸ್ಥೆಯಾಗುದ್ದರೂ, ಇದರ ಸಲಹೆಗಳನ್ನು ಶಿಫಾರಸ್ಸುಗಳನ್ನು ನಿರ್ಲಕ್ಷಿಸಲು ಸಾಧ್ಯವಾಗುವುದಿಲ್ಲ.

ಕೆ.ಸಂತಾನಮ್ ಎಂಬ ಪ್ರಖ್ಯಾತ ಸಂವಿಧಾನ ತಜ್ಞರೂ ಕೂಡ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸೂಪರ್ ಕ್ಯಾಬಿನೆಟ್ ಸ್ಥಾನವನ್ನು ಆಕ್ರಮಿಸಿದೆ ಎಂದೇ ಅಭಿಪ್ರಾಯ ಪಟ್ಟಿದ್ದಾರೆ.

# ನೀತಿ ಆಯೋಗ :

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ ಸರ್ಕಾರವು ಸುಮಾರು 65 ವರ್ಷಗಳ ಕಾಲ ಸ್ವತಂತ್ರ ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳ ರೂವಾರಿಯಾಗಿದ್ದ ಯೋಜನಾ ಆಯೋಗವನ್ನು ವಿಸರ್ಜಿಸಿ ಜನವರಿ 1, 2015ರಂದು ನೀತಿ ಆಯೋಗವನ್ನು ಅಸ್ತಿತ್ವಕ್ಕೆ ತಂದಿದೆ. National Institution for Transforming India ಎಂಬುದು NITI ಎಂಬ ಪದದ ವಿಸ್ತೃತ ರೂಪವಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಮಂತ್ರಿಮಂಡಲವು 2014ರ ಡಿಸೆಂಬರ್ ಕೊನೆಯ ವಾರದಲ್ಲಿ ಯೋಜನಾ ಆಯೋಗವನ್ನು ವಿಸರ್ಜಿಸಿ ನೀತಿ ಆಯೋಗವನ್ನು (National Institution for Transforming India) ರಚಿಸುವ ಗೊತ್ತುವಳಿಯನ್ನು ಅಂಗೀಕರಿಸಿತು.

## ನೀತಿ ಆಯೋಗದ ರಚನೆ :

ಪ್ರಧಾನಿ ಮಂತ್ರಿಗಳು ನೀತಿ ಆಯೋಗದ ಅಧ್ಯಕ್ಷರು. ನೀತಿ ಆಯೋಗವು ಪ್ರಧಾನ ಮಂತ್ರಿಯಿಂದ ನೇಮಿಸಲ್ಪಟ್ಟ ಉಪಾಧ್ಯಕ್ಷರನ್ನು ಹೊಂದಿರುತ್ತದೆ. ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞರಾದ ಶ್ರೀಯುತ ಅರವಿಂದ್ ಪನಗಾರಿಯಾ ಅವರು ನೀತಿ ಆಯೋಗದ ಪ್ರಸ್ತುತ ಉಪಾಧ್ಯಕ್ಷರಾಗಿದ್ದಾರೆ. ಮುಖ್ಯಮಂತ್ರಿಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ನೀತಿ ಆಯೋಗದ ಆಡಳಿತ ಮಂಡಲಿಯ ಸದಸ್ಯರಾಗಿರುತ್ತಾರೆ.

ಕೇಂದ್ರ ಸಂಪುಟ ದರ್ಜೆಯ 4 ಮಂದಿ ಸಚಿವರು ನೀತಿ ಆಯೋಗದ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಇವರನ್ನೂ ಪ್ರಧಾನ ಮಂತ್ರಿ ನೇಮಕ ಮಾಡುತ್ತಾರೆ. ನೀತಿ ಆಯೋಗದ ಕೆಲವು

ಮಂದಿ ಪೂರ್ಣಾವಧಿ ಸದ್ಯರು & ಅರೆಕಾಲಿಕ ಸದಸ್ಯರನ್ನು ಹೊಂದಿರುತ್ತಾರೆ. ಅಲ್ಲದೇ ವಿವಿಧ ಕ್ಷೇತ್ರಗಳ ತಜ್ಞರು ನೀತಿ ಆಯೋಗದ ವಿಶೇಷ ಆಹ್ವಾನಿತ ಸದಸ್ಯರಾಗಿರುತ್ತಾರೆ. ನೀತಿ ಆಯೋಗದ ಪ್ರಾದೇಶಿಕ ಮಂಡಲಿಯು ಪ್ರಧಾನಿ ಹಾಗೂ ಮುಖ್ಯಮಂತ್ರಿಗಳನ್ನು ಒಳಗೊಂಡಿರುತ್ತದೆ. ನೀತಿ ಆಯೋಗವು ಒಬ್ಬ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯನ್ನು ಹೊಂದಿರತ್ತದೆ. ಇವರನ್ನು ಪ್ರಧಾನಮಂತ್ರಿ ನೇಮಕ ಮಾಡುತ್ತಾರೆ.

## ನೀತಿ ಆಯೋಗದ ಧ್ಯೇಯೋದ್ದೇಶಗಳು :

1. ಸಕಾರಾತ್ಮಕ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವುದು
2. ಯೋಜನಾ ಪ್ರಕ್ರಿಯೆಯನ್ನು ಕೆಳ ಹಂತದಿಂದ ಮೇಲಿನ ಹಂತಕ್ಕೆ ತೆಗೆದುಕೊಂಡು ಹೋಗುವುದು
3. ಸಮಾಜದ ದುರ್ಬಲ ವರ್ಗಗಳ ಅಭಿವೃದ್ಧಿಗೆ ಗಮನ ನೀಡುವುದು
4. ಆರ್ಥಿಕ ತಂತ್ರಕೌಶಲ್ಯ ಹಾಗೂ ಕಾರ್ಯ ನೀತಿಯಲ್ಲಿ ರಾಷ್ಟ್ರೀಯ ಭದ್ರತೆಗೆ ಒತ್ತು ನೀಡುವುದು
5. ರಾಷ್ಟ್ರೀಯ & ಅಂತರಾಷ್ಟ್ರೀಯ ತಜ್ಞರ ತಂಡದ ಮೂಲಕ ಜ್ಞಾನಪೂರ್ಣ, ನವೀನತೆಯ & ಉದ್ಯಮಶೀಲ ಬೆಂಬಲವನ್ನು ಅಭಿವೃದ್ಧಿಗೆ ವರ್ಗಾಯಿಸುವುದು.
6. ಸಂಪನ್ಮೂಲಗಳನ್ನು ದಕ್ಷತೆಯಿಂದ ಬಳಸಲು ಸಂಪನ್ಮೂಲ ಕೇಂದ್ರವನ್ನು ರಾಜನೀತಿಯ ಕೇಂದ್ರವಾಗಿಸುವುದು
7. ಉಪಕ್ರಮಗಳ, ಕಾರ್ಯಕ್ರಮಗಳ ನಿಯಂತ್ರಣ & ಮೌಲ್ಯಮಾಪನ
8. ಕಾರ್ಯಕ್ರಮಗಳು & ಉಪಕ್ರಮಗಳ ಜಾರಿಗಾಗಿ ತಂತ್ರಜ್ಞಾನವನ್ನು ಉನ್ನತೀಕರಣಗೊಳಿಸುವುದು ಹಾಗೂ ಸಾಮರ್ಥ್ಯ ನಿರ್ಮಾಣ ಮಾಡುವುದು.

# ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ :

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸಂವಿಧಾನ್ಮಕ ಆಯೋಗವಾಗಿದರೆ, ಒಂದು ಶಾಸನೀಯ ಆಯೋಗವಾಗಿದೆ. ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ 1993ಎ ಅಡಿಯಲ್ಲಿ ಈ ಆಯೋಗವನ್ನು ಸ್ಥಾಪಿಸಲಾಗಿದೆ. ಈ ಆಯೋಗವು ಭಾರತದಲ್ಲಿ

GNANADHARE IAS KAS ACADEMY

ಮಾನವ ಹಕ್ಕುಗಳ ಕಾವಲು ನಾಯಿ ಇದ್ದಂತೆ. ಈ ಆಯೋಗವು  ಭಾರತ ಸಂವಿಧಾನವು ತನ್ನ ಪ್ರಜೆಗಳಿಗೆ ನೀಡಿರುವ ಜೀವಿಸುವ ಹಕ್ಕು, ಸ್ವಾತಂತ್ರ್ಯದ ಹಕ್ಕು, ಸಮಾನತೆಯ ಹಕ್ಕು ಮುಂತಾದವುಗಳನ್ನು ರಕ್ಷಿಸುತ್ತದೆ. ಅಲ್ಲದೇ ಈ ಆಯೋಗವು ಭಾರತದಲ್ಲಿ ಅಸ್ತಿತ್ವದಲ್ಲಿರುವ ನ್ಯಾಯಾಲಯಗಳ ಮೂಲಕ ಅನುಷ್ಠಾನಗೊಳಿಸಬಹುದಾದ ಹಕ್ಕುಗಳನ್ನು ಕೂಡ ರಕ್ಷಿಸುತ್ತದೆ.

## ಅರ್ಹತೆಗಳು :

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರನ್ನು ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಲಾಗುತ್ತದೆ. ಒಬ್ಬ ಸದಸ್ಯನು ಸರ್ವೋಚ್ಚ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ನ್ಯಾಯಾಧೀಶನಾಗಿರಬೇಕು ಅಥವಾ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶನಾಗಿರಬೇಕು. ಇನ್ನೊಬ್ಬ ಸದಸ್ಯನು ಸೇವೆಯಲ್ಲಿರುವ ಅಥವಾ ನಿವೃತ್ತನಾಗಿರುವ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಧೀಶನಾಗಿರಬೇಕು. ಉಳಿದ ಇಬ್ಬರು ಸದಸ್ಯರು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಜ್ಞಾನ ಅಥವಾ ಪ್ರಾಯೋಗಿಕ ಅನುಭವವುಳ್ಳವರಾಗಿರುತ್ತಾರೆ. ಈ ಪೂರ್ಣಾವಧಿ ಸದಸ್ಯರ ಜೊತೆಗೆ ಆಯೋಗವು 3 ಪದನಿಮಿತ್ತ ಸದಸ್ಯರುಗಳನ್ನು ಹೊಂದಿದೆ. ಅವರುಗಳೆಂದರೆ

1. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ ಅಧ್ಯಕ್ಷರು
2. ಪರಿಶಿಷ್ಟ ಜಾತಿ & ವರ್ಗಗಳ ರಾಷ್ಟ್ರೀಯ ಆಯೋಗ ಅಧ್ಯಕ್ಷರು
3. ಮಹಿಳಾ ಆಯೋಗ ಅಧ್ಯಕ್ಷರು

## ನೇಮಕಾತಿ :

ಆಯೋಗದ ಅಧ್ಯಕ್ಷರು & ಸದಸ್ಯರನ್ನು ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ. ಪ್ರಧಾನಮಂತ್ರಿ ಅಧ್ಯಕ್ಷತೆಯ ಸಲಹಾ ಸಮಿತಿಯು ಲೋಕ ಸಭಾಧ್ಯಕ್ಷ, ಸಂಸತ್ತಿನ ಉಭಯ ಸದನಗಳಲ್ಲಿ ವಿರೋಧ ಪಕ್ಷಗಳ ನಾಯಕರು ಹಾಗೂ ಕೇಂದ್ರ ಗೃಹ ಸಚಿವರು ಇವರುಗಳನ್ನು ಸದಸ್ಯರನ್ನಾಗಿ ಹೊಂದಿರುತ್ತಾರೆ.

ಸುಪ್ರಿಂಕೋರ್ಟ್‌ನ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿದ ನಂತರವೇ ಸೇವೆಯಲ್ಲಿರುವ ಸುಪ್ರಿಂಕೊರ್ಟ್ ನ್ಯಾಯಾಧೀಶ ಅಥವಾ ಹೈಕೊರ್ಟ್ ನ್ಯಾಯಾಧೀಶರನ್ನು ಆಯೋಗಕ್ಕೆ ನೇಮಿಸಲಾಗುತ್ತದೆ.



GNANADHARE IAS KAS ACADEMY

## ಅಧಿಕಾರವಧಿ :

ಆಯೋಗದ ಅಧ್ಯಕ್ಷರು & ಸದಸ್ಯರ ಅಧಿಕಾರವಧಿ 5 ವರ್ಷಗಳು. ಆದರೆ ಅವಧಿ ಮುಗಿಯುವುದಕ್ಕಿಂತ ಮುಂಚಿತವಾಗಿ 70 ವರ್ಷಗಳು ತುಂಬಿದರೆ ಹುದ್ದೆಯಿಂದ ನಿವೃತ್ತಿಯಾಗಬೇಕಾಗುತ್ತದೆ. ಅಧಿಕಾರವಧಿ ನಂತರ ಆಯೋಗದ ಆಧ್ಯಕ್ಷರು & ಸದಸ್ಯರನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಹುದ್ದೆಗೆ ನೇಮಕ ಮಾಡುವಂತಿಲ್ಲ.

## ಆಯೋಗದ ಕಾರ್ಯಗಳು :

1. ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಅಥವಾ ಮಾನವ ಹಕ್ಕುಗಳ ಉಲ್ಲಂಘನೆ ತಡೆಗಟ್ಟುವುದನ್ನು ಸಾರ್ವಜನಿಕ ಅಧಿಕಾರಿಗಳು ನಿರ್ಲಕ್ಷಿಸಿದ ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸುವುದು. ಆಯೋಗವು ಇಂತಹ ವಿಚಾರಣೆಗಳನ್ನು ಸ್ವಪ್ರೇರಣೆಯಿಂದ ಅಥವಾ ದೂರಿನ ಮೇರೆಗೆ ನಡೆಸಬಹುದು.
2. ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಮಾನವ ಹಕ್ಕುಗಳ ಉಲ್ಲಂಘನೆಯ ಆಪಾದನೆಗಳನ್ನು ಒಳಗೊಂಡ ಪ್ರಕರಣಗಳ ಕಾರ್ಯ ಕಲಾಪಗಳಲ್ಲಿ ಮಧ್ಯ ಪ್ರವೇಶಿಸುವುದು.
3. ಜೈಲು ವಾಸಿಗಳ ಜೀವನ ಸ್ಥಿತಿಯನ್ನು ಅಧ್ಯಯನ ಮಾಡಲು ಜೈಲುಗಳು & ಸೆರೆಮನೆಗಳಿಗೆ ಭೇಟಿ ನೀಡುವುದು ಹಾಗೂ ಉತ್ತಮಗೊಳಿಸಲು ಶಿಫಾರಸುಗಳನ್ನು ನೀಡುವುದು .
4. ಮಾನವ ಹಕ್ಕುಗಳ ಸಂವಿಧಾನಾತ್ಮಕ & ಇತರ ಕಾನೂನುಬದ್ಧ ರಕ್ಷಾಣೋಪಾಯಗಳನ್ನು ಪರಿಶೀಲಿಸುವುದು & ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸುಗಳನ್ನು ಮಾಡುವುದು.
5. ಮಾನವ ಹಕ್ಕುಗಳನ್ನು ಅನುಭವಿಸಲು ಅಡ್ಡಿಯಾಗುವ ಭಯೋತ್ಪಾದನೆ & ಇತರೆ ಚಟುವಟಿಕೆಗಳನ್ನು ಪರಿಶೀಲಿಸುವುದು & ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು
6. ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವುದು & ಪ್ರೋತ್ಸಾಹಿಸುವುದು
7. ಮಾನವ ಹಕ್ಕುಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ಪ್ರಚಾರ ಮಾಡುವುದು.
8. ಮಾನವ ಹಕ್ಕುಗಳ ರಕ್ಷಣೋಪಾಯಗಳ ಬಗೆಗೆ ಜನರಲ್ಲಿ ಅರಿವು ಮೂಡಿಸುವುದು
9. ಮಾನವ ಹಕ್ಕುಗಳನ್ನು ಪ್ರೋತ್ಸಾಹಿಸಲು ಅವಶ್ಯಕ ಎಂದು ಪರಿಗಣಿಸುವ ಯಾವುದೇ ಕರ್ತವ್ಯವನ್ನು ನಿರ್ವಹಿಸುವುದು.

GNANADHARE IAS KAS ACADEMY

# ರಾಜ್ಯ ಮಾನವ ಹಕ್ಕುಗಳ ಆಯೋಗ :

ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ 1993, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸ್ಥಾಪನೆಯ ಜೊತೆಗೆ ರಾಜ್ಯ ಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗದ ಸ್ಥಾಪನೆಗೂ ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ ರಾಜ್ಯ ಮಾನವ ಹಕ್ಕುಗಳ ಆಯೋಗವನ್ನು ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆ, 1993ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಈ ಆಯೋಗವು ಭಾರತ ಸಂವಿಧಾನದ 7ನೇ ಅನುಸೂಚಿಯಲ್ಲಿ ಕಂಡುಬರುವ ರಾಜ್ಯಪಟ್ಟಿ & ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಮಾನವ ಹಕ್ಕುಗಳ ಉಲ್ಲಂಘನೆಯಾದರೆ ಮಾತ್ರ ಅಂತಹ ಪ್ರಕಕರಣ ಬಗ್ಗೆ ವಿಚಾರಣೆ ನಡೆಸುತ್ತದೆ. ಒಂದು ವೇಳೆ ಅಂತಹ ಯಾವುದೇ ಪ್ರಕರಣದ ಬಗೆಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಅಥವಾ ಇತರೆ ಯಾವುದೇ ಶಾಸನಾತ್ಮಕ ಆಯೋಗ ವಿಚಾರಣೆ ನಡೆಸುತ್ತಿದ್ದರೆ ರಾಜ್ಯ ಮಾನವ ಹಕ್ಕುಗಳ ಆಯೋಗ ಅಂತಹ ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಳ್ಳುವುದಿಲ್ಲ.

## ರಚನೆ :

ರಾಜ್ಯ ಮಾನವ ಹಕ್ಕುಗಳ ಆಯೋಗವು ಒಬ್ಬ ಅಧ್ಯಕ್ಷ ಹಾಗೂ ಇಬ್ಬರು ಸದಸ್ಯರನ್ನು ಒಳಗೊಂಡಿರುತ್ತದೆ. ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರನ್ನು ಆಯೋಗದ ಆಧ್ಯಕ್ಷರಾಗಿ ನೇಮಕ ಮಾಡಲಾಗುತ್ತದೆ.

ಒಬ್ಬ ಸದಸ್ಯರು ಉಚ್ಚ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ನಿವೃತ್ತ ನ್ಯಾಯಾಧೀಶನಾಗಿರಬೇಕು ಅಥವಾ ರಾಜ್ಯದ ಯಾವುದೇ ಜಿಲ್ಲಾ ನ್ಯಾಯಾಲಯದಲ್ಲಿ 7 ವರ್ಷಗಳ ಕಾಲ ನ್ಯಾಯಾಧೀಶನಾಗಿರಬೇಕು. ಮತ್ತೊಬ್ಬ ಸದಸ್ಯನು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಜ್ಞಾನ ಅಥವಾ ಪ್ರಾಯೋಗಿಕ ಅನುಭವವುಳ್ಳವರಾಗಿರುತ್ತಾರೆ.

## ನೇಮಕಾತಿ :

ಆಯೋಗದ ಅಧ್ಯಕ್ಷರನ್ನು & ಸದಸ್ಯರನ್ನು ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲರು ನೇಮಿಸುತ್ತಾರೆ. ಮುಖ್ಯಮಂತ್ರಿಯ ಅಧ್ಯಕ್ಷತೆಯ ಸಲಹಾ ಸಮಿತಿಯು ವಿಧಾನಸಭೆಯ ಸಭಾಧ್ಯಕ್ಷ, ರಾಜ್ಯದ ಗೃಹಮಂತ್ರಿ & ವಿಧಾನ ಸಭೆಯ ವಿರೋಧ ಪಕ್ಷದ ನಾಯಕರನ್ನು ಸದಸ್ಯರಾಗಿ ಹೊಂದಿರುತ್ತಾರೆ. ಒಂದು ವೇಳೆ ರಾಜ್ಯವು ವಿಧಾನಪರಿಷತ್ತನ್ನು ಹೊಂದಿದ್ದರೆ, ವಿಧಾನ ಪರಿಷತ್ತಿನ ಸಭಾಪತಿ & ವಿರೋಧ ಪಕ್ಷದ ನಾಯಕರು ಸಲಹಾ ಸಮಿತಿಯ ಸದಸ್ಯರಾಗಿರುತ್ತಾರೆ. ಆದರೆ

ಸಂಬಂಧಪಟ್ಟ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿದ ನಂತರವೇ ಸೇವೆಯಲ್ಲಿರುವ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಅಥವಾ ಸೇವೆಯಲ್ಲಿರುವ ಜಿಲ್ಲಾ ನ್ಯಾಯಾಧೀಶರನ್ನು ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಲಾಗುತ್ತದೆ.

## ಅಧಿಕಾರವಧಿ :

ಆಯೋಗದ ಅಧ್ಯಕ್ಷರು & ಸದಸ್ಯರ ಅಧಿಕಾರವಧಿ 5 ವರ್ಷಗಳು. ಆದರೆ ಅವಧಿ ಮುಗಿಯುವುದಕ್ಕಿಂತ ಮುಂಚಿತವಾಗಿ 70 ವರ್ಷಗಳು ತುಂಬಿದರೆ ಹುದ್ದೆಯಿಂದ ನಿವೃತ್ತಿಯಾಗಬೇಕಾಗುತ್ತದೆ. ಅಧಿಕಾರವಧಿ ನಂತರ ಆಯೋಗದ ಅಧ್ಯಕ್ಷರು & ಸದಸ್ಯರನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಹುದ್ದೆಗೆ ನೇಮಕ ಮಾಡುವಂತಿಲ್ಲ.

## ಆಯೋಗದ ಕಾರ್ಯಗಳು :

1. ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಅಥವಾ ಮಾನವ ಹಕ್ಕುಗಳ ಉಲ್ಲಂಘನೆ ತಡೆಗಟ್ಟುವುದನ್ನು ಸಾರ್ವಜನಿಕ ಅಧಿಕಾರಿಗಳು ನಿರ್ಲಕ್ಷಿಸಿದ ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸುವುದು. ಆಯೋಗವು ಇಂತಹ ವಿಚಾರಣೆಗಳನ್ನು ಸ್ವಪ್ರೇರಣೆಯಿಂದ ಅಥವಾ ದೂರಿನ ಮೇರೆಗೆ ನಡೆಸಬಹುದು.
2. ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಮಾನವ ಹಕ್ಕುಗಳ ಉಲ್ಲಂಘನೆಯ ಆಪಾದನೆಗಳನ್ನು ಒಳಗೊಂಡ ಪ್ರಕರಣಗಳ ಕಾರ್ಯ ಕಲಾಪಗಳಲ್ಲಿ ಮಧ್ಯ ಪ್ರವೇಶಿಸುವುದು.
3. ಜೈಲು ವಾಸಿಗಳ ಜೀವನ ಸ್ಥಿತಿಯನ್ನು ಅಧ್ಯಯನ ಮಾಡಲು ಜೈಲುಗಳು & ಸೆರೆಮನೆಗಳಿಗೆ ಭೇಟಿ ನೀಡುವುದು ಹಾಗೂ ಉತ್ತಮಗೊಳಿಸಲು ಶಿಫಾರಸುಗಳನ್ನು ನೀಡುವುದು .
4. ಮಾನವ ಹಕ್ಕುಗಳ ಸಂವಿಧಾನಾತ್ಮಕ & ಇತರ ಕಾನೂನುಬದ್ಧ ರಕ್ಷಣೋಪಾಯಗಳನ್ನು ಪರಿಶೀಲಿಸುವುದು & ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸುಗಳನ್ನು ಮಾಡುವುದು.
5. ಮಾನವ ಹಕ್ಕುಗಳನ್ನು ಅನುಭವಿಸಲು ಅಡ್ಡಿಯಾಗುವ ಭಯೋತ್ಪಾದನೆ & ಇತರೆ ಚಟುವಟಿಕೆಗಳನ್ನು ಪರಿಶೀಲಿಸುವುದು & ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು
6. ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವುದು & ಪ್ರೋತ್ಸಾಹಿಸುವುದು
7. ಮಾನವ ಹಕ್ಕುಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ಪ್ರಚಾರ ಮಾಡುವುದು.
8. ಮಾನವ ಹಕ್ಕುಗಳ ರಕ್ಷಣೋಪಾಯಗಳ ಬಗೆಗೆ ಜನರಲ್ಲಿ ಅರಿವು ಮೂಡಿಸುವುದು

9. ಮಾನವ ಹಕ್ಕುಗಳನ್ನು ಪ್ರೋತ್ಸಾಹಿಸಲು ಅವಶ್ಯಕ ಎಂದು ಪರಿಗಣಿಸುವ ಯಾವುದೇ ಕರ್ತವ್ಯವನ್ನು ನಿರ್ವಹಿಸುವುದು.

## ಲೋಕಪಾಲ್ & ಲೋಕಾಯುಕ್ತ :

ಭ್ರಷ್ಟಾಚಾರ, ಸ್ವಜನಪಕ್ಷಪಾತ ಹಾಗೂ ಅಧಿಕಾರ ದುರುಪಯೋಗಗಳು ಆಡಳಿತದ ಎಲ್ಲಾ ಹಂತಗಳಲ್ಲಿಯೂ ತಾಂಡವವಾಡುತ್ತಿದೆ. ಇವುಗಳಿಂದ ಉಂಟಾಗುವ ತೊಂದರೆ & ಕಿರುಕುಳಗಳಿಂದ ಪ್ರಜೆಗಳನ್ನು ರಕ್ಷಿಸಲು ಭಾರತದಲ್ಲಯೂ ಸ್ವೀಡನ್ನಿನ ಓಂಬಡ್ಸ್‌ಮನ್ ಮಾದರಿಯ ಸಂಸ್ಥೆಯೊಂದನ್ನು ಸ್ಥಾಪಿಸುವ ಅವಶ್ಯಕತೆ ಇದೆ. 1966ರಲ್ಲಿ ಶ್ರೀ ಮೊರಾರ್ಜಿ ದೇಸಾಯಿಯವರ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ನಾಗರಿಕರ ಕುಂದುಕೊರತೆಗಳ ನಿವಾರಣೆಗಾಗಿ ಲೋಕಾಪಾಲ್ ಸಂಸ್ಥೆಯನ್ನು ರಚಿಸಲು ಶಿಫಾರಸ್ಸು ಮಾಡಿತು.

ಆಡಳಿತ ಸುಧಾರಣಾ ಆಯೋಗದ ಈ ಶಿಫಾರಸ್ಸನ್ನು ಸರ್ಕಾರ ಅಂಗೀಕರಿಸಿತು. ಈ ಸಂಬಂಧ ಶಾಸನ ರಚಿಸಲು ಕೇಂದ್ರ ಸರ್ಕಾರವು ಲೋಕಪಾಲ್ ಮಸೂದೆಯನ್ನು ರಚಿಸಲು ಹಲವು ಬಾರಿ ಸಂಸತ್ತಿನಲ್ಲಿ ಮಂಡಿಸಿತ್ತು. ಕಾರಣಾಂತರಗಳಿಂದ ಈ ಮಸೂದೆ ಸಂಸತ್ತಿನಲ್ಲಿ ಅಂಗೀಕಾರವಾಗಲಿಲ್ಲ. ಆದ್ದರಿಂದ ಲೋಕಪಾಲ್ ಎಂಬ ಸಂಸ್ಥೆ ಇದುವರೆಗೂ ಅಸ್ತಿತ್ವಕ್ಕೆ ಬಂದಿಲ್ಲ.

ರಾಜ್ಯಸಭೆಯು ಲೋಕಪಾಲ್ & ಲೋಕಾಯುಕ್ತ ಮಸೂದೆಯನ್ನು 2013 ಡಿಸೆಂಬರ್ 17ರಂದು ಅಂಗೀಕರಿಸಿತು. ಲೋಕಸಭೆಯು ಈ ಮಸೂದೆಯನ್ನು ಡಿಸೆಂಬರ್ 19, 2013ರಂದು ಅಂಗೀಕರಿಸಿತು. ಸುಮಾರು 46 ವರ್ಷಗಳ ಸತತ ಪ್ರಯತ್ನಗಳ ನಂತರ ಅಂತಿಮವಾಗಿ ಲೋಕಪಾಲ್ ಮಸೂದೆಯು ಸಂಸತ್ತಿನಿಂದ ಅಂಗೀಕರಿಸಲ್ಪಟ್ಟಿತು. ಈ ಮಸೂದೆಗೆ ರಾಷ್ಟ್ರಾಧ್ಯಕ್ಷರು ಜನವರಿ 1, 2014ರಂದು ಅನುಮೋದನೆ ನೀಡಿದರು. ಇದರೊಂದಿಗೆ ಲೋಕಪಾಲ್ ಎಂಬ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಅಸ್ತಿತ್ವಕ್ಕೆ ಬರಲಿದೆ. ಭಾರತದ ರಾಜಕೀಯ ಇತಿಹಾಸದಲ್ಲಿ ಇದೊಂದು ಮೈಲುಗಲ್ಲಾಗಲಿದೆ.

## ಐತಿಹಾಸಿಕ ಹಿನ್ನೆಲೆ :

ಓಂಬಡ್ಸ್‌ಮನ್ ಸಂಸ್ಥೆಯ ಮೂಲವನ್ನು ನಾವು ಸ್ಕಾಂಡನೇವಿಯಾ ದೇಶಗಳಲ್ಲಿ ಗುರುತಿಸಬಹುದು. ಓಂಬಡ್ಸ್‌ಮನ್ ಸಂಸ್ಥೆಯನ್ನು 1809ರಲ್ಲಿ ಪ್ರಥಮ ಬಾರಿಗೆ ಸ್ವೀಡನ್ನಿನಲ್ಲಿ ಸ್ಥಾಪಿಸಲಾಯಿತು. ಕಾನೂನು ಬಾಹಿರವಾದ, ಅನುಚಿತವಾದ, ಅನ್ಯಾಯದಿಂದ ಕೂಡಿದ ಹಾಗೂ ದಮನಕಾರಿಯಾದ ಆಡಳಿತ ಕ್ರಮಗಳಿಂದ ನೊಂದವರಿಗೆ ಪರಿಹಾರ ನೀಡುವ ಉದ್ದೇಶದಿಂದ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಓಂಬಡ್ಸ್‌ಮನ್ ಸಂಸ್ಥೆಯನ್ನು ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ಸಂಸ್ಥೆ ಎಂದು ಸರಳವಾಗಿ ಹೇಳಬಹುದು. ಫಿನ್‌ಲ್ಯಾಂಡ್, ಡೆನ್ಮಾರ್ಕ್, ನಾರ್ವೆ, ನ್ಯೂಜಿಲೆಂಡ್, ಬ್ರಿಟನ್ ರಾಷ್ಟ್ರಗಳಲ್ಲಿ 1919, 1953, 1963, 1962 ಹಾಗೂ 1967ರಲ್ಲಿ ಓಂಬಡ್ಸ್‌ಮನ್ ಸಂಸ್ಥೆಗಳು ಅನುಕ್ರಮವಾಗಿ ಅಸ್ತಿತ್ವಕ್ಕೆ ಬಂದವು.

## ಲೋಕಪಾಲ್ & ಲೋಕಾಯುಕ್ತ ಕಾಯ್ದೆ – 2014ರ ಪ್ರಮುಖ ಲಕ್ಷಣಗಳು :

### 1. ಲೋಕಪಾಲ್ ರಚನೆ :-

ಲೋಕಪಾಲ್ ಒಬ್ಬ ಅಧ್ಯಕ್ಷ & 8 ಮಂದಿ ಸದಸ್ಯರನ್ನು ಒಳಗೊಂಡಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಅಥವಾ ಪ್ರಸ್ತುತ ನ್ಯಾಯಾಧೀಶರು ಲೋಕಪಾಲ್ ಸಂಸ್ಥೆಯ ಅಧ್ಯಕ್ಷರಾಗಿರುತ್ತಾರೆ. ಲೋಕಪಾಲ್‌ದ 8 ಮಂದಿ ಸದಸ್ಯರಲ್ಲಿ ಪ್ರತಿಶತ 50ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು & ಮಹಿಳೆಯರಿಗೆ ಮೀಸಲಿಡಲಾಗಿದೆ. ಇನ್ನು ಉಳಿದ ಪ್ರತಿಶತ 50ರಷ್ಟು ಸ್ಥಾನಗಳಿಗೆ ಕಾನೂನು ಅಥವಾ ನ್ಯಾಯಾಂಗದ ಹಿನ್ನೆಲೆ ಹೊಂದಿರುವವರನ್ನು ನೇಮಿಸಲಾಗುತ್ತದೆ. ನ್ಯಾಯಾಂಗದ ಹಿನ್ನೆಲೆಯನ್ನು ಹೊಂದಿರುವ ಸದಸ್ಯರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಮೂರ್ತಿ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಮೂರ್ತಿಗಳಾಗಿ ಸೇವೆ ಸಲ್ಲಿಸಿರಬೇಕು. ನ್ಯಾಯಾಂಗದ ಹಿನ್ನೆಲೆ ಇಲ್ಲದ ಸದಸ್ಯರು ಭ್ರಷ್ಟಾಚಾರ ನಿಯಂತ್ರಣ & ಜಾಗೃತ ದಳದಲ್ಲಿ ಕನಿಷ್ಟ 25 ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು. ಇದರೊಂದಿಗೆ ಅವರು ಪ್ರಶ್ನಾತೀತವಾದ ಪ್ರಾಮಾಣಿಕತೆಯನ್ನು ಹೊಂದಿರಬೇಕು. ಲೋಕಪಾಲ್‌ನ ಅಧ್ಯಕ್ಷರು & ಸದಸ್ಯರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರಬಾರದು.

GNANADHARE IAS KAS ACADEMY

## 2. ಲೋಕಪಾಲ್‌ನ ಅಧ್ಯಕ್ಷರು & ಸದಸ್ಯರ ಆಯ್ಕೆ :

ಲೋಕಸಭೆಯ ಸ್ಪೀಕರ್, ಪ್ರಧಾನಮಂತ್ರಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಅವರಿಂದ ನೇಮಕಗೊಂಡ ಸರ್ವೋಚ್ಚ ನ್ಯಾಯಾಲಯದ ಪ್ರಸ್ತುತ ನ್ಯಾಯಾಧೀಶರು & 4 ಮಂದಿ ಸದಸ್ಯರ ಶಿಫಾರಸ್ಸಿನ ಮೇರೆಗೆ ರಾಷ್ಟ್ರಾಧ್ಯಕ್ಷರು ನೇಮಕ ಮಾಡುವ ಒಬ್ಬರು ಪ್ರಖ್ಯಾತ ಕಾನೂನು ಪರಿಣಿತರನ್ನೊಳಗೊಂಡ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಷ್ಟ್ರಾಧ್ಯಕ್ಷರು ಲೋಕಪಾಲ್ ಸಂಸ್ಥೆಯ ಅಧ್ಯಕ್ಷರು & ಸದಸ್ಯರ ನೇಮಕ ಮಾಡುತ್ತಾರೆ.

## 3. ಲೋಕಾಯುಕ್ತದ ರಚನೆ :

ಈ ಕಾಯ್ದೆಯು ಭ್ರಷ್ಟಾಚಾರ ನಿಗ್ರಹಕ್ಕೆ ಕೇಂದ್ರದಲ್ಲಿ ಲೋಕಪಾಲ್ & ರಾಜ್ಯದಲ್ಲಿ ಲೋಕಾಯುಕ್ತದ ರಚನೆಗೆ ಅವಕಾಶ ಮಾಡಿಕೊಡುತ್ತದೆ. ಈ ಕಾಯ್ದೆ ಜಾರಿಗೆ ಬಂದು 1 ವರ್ಷದ ಅವಧಿಯೊಳಗೆ ಲೋಕಾಯುಕ್ತರನ್ನು ನೇಮಕ ಮಾಡುವುದು ಕಡ್ಡಾಯವಾಗಿದೆ. ಲೋಕಾಯುಕ್ತ ಸಂಸ್ಥೆಯ ಸ್ವರೂಪ ಹಾಗೂ ಕಾರ್ಯವ್ಯಾಪ್ತಿಯನ್ನು, ಅಧಿಕಾರ ವ್ಯಾಪ್ತಿಯನ್ನು ನಿರ್ಧರಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ.

## 4. ವ್ಯಾಪ್ತಿ :

ಪ್ರಧಾನಮಂತ್ರಿ, ಕೇಂದ್ರ ಸಚಿವರು, ಹಾಲಿ & ಮಾಜಿ ಸಂಸದರು, ಎಲ್ಲ ವರ್ಗದ ಸರ್ಕಾರಿ ನೌಕರರು ಹಾಗೂ ಕೇಂದ್ರ ಸರ್ಕಾರದ ಧನಸಹಾಯ ಪಡೆಯುವ ಅದರ ನಿಯಂತ್ರಣದಲ್ಲಿರುವ ಕಂಪನಿಗಳ ಸಿಬ್ಬಂದಿ ಈ ಕಾಯ್ದೆಯ ವ್ಯಾಪ್ತಿಗೆ ಒಳಪಡುತ್ತಾರೆ. ಆದರೆ ಈ ಕಾಯ್ದೆಯ ವ್ಯಾಪ್ತಿಗೆ ಕಾರ್ಪೋರೇಟ್ ಸಂಸ್ಥೆಗಳು ಒಳಪಡುವುದಿಲ್ಲ.

## 5. ಪ್ರಧಾನಮಂತ್ರಿ :

ಪ್ರಧಾನಮಂತ್ರಿಯೂ ಈ ಕಾಯ್ದೆಯ ವ್ಯಾಪ್ತಿಗೆ ಒಳಪಟ್ಟಿರುವುದು ಒಂದು ವಿಶೇಷವಾಗಿದೆ. ಆದರೆ ಪ್ರಧಾನಮಂತ್ರಿಯ ವಿರುದ್ಧ ಬರುವ ದೂರುಗಳ ತನಿಖೆ ಕುರಿತು ಲೋಕಪಾಲ್ ಸಂಸ್ಥೆಯ ಪೂರ್ಣಪೀಠ ತೀರ್ಮಾನ ಕೈಗೊಳ್ಳಬೇಕು. ಇದಕ್ಕೆ ಕನಿಷ್ಠ ಮೂರನೇ ಎರಡರಷ್ಟು ಸದಸ್ಯರ ಒಪ್ಪಿಗೆ ಇರಬೇಕು. ಪ್ರಧಾನಮಂತ್ರಿಯ ವಿಚಾರಣೆ ಸಾರ್ವಜನಿಕವಾಗಿ ನಡೆಯಬಾರದು. ಅದು ಕೋಣೆಯೊಂದರಲ್ಲಿ ರಹಸ್ಯವಾಗಿ ನಡೆಯಬೇಕು. ಒಂದು ವೇಳೆ ಪ್ರಧಾನಮಂತ್ರಿಯ ವಿರುದ್ಧ ಬರುವ ದೂರು ತಿರಸ್ಕೃತವಾದರೆ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬಹಿರಂಗಗೊಳಿಸುವಂತಿಲ್ಲ.



GNANADHARE IAS KAS ACADEMY

# ಅಲ್ಪ ಸಂಖ್ಯಾತರ ರಾಷ್ಟ್ರೀಯ ಆಯೋಗ :

1992ರಲ್ಲಿ ಅಲ್ಪ ಸಂಖ್ಯಾತರ ರಾಷ್ಟ್ರೀಯ ಆಯೋಗ ಕಾಯ್ದೆಯನ್ನು ರೂಪಿಸಿತು. ಈ ಕಾಯ್ದೆಯನ್ವಯ 1993ರಲ್ಲಿ ಅಲ್ಪ ಸಂಖ್ಯಾತರ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಲಾಯಿತು. ಇದು ರಾಷ್ಟ್ರದಲ್ಲೇ ಪ್ರಥಮ ಶಾಸನಾತ್ಮಕ ಆಯೋಗವಾಗಿದೆ. "ಸರ್ದಾರ್ ಆಲಿ ಖಾನ್"ರವರು ಅಲ್ಪ ಸಂಖ್ಯಾತರ ರಾಷ್ಟ್ರೀಯ ಆಯೋಗದ ಪ್ರಥಮ ಅಧ್ಯಕ್ಷರಾಗಿದ್ದರು. ಸಂವಿಧಾನದಲ್ಲಿ ಕೇಂದ್ರದ ಕಾನೂನಿನಲ್ಲಿ, ರಾಜ್ಯದ ಕಾನೂನಿನಲ್ಲಿ ಹಾಗೂ ಸರ್ಕಾರದ ನೀತಿಗಳಲ್ಲಿ ಕಂಡುಬರುವ ಅಲ್ಪ ಸಂಖ್ಯಾತರ ಹಿತಾಸಕ್ತಿಗೆ ಸಂಬಂಧಿಸಿದ ರಕ್ಷಣೋಪಾಯಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸರ್ಕಾರಕ್ಕೆ ಸಲಹೆ ನೀಡುವುದು ಈ ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ.

## ರಚನೆ :

ಅಲ್ಪ ಸಂಖ್ಯಾತರ ರಾಷ್ಟ್ರೀಯ ಆಯೋಗವು ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ ಹಾಗೂ 5 ಮಂದಿ ಸದಸ್ಯರನ್ನು ಒಳಗೊಂಡಿದೆ. ಇವರೆಲ್ಲರನ್ನು ಕೇಂದ್ರ ಸರ್ಕಾರ ನೇಮಿಸುತ್ತದೆ. ಇವರು ಸಮರ್ಥರು, ಪ್ರಾಮಾಣಿಕರು ಆಗಿರಬೇಕು. ಅಧ್ಯಕ್ಷರನ್ನೊಳಗೊಂಡು ಆಯೋಗವು 5 ಮಂದಿ ಸದಸ್ಯರು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿರಬೇಕು.

## ಆಯೋಗದ ಕಾರ್ಯಗಳು :

1. ಕೇಂದ್ರ ಹಾಗೂ ರಾಜ್ಯಗಳಲ್ಲಿ ಅಲ್ಪ ಸಂಖ್ಯಾಂತರ ಅಭಿವೃದ್ಧಿಯನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂಬುದನ್ನು ಮೌಲ್ಯಮಾಪನ ಮಾಡುವುದು
2. ಸಂವಿಧಾನ, ಸಂಸತ್ತು ಹಾಗೂ ರಾಜ್ಯ ಶಾಸಕಾಂಗಗಳಿಂದ ರೂಪಿಸಲಾದ ಕಾನೂನುಗಳು ಅಲ್ಪಸಂಖ್ಯಾತರಿಗೆ ಒದಗಿಸಿರುವ ರಕ್ಷಣೋಪಾಯಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದರ ಬಗ್ಗೆ ಮೇಲ್ವಿಚಾರಣೆ ನಡೆಸುವುದು
3. ಅಲ್ಪಸಂಖ್ಯಾತರ ಹಿತಾಸಕ್ತಿಗೆ ಸಂಬಂಧಿಸಿದ ರಕ್ಷಾಣೋಪಾಯಗಳನ್ನು ಹೇಗೆ ಪರಿಣಾಮಕಾರಿಯಾಗಿ ಅನುಷ್ಠಾನನಗೊಳಿಸಬೇಕು ಎಂಬುದರ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಲಹೆ & ಶಿಫಾರಸ್ಸುಗಳನ್ನು ನೀಡುವುದು
4. ಅಲ್ಪಸಂಖ್ಯಾತರ ಹಕ್ಕು & ರಕ್ಷಾಣೋಪಾಯಗಳಿಗೆ ದಕ್ಕೆಯಾದರೆ, ಅಂತಹ ಪ್ರಕರಣಗಳಿಗೆ ಸಂಬಂಧಿಸಿದ ವಿಚಾರಣೆ ನಡೆಸುವುದು ಹಾಗೂ ಸೂಕ್ತ ಪ್ರಾಧಿಕಾರಗಳ ಗಮನಕ್ಕೆ ತರುವುದು

5. ಅಲ್ಪಸಂಖ್ಯಾತರ ವಿರುದ್ಧ ಮಾಡಲಾಗುವ ತಾರತಮ್ಯಗಳಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸುವುದು & ಈ ರೀತಿಯ ತಾರತಮ್ಯಗಳನ್ನು ನಿವಾರಿಸಲು ತೆಗೆದಕೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು
6. ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಶೋಧನೆ ಕೈಗೊಳ್ಳುವುದು.
7. ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಅದರಲ್ಲಿಯೂ ನಿರ್ದಿಷ್ಟವಾಗಿ ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗೆಗೆ ಕೇಂದ್ರ ಸರ್ಕಾರಕ್ಕೆ ನಿಯತಕಾಲಿಕ ಅಥವಾ ವಿಶೇಷ ವರದಿಯನ್ನ ಸಲ್ಲಿಸುವುದು
8. ಅಲ್ಪಸಂಖ್ಯಾತರ ರಕ್ಷಣೆ, ಅಭಿವೃದ್ದಿ ಹಾಗೂ ಪ್ರಗತಿಯನ್ನು ಸಾಧಿಸಲು ಕೇಂದ್ರ ಸರ್ಕಾರವು ವಹಿಸುವ ಇತರೆ ಯಾವುದೇ ಕಾರ್ಯ ನಿರ್ವಹಿಸುವುದು
9. ಅಲ್ಪಸಂಖ್ಯಾತರಿಗಾಗಿ ಸಂಸತ್ತು ಹಾಗೂ ರಾಜ್ಯ ಶಾಸಕಾಂಗಗಳಿಂದ ರೂಪಿಸಲ್ಪಟ್ಟ ಕಾನೂನುಗಳ ನೀಡಿರುವ ರಕ್ಷಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಪರಿಶೀಲಿಸುವುದು & ಅವುಗಳು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂದು ಮೌಲ್ಯಮಾಪನ ಮಾಡುವುದು
10. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಲ್ಪಸಂಖ್ಯಾತರ ಅಭಿವೃದ್ದಿಯನ್ನು ಎಷ್ಟರ ಮಟ್ಟಿಗೆ ಸಾಧಿಸಿವೆ ಎಂಬುದರ ಮೌಲ್ಯಮಾಪನ ಮಾಡುವುದು

## ಆಯೋಗದ ವರದಿ :

ಆಯೋಗವು ರಾಷ್ಟ್ರಾಧ್ಯಕ್ಷರಿಗೆ ವಾರ್ಷಿಕ ವರದಿಯನ್ನು ಒಪ್ಪಿಸುತ್ತದೆ. ರಾಷ್ಟ್ರಾಧ್ಯಕ್ಷರು ಈ ವರದಿಯನ್ನು ಸಂಸತ್ತಿನಲ್ಲಿ ಮಂಡಿಸುವಂತೆ ನೋಡಿಕೊಳ್ಳುತ್ತಾರೆ. ಈ ವರದಿಯು ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳ ಹಾಗೂ ಸರ್ಕಾರ ಯಾವುದೇ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳದಿದ್ದಲ್ಲಿ ಅದಕ್ಕೆ ಕಾರಣ ವಿವರಿಸುವ ಪತ್ರವನ್ನು ಹೊಂದಿರುತ್ತದೆ.

GNANADHARE IAS KAS ACADEMY

# ರಾಷ್ಟ್ರೀಯ ಮಹಿಳಾ ಆಯೋಗ :

ರಾಷ್ಟ್ರೀಯ ಮಹಿಳಾ ಆಯೋಗ ಕಾಯ್ದೆ 1990ರ ಅಡಿಯಲ್ಲಿ 1992ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ಸ್ಥಾಪಿಸಲಾಯಿತು. ಸಂವಿಧಾನಾತ್ಮಕ & ಕಾನೂನುಬದ್ಧ ರಕ್ಷಣೋಪಾಯಗಳನ್ನು ಪರಿಶೀಲಿಸುವುದು, ಮಹಿಳೆಯರ ಕುಂದು ಕೊರತೆಗಳನ್ನು ನಿವಾರಿಸಲು ಸಹಾಯಕವಾಗುವ ಶಾಸನೀಯ ಪರಿಹಾರ ಕ್ರಮಗಳನ್ನು ಶಿಫಾರಸ್ಸು ಮಾಡುವುದು & ಮಹಿಳೆಯರಿಗೆ ಸಂಬಂಧಿಸಿದ ಎಲ್ಲ ನೀತಿಗಳ ಮೇಲೆ ಸರ್ಕಾರಕ್ಕೆ ಸಲಹೆ ನೀಡುವುದು ಈ ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ.

ಜನವರಿ 31, 1992ರಂದು ಜಯಂತಿ ಪಟ್ನಾಯಕ್‌ರವರ ಅಧ್ಯಕ್ಷತೆಯಲ್ಲಿ ಪ್ರಥಮ ರಾಷ್ಟ್ರೀಯ ಮಹಿಳಾ ಆಯೋಗವನ್ನು ರಚಿಸಲಾಯಿತು.

## ರಚನೆ :

1. ಕೇಂದ್ರ ಸರ್ಕಾರವು ನೇಮಿಸಲ್ಪಟ್ಟ ಒಬ್ಬ ಅಧ್ಯಕ್ಷರನ್ನು ಹೊಂದಿರುತ್ತದೆ.
2. ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ 5 ಮಂದಿ ಸದಸ್ಯರನ್ನು ಒಳಗೊಂಡಿರುತ್ತದೆ. ಈ ಸದಸ್ಯರುಗಳು ಸಮರ್ಥರೂ, ಪ್ರಾಮಾಣಿಕರೂ ಹಾಗೂ ಕಾನೂನು ಅಥವಾ ಶಾಸನ, ಕಾರ್ಮಿಕ ಸಂಘಟನೆ, ಆಡಳಿತ, ಆರ್ಥಿಕ ಅಭಿವೃದ್ಧಿ, ಆರೋಗ್ಯ, ಶಿಕ್ಷಣ ಅಥವಾ ಸಮಾಜ ಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಅನುಭವವುಳ್ಳವರಾಗಿರುತ್ತಾರೆ.
3. ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಒಬ್ಬ ಸದಸ್ಯ ಕಾರ್ಯದರ್ಶಿಯನ್ನು ಹೊಂದಿರುತ್ತದೆ. ಸದಸ್ಯ ಕಾರ್ಯದರ್ಶಿಯು ನಿರ್ವಹಣಾ ಕ್ಷೇತ್ರದಲ್ಲಿ ಅಥವಾ ಸಾಮಾಜಿಕ ಚಳುವಳಿಯಲ್ಲಿ ಪರಿಣೀತನಾಗಿರಬೇಕು ಅಥವಾ ಸೂಕ್ತ ಅನುಭವವುಳ್ಳ ಅಖಿಲ ಭಾರತ ಸೇವರಗಳ ಸದಸ್ಯನಾಗಿರಬೇಕು.

## ರಾಷ್ಟ್ರೀಯ ಮಹಿಳಾ ಆಯೋಗದ ಕಾರ್ಯಗಳು :

1. ಸಂವಿಧಾನ & ಇತರೆ ಕಾನೂನುಗಳ ಅಡಿಯಲ್ಲಿ ಮಹಿಳೆಯರಿಗೆ ನೀಡಲಾಗಿರುವ ರಕ್ಷಣೋಪಾಯಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದು & ವಿಚಾರಣೆ ನಡೆಸುವುದು
2. ಈ ರಕ್ಷಣೋಪಾಯಗಳು ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದರ ಬಗ್ಗೆ ಸರ್ಕಾರಕ್ಕೆ ವಾರ್ಷಿಕವಾಗಿ ಅಥವಾ ಸೂಕ್ತವೆನಿಸಿದಾಗ ವರದಿಗಳನ್ನು ನೀಡುವುದು



GNANADHARE IAS KAS ACADEMY

3. ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಅಂತಹ ರಕ್ಷಣೋಪಾಯಗಳನ್ನು ಹೇಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂಬುದರ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುವುದು
4. ಮಹಿಳೆಯರಿಗೆ ಸಂಬಂಧಿಸಿದಂತೆ ಪ್ರಸ್ತುತ ಅಸ್ತಿತ್ವದಲ್ಲಿರುವ ಸಂವಿಧಾನದ ಉಪಬಂಧಗಳು & ಇತರ ಕಾನೂನುಗಳನ್ನು ಪರಿಶೀಲಿಸುವುದು & ಈ ಕಾನೂನುಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು, ಅವುಗಳಿಗೆ ತಿದ್ದುಪಡಿ ತರುವಂತೆ ಶಿಫಾರಸ್ಸು ಮಾಡುವುದು.
5. ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಪರಿಶೀಲಿಸುವುದು
   - ಮಹಿಳಾ ಹಕ್ಕುಗಳ ನಿರಾಕರಣೆ
   - ಮಹಿಳೆಯರಿಗೆ ರಕ್ಷಣೆ ನೀಡಲು & ಸಮಾನತೆ ಹಾಗೂ ಅಭಿವೃದ್ದಿಯನ್ನು ಸಾಧಿಸಲು ರೂಪಿಸಲಾದ ಕಾನೂನುಗಳನ್ನು ಅನುಷ್ಠಾನಗೊಳಿಸುವುದು
   - ಮಹಿಳೆಯರ ಕಲ್ಯಾಣಕ್ಕೆ ನೆರವಾಗುವ, ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ, ಮಹಿಳೆಯರ ಕಷ್ಟ ಕಾರ್ಪಣ್ಯಗಳನ್ನು ನಿಗಿಸಬಲ್ಲ ನೀತಿ ನಿರ್ಧಾರಗಳು, ಮಾರ್ಗದರ್ಶಿ ಸೂತ್ರಗಳು ಹಾಗೂ ಸೂಚನೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪಾಲಿಸದಿದ್ದರೆ
6. ಮಹಿಳೆಯರ ವಿರುದ್ಧ ನಡೆಯುವ ತಾರತಮ್ಯ & ದೌರ್ಜನ್ಯಗಳಿಂದ ಉಂಟಾಗುವ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡಲು ಅಥವಾ ವಿಚಾರಣೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು
7. ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಹೇಗೆ ಪ್ರಾತಿನಿಧ್ಯತೆ ನೀಡಬಹುದು ಎಂಬ ವಿಷಯದ ಬಗ್ಗೆ ಶೈಕ್ಷಣಿಕ ಸಂಶೋಧನೆ ಕೈಗೊಳ್ಳುವುದು
8. ಕೇಂದ್ರ ಹಾಗೂ ರಾಜ್ಯ ಮಹಿಳೆಯರ ಅಭಿವೃದ್ಧಿ ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ ಎಂಬುದನ್ನು ಪರಿಶೀಲಿಸುವುದು
9. ಮಹಿಳೆಯರನ್ನು ಬಂಧಿಸಿರುವ ಸೆರೆಮನೆ, ರಿಮ್ಯಾಂಡ್ ಹೋಂ ಹಾಗೂ ಇತರೆ ಸ್ಥಳಗಳನ್ನು ಪರೀಕ್ಷಿಸುವುದು ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸುವುದು
10. ಮಹಿಳೆಯರಿಗೆ ಸಂಬಂಧಿಸಿದ ಯಾವುದೇ ವಿಷಯ, ಅದರಲ್ಲಿಯೂ ನಿರ್ದಿಷ್ಟವಾಗಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು & ಸವಾಲುಗಳನ್ನು ಕುರಿತು ಸರ್ಕಾರಕ್ಕೆ ನಿಯತಕಾಲಿಕವಾಗಿ ವರದಿಗಳನ್ನು ಸಲ್ಲಿಸುವುದು
11. ಕೇಂದ್ರ ಸರ್ಕಾರ ಮಹಿಳಾ ಆಯೋಗಕ್ಕೆ ಒಪ್ಪಿಸುವ ಯಾವುದೇ ವಿಷಯದ ಬಗ್ಗೆ ಗಮನ ನೀಡುವುದು



GNANADHARE IAS KAS ACADEMY

# ಕೇಂದ್ರಾಡಳಿತ ಪ್ರದೇಶಗಳ ಆಡಳಿತ :–

ಸಂವಿಧಾನದ VIIIನೇ ಭಾಗದಲ್ಲಿ ಕೇಂದ್ರಾಡಳಿತ ಪ್ರದೇಶಗಳ ಬಗ್ಗೆ ತಿಳಿಸಲಾಗಿದೆ. ಈ ಪ್ರದೇಶಗಳ ಆಡಳಿತವನ್ನು ತಾವು ನೇಮಿಸುವ ಆಡಳಿತಗಾರರ ಮೂಲಕ ರಾಷ್ಟ್ರಪತಿ ನಿರ್ವಹಿಸಬೇಕೆಂದು 239(1) ವಿಧಿ ತಿಳಿಸುತ್ತದೆ. ಇವುಗಳ ಆಡಳಿತಗಾರದಿದೆ ವಿಭಿನ್ನ ಹಾಗೂ ನಾಮಾಂಕಿತಗಳಿವೆ. ಚಂಡಿಗಢ, ದಿಯು & ದಮನ್, ದಾದ್ರ & ನಾಗರ್ ಹವೇಲಿ ಹಾಗೂ ಲಕ್ಷದ್ವೀಪಗಳ ಆಡಳಿತಗಾರರನ್ನು ಅಡ್ಮಿನಿಸ್ಟ್ರೇಷನ್ ಎಂದೂ ಕರೆಯಲಾಗುತ್ತದೆ. ಪಂಜಾಬಿನ ರಾಜ್ಯಪಾಲರು ಚಂಡೀಗಢದ ಆಡಳಿತಗಾರರಾಗಿಯೂ ಕೆಲಸ ನಿರ್ವಹಿಸುತ್ತಾರೆ. ದಾದ್ರ & ನಾಗರ್ ಹವೇಲಿಯ ಆಡಳಿತಗಾರ ದಿಯು & ದಮನ್ ಆಡಳಿತಗಾರರಾಗಿಯೂ ಕೆಲಸ ನಿರ್ವಹಿಸುತ್ತಾರೆ. ಲಕ್ಷದ್ವೀಪಕ್ಕೆ ಪ್ರತ್ಯೇಕ ಆಡಳಿತಗಾರರಿದ್ದಾರೆ. ಅಂಡಮಾನ್ & ನಿಕೋಬಾರ್ ದ್ವೀಪಗಳ, ದೆಹಲಿಯ & ಪುದುಚೇರಿಯ ಆಡಳಿತಗಾರರನ್ನು ಉಪರಾಜ್ಯಪಾಲರೆಂದು ಹೆಸರಿಸಲಾಗಿದೆ. ಯಾವುದಾದರೂ ಕೇಂದ್ರಾಡಳಿತ ಪ್ರದೇಶದಲ್ಲಿ ಆಡಳಿತಗಾರ ಹುದ್ದೆ ಖಾಲಿಯಾದಾಗ ನೆರೆಯ ರಾಜ್ಯದ ರಾಜ್ಯಪಾಲರನ್ನು ಆ ಪ್ರದೇಶದ ಹಂಗಾಮಿ ಆಡಳಿತಗಾರರನ್ನಾಗಿ ರಾಷ್ಟ್ರಪತಿ ನೇಮಿಸಬಹುದೆಂದು 239(2) ವಿಧಿ ತಿಳಿಸುತ್ತದೆ.

ದೆಹಲಿ ಆಡಳಿತದ ಬಗ್ಗೆ ಸಂಸತ್ತು 1966ರಲ್ಲಿ ದೆಹಲಿ ಆಡಳಿತ ಕಾಯ್ದೆಯನ್ನು ಅಂಗೀಕರಿಸಿತು. ಉಪರಾಜ್ಯಪಾಲರು ಇಲ್ಲಿನ ಕಾರ್ಯ ನಿರ್ವಾಹಕರನ್ನು ಕೇಂದ್ರ ಗೃಹ ಖಾತೆಯ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿ ನೇಮಿಸುತ್ತಿದ್ದರು. ಅಲ್ಲದೇ ಮೇಲಿನ ಕಾಯ್ದೆ ಅನ್ವಯ 61 ಸದಸ್ಯರನ್ನೊಳಗೊಂಡ ಚುನಾಯಿತ ಮೆಟ್ರೋಪಾಲಿಟನ್ ಕೌನ್ಸಿಲ್ ಇತ್ತು. ಇವರಲ್ಲಿ 5 ಸದಸ್ಯರನ್ನು ರಾಷ್ಟ್ರಪತಿ ನಾಮಕರಣ ಮಾಡುತ್ತಿದ್ದರು. ಉಳಿದ 56 ಸದಸ್ಯರು 5 ವರ್ಷದ ಅವಧಿಗೆ ಆಯ್ಕೆಯಾಗುತ್ತಿದ್ದರು. 1977ರ ಜೂನ್ ತಿಂಗಳಲ್ಲಿ ಚುನಾವಣೆ ನಡೆದಾಗ ಜನತಾ ಪಕ್ಷ 46 ಸ್ಥಾನಗಳನ್ನು & ಕಾಂಗ್ರೆಸ್ 10 ಸ್ಥಾನಗಳನ್ನು ಗೆದ್ದವು. ದೆಹಲಿಯ ಮುನಿಸಿಪಲ್ ಕಾರ್ಪೋರೇಷನ್, ನವ ದೆಹಲಿಯ ಮುನಿಸಿಪಲ್ ಕಮಿಟಿ & ದೆಹಲಿಯ ಕಂಟೋನ್ಮೆಟ್ ಬೋರ್ಡ್‌ಗಳು ದೆಹಲಿ ಪ್ರದೇಶಕ್ಕೆ ಸೇರಿವೆ.

ರಾಷ್ಟ್ರಪತಿ ಆಡಳಿತವನ್ನು ದೆಹಲಿಯಲ್ಲಿ ಜಾರಿಗೆ ತರಲು ಇದೇ ಸಂವಿಧಾನ ತಿದ್ದುಪಡಿ ಮೂಲಕ ಅಳವಡಿಸಿರುವ 239ಎ ವಿಧಿಯಲ್ಲಿ ಅವಕಾಶವಿದೆ. ದೆಹಲಿಯ ಆಡಳಿತವನ್ನು 239ಎಎ ವಿಧಿ ಅನ್ವಯ ನಡೆಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಉಂಟಾದಾಗ ಅಥವಾ ದೆಹಲಿಯ ಕ್ರಮಬದ್ಧ ಆಡಳಿತಕ್ಕೆ ಅಗತ್ಯ ಅಥವಾ ಸಮಯೋಜಿತ ಎಂದು ಕಂಡು ಬಂದರೆ, ಉಪರಾಜ್ಯಪಾಲರ ವರದಿ ಆಧಾರದ ಮೇಲೆ ಅಥವಾ ಬೇರೆ ಕಾರಣಕ್ಕಾಗಿ ರಾಷ್ಟ್ರಪತಿ ತಮ್ಮ ಆಡಳಿತವನ್ನು ಘೋಷಿಸಬಹುದು. ಅಂದರೆ 239ಎಎ ವಿಧಿಯು

ಯಾವುದೇ ನಿಯಮ ಅಥವಾ ಎಲ್ಲಾ ನಿಯಮಗಳನ್ನು ಸಸ್ಪೆಂಡ್ ಮಾಡುವ ಅಧಿಕಾರ ರಾಷ್ಟ್ರಪತಿಗೆ ಇದೆ. ಈ ವಿಧಿ ಅನ್ವಯ ಮೊದಲ ಬಾರಿಗೆ 2014ರಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದಿತು.

## ನಗರ ಪ್ರದೇಶದ ಸ್ಥಳಿಯ ಸರ್ಕಾರಗಳು :

ಈ ಸ್ಥಳಿಯ ಸರ್ಕಾರಗಳ ಬಲವರ್ಧನೆಗೆ ಹಾಗೂ ಸಮಪ್ಕ ಕಾರ್ಯನಿರ್ವಹಣೆಗೆ ಕೇಂದ್ರ ಸರ್ಕಾರ 1992ರಲ್ಲಿ 74ನೇ ಸಂವಿಧಾನ ತಿದ್ದುಪಡಿಯನ್ನು ಅಂಗೀಕರಿಸಿತು. ಇದು 'ನಗರಪಾಲಿಕೆ ಕಾಯ್ದೆ' ಎಂದು ಹೆಸರು ಪಡೆದು ಜೂನ್ 1, 1993ರಿಂದ ಕಾರಿಗೆ ಬಂದಿತು. ಇದರ ಮೂಲಕ ಹೊಸದಾಗಿ IXA ಭಾಗವನ್ನು ಹಾಗೂ 12ನೇ ಅನುಸೂಚಿಯನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಈ ಭಾಗದಲ್ಲಿ 243–ಪಿ ಯಿಂದ 243–ಝಡ್‌ಜಿ ವರೆಗಿನ 18 ಹೊಸ ವಿಧಿಗಳನ್ನು ಸೇರಿಸಲಾಗಿದೆ. ಇವುಗಳಲ್ಲಿ ನಗರ ಪ್ರದೇಶ ಸರ್ಕಾರಗಳ ರಚನೆ, ಅಧಿಕಾರಗಳು, ಕರ್ತವ್ಯಗಳು, ಚುನಾವಣೆ, ಹಣಕಾಸು ಮುಂತಾದ ವಿಷಯಗಳನ್ನು ನಮೂದಿಸಲಾಗಿದೆ.

# ಭಾರತದ ನ್ಯಾಯಾಂಗ :–

### ಏಕೀಕೃತ ನ್ಯಾಯಾಂಗ :

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸಂವಿಧಾನದ ರಚನಾಕಾರರು ದೇಶದ ಸಮಗ್ರತೆಯನ್ನು ರಕ್ಷಿಸುವ ದೃಷ್ಟಿಯಿಂದ ಏಕೀಕೃತ ನ್ಯಾಯಾಂಗ ವ್ಯವಸ್ಥೆಯನ್ನು ಅಳವಡಿಸಿದರು.

- ಸುಪ್ರೀಂಕೋರ್ಟ್‌ಗೆ ನ್ಯಾಯಾಧೀಶರನ್ನು ವಕೀಲರ ಸಂಘಗಳಿಗೆ ನೇರವಾಗಿ ನೇಮಿಸಲು ಅವಕಾಶವಿದ್ದರೂ, ನೇಮಕಗಳನ್ನು ಬಹುತೇಕ ಮಟ್ಟಿಗೆ ಹೈಕೋರ್ಟ್‌ಗಳಿಂದಲೇ ಮಾಡಲಾಗಿದೆ. ಅದೇ ರೀತಿ ಜಿಲ್ಲಾ & ಸೆಷನ್ಸ್ ನ್ಯಾಯಾಲಯಗಳಿಂದ ಅನೇಕರನ್ನು ಹೈಕೋರ್ಟ್‌ಗಳ ನ್ಯಾಯಾಧೀಶರನ್ನಾಗಿ ನೇಮಿಸಲಾಗಿದೆ.
- ಸುಪ್ರೀಂಕೋರ್ಟ್ & ಹೈಕೋರ್ಟ್‌ಗಳ ನ್ಯಾಯಾಧೀಶರನ್ನು ರಾಷ್ಟ್ರಪತಿ ನೇಮಿಸುತ್ತಾರೆ.
- ಹೈಕೋರ್ಟ್‌ಗಳ ರಚನೆಯನ್ನು ಕೇಂದ್ರಸರ್ಕಾರ ನಿರ್ಧರಿಸುತ್ತದೆ. ಸಂಸತ್ತು ಹೊಸದಾಗಿ ಹೈಕೋರ್ಟ್‌ನ್ನು ರಚಿಸಬಹುದು & ಹೈಕೋರ್ಟ್‌ನ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಬಹುದು.
- ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವ ಅಧಿಕಾರ ಸಂಸತ್ತಿಗಿದೆ.

- ಸಂವಿಧಾನದ 222ನೇ ವಿಧಿಯನ್ವಯ ಒಂದು ಹೈಕೋರ್ಟಿನ ನ್ಯಾಯಾಧೀಶರನ್ನು ಇನ್ನೊಂದು ಹೈಕೋರ್ಟಿಗೆ ವರ್ಗಾಯಿಸಬಹುದು. ಮೊದಲ ಬಾರಿಗೆ 1975ರಲ್ಲಿ ಆಂತರಿಕ ತುರ್ತುಪರಿಸ್ಥಿತಿಯನ್ನು ಘೋಷಿಸಿದ ಮೇಲೆ 13 ಹೈಕೋರ್ಟಗಳ ನ್ಯಾಯಾಧೀಶರನ್ನು ವರ್ಗ ಮಾಡಲಾಯಿತು.

## ನ್ಯಾಯಾಂಗದ ಸ್ವಾತಂತ್ರ್ಯ :

ನ್ಯಾಯಾಧೀಶರ ನೇಮಕ : 2015ರ ಏಪ್ರಿಲ್‌ನಲ್ಲಿ ರಾಷ್ಟ್ರೀಯ ನ್ಯಾಯಾಂಗ ನೇಮಕಗಳ ಆಯೋಗ ರಚನೆಗೆ ಅವಕಾಶ ಮಾಡಿಕೊಟ್ಟಿದ್ದ ಸಂವಿಧಾನದ 99ನೇ ತಿದ್ದುಪಡಿ ಕಾಯ್ದೆಯನ್ನು ಸುಪ್ರೀಕೋರ್ಟ್‌ನ 5 ನ್ಯಾಯಾಧೀಶರ ಪೀಠ 4–1 ಬಹುಮತದಿಂದ ಅಕ್ಟೋಬರ್ 16, 2015ರಂದು 'ಸಂವಿಧಾನ ಬಾಹಿರ' ಎಂದು ತೀರ್ಪು ನೀಡಿ, 'ಕೊಲಿಜಿಯಂ' ಪದ್ಧತಿಯನ್ನು ಎತ್ತಿ ಹಿಡಿಯಿತು.

# 99ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಮುಖ್ಯ ನಿಯಮಗಳು :

ಅಕ್ಟೋಬರ್ 16, 2015ರಂದು ಸುಪ್ರಿಂಕೋರ್ಟ್ ಅಸಿಂಧು ಎಂದು ತೀರ್ಪು ನೀಡಿದ 99ನೇ ಸಂವಿಧಾನ ತಿದ್ದುಪಡಿ ಕೆಳಕಂಡ ನಿಯಮಗಳನ್ನು ಒಳಗೊಂಡಿದೆ.

ಸುಪ್ರಿಂಕೋರ್ಟ್ & ಹೈಕೋರ್ಟ್‌ಗಳ ನ್ಯಾಯಾಧೀಶರ ನೇಮಕದಲ್ಲಿ ಬದಲಾವಣೆ ತರಲು ನರೇಂದ್ರ ಮೋದಿ ಎನ್.ಡಿ.ಎ ಕೇಂದ್ರಸರ್ಕಾರ 121ನೇ ವಿಧಿ ಎರಡು ಸದನಗಳ ಒಪ್ಪಿಗೆ ಪಡೆಯಿತು. ಸಂಸತ್ತಿನಲ್ಲಿ ಮಂಡಿಸಿ 2014ರ ಆಗಸ್ಟ್ 13 & 14ರಂದು ಎರಡು ಸದನಗಳ ಒಪ್ಪಿಗೆ ಪಡೆಯಿತು. ಸಂಸತ್ತಿನ ಅಂಗೀಕಾರ ಪಡೆದ ನಂತರ 121ನೇ ತಿದ್ದುಪಡಿಯ ಕ್ರಮಸಂಖ್ಯೆ 99ನೇ ಸಂವಿಧಾನ ತಿದ್ದುಪಡಿ ಕಾಯ್ದೆಯಾಯಿತು. ಇದು 124, 127, 128, 217, 222, 224, 224ಎ & 231ನೇ ವಿಧಿಗಳನ್ನು ತಿದ್ದುಪಡಿ ಮಾಡಿತು. ಹೊಸದಾಗಿ 124ಎ, 124ಬಿ & 124ಸಿ ವಿಧಿಗಳನ್ನು ಸಂವಿಧಾನಕ್ಕೆ ಅಳವಡಿಸಿತು. ಈ ಕಾಯ್ದೆಗೆ 20 ರಾಜ್ಯಗಳ ಶಾಸಕಾಂಗಗಳ ಅನುಮೋದನೆ ನೀಡಿದವು. ರಾಷ್ಟ್ರಪತಿ ಇದಕ್ಕೆ ಡಿಸೆಂಬರ್ 31ರಂದು ಅಂಕಿತ ಹಾಕಿದರು. ಕೇಂದ್ರ ಸರ್ಕಾರ ಏಪ್ರಿಲ್ 13, 2015ರಂದು ಸರ್ಕಾರಿ ಪತ್ರದಲ್ಲಿ ಪ್ರಕಟಿಸಿತು.

## 124ನೇ ವಿಧಿ :

ರಾಷ್ಟ್ರೀಯ ನ್ಯಾಯಾಧೀಶರ ನೇಮಕಾತಿಗಳ ಆಯೋಗದ ಶಿಫಾರಸಿನ ಮೇಲೆ ಸುಪ್ರಿಂಕೋರ್ಟ್ & ಹೈಕೋರ್ಟ್‌ಗಳ ನ್ಯಾಯಾಧೀಶರನ್ನು ರಾಷ್ಟ್ರಪತಿ ನೇಮಿಸಬೇಕೆಂದು ತಿಳಿಸಿತು.

## 124ಎ ವಿಧಿ :

ನ್ಯಾಯಾಧೀಶರ ನೇಮಕಾತಿ ಆಯೋಗದ ರಚನೆಯನ್ನು ತಿಳಿಸಿತು. ಭಾರತದ ಮುಖ್ಯ ನ್ಯಾಯಾಧೀಶರು ಅಧ್ಯಕ್ಷರಾಗಿದ್ದ ಈ ಅಯೋಗದಲ್ಲಿ ಸುಪ್ರಿಂಕೋರ್ಟ್‌ನ ಇಬ್ಬರು ಅತ್ಯಂತ ಹಿರಿಯ ನ್ಯಾಯಾಧೀಶರು, ಕೇಂದ್ರದ ಕಾನೂನು ಸಚಿವರು & ಇಬ್ಬರು ಪ್ರಮುಖ ವ್ಯಕ್ತಿಗಳ ಸದಸ್ಯರಾಗಲು ಅವಕಾಶವಿತ್ತು. ಪ್ರಧಾನಿ, ಮುಖ್ಯ ನ್ಯಾಯಾಧೀಶರು & ವ್ಯಕ್ತಿಗಳನ್ನು ಪ್ರತಿಪಕ್ಷದ ಅಥವಾ ದೊಡ್ಡ ಪಕ್ಷದ ನಾಯಕರನ್ನೊಳಗೊಂಡ ಸಮಿತಿ ಇಬ್ಬರು ಪ್ರಮುಖ ವ್ಯಕ್ತಿಗಳನ್ನು ಶಿಫಾರಸು ಮಾಡಬೇಕಿತ್ತು. ಇವರಲ್ಲಿ ಒಬ್ಬರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಅಥವಾ ಮಹಿಳೆಯರ ಗುಂಪಿಗೆ ಸೇರಿಸಬೇಕಿತ್ತು. ಇವರನ್ನು 3 ವರ್ಷಕ್ಕೆ ಸದಸ್ಯರನ್ನಾಗಿ ನಾಮಕರಣ ಮಾಡಬೇಕಿತ್ತು & ಇವರ ಪುನರ್ ನಾಮಕರಣಕ್ಕೆ ಅವಕಾಶವಿರಲಿಲ್ಲ.

## 124ಬಿ ವಿಧಿ :

1. ಸುಪ್ರಿಂಕೋರ್ಟ್ & ಹೈಕೋರ್ಟ್‌ಗಳ ಮುಖ್ಯ ನ್ಯಾಯಾಧೀಶರು & ಇತರ ನ್ಯಾಯಾಧೀಶರುಗಳ ನೇಮಕದ ಬಗ್ಗೆ ಶಿಫಾರಸ್ಸು ಮಾಡುವುದು.
2. ಹೈಕೋರ್ಟ್‌ಗಳ ಮುಖ್ಯ ಹಾಗೂ ಇತರ ನ್ಯಾಯಾಧೀಶರ ವರ್ಗಾವಣೆ ಬಗ್ಗೆ ಶಿಫಾರಸ್ಸು ಮಾಡುವುದು.
3. ಶಿಫಾರಸ್ಸು ಮಾಡುವ ವ್ಯಕ್ತಿಯ ಸಾಮರ್ಥ್ಯ & ಪ್ರಾಮಾಣಿಕತೆಯನ್ನು ಖಚಿತ ಪಡಿಸಿಕೊಳ್ಳಬೇಕು.

## 124ಸಿ ವಿಧಿ :

ಸುಪ್ರಿಂಕೋರ್ಟ್ & ಹೈಕೋರ್ಟ್‌ಗಳ ಮುಖ್ಯ ನ್ಯಾಯಾಧೀಶ & ಇತರ ನ್ಯಾಯಾಧೀಶರ ನೇಮಕಾತಿ ವಿಧಾನದ ಬಗ್ಗೆ ಸಂಸತ್ತು ನಿಯಮಗಳನ್ನು ರೂಪಿಸಬೇಕಿತ್ತು. ನೇಮಕಾತಿ ಆಯೋಗ ತನ್ನ ಕಾರ್ಯ ನಿರ್ವಹಣೆ ಬಗ್ಗೆ ನಿಯಮಗಳನ್ನು ರೂಪಿಸಲು ಅಧಿಕಾರ ಪಡೆದಿತ್ತು. ಆಯೋಗದ ಸದಸ್ಯರಲ್ಲಿ ಇಬ್ಬರು ಯಾವುದೇ ಹೆಸರನ್ನು ಒಪ್ಪದಿದ್ದರೆ ಅವರನ್ನು ನ್ಯಾಯಾಧೀಶರನ್ನಾಗಿ ನೇಮಿಸಲು ಸಾಧ್ಯವಿರಲಿಲ್ಲ.

GNANADHARE IAS KAS ACADEMY

## ನ್ಯಾಯಾಧೀಶರ ಪದಚ್ಯುತಿ :

ಸುಪ್ರೀಂಕೋರ್ಟ್‌ನ & ಹೈಕೋರ್ಟ್‌ನ ನ್ಯಾಯಾಧೀಶರನ್ನು ಸುಲಭವಾಗಿ ಪದಚ್ಯುತಿಗೊಳಿಸಲು ಸಾಧ್ಯವಿಲ್ಲ. ಸಂವಿಧಾನದ 124(4)ನೇ ವಿಧಿಯನ್ವಯ ಸುಪ್ರಿಂಕೋರ್ಟಿನ ನ್ಯಾಯಾಧೀಶರನ್ನು ಅಸಮರ್ಪಕತೆ ಅಥವಾ ರುಜುವಾತಾದ ದುರ್ನಡತೆಗೆ ಪದಚ್ಯುತಿಗೊಳಿಸಲು ಸಾಧ್ಯವಿದೆ. ಸಂಸತ್ತಿನ ಎರಡು ಸದನಗಳು ಪ್ರತ್ಯೇಕವಾಗಿ ಒಟ್ಟು ಸದಸ್ಯರ ಬೆಂಬಲ ಪಡೆದು, ಹಾಜರಿರುವ ಸದಸ್ಯರಲ್ಲಿ 2/3ರಷ್ಟು ನಿರ್ಣಯವನ್ನು ಅಂಗೀಕರಿಸಿದರೆ, ರಾಷ್ಟ್ರಪತಿ ಆರೋಪಕ್ಕೊಳಗಾದ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುತ್ತಾರೆ. ಸುಪ್ರಿಂಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕವಾಗುವುದಕ್ಕೆ ಮುಂಚೆ, ಪಂಜಾಬ್-ಹರಿಯಾಣ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ಅವಧಿಯಲ್ಲಿ (1987-89) ವಿ. ರಾಮಸ್ವಾಮಿ ಹಣ ದುರುಪಯೋಗ ಮಾಡಿದ್ದರೆಂದು ಇವರ ವಿರುದ್ಧ 108 ಸಂಸತ್ ಸದಸ್ಯರು 1992ರ ಮಾರ್ಚ್‌ನಲ್ಲಿ ನೋಟಿಸ್‌ನ್ನು ಲೋಕಸಭೆಯ ಸ್ಪೀಕರ್‌ಗೆ ಸಲ್ಲಿಸಿದ್ದರು. ಪರಿಣಾಮವಾಗಿ 1968ರ ನ್ಯಾಯಾಧೀಶರ ವಿಚಾರಣಾ ಕಾಯ್ದೆ ಅನ್ವಯ ಸುಪ್ರಿಂಕೋರ್ಟ್ ನ್ಯಾಯಾಧೀಶ ಪಿ.ಬಿ ಸಾವಂತ್ ಅಧ್ಯಕ್ಷತೆಯಲ್ಲಿ ವಿಚಾರಣಾ ನ್ಯಾಯಾಧೀಶರ ವಿಚಾರಣಾ ಆಯೋಗವನ್ನು ನೇಮಿಸಲಾಯಿತು. ಮುಂಬೈ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಪಿ.ಡಿ ದೇಸಾಯಿ & ಸುಪ್ರಿಂಕೋರ್ಟ್‌ನ ಮಾಜಿ ನ್ಯಾಯಾಧೀಶ ಓ. ಚಿನ್ನಪ್ಪರೆಡ್ಡಿ ಇದರ ಸದಸ್ಯರಾಗಿದ್ದರು. ಈ ಸಮಿತಿಯ ವರದಿ ಪ್ರಕಾರ ವಿ.ರಾಮಸ್ವಾಮಿ ದುರ್ನಡತೆಯಲ್ಲಿ ತೊಡಗಿದ್ದು ಸಾಬೀತಾಯಿತು, ಇದರ ವರದಿಯನ್ನು ಸಂಸತ್ತಿನಲ್ಲಿ ಡಿಸೆಂಬರ್ 17, 1992ರಂದು ಮಂಡಿಸಲಾಯಿತು. ಕಾಂಗ್ರೆಸ್ ಮತದಾನದಲ್ಲಿ ಭಾಗವಹಿಸಲಿಲ್ಲ. ಪದಚ್ಯುತಿ ನಿರ್ಣಯ ಲೋಕಸಭೆಯಲ್ಲಿ ಮೇ 11, 1993ರಂದು ಬಹುಮತ ಪಡೆಯಲು ವಿಫಲವಾದರಿಂದ ದುರ್ನಡತೆಗೆ ನ್ಯಾಯಾಧೀಶ ರಾಮಸ್ವಾಮಿಯನ್ನು ಪದಚ್ಯುತಿಗೊಳಿಸಲು ಸಾಧ್ಯವಾಗಲಿಲ್ಲ. ಇವರು ರಜೆಯನ್ನು ಪಡೆದು ಫೆಬ್ರವರಿ 14, 1994ರಂದು ನಿವೃತ್ತಿಯಾದರು. ಭ್ರಷ್ಟಾಚಾರ ಆರೋಪಗಳಿಗೆ ಒಳಗಾಗಿ, ಮಹಾಭಿಯೋಗಕ್ಕೆ ಗುರಿಯಾಗಿದ್ದ ಸಿಕ್ಕಿಂ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ದಿನಕರನ್ ಹಾಗೂ ಕೋಲ್ಕತ್ತಾ ಹೈಕೋರ್ಟಿನ ದುರ್ನಡತೆಗೆ ಸೌಮಿತ್ರಸೇನ್ 2011ರಲ್ಲಿ ರಾಜೀನಾಮೆ ಸಲ್ಲಿಸಿದರು. ಸೌಮಿತ್ರಸೇನ್ ವಿರುದ್ಧ ರಾಜ್ಯಸಭೆ 272 ಬಹುಮತಗಳಿಂದ ಮಹಾಭಿಯೋಗಕ್ಕೆ ನಿರ್ಣಯವನ್ನು ಆಗಸ್ಟ್‌ನಲ್ಲಿ ಅಂಗೀಕರಿಸಿತು. ಇದು ಲೋಕಸಭೆಯಲ್ಲಿ ಅಂಗೀಕಾರವಾಗುವುದಕ್ಕೆ ಮೊದಲು ಸೇನ್ ರಾಜೀನಾಮೆ ನೀಡಿದರು.

## ನಿವೃತ್ತಿ ವಯಸ್ಸು :

ಸುಪ್ರಿಂಕೋರ್ಟ್‌ನ ನ್ಯಾಯಾಧೀಶರು & ಹೈಕೋರ್ಟ್‌ನ ನ್ಯಾಯಾಧೀಶರು ಕ್ರಮವಾಗಿ 65 & 62 ವರ್ಷಗಳು ತುಂಬಿದ ಮೇಲೆ ನಿವೃತ್ತಾರಾಗುತ್ತಾರೆ. ಸಮವಿಧಾನದ 15ನೇ ತಿದ್ದುಪಡಿ ಅನ್ವಯ 1963ರಲ್ಲಿ ಹೈಕೊರ್ಟ್‌ನ ನ್ಯಾಯಾಧೀಶರ ನಿವೃತ್ತಿ ವಯಸ್ಸನ್ನು 60-62ಕ್ಕೆ ಹೆಚ್ಚಿಸಲಾಯಿತು. ಇವರ ನಿವೃತ್ತಿ ವಯಸ್ಸು

65 ವರ್ಷ ಇರಬೇಕೆಂದು ಕಾನೂನು ಆಯೋಗ ಶಿಫಾರಸ್ಸು ಮಾಡಿದ್ದರೂ ಸರ್ಕಾರ ಅದನ್ನು ಅಂಗೀಕರಿಸಿಲ್ಲ. ನಿವೃತ್ತಿಯಾದ ಮೇಲೆ ಸುಪ್ರಿಂಕೊರ್ಟ್ ನ್ಯಾಯಾಧೀಶರು ಭಾರತದಲ್ಲಿರುವ ಯಾವುದೇ ನ್ಯಾಯಾಲಯದಲ್ಲಿ ಅಥವಾ ಪ್ರಾಧಿಕಾರದಲ್ಲಿ ವಾದಿಸಬಾರದೆಂದು ಅಥವಾ ಕಾರ್ಯ ನಿರ್ವಹಿಸಬಾರದೆಂದು 124(7)ನೇ ವಿಧಿ ತಿಳಿಸುತ್ತದೆ. 220ನೇ ವಿಧಿ ಅನ್ವಯ ಹೈಕೊರ್ಟ್‌ನ ಖಾಯಂ ನ್ಯಾಯಾಧೀಶರಾಗಿದ್ದವರು, ಸುಪ್ರಿಂಕೊರ್ಟ್ & ಇತರ ಹೈಕೊರ್ಟ್‌ಗಳನ್ನು ಬಿಟ್ಟು ಉಳಿದ ಯಾವುದೇ ಕೊರ್ಟ್‌ನಲ್ಲಿ ವಾದಿಸುವಂತಿಲ್ಲ.

## ವೇತನ & ಸೌಲಭ್ಯಗಳು :

ಸಂವಿಧಾನದ 125 & 221ನೇ ವಿಧಿಗಳ ಅನ್ವಯ ಅನುಕ್ರಮವಾಗಿ ಸುಪ್ರಿಂಕೊರ್ಟ್‌ನ ನ್ಯಾಯಾಧೀಶರು & ಹೈಕೋರ್ಟ್‌ನ ನ್ಯಾಯಾಧೀಶರು, ಸಂಸತ್ತು ಕಾನೂನಿನ ಮೂಲಕ ನಿಗಧಿ ಪಡಿಸುವ ಅಥವಾ ಎರಡನೇ ಅನುಸೂಚಿಯಲ್ಲಿ ನಮೂದಿಸಿರುವ ವೇತನ & ಭತ್ಯೆಗಳನ್ನು ಪಡೆಯುತ್ತಾರೆ. ನೇಮಕವಾದ ಮೇಲೆ ನ್ಯಾಯಾಧೀಶರ ಹಕ್ಕುಗಳನ್ನು ಅಥವಾ ಭತ್ಯೆಗಳನ್ನು ಅಥವಾ ಪಿಂಚಣಿಗಳನ್ನು ಮೊಟಕುಗೊಳಿಸುವಂತಿಲ್ಲ. ಪ್ರಸ್ತುತ ವೇತನಗಳು ಹೀಗಿವೆ :

1. ಸುಪ್ರಿಂಕೊರ್ಟ್‌ನ ಮುಖ್ಯ ನ್ಯಾಯಾಧೀಶರು : ತಿಂಗಳಿಗೆ 1 ಲಕ್ಷ ರೂ.
2. ಸುಪ್ರಿಂಕೊರ್ಟ್‌ನ ನ್ಯಾಯಾಧೀಶರು : ತಿಂಗಳಿಗೆ 90 ಸಾವಿರ ರೂ
3. ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು : ತಿಂಗಳಿಗೆ 90 ಸಾವಿರ ರೂ
4. ಹೈಕೋರ್ಟ್‌ನ ನ್ಯಾಯಾಧೀಶರು : ತಿಂಗಳಿಗೆ 80 ಸಾವಿರ ರೂ

# ಭಾರತದ ಪಕ್ಷ ಪದ್ಧತಿ :

ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳ ಪಾತ್ರ ಮಹತ್ತರವಾದುದು. ಇವುಗಳು ಪ್ರಜಾಪ್ರಭುತ್ವದ ಬೆನ್ನೆಲುಬುಗಳಿದ್ದಂತೆ. ಹಲವಾರು ವ್ಯಕ್ತಿಗಳು ಒಟ್ಟಿಗೆ ಸೇರಿ ತಮ್ಮದೇ ಆದ ರಾಜಕೀಯ ತತ್ವಗಳನ್ನು ಅಳವಡಿಸಿಕೊಂಡು, ಚುನಾವಣೆಯಲ್ಲಿ ಸ್ಪರ್ಧಿಸಿ ರಾಜಕೀಯ ಅಧಿಕಾರವನ್ನು ಪಡೆಯಲು ಯತ್ನಿಸುವ ಗುಂಪಿಗೆ ರಾಜಕೀಯ ಪಕ್ಷ ಎಂದು ಕರೆಯಬಹುದು. ಪ್ರಜಾಸರ್ಕಾರದ ಆಳಿವು-ಉಳಿವು ಪಕ್ಷಗಳ ಮೇಲೆ ಹೆಚ್ಚು ಅವಲಂಬಿತವಾಗಿರುತ್ತದೆ.

## ಭಾರತದ ಪಕ್ಷ ಪದ್ಧತಿಯ ಮುಖ್ಯ ಲಕ್ಷಣಗಳು :

## ಬಹುಪಕ್ಷ ಪದ್ಧತಿ :

ಭಾರತದಲ್ಲಿ ಅನೇಕ ರಾಜಕೀಯ ಪಕ್ಷಗಳು ಇರುವುದರಿಂದ ಬಹುಪಕ್ಷ ಪದ್ಧತಿಯೆಂದು ಕರೆಯುತ್ತೇವೆ. ವಿವಿಧ ಧರ್ಮಗಳು, ಜನಾಂಗಗಲು, ಪ್ರದೇಶಗಳು, ಭಾಷೆಗಳು & ವಿಭಿನ್ನ ಸಂಸ್ಕೃತಿಗಳು ನೂರಾರು ಪಕ್ಷಗಳ ಉಗಮಕ್ಕೆ ಕಾರಣವಾಗಿದೆ. 1951ರಲ್ಲಿ 4 ಬಗೆಯ ರಾಜಕೀಯ ಪಕ್ಷಗಳು ಅಸ್ತಿತ್ವಕ್ಕೆ ಬಂದವು. ಮೊದಲನೇಯದಾಗಿ ಪ್ರಜಾ ಪ್ರಭುತ್ವ & ಸರ್ವಧರ್ಮ ಸಮನ್ವಯಗಳನ್ನು ಅಂಗೀಕರಿಸಿದ ಭಾರತದ ರಾಷ್ಟ್ರೀಯ ಕಾಂಗ್ರೆಸ್, ಸಮಾಜವಾದಿ ಪಕ್ಷ, ಕಿಸಾನ್ ಮಜ್‌ದೂರ್ ಪ್ರಜಾಪ್ರಭುತ್ವಕ್ಕೆ ಪಕ್ಷ ಮುಂತಾದವು. ಎರಡನೇ ಗುಂಪಿಗೆ ಸೇರಿದ್ದ ಭಾರತದ ಕಮ್ಯುನಿಸ್ಟ್ ಪಕ್ಷ, ರೈತರ & ಕಾರ್ಮಿಕರ ಪಕ್ಷ ಮುಂತಾದವು ಸಂಸದೀಯ ಪದ್ದತಿಯನನು ವಿರೋಧಿಸಿ, ಸೋವಿಯತ್ ಅಥವಾ ಚೀನಾ ಪದ್ದಧತಿಯನ್ನು ಬೆಂಬಲಿಸಿದವು. ಮೂರನೇ ಗುಂಪಿಗೆ ಸೇರಿದ್ದ ಹಿಂದು ಮಹಾಸಭಾ, ಜನಸಂಘ & ರಾಮರಾಜ್ಯ ಪರಿಷತ್ ಭಾರತದ ಸಂಪ್ರದಾಯಕ್ಕೆ ಬೆಂಬಲ ನೀಡಿ, ಸಂಸದೀಯ ಪದ್ದತಿಯನ್ನು ಒಪ್ಪಲಿಲ್ಲ. ನಾಲ್ಕನೇ ಗುಂಪಿಗೆ ಸೇರಿದ್ದ ಇತರ ಕೆಲವು ಪಕ್ಷಗಳು ಪ್ರಾದೇಶಿಕ ಅಥವಾ ಮತೀಯ ಹಿತಾಸಕ್ತಿಗಳಿಗೆ ಗಮನ ಕೊಟ್ಟು, ರಾಜಕೀಯ ಪದ್ದತಿ ಬಗ್ಗೆ ಆಸಕ್ತಿಯನ್ನು ತೋರಲಿಲ್ಲ. ಕಾಲಕ್ರಮೇಣ ಕಾಂಗ್ರೆಸ್ ಪಕ್ಷದಿಂದ ಹೊರ ಬಂದವರು ಇತರ ಪಕ್ಷಗಳನ್ನು ರಚಿಸಿದರು. 2010ರ ಡಿಸೆಂಬರ್ ಭಾರತದ ಚುನಾವಣಾ ಆಯೋಗದಿಂದ ಮಾನ್ಯತೆ ಪಡೆಯದೆ ಕೇವಲ ನೊಂದಣಿ ಮಾಡಿಸಿದ್ದ ಪಕ್ಷಗಳ ಸಂಖ್ಯೆ 1112 ಇತ್ತು. 2014ರ ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಸಂಖ್ಯೆ 1687ಕ್ಕೆ ಹೆಚ್ಚಿತ್ತು.

ರಾಜಕೀಯ ಪಕ್ಷಗಳನ್ನು ರಾಷ್ಟ್ರೀಯ ಹಾಗೂ ಪ್ರಾಂತೀಯ ಪಕ್ಷಗಳೆಂದು 1968ರ ಚುನಾವಣಾ ಚಿನ್ಹೆಗಳ ಆದೇಶದ ಪ್ರಕಾರ ತೀರ್ಮಾನಿಸುವ ಅಧಿಕಾರ ಭಾರತದ ಚುನಾವಣಾ ಆಯೋಗಕ್ಕೆ ಇದೆ.

ಚುನಾವಣಾ ಆಯೋಗ 2016ರ ಆಗಸ್ಟ್‌ನಲ್ಲಿ ರಾಜಕೀಯ ಪಕ್ಷಗಳ ಮಾನ್ಯತೆ ಬಗ್ಗೆ ಇರುವ ನಿಯಮಗಳನ್ನು ತಿದ್ದುಪಡಿ ಮಾಡಿ 10 ವರ್ಷಕ್ಕೊಮ್ಮೆ ಅದನ್ನು ಪರಾಮರ್ಶಿಸುವ ಅಧಿಕಾರವನ್ನು ಪಡೆದಿದೆ. ಈ ತಿದ್ದುಪಡಿ ಪ್ರಕಾರ ರಾಷ್ಟ್ರೀಯ ಪಕ್ಷದ ಸ್ಥಾನ–ಮಾನವನ್ನು ಪಡೆಯಲು ಕೆಳಗಿನ ಯಾವುದಾದರೂ ನಿಯಮಕ್ಕೆ ಒಳಪಡಬೇಕು

- ಯಾವುದೇ ರಾಜಕೀಯ ಪಕ್ಷ 3 ರಾಜ್ಯಗಳಲ್ಲಿ ಇತ್ತೀಚಿನ ಲೋಕಸಭಾ ಚುನಾವಣೆಯಲ್ಲಿ ಶೇ.2ರಷ್ಟು ಸ್ಥಾನಗಳನ್ನು ಗೆಲ್ಲಬೇಕು **ಅಥವಾ**
- 4 ಲೋಕಸಭಾ ಸ್ಥಾನಗಳನ್ನು ಪಡೆದು ವಿಧಾನಸಭಾ ಚುನಾವಣೆಗಳಲ್ಲಿ ಶೇ.6ರಷ್ಟು ಮತಗಳನ್ನು 4 ರಾಜ್ಯಗಳಲ್ಲಿ ಪಡೆಯಬೇಕು **ಅಥವಾ**

- ಕನಿಷ್ಠ 4 ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷವೆಂದು ಮಾನ್ಯತೆ ಪಡೆದಿರಬೇಕು.

## ಭಾರತದ ಕಮ್ಯುನಿಸ್ಟ್ ಪಕ್ಷ :

ಭಾರತದ ಕಮ್ಯುನಿಸ್ಟ್ ಪಕ್ಷವೂ 1964ರಲ್ಲಿ ಇಬ್ಭಾಗವಾಗಿ ಸಿ.ಪಿ.ಐ & ಸಿ.ಪಿಐ (ಎಂ) ಎಂಬ ಎರಡು ಕಮ್ಯುನಿಸ್ಟ್ ಪಕ್ಷಗಳು ಉದಯವಾದವು. ಕಮ್ಯುನಿಸ್ಟ್ ಪಕ್ಷದ ಒಡಕಿಗೆ ಕೆಳಕಂಡವು ಮುಖ್ಯ ಕಾರಣವಾದವು. ಮಧುರೈನಲ್ಲಿ ನಡೆದ 1953ರ ಅಧಿವೇಶನದಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳು ಪಕ್ಷದ ಸದಸ್ಯರಲ್ಲಿ ಹೆಚ್ಚಾದವು. ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗವನ್ನು ರಚಿಸುವುದರ ಬಗ್ಗೆ ಕಮ್ಯುನಿಷ್ಟರಲ್ಲಿ ವಿರಸ ಉಂಟಾಗಿ ಪಕ್ಷದ ಒಡಕಿಗೆ ಪೂರಕವಾದವು. ಕಾಂಗ್ರೆಸಿನ ಪ್ರಗತಿಪರರನ್ನು ಸೇರಿಸಿ ಒಂದು ರಂಗವನ್ನು ಕಟ್ಟಬೇಕೆಂದು ಅಜಯ್ ಘೋಷ್, ಪಿ.ಸಿ.ಜೋಶಿ & ಅಧಿಕಾರಿ ಅಭಿಪ್ರಾಯಪಟ್ಟರು. ಆದರೆ ರಾಮಮೂರ್ತಿ, ಭೂಪೇಶ ಗುಪ್ತ ಮುಂತಾದವರು ಈ ಅಭಿಪ್ರಾಯವನನು ಒಪ್ಪಲಿಲ್ಲ. ಭಾರತದಲ್ಲಿ ಕ್ರಾಂತಿ ಉಂಟಾಗಬೇಕಾದರೆ ಕಾರ್ಮಿಕ ವರ್ಗದ ನಾಯಕತ್ವ ಅಗತ್ಯವೆಂದು ಇವರು ವಾದಿಸಿದರು.

ಮಧುರೈ ಸಮ್ಮೇಳನದ ನಂತರ ಕಮ್ಯುನಿಸ್ಟ್ ಪಕ್ಷದ ಬಲಪಂಥೀಯ ಗುಂಪು ಪ್ರಬಲವಾಯಿತು. ಸಮಾಜವಾದವನ್ನು ಸಂಸದೀಯ ಪದ್ಧತಿ ಮೂಲಕ ಕಾರ್ಯಗತಗೊಳಿಸಬಹುದೆಂದೂ ಇದಕ್ಕಾಗಿ ಕಾಂಗ್ರೆಸ್ ಮುಖಂಡತ್ವ ಬೇಕೆಂದು 1956ರಲ್ಲಿ ನಡೆದ ಪಾಲ್‌ಘಾಟ್ ಸಮ್ಮೇಳನದಲ್ಲಿ ಈ ಬಣವೂ ನಿರ್ಣಯವನ್ನು ಅಂಗೀಕರಿಸಿತು. ನೆಹರೂ ಸರ್ಕಾರದ ವಿರುದ್ಧ ಪಕ್ಷಗಳು 1963ರಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸಿ.ಪಿ.ಐ ಬೆಂಬಲ ಕೊಡಲಿಲ್ಲ. ಕ್ರಾಂತಿಕಾರಿ ಸದಸ್ಯರು ಇದನ್ನು ಸಹಿಸದೆ ಇನ್ನೊಂದು ಬಣದ ಜೊತೆ ವಿರಸ ಬೆಳೆಸಿಕೊಂಡರು.

ಭಾರತ & ಚೀನಾ ಗಡಿ ಭಾರತವೇ ಕಾರಣವೆಂದು ಸುಂದರಯ್ಯ & ಇತರರು ಹೇಳಿಕೆ ಕೊಟ್ಟರು. ಸುಂದರಯ್ಯ, ಭೂಪೇಶಗುಪ್ತ, ಜ್ಯೋತಿಬಸು ಚೀನಾವನ್ನು ಬೆಂಬಲಿಸಿ, ಚೀನಾ ದೇಶವು ಮ್ಯಾಕ್‌ಮೋಹನ್ ರೇಖೆಯನ್ನು ಉಲ್ಲಂಘಿಸಿಲ್ಲವೆಂದು & ಭಾರತದ ಮೇಕೆ ಆಕ್ರಮಣ ಮಾಡಿಲ್ಲವೆಂದು ವಾದಿಸಿದರು. ಆದರೆ ಝಡ್. ಎ ಅಹಮದ್, ಯೋಗಿಂದ್ರ ಶರ್ಮ, ಎಸ್.ಎ. ಡಾಂಗೆ ಚೀನಾವನ್ನು ಟೀಕಿಸಿ ನೆಹರು ಸಕಾರಕ್ಕೆ ಬೆಂಬಲ ನೀಡಿದರು.

ಚೀನಾದ ಬೆಂಬಲಿಗರಾಗಿದ್ದ ಸುಮಾ ರು 900 ಜನರನ್ನು ಕೇಂದ್ರ ಸರ್ಕಾರ ಬಂಧಿಸಿದಾಗ ಬಲಪಂಥೀಯ ಗುಂಪು ಸರ್ಕಾರದ ಕ್ರಮವನ್ನು ಟೀಕಿಸಲಿಲ್ಲ ಅಥವಾ ಅವರ ಬಿಡುಗಡೆಗೆ ಇತ್ತಾಯ ಮಾಡಲಿಲ್ಲ.

ಪಶ್ಚಿಮ ಬಂಗಾಳ, ಪಂಜಾಬ್ & ಆಂಧ್ರ ಪ್ರದೇಶಗಳಲ್ಲಿ ಅಶಿಸ್ತು ವರ್ತನೆಯ ಆರೋಪದ ಮೇಲೆ ಅನೇಕರನ್ನು ಕಮ್ಯುನಿಸ್ಟ್ ಪಕ್ಷದಿಂದ ಹೊರಕ್ಕೆ ಹಾಕಲಾಯಿತು. ನಂಬೂದ್ರಿನಾಥ್ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ಮಾಡಲಾಯಿತು. ವಾಮಪಂಥೀಯರೇ ಹೆಚ್ಚಾಗಿದ್ದ ಪಶ್ಚಿಮ ಬಂಗಾಳದಲ್ಲಿ

ಕಮ್ಯುನಿಸ್ಟ್ ಪಕ್ಷ 1964ರ ಫೆಬ್ರವರಿಯಲ್ಲಿ ತನ್ನ ಚಟುಚಟಿಕೆಗಳನ್ನು ಪ್ರಾರಂಭಿಸಿ, ಕಮ್ಯುನಿಸ್ಟ್ ವಿರೋಧಿ ವಾರಪತ್ರಿಕೆಗಳನ್ನು & ಕೆಲವು ಕಾಗದ ಪತ್ರಗಳನ್ನು ಪತ್ತೆ ಹಚ್ಚಿತು. ಈ ಕಾಗದ ಪತ್ರಗಳನ್ನು ಎಸ್.ಎ ಡಾಂಗೆ 1924ರಲ್ಲಿ ಬ್ರಿಟಿಷ್ ಗೌರ್ನರ್–ಜನರಲ್‌ಗೆ ಬರೆದು "ತಮ್ಮನ್ನು ಜೈಲಿನಿಂದ ಬಿಡುಗಡೆ ಮಾಡುವಂತೆ ಕೇಳಿಕೊಂಡಿದ್ದರೆಂದು" ಆರೋಪಿಸಲಾಯಿತು. ಕಾನ್ಪುರ್ ಕಾನ್ಸ್‌ಪಿರೆಸಿ ಕೇಸಿನಲ್ಲಿ ಡಾಂಗೆಯನ್ನು ಬಂಧಿಸಲಾಯಿತು. ಏಪ್ರಿಲ್ 11, 1964ರಂದು ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ವಾಮಪಂಥೀಯ ಬಣದವರನ್ನು ಡಾಂಗೆಯನ್ನು ಟೀಕಿಸಿ ಅಧ್ಯಕ್ಷ ಸ್ಥಾನ ತ್ಯಜಿಸುವಂತೆ ಆಗ್ರಹಪಡಿಸಿದರು. ಡಾಂಗೆಯವರು ಇದನ್ನು ಒಪ್ಪದಿದ್ದಾಗ 96 ಸದಸ್ಯರಲ್ಲಿ 32 ಸದಸ್ಯರು ಸಭಾತ್ಯಾಗ ಮಾಡಿದರು. ಜುಲೈ 7–12ರವರೆಗೆ ವಾಮಪಂಥೀಯ ಬಣ ಆಂಧ್ರಪ್ರದೇಶ ದ ತೆನಾಲಿಯನ್ನು ಸಮ್ಮೇಳನವನ್ನು ನಡೆಸಿ ಮಾಮೊತ್ಸುಂಗ್‌ರ ಭಾವ ಚಿತ್ರವನ್ನು ಆರಾಧಿಸಲು ಪ್ರಾರಂಭಿಸಿತು. ಪರಿಣಾಮವಾಗಿ ತೆನಾಲಿ ಸಮ್ಮೇಳನದಲ್ಲಿ ಭಾಗವಹಿಸಿದರನ್ನು ಪಕ್ಷದಿಂದ ಉಚ್ಚಾಟಿಸಲಾಯಿತು. ವಾಮಪಂಥೀಯ ಬಣ ಅಕ್ಟೋಬರ್ 31ರಿಂದ ನವೆಂಬರ್ 7 ರವರೆಗೆ ಕಲ್ಕತ್ತದಲ್ಲಿ ಪಕ್ಷದ ಅಧಿವೇಶನವನ್ನು ಆಯೋಜಿಸಿತು. ಕೇಂದ್ರ ಸಮಿತಿ ಪಕ್ಷದ ಹೆಸರನ್ನು ಸಿ.ಪಿ.ಐ (ಎಂ) (Communist Party of India-Marxist) ಎಂದು ಮರುನಾಮಕರಣ ಮಾಡಿತು.

## ಜನತಾ ಪಕ್ಷ :

ಜನತಾ ಪಕ್ಷ 1979ರಲ್ಲಿ ವಿಭಜನೆಯಾಯಿತು. ಶಿಸ್ತು ಉಲ್ಲಂಘನೆಯಾಗಿ ರಾಜ್ ನಾರಾಯಣ್‌ರನ್ನು ಜೂನ್ 12, 1979ರಂದು ಪಕ್ಷದ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿ ಪಕ್ಷದಿಂದ ಹೊರಕ್ಕೆ ಹಾಕಿದ ಮೇಲೆ ಇತರ ಕೆಲವರೂ ಪಕ್ಷವನ್ನು ತ್ಯಜಿಸಿದರು. ಇವರೆಲ್ಲರೂ ಜನತಾ ಎಂದು ಕರೆದುಕೊಂಡರು. ಇದರ ಬೆಂಬಲಿಗರು ಸೆಪ್ಟಂಬರ್ 26, 1979ರಂದು ಸಭೆಸೇರಿ, ತಮ್ಮಪಕ್ಷದ ಹೆಸರನ್ನು ಲೋಕದಳ ಎಂದು ನಾಮಕರಣ ಮಾಡಿದರು. ಕಾಲಕ್ರಮೇಣ ಚರಣ್‌ಸಿಂಗ್ & ರಾಜ್ ನಾರಾಯಣ್ ನಡುವೆ ಭಿನ್ನಾಭಿಪ್ರಾಯ ಉಂಟಾದ್ದರಿಂದ ಏಪ್ರಿಲ್ 1, 1980ರಂದು ರಾಜ್ ನಾರಾಯಣ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಯಿತು. ರಾಜ್ ನಾರಾಯಣ್ ತಮ್ಮ ನೇತೃತ್ವದ ಪಕ್ಷವನ್ನು ಜನತಾ ಎಂದು ಪ್ರಾರಂಭದಲ್ಲಿ ಕರೆದುಕೊಂಡರೂ 1981ರ ಮಾರ್ಚಿನಲ್ಲಿ ಸೋಷಿಯಲಿಸ್ಟ್ ಪಕ್ಷವೆಂದು ಕರೆದರು. ಆದರೆ ಇದು ಕೆಲವೇ ತಿಂಗಳಲ್ಲಿ ಮಾಯವಾಯಿತು. ಚರಣ್‌ಸಿಂಗ್‌ರ ಲೋಕದಳ ಅಥವಾ ಜನತಾ ಇತರ ಪಕ್ಷಗಳ ಜೊತೆ ವಿಲೀನವಾಗಿ 1984ರ ಅಕ್ಟೋಬರ್ ನಲ್ಲಿ ದಲಿತ್ ಮಜ್‌ದೂರ್ ಕಿಸಾನ್ ಪಕ್ಷದ ಉಗಮಕ್ಕೆ ಕಾರಣವಾಯಿತು. ಆದರೆ, ಮೊದಲಿನ ಲೋಕದಳ ಎಂಬ ಹೆಸರನ್ನು ಉಳಿಸಿಕೊಳ್ಳಲು ಇದರ ನಾಯಕರು 1985ರ ಏಪ್ರಿಲ್‌ನಲ್ಲಿ ನಿರ್ಧರಿಸಿತು. ಈ ಪಕ್ಷ ಮತ್ತೆ ಒಡೆದು ಲೋಕದಳ (ಎ) & ಲೋಕದಳ (ಬಿ) ಎಂಬ ಎರಡು ಪಕ್ಷಗಳಾದವು. ಮೊದಲನೆಯದು ಚರಣ್ ಸಿಂಗ್‌ರ ಪುತ್ರ ಅಜಿತ್ ಸಿಂಗ್ ಮುಖಂಡತ್ವವನ್ನು ಪಡೆದಿದ್ದರೆ, ಎರಡನೇಯದು ಬಹುಗುಣರ ಮುಖಂಡತ್ವವನ್ನು ಪಡೆಯಿತು.

## ಪ್ರಾದೇಶಿಕ ಪಕ್ಷ :

ಪ್ರಾದೇಶಿಕ ಪಕ್ಷಗಳೂ ವಿಭಜನೆಗೊಂಡಿವೆ. ತಮಿಳುನಾಡಿನ ಡಿ.ಎಂ.ಕೆ (ದ್ರಾವಿಡ ಮುನ್ನೇತ್ರ ಕಜಗಮ್) 1972ರಲ್ಲಿ ಒಡೆದು ಡಿ.ಎಂ.ಕೆ & ಅಖಿಲ ಭಾರತ ಅಣ್ಣಾ ಡಿ.ಎಂ.ಕೆ ಎಂಬ ಎರಡು ಪಕ್ಷಗಳು ಅಸ್ತಿತ್ವಕ್ಕೆ ಬಂದವು. ಜಮ್ಮು & ಕಾಶ್ಮೀರದಲ್ಲಿ ಶೇಖಾವತ್ ಅಬ್ದುಲ್ಲಾ & ಮಿರ್ಜಾಅಫ್‌ಜಲ್ ಬೇಗ್ ಅವರ ನಡುವೆ ವಿರಸ ಉಂಟಾಗಿ ಅಲ್ಲಿನ ನ್ಯಾಷನಲ್ ಕಾನ್ಸ್‌ರೆನ್ಸ್ ಪಕ್ಷ 1978ರ ಅಕ್ಟೋಬರ್‌ನಲ್ಲಿ ಒಡೆಯಿತು. ಪಂಜಾಬಿನ ಅಕಾಲಿ ದಳವು ಕೆಲವು ಒಡಕುಗಳಿಗೆ ಒಳಗಾಗಿದೆ. 1992ರಲ್ಲಿ ಮಹಾರಾಷ್ಟ್ರದ ಶಿವಸೇನೆ & 1995ರಲ್ಲಿ ಆಂದ್ರಪ್ರಧೇಶದ ತೆಲುಗುದೇಶಂ ಪಕ್ಷ ವಿಭಜನೆಗೊಂಡವು.

## ವಾಮಪಂಥೀಯ & ಬಲಪಂಥೀಯ ಪಕ್ಷಗಳು :

ರಾಜಕೀಯ ತತ್ವಗಳ ಆಧಾರದ ಮೇಲೆ ಕೆಲವು ರಾಜಕೀಯ ಪಕ್ಷಗಳನ್ನು ವಾಮಪಂಥೀಯ & ಬಲಪಂಥೀಯ ಪಕ್ಷಗಳಾಗಿ ವಿಂಗಡಿಸಲಾಗಿದೆ. ಮೊದಲನೆ ವರ್ಗದ ಪಕ್ಷಗಳು ಕ್ರಾಂತಿಯಲ್ಲಿ ನಂಬಿಕೆ ಹೊಂದಿ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳನ್ನು ತ್ವರಿತವಾಗಿ ಆಗಬೇಕೆಂದರೆ, ಬಲಪಂಥೀಯ ಪಕ್ಷಗಳು ತ್ವರಿತ ಬದಲಾವಣೆಗೆ ಹೆಚ್ಚು ಗಮನ ನೀಡುವುದಿಲ್ಲ. ಕಮ್ಯುನಿಸ್ಟ್ & ಸಮಾಜವಾದಿ ಪಕ್ಷಗಳನ್ನು ವಾಮಪಂಥೀಯ ಗುಂಪಿಗೆ ಸೇರಿಸಬಹುದು. ಮೊದಲು ಸ್ವತಂತ್ರ ಪಕ್ಷ, ಭಾರತೀಯ ಲೋಕದಳ ಮುಂತಾದವು ಬಲಪಂಥಿಯ ಪಕ್ಷಗಳಾಗಿದ್ದವು. ಇಂದು ಭಾರತೀಯ ಜನತಾಪಕ್ಷವನ್ನು ಈ ಗುಂಪಿಗೆ ಸೇರಿಸಬಹುದೆಂದು ಕೆಲವರ ಅಭಿಪ್ರಾಯವಾಗಿದೆ.

GNANADHARE IAS KAS ACADEMY

# ರಾಷ್ಟ್ರೀಯ ಪಕ್ಷಗಳು :–

## ಭಾರತದ ರಾಷ್ಟ್ರೀಯ ಕಾಂಗ್ರೆಸ್ :



ತನ್ನದೇ ಆದ ಇತಿಹಾಸವನ್ನು ಹೊಂದಿರುವ ಕಾಂಗ್ರೆಸ್ ಏಷ್ಯಾದಲ್ಲೇ ಒಂದು ಪ್ರಮುಖ ರಾಜಕೀಯ ಪಕ್ಷವಾಗಿದೆ. 1885ರಲ್ಲಿ ಅಸ್ತಿತ್ವಕ್ಕೆ ಬಂದ ಇದು ನೆಹರು ಕುಟುಂಬದ ನೇತೃತ್ವದಲ್ಲಿ ಪ್ರತಿಷ್ಠಿತ ಸ್ಥಾನವನ್ನು ಪಡೆಯಿತು. ಕಾಂಗ್ರೆಸ್‌ನಲ್ಲಿ ಅಧ್ಯಕ್ಷರು ಮೊದಲ ಸ್ಥಾನವನ್ನು ಪಡೆದಿದ್ದಾರೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಪ್ರದೇಶ ಕಾಂಗ್ರೆಸ್ ಸಮಿತಿಗಳ ಸದಸ್ಯರು ಪಕ್ಷದ ಅಧ್ಯಕ್ಷರನ್ನು 3 ವರ್ಷದ ಅವಧಿಗೆ ಚುನಾಯಿಸುತ್ತಾರೆ. 2000 ದ ಅಕ್ಟೋಬರ್ 1,055 ಎಐಸಿಸಿ ಸದಸ್ಯರು ಹಾಗೂ 8,099 ಪ್ರದೇಶ ಕಾಂಗ್ರೆಸ್ ಸಮಿತಿಗಳ ಸದಸ್ಯರು ಇದ್ದರು. ಪುರುಷೋತ್ತಮದಾಸ್ ತಂಡನ್ (1950–51), ಜವಹಾರ್ ಲಾಲ್ ನೆಹರೂ (1951–54), ಯು.ಎನ್ ಧೇಬರ್ (1954–59), ಇಂದಿರಾಗಾಂಧಿ (59–60), ಎನ್. ಸಂಜೀವರೆಡ್ಡಿ (60–62), ಡಿ.ಸಂಜೀವಯ್ಯ (62–64), ಕೆ.ಕಾಮರಾಜ್ (64–67), ಎಸ್.ನಿಜಲಿಂಗಪ್ಪ (68–69), ಮುಂತಾದವರು ಕಾಂಗ್ರೆಸ್ ಅಧ್ಯಕ್ಷರಾದರು. 1971–1992ರವರೆಗೆ ಚುನಾವಣೆಗಳು ನಡೆಯಲಿಲ್ಲ. ನಾಮಕರಣದ ಮೂಲಕ ಇಂದಿರಾಗಾಂಧಿ ಹಾಗೂ ಇತರರು ಅಧ್ಯಕ್ಷರಾದರು & ಪಕ್ಷದಲ್ಲಿ ಇತರ ಪದವಿಗಳನ್ನು ಪಡೆದರು. ಪಿ.ವಿ. ನರಸಿಂಹರಾವ್ ಪಕ್ಷದ ಅಧ್ಯಕ್ಷರಾಗಿ ಸರ್ವಾನುಮತದಿಂದ ಫೆಬ್ರವರಿ 27, 1992ರಂದು ಆಯ್ಕೆಯಾದರು. ರಾಜೀವ್‌ಗಾಂಧಿಯವರ ಹತ್ಯೆ ಬಳಿಕ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರು ಅಧ್ಯಕ್ಷ ಪದವಿಗೆ ಸೆಪ್ಟಂಬರ್ 21, 1996ರಂದು ರಾಜೀನಾಮೆ ಕೊಟ್ಟ ಮೇಲೆ ಸೀತಾರಾಮ್ ಕೇಸರಿ ಸ್ಥಾನಕ್ಕೆ ಸರ್ವಾನುಮತದಿಂದ ಸೆಪ್ಟಂಬರ್ 23, 1996ರಂದು ಆಯ್ಕೆಯಾದರು. ಕಾಂಗ್ರೆ ಕಾರ್ಯಾಕಾರಿ ಸಮಿತಿಯಿಂದ ನೇಮಕಗೊಂಡ ಸೋನಿಯಾ ಗಾಂಧಿ ಮಾರ್ಚ್ 14, 1998ರಂದು ಪಕ್ಷದ ಅಧ್ಯಕ್ಷರಾದರು. ನಂತರ ನವೆಂಬರ್ 15, 2000ರಂದು 61ನೇ ಅಧ್ಯಕ್ಷರಾಗ ಆಯ್ಕೆಯಾದರು. ಇವರು 7,488 ಮತಗಳನ್ನು ಪಡೆದರೆ ಜಿತೇಂದ್ರ ಪ್ರಸಾದ್ ಕೇವಲ 94 ಮತಗಳನ್ನು ಪಡೆದರು. 1988ರಿಂದ ಪಕ್ಷದ ಅಧ್ಯಕ್ಷರಾಗಿ ಮುಂದುವರೆಯುತ್ತಿರುವ ಸೋನಿಯಾಗಾಂಧಿ ಪಕ್ಷದ ಬಲವರ್ಧನೆಯಲ್ಲಿ ಏಳು–ಬೀಳುಗಳನ್ನು ಕಂಡಿದ್ದಾರೆ.

ಕಾರ್ಯಾಧ್ಯಕ್ಷರ ಹಾಗೂ ಉಪಾಧ್ಯಕ್ಷರ ನೇಮಕಗಳ ಬಗ್ಗೆ ಸ್ಪಷ್ಟನೆ ಇಲ್ಲದಿದ್ದರೂ 1983ರ ಜನವರಿಯಲ್ಲಿ ಕಮಲಾಪತಿ ತ್ರಿಪಾಠಿಯವರನ್ನು ಕಾರ್ಯಾಧ್ಯಕ್ಷರನ್ನಾಗಿ ಇಂದಿರಾಗಾಂಧಿ ನೇಮಿಸಿದರು. ಆದರೆ ಇವರು ನವೆಂಬರ್ 12, 1986ರಂದು ರಾಜೀನಾಮೆ ಕೊಟ್ಟರು. ಅಲ್ಲದೆ ಮೊದಲ ಬಾರಿಗೆ ಉಪಾಧ್ಯಕ್ಷರಾಗಿ ಅರ್ಜುನ್‌ಸಿಂಗ್‌ರನ್ನು ಜನವರಿ 19, 1986ರಂದು ರಾಜೀವ್‌ಗಾಂಧಿ ನೇಮಿಸಿದರು.

GNANADHARE IAS KAS ACADEMY

ಮಹಾಕಾರ್ಯದರ್ಶಿಗಳನ್ನು, ಜಂಟಿಕಾರ್ಯದರ್ಶಿಗಳನ್ನು & ಕೋಶಾಧಿಕಾರಿಯನ್ನು ಪಕ್ಷದ ಅಧ್ಯಕ್ಷರು ನೇಮಿಸುತ್ತಾರೆ.

## ಕಾಂಗ್ರೆಸ್ ಪಕ್ಷದ ಮುಖ್ಯ ತತ್ವಗಳು :

ಮೊದಲಿನಿಂದಲೂ ಕಾಂಗ್ರೆಸ್ ಪ್ರಜಾಪ್ರಭುತ್ವ, ಸಮಾಜವಾದ & ಜಾತ್ಯತೀತ ತತ್ವಗಳಿಗೆ ಹಾಗೂ ರಾಷ್ಟ್ರದ ಏಕತೆ & ಸಮಗ್ರತೆಗೆ ಆದ್ಯತೆ ನೀಡುತ್ತದೆ. ಸಮಾಜವಾದ ತತ್ವಗಳನ್ನು ಪ್ರಜಾ ಸರ್ಕಾರದ ಮೂಲಕ ಜಾರಿಗೆ ತರುವುದರಲ್ಲಿ ಮುಖ್ಯಪಾತ್ರ ವಹಿಸಿದೆ. 1948ರಲ್ಲಿ ನೆಹರು ಆರ್ಥಿಕ ಯೋಜನೆಯ ಬಗ್ಗೆ ಒಂದು ವರದಿಯನ್ನು ಸಿದ್ದಪಡಿಸಿ ಜೈಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಿದಾಗ ಅದು ಅಂಗೀಕರಿಸಲ್ಪಟ್ಟಿತು. ನಂತರ ಆವಾಡಿ, ನಾಗಪುರ & ಭುವನೇಶ್ವರಗಳಲ್ಲಿ ನಡೆದ ಅಧಿವೇಶನಗಳಲ್ಲಿ ಸಮಾಜವಾದಿ ತತ್ವಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿತ್ತು. ಸಂಸಧೀಯ ಪ್ರಜಾಪ್ರಭುತ್ವದ ಮೂಲಕ ಭಾರತದಲ್ಲಿ ಸಮಾಜವಾದಿ ರಾಷ್ಟ್ರವನ್ನು ಕಟ್ಟಿ, ರಾಜಕೀಯ, ಆರ್ಥಿಕ & ಸಾಮಾಜಿಕ ಕ್ಷೇತ್ರದಲ್ಲಿ ಎಲ್ಲರಿಗೂ ಸಮಾನತೆಯನ್ನು ಉಂಟು ಮಾಡಬೇಕೆಂದು ಘೋಷಿಸಿತು. ಅಲ್ಪಸಂಖ್ಯಾತರ ಹಿತರಕ್ಷಣೆಗೆ ಹೆಚ್ಚು ಗಮನ ನೀಡಿ, ರಾಜ್ಯ ನಿರ್ದೇಶಕ ತತ್ವಗಳನ್ನು ಜಾರಿಗೆ ತರಲು ಅನೇಕ ಕ್ರಮಗಳನ್ನು ಕಾರ್ಯಗತಗೊಳಿಸಲು ಶ್ರಮವಹಿಸಿತು. ಆರ್ಥಿಕ ಸಂಸ್ಥೆಗಳನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸುವುದು. ಆಹಾರ ಪದಾರ್ಥಗಳ ಉತ್ಪನ್ನಗಳನ್ನ ಹೆಚ್ಚಿಸುವುದು. ಸಹಕಾರ ಸಂಸ್ಥೆಗಳನ್ನು ವಿಸ್ತರಿಸುವುದು. ಸಮಾಜಕ್ಕೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು. ಭೂ ಸುಧಾರಣೆಗಳನ್ನ ಜಾರಿಗೆ ತರುವುದು, ಏಕಸ್ವಾಮ್ಯತೆಯನ್ನು ನಿಯಂತ್ರಿಸುವುದು ಮುಂತಾದವುಗಳನ್ನು 10- ಅಂಶಗಳ ಕಾರ್ಯಕ್ರಮದಲ್ಲಿ ಅಳವಡಿಸಿತು. ಪ್ರಜಾಪ್ರಭುತ್ವ, ಸಂಯುಕ್ತತೆ & ಯೋಜನಾ ಪದ್ಧತಿಗಳನ್ನು ಒಟ್ಟಿಗೆ ಜಾರಿಗೆ ತರಲು ಸಾಧ್ಯ ಎಂಬುದನ್ನು ಕಾಂಗ್ರೆಸ್ ಸಾಬೀತುಪಡಿಸಿದೆ.

## ಕಮ್ಯುನಿಸ್ಟ್ ಪಕ್ಷಗಳು

ಡಿಸೆಂಬರ್ 26, 1925ರಲ್ಲಿ ರಚಿತಗೊಂಡ ಭಾರತದ ಕಮ್ಯುನಿಸ್ಟ್ ಪಕ್ಷಗಳು ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಒಂದು ಭಾಗವಾಗಿತ್ತು. ಜಿ.ಎಸ್. ಭಾರ್ಗವ ಪ್ರಕಾರ ಇದು ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷಗಳ ಜೊತೆ ಕೆಲಸ ಮಾಡಿ, ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ರಷ್ಯಾದೊಡನೆ ನೇರ ಸಂಪರ್ಕವನ್ನು ಬೆಳೆಸಿತು. ಎಂ.ಎನ್.ರಾಯ್, ಎಸ್.ಎ.ಡಾಂಗೆ, ಜಿ.ಎಂ. ಅಧಿಕಾರಿ, ಸಿ.ಪಿ ದತ್ ಮುತಾದ ಭಾರತೀಯ ಕಮ್ಯುನಿಸ್ಟರು ಕಾಂಗ್ರೆಸನ್ನು ಸೇರಿ ಅದರ ತತ್ವಗಳನ್ನು ವಾಮಪಂಥೀಯ ಪಥಕ್ಕೆ ಮಾರ್ಪಾಡಿಸಲು ಪ್ರಯತ್ನಿಸಿದರು. ಎಸ್.ಜಾಹೀರ್ ಎ.ಐ.ಸಿ.ಸಿ. ಸದಸ್ಯರಾದರು. ಕಾಂಗ್ರೆಸ್ ಕಾರ್ಯಾಕಾರಿ ಸಮಿತಿ

ಅಂಗೀಕರಿಸಿದ ಕೆಲವು ನಿರ್ಣಯಗಳನ್ನು ಕಮ್ಯುನಿಷ್ಟರ ಪ್ರಭಾವಕ್ಕೆ ಒಳಗಾದವು. ಆದರೆ 1945ರಲ್ಲಿ ಎಲ್ಲ ಕಮ್ಯುನಿಷ್ಟರನ್ನು ಕಾಂಗ್ರೆಸ್‌ನಿಂದ ಹೊರಕ್ಕೆ ಹಾಕಲಾಯಿತು. ಆದಾಗ್ಯೂ ಕೆಲವರು ಮತ್ತೆ ಕಾಂಗ್ರೆಸ್ ಸೇರಿ ಅದರ ತತ್ವಗಳನ್ನು ಪ್ರಗತಿಪರ ಹಾದಿಯಲ್ಲಿ ಕೊಂಡೊಯ್ಯಲು ಪ್ರಭಾವ ಬೀರಿದರು. ಕಮ್ಯುನಿಷ್ಟರಾಗಿದ್ದ ಮೋಹನ್ ಕುಮಾರ್ ಮಂಗಳಂ ಕಾಂಗ್ರೆಸ್ ಸೇರಿ ಕೇಂದ್ರದಲ್ಲಿ ಉಕ್ಕು & ಗಣಿ ಖಾತೆಯ ಸಚಿವರಾದರು. ನೂರೇಲ್ ಹುಸೇನ್ ಕೇಂದ್ರದಲ್ಲಿ ಶಿಕ್ಷಣ ಸಚಿವರಾದರು. ಶ್ರೀಮತಿ ನಂದಿನಿ ಸತ್ಪಥಿ ಒರಿಸ್ಸಾದ ಮುಖ್ಯಮಂತ್ರಿಯಾದರು.

ಭಾರತ ಕಮ್ಯುನಿಷ್ಟ ಪಕ್ಷದ ಅಧಿವೇಶನ ಕಲ್ಕತ್ತಾದಲ್ಲಿ ರಾಜಕೀಯ ನಿಬಂಧನೆಗಳನ್ನು ಸಿದ್ಧಪಡಿಸಿತು. ಇದರಲ್ಲಿ ಭಾರತ ಸರ್ಕಾರ & ಅದರ ನೀತಿಗಳನ್ನು ಟೀಕಿಸಿತು. ನೆಹರು ಹಾಗೂ ಪಟೇಲರು ಬಂಡವಾಳಶಾಹಿಗಳ ಹಿತಾಸಕ್ತಿಯ ಪ್ರತಿಪಾದಕರೆಂದು ಆರೋಪಿಸಿತು. ಕಾಂಗ್ರೆಸ್ ಸಕಾರ ಭಾರತವನ್ನು ಆಂಗ್ಲೋ-ಅಮೆರಿಕನ್ ಸಾಮ್ರಾಜ್ಯಶಾಹಿಗೆ ಮಾರುತ್ತಿದೆ ಎಂದು ಪ್ರಚಾರ ಮಾಡಿತು. ಕಮ್ಯುನಿಷ್ಟ ಪಕ್ಷದ ಕಾರ್ಯದರ್ಶಿ ಬಿ.ಟಿ. ರಾನಡೈನ್ ರಷ್ಯಾದಲ್ಲಿ ನಡೆದ ಅಕ್ಟೋಬರ್ ಕ್ರಾಂತಿ ಮಾದರಿಯ ಕ್ರಾಂತಿಯನ್ನು ಭಾರತದಲ್ಲೂ ನಡೆಸಲು ಪ್ರಯತ್ನಪಟ್ಟರು. 1948 & 1949ರಲ್ಲಿ ದೇಶದ ವಿವಿಧ ಕಮ್ಯುನಿಷ್ಟ ಪಕ್ಷ ಕ್ರಾಂತಿ ಚಳುವಳಿಗಳನ್ನು ಪ್ರಾರಂಭಿಸಿತು.

- ಸಮಾಜವಾದ & ಸಮತಾವಾದಗಳಲ್ಲಿ ನಂಬಿಕೆ
- ಭಾರತದ ಸಮಗ್ರತೆಯನ್ನು ರಕ್ಷಿಸುವುದು
- 18 ವರ್ಷ ತುಂಬಿದವರೆಗೆಲ್ಲಾ ಮತದಾನದ ಹಕ್ಕನ್ನು ನೀಡುವುದು
- ರಾಜ್ಯಗಳಿಗೆ ಸ್ವಾಯತ್ತತೆಯನ್ನು ಕೊಡುವುದು
- ಪ್ರಜೆಗಳಿಗೆ ಕೆಲಸದ ಹಕ್ಕು ಸೇರಿದಂತೆ ನಾಗರೀಕ ಸ್ವಾತಂತ್ರ್ಯಗಳನ್ನು ಕೊಡುವುದು
- ಪರಿಹಾರವಿಲ್ಲದೇ ಜಮೀನುದಾರಿ ಪದ್ಧತಿಯನ್ನು ರದ್ದುಗೊಳಿಸುವುದು
- ರೈತರಿಗೆ & ಕಾರ್ಮಿಕರಿಗೆ ಭೂಮಿಯನ್ನು ಹಂಚುವುದು
- ಕಾಮನ್‌ವೆಲ್ತ್ ಕೂಟದಿಂದ ಹೊರಬರುವುದು

ಮೊದಲನೇ ಮಹಾಚುನಾವಣೆಯಲ್ಲಿ ಪ್ರಕಟಿಸಿದ ಪ್ರಣಾಳಿಕೆ ಹೆಚ್ಚು-ಕಡಿಮೆ ಮೇಲಿನ ತತ್ವಗಳನ್ನು ಒಳಗೊಂಡಿತು. ಸ್ಪರ್ಧಿಸಿದ್ದ 70 ಸ್ಥಾನಗಳಲ್ಲಿ 27 ಸ್ಥಾನಗಳನ್ನು ಗೆದ್ದು ಲೋಕಸಭೆಯಲ್ಲಿ ಮುಖ್ಯ ವಿರೋಧ ಪಕ್ಷವಾಯಿತು. 1957ರಲ್ಲಿ ಬಹುಮತ ಪಡೆದು ಕೇರಳದಲ್ಲಿ ಸರ್ಕಾರವನ್ನು ರಚಿಸಿತು.

## ಸಿ.ಪಿ.ಐ (Communist Party of India) :

ಸಿ.ಪಿ.ಐ ರಷ್ಯಾದ ಕಡೆಗೆ ಒಲವು ತೋರಿಸಿತು. ಆಗಾಗ್ಗೆ ಇದರ ನಾಯಕರು ಮಾಸ್ಕೊಗೆ ಭೇಟಿ ನೀಡಿ ಸೋವಿಯತ್ ಒಕ್ಕೂಟದ ವಿದೇಶಾಂಗ ನೀತಿಗೆ ಬೆಂಬಲಕೊಟ್ಟು, ಅದರ ವಿರೋಧಿ ರಾಷ್ಟ್ರಗಳನ್ನು ಟೀಕಿಸಿದರು. ಎರಡು ದೇಶಗಳ ನಡುವೆ ಹೆಚ್ಚು ಸ್ನೇಹ ಸಂಬಂಧಗಳು ಉಂಟಾದವು. ದೇಶದ ರಾಜಕೀಯದಲ್ಲಿ ಇಂದಿರಾಗಾಂಧಿಯವರಿಗೆ ಬೆಂಬಲ ನೀಡಿ, 1971ರ ಲೋಕಸಭಾ ಚುನಾವಣೆ & 1972ರ ರಾಜ್ಯವಿಧಾನ ಸಭೆಗಳ ಚುನಾವಣೆಯಲ್ಲಿ ಕಾಂಗ್ರಸ್ ಜೊತೆ ಮೈತ್ರಿಕೂಟವನ್ನು ರಚಿಸಿಕೊಂಡಿತ್ತು. ಸಿ.ಪಿ.ಐ ನಾಯಕ ಎ.ಕೆ ಗೋಪಾಲನ್ ಇದನ್ನು ಟೀಕಿಸಿ 'ಕಮ್ಯುನಿಷ್ಟ್ ಪಾರ್ಟಿ ಆಫ್ ಇಂದಿರಾ' ಎಂದು ಬಣ್ಣಿಸಿದರು.

ಕಾಲಕ್ರಮೇಣ ಸಿ.ಪಿ.ಐ ನಲ್ಲಿ ಡಾಂಗೆ ಗುಂಪು & ರಾಜೇಶ್ವರರಾವ್ ಗುಂಪು ಬೆಳೆದು, ಮೊದಲನೆಯದು ಇಂದಿರಾಗಾಂಧಿಯವರಿಗೆ ಬೆಂಬಲ ಕೊಟ್ಟರೆ ಎರಡನೇಯದು ಅವರನ್ನು ವಿರೋಧಿಸಿತು. ಡಾಂಗೆ & ರಾಜೇಶ್ವರರಾವ್ ನಡುವೆ ಉಂಟಾದ ಭಿನ್ನಾಭಿಪ್ರಾಯಗಳಿಂದಾಗಿ ಡಾಂಗೆ ಸಿ.ಪಿ.ಐ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಟ್ಟರು. 1962ರಿಂದಲೂ ಪಕ್ಷದ ಅಧ್ಯಕ್ಷರಾಗಿದ್ದ ಇವರು ಕಾಲಕ್ರಮೇಣ ಬೆಂಬಲವನ್ನು ಕಳೆದುಕೊಂಡರು. ಸಿ.ಪಿ.ಐ ರಾಜಕೀಯ ಪ್ರಭಾವ ಪಶ್ಚಿಮಬಂಗಾಳ, ಕೇರಳ & ಇತರ ಕೆಲವು ಪ್ರದೇಶಗಳೀಗೆ ಮಾತ್ರ ಸೀಮಿತವಾಗಿದೆ. ಪ್ರಜಾಪ್ರಭುತ್ವ ಹಾಗೂ ಸಮಾಜವಾದಗಳಲ್ಲಿ ನಂಬಿಕೆ ಹೊಂದಿರುವ ಇದು ವಿದೇಶಿ ಕಂಪನಿಗಳನ್ನು ರದ್ದುಗೊಳಿಸಿ, ಪಂಚವಾರ್ಷಿಕ ಯೋಜನೆಗಳಿಗೆ ಬದಲಾಗಿ ಪ್ರಜೆಗಳ ಯೋಜನೆಗಳನ್ನು ಜಾರಿಗೆ ತರುವ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.

## ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ :

1964ರಲ್ಲಿ ಸಿ.ಪಿ.ಎಂ. ಅಸ್ತಿತ್ವಕ್ಕೆ ಬಂದ ಮೇಲೆ ತನ್ನದೇ ಆದ ತತ್ವಗಳನ್ನು ಆಳವಡಿಸಿಕೊಂಡು ಒಂದು ಪ್ರಮುಖ ಪಕ್ಷವಾಗಿದೆ. ಇದು ಮಾವೋತ್ಸುಂಗ್ ತತ್ವಗಳನ್ನು ನಂಬಿಕೆಯಿರುವ ಪಕ್ಷವೆಂದು ಕೆಲವರು ಅಭಿಪ್ರಾಯಪಟ್ಟರೆ, ಇದರ ಮುಖಂಡರು ಈ ಅಭಿಪ್ರಾಯವನ್ನು ಅಲ್ಲಗೆಳೆದು ಮಾವೋ ಗಾದಿಯನ್ನು ಅನುಸರಿಸಲು ಇಚ್ಛಿಸಿಲ್ಲ ಎಂದರು. ಸಿ.ಪಿ.ಐನಂತೆ ಇದು ಕೂಡ ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆ ಕೊಡಬೇಕೆಂದು ವಾದಿಸುತ್ತದೆ. ರಾಷ್ಟ್ರದ ಏಕತೆಯನ್ನು ಬೆಂಬಲಿಸಿ, ಪ್ರಗತಿಪರ ಆರ್ಥಿಕ ತತ್ವಗಳನ್ನು ಪ್ರತಿ ಪಾದಿಸುತ್ತದೆ. ಕಾರ್ಮಿಕ ವರ್ಗ ನೇತೃತ್ವದಲ್ಲಿ ಪೀಪಲ್ಸ್ ಡೆಮಾಕ್ರೆಸಿಯನ್ನು ಸ್ಥಾಪಿಸಲು ಗುರಿಯನ್ನು ಇಟ್ಟುಕೊಂಡಿದೆ. ಕೆಲಸದ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಹೇಳಿ, ನಿರುದ್ಯೋಗ ಭತ್ಯೆಯನ್ನು ಬೆಂಬಲಿಸುತ್ತದೆ. ಬಹು ರಾಷ್ಟ್ರೀಯ ಕಂಪನಿಗಳನ್ನು ವಿರೋಧಿಸುತ್ತದೆ.

ಈ ಪಕ್ಷವೂ ಕೂಡ ಪಶ್ಚಿಮ ಬಂಗಾಳ, ತ್ರಿಪುರ, ಕೇರಳ ಹಾಗೂ ಇತರ ಪ್ರದೇಶಗಳಲ್ಲಿ ಮಾತ್ರ ರಾಜಕೀಯ ಪ್ರಾಬಲ್ಯವನ್ನು ಹೊಂದಿದೆ. ಪಶ್ಚಿಮ ಬಂಗಾಳದಲ್ಲಿ 34 ವರ್ಷ ಅಧಿಕಾರದಲ್ಲಿದ್ದ ಸಿ.ಪಿ.ಎಂ 2011ರ ವಿಧಾನಸಭೆ ಚುನಾವಣೆಯಲ್ಲಿ ಪರಾಭವಗೊಂಡಿತ್ತು. ಈ ಪಕ್ಷದ ದೃವತಾರೆಯಂತಿದ್ದ ಜ್ಯೋತಿ ಬಸುರವರ ಮರಣ, ಸಿಂಗೂರ್ & ನಂದಿಗ್ರಾಮ್ ಘಟನೆಗಳು ಹಾಗೂ ಸಿ.ಪಿ.ಎಂ ನಾಯಕರ ಅತಿ ಆತ್ಮವಿಶ್ವಾಸ ಇದರ ಸೋಲಿಗೆ ಕಾರಣವಾದವು. 2012ರ ಏಪ್ರಿಲ್ ಇದರ ಸಮಾವೇಶ ಕಲ್ಲಿಕೋಟೆಯಲ್ಲಿ ನಡೆದು, ಪಕ್ಷದ ಬಲವರ್ಧನೆಗೆ ಚರ್ಚೆಗಳು ನಡೆದವು. 2005ರಲ್ಲಿ ಮೊದಲ ಬಾರಿಗೆ ಜನರಲ್ ಸೆಕ್ರೆಟರಿಯಾದ ಪ್ರಕಾಶ್ ಕಾರಟ್ ಮೂರನೇ ಬಾರಿಗೆ 2012ರಲ್ಲಿ ಆಯ್ಕೆಯಾದರೂ ಪಕ್ಷವನ್ನು ಸಂಘಟಿಸುವುದರಲ್ಲಿ ವಿಫಲರಾದರು. ಸಿ.ಪಿ.ಎಂ 1971–2014ರವರೆಗೆ ರಾಜಕೀಯವಾಗಿ ಕ್ಷೀಣಿಸುತ್ತಾ ಬಂದಿದೆ.

## ಜನತಾ ಪಕ್ಷ :




ಜನತಾ ಪಕ್ಷದ ಉದಯ ಭಾರತದ ರಾಜಕೀಯದಲ್ಲಿ ಒಂದು ಮಹತ್ತರ ಘಟನೆಯಾಯಿತು. 'ವಿದೇಶಿ ಸರ್ವಾಧಿಕಾರದ ವಿರುದ್ಧ ಹೋರಾಡಲು ಹೇಗೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸಕಾಲದಲ್ಲಿ ಉದಯವಾಯಿತೋ, ಅದೇ ರೀತಿ ದೇಶದೊಳಗೆ ಸರ್ವಾಧಿಕಾರದ ವಿರುದ್ಧ ಹೋರಾಡಲು ಜನತಾಪಕ್ಷ ಹುಟ್ಟಿತು' ಎಂದು ಕೆಲವರು ಬಣ್ಣಿಸಿದರು. 'ಲಾರ್ಡ್ ಕೃಷ್ಣ ಜೈಲಿನಲ್ಲಿ ಜನ್ಮತಾಳಿದಂತೆ ಜನತಾಪಕ್ಷವೂ ಜೈಲಿನಲ್ಲಿ ಜನ್ಮತಾಳಿತು' ಎಂದು ಅಟಲ್‌ಬಿಹಾರಿ ವಾಜಪೇಯಿ ನುಡಿದರು. ಇದರ ಉದಯಕ್ಕೆ ಮುಖ್ಯ ಕಾರಣಗಳು

- 1974ರಲ್ಲಿ ಪ್ರಾರಂಭವಾದ ಜಯಪ್ರಕಾಶ್ ನಾರಾಯಣ್ ಚಳುವಳಿ
- ತುರ್ತುಪರಿಸ್ಥಿತಿಯ ಸಮಯದಲ್ಲಿ ವಿರೋಧ ಪಕ್ಷಗಳ ನಾಯಕರ ಬಂಧನ
- ತುರ್ತುಪರಿಸ್ಥಿತಿಯ ಅತಿರೇಕಗಳು & ಲೋಕಸಭಾ ಚುನಾವಣೆ ಪ್ರಕಟನೆ

ಮೊದಲಿನಿಂದಲೂ ಕಾಂಗ್ರೆಸ್ಸೇತರ ಪಕ್ಷಗಳು ಒಂದಾಗಬೇಕೆಂದು ಚರಣ್‌ಸಿಂಗ್ ಮುಂತಾದವರು ಅಭಿಪ್ರಾಯ ಪಟ್ಟರು. ಜೆ.ಪಿ ಚಳುವಳಿ ಉತ್ತರಭಾರತದಲ್ಲಿ ಜನಪ್ರಿಯವಾಗಿ ವಿದ್ಯಾರ್ಥಿಗಳ ಬೆಂಬಲ ಪಡೆಯಿತು. ಗುಜರಾತಿನಲ್ಲಿ ವಿದ್ಯಾರ್ಥಿಗಳು ನವನಿರ್ಮಾಣ ಯುವ ಸಮಿತಿಯನ್ನು ರಚಿಸಿಕೊಂಡು ಕಾಂಗ್ರೆಸಿನ ಭ್ರಷ್ಟ ಸರ್ಕಾರವನ್ನು ಪದಚ್ಯುತಿಗೊಳಿಸಿದರು. 1975ರಲ್ಲಿ ಜಯಪ್ರಕಾಶ್ ನಾರಾಯಣ್ ಸಂಸತ್ತಿಗೆ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿ ರಾಜಕೀಯ ಕ್ಷೇತ್ರದಲ್ಲಿ ಭ್ರಷ್ಟಾಚಾರ ನಿರ್ಮೂಲನವಾಗಬೇಕೆಂದರು. ಆಡಳಿತ ಪಕ್ಷಕ್ಕೆ ಪರ್ಯಾಯ ರಾಷ್ಟ್ರೀಯ ಪಕ್ಷದ ರಚನೆಗೆ ಸ್ಫೂರ್ತಿ

GNANADHARE IAS KAS ACADEMY

ನೀಡಿದರು. ದೆಹಲಿಯ ತಿಹಾರಿ ಜೈಲಿನಲ್ಲಿ ಬಂಧನದಲ್ಲಿದ್ದ ಭಾರತೀಯ ಲೋಕದಳ, ಜನಸಂಘ & ಸಮಾಜವಾದಿ ಪಕ್ಷಗಳ ಮುಖಂಡರು ಒಂದಾಗಲು ಫೆಬ್ರವರಿ 8, 1976ರಂದು ತೀರ್ಮಾನಿಸಿದರು. ನಂತರ ಕಾಂಗ್ರೆಸ್ ಮುಖಂಡರೂ ಒಪ್ಪಿದರು. ಮುಂಬೈನಲ್ಲಿ ಜಯಪ್ರಕಾಶ್ ನಾರಾಯಣ್‌ರವರು ಒಂದು ಸಭೆ ಕರೆದು ಎಲ್ಲ ರಾಷ್ಟ್ರೀಯ & ಪ್ರಜಾಸತ್ತಾತ್ಮಕ ಪಕ್ಷಗಳ ವಿಲೀನಕ್ಕೆ ಸಲಹೆ ನೀಡಿದರು. ಹೊಸ ಪಕ್ಷದ ರಚನೆಗೆ ಸಂಬಂಧಿಸಿದಂತೆ ಕರಡು ಕಾರ್ಯಕ್ರಮವನ್ನು ರೂಪಿಸಲು ಒಂದು ಸಮಿತಿಯನ್ನು ನೇಮಿಸಿದರು.

1977ರ ಜನವರಿಯಲ್ಲಿ ಲೋಕಸಭಾ ಚುನವಣೆಯ ಬಗ್ಗೆ ಪ್ರಧಾನಿ ಹೇಳಿಕೆ ಕೊಟ್ಟಾಗ ವಿರೋಧ ಪಕ್ಷಗಳು ತಕ್ಷಣ ಒಂದಾಗಲು ಅವಕಾಶ ದೊರೆಯಿತು. ಇವುಗಳ ನಾಯಕರು ಜೈಲಿನಿಂದ ಬಿಡುಗಡೆಯಾದ ಮೇಲೆ ಹೊಸ ಪಕ್ಷಕ್ಕೆ ಭಾರತೀಯ ಜನತಾ ಕಾಂಗ್ರೆಸ್ ಎಂದು ಹೆಸರಿಡಲು ಅನೇಕರು ಸಮ್ಮತಿಸಿದರು. ಆದರೆ ಒಬ್ಬರು ಸೂಚಿಸಿದ 'ಜನತಾಪಕ್ಷ' ಎಂಬ ನಾಮಾಂಕಿತ ಎಲ್ಲರಿಗೂ ಒಪ್ಪಿಗೆಯಾಯಿತು. ಫೆಬ್ರವರಿ 10, 1977ರಂದು ಜನತಾಪಕ್ಷ ವಿಧಿವತ್ತಾಗಿ ಅಸ್ತಿತ್ವಕ್ಕೆ ಬರದೇ ಇದ್ದರೂ ತನ್ನ ತತ್ವಗಳನ್ನು ಪ್ರಕಟಿಸಿ ಜನರ ತೀರ್ಮಾನಕ್ಕೆ ಒಪ್ಪಿಸಿತು. 1977ರ ಲೋಕಸಭಾ ಚುನಾವಣೆಯಲ್ಲಿ ಇದು ವಿಧಿವತ್ತಾಗಿ ರಾಷ್ಟ್ರೀಯ ಪಕ್ಷವಾಗಿರದೆ, ನಾಲ್ಕು ಪಕ್ಷಗಳ ಒಂದು ಕೂಟವಾಗಿ ಚಕ್ರದೊಳಗೆ ನೇಗಿಲು ಹೊತ್ತ ಸಂಕೇತವನ್ನು ಪಡೆದು ಜಯಗಳಿಸಿತು. ಮೇ 1, 1977ರಂದು ಲೋಕದಳ, ಜನಸಂಘ, ಕಾಂಗ್ರೆಸ್ & ಸೋಸಿಯಲಿಸ್ಟ್ ಪಕ್ಷಗಳು ದೆಹಲಿಯಲ್ಲಿ ಸಮ್ಮೇಳನ ನಡೆಸಿ ವಿಧಿವತ್ತಾಗಿ ವಿಲೀನಗೊಂಡು ಜನತಾಪಕ್ಷವನ್ನು ರಚಿಸಿದವು. ಮೇ 11 ರಂದು ರಾಷ್ಟ್ರೀಯ ಪಕ್ಷವೆಂದು ಮಾನ್ಯತೆ ಪಡೆಯಿತು. ಕಾಂಗ್ರೆಸ್ ಮಾಜಿ ಯಂಗ್ ಟರ್ಕ್ ಚಂದ್ರಶೇಖರ್ ಇದರ ಮೊದಲ ಅಧ್ಯಕ್ಷರಾದರು.

ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿದ್ದ ಅನೇಕ ತತ್ವಗಳನ್ನು ಅನುಷ್ಠಾನಕ್ಕೆ ತಂದಿತು. ಬಾಹ್ಯ ತುರ್ತುಪರಿಸ್ಥಿತಿಯನ್ನು ರದ್ದುಪಡಿಸಿ ವೃತ್ತಪತ್ರಿಕೆಗಳಿಗೆ ಸ್ವಾತಂತ್ರ್ಯ ನೀಡಿತು. ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಭಾಗದಿಂದ ತೆಗೆದು ಹಾಕಿತು. 44ನೇ ಸಂವಿಧಾನ ತಿದ್ದುಪಡಿ ಮೂಲಕ 42ನೇ ತಿದ್ದುಪಡಿಯ ಪ್ರಜಾ ವಿರೋಧಿ ನಿಯಮಗಳನ್ನು ರದ್ದುಗೊಳಿಸಿತು. ಆಡಳಿತದ ಕೆಲವು ತಿಂಗಳುಗಳಲ್ಲಿ ಅಕ್ಕಿ, ಸಕ್ಕರೆ ಮುಂತಾದ ಅಗತ್ಯ ವಸ್ತುಗಳು ಹೇರಳವಾಗಿ ಮುಕ್ತ ಮಾರುಕಟ್ಟೆಯಲ್ಲಿ ದೊರೆಯುವಂತೆ ಮಾಡಿತು. ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾಂತರ ಆಯೋಗಗಳನ್ನು ನೇಮಿಸಿತು. ವಿದೇಶಾಂಗ ವ್ಯವಹಾರದಲ್ಲಿ ಅಲಿಪ್ತ ನೀತಿಯನ್ನು ಮುಂದುವರೆಸಿ, ನೆರೆಯ ಹಾಗೂ ಇತರ ರಾಷ್ಟ್ರಗಳ ಜೊತೆ ಸಹಕಾರ & ಸ್ನೇಹ ಸಂಬಂಧಗಳನ್ನು ಅಭಿವೃದ್ಧಿ ಪಡಿಸಲು ಕ್ರಮಗಳನ್ನು ಕೈಗೊಂಡಿತ್ತು.

ಜನತಾಪಕ್ಷ ಅನೇಕ ಸಮಸ್ಯೆಗಳನ್ನು & ಸವಾಲುಗಳನ್ನು ಎದುರಿಸಿತು. '1980ರ ಲೋಕಸಭಾ ಚುನಾವಣೆಯಲ್ಲಿ ಜನತಾಪಕ್ಷ ಬಹುಮತ ಪಡೆದರೆ ಜಗಜೀವನ್ ರಾಮ್ ಪ್ರಧಾನ ಮಂತ್ರಿಯಾಗುವರು'

ಎಂದು ಘೋಷಿಸಿದರೂ ಪರಭಾವಗೊಂಡಿತು. 1980ರ ಮಾರ್ಚ್‌ನಲ್ಲಿ ಜನಜೀವನ್ ರಾಮ್ ಇದನ್ನು ತ್ಯಜಿಸಿ ಬೆಂಬಲಿಗರ ಜೊತೆ ರಚಿಸಿಕೊಂಡ ಬಣವನ್ನು ನಿಜವಾದ ಜನತಾ ಪಕ್ಷ ಎಂದು ಘೋಷಿಸಿದರು. ಆದರೆ ಕಾಲಕ್ರಮೇಣ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದರು. 1984ರ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಧ್ಯಕ್ಷರಾಗಿದ್ದ ಚಂದ್ರಶೇಖರ್ ಪರಾಭವಗೊಂಡು ಜನತಾಪಕ್ಷ ಸ್ಪರ್ಧಿಸಿದ್ದ 205 ಸ್ಥಾನಗಳಲ್ಲಿ ಕೇವಲ 10 ಸ್ಥಾನಗಳನ್ನು ಗೆದ್ದಿತು. ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರ ಜನಪ್ರಿಯ ನಾಯಕತ್ವದಲ್ಲಿ ಈ ಪಕ್ಷ ನಿಚ್ಚಳ ಬಹುಮತವನ್ನು 1985ರಲ್ಲಿ ಪಡೆದು ಸರ್ಕಾರವನ್ನು ರಚಿಸಿತು. 1988ರ ಮಾರ್ಚಿಯಲ್ಲಿ ಲೋಕದಳ ಜನತಾ ಪಕ್ಷದಲ್ಲಿ ವಿಲಿನಗೊಂಡು, ಅಜಿತ್ ಸಿಂಗ್ ಕಾರ್ಯಾಧ್ಯಕ್ಷರಾದರು ಇದರ ಪ್ರಭಾವ ಕಡಿಮೆಯಾಗುತ್ತಾ ಬಂದಿತು. ಇತರ ಪಕ್ಷಗಳಲ್ಲಿ ವಿಲೀನಗೊಂಡು ಜನತಾ ದಳ ಎಂಬ ಹೊಸ ಪಕ್ಷವನ್ನು ಕಟ್ಟಲು ಇದರ ಬಹುತೇಕ ಮುಖಂಡರು ತೀರ್ಮಾನಿಸಿದರು. ಕೆಲವರು ಜನತಾ ಪಕ್ಷದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ, ರಾಷ್ಟ್ರೀಯ ಮಟ್ಟದಲ್ಲಿ ಇಂದುಭಾಯ್ ಪಟೇಲರನ್ನು ಅಧ್ಯಕ್ಷರನ್ನಾಗಿ ಫೆಬ್ರವರಿ 5, 1989ರಂದು ಆಯ್ಕೆ ಮಾಡಿದರು. ಆದರೆ ಇದು ದೇಶದ ಯಾವುದೇ ಭಾಗದಲ್ಲಿ ಜನರ ಬೆಂಬಲವನ್ನು ಪಡೆಯುವುದರಲ್ಲಿ ವಿಫಲವಾಯಿತು. 1991ರ ಜನವರಿಯಲ್ಲಿ ಜನತಾದಳದಲ್ಲಿ ವಿಲೀನವಾಗಲು ತೀರ್ಮಾನಿಸಿದರೂ ಇದು ಕಾರ್ಯಗತವಾಗಲಿಲ್ಲ.

## ಜನತಾದಳ :

ಕಾಂಗ್ರೆಗೆ ರಾಷ್ಟ್ರೀಯ ಮಟ್ಟದಲ್ಲಿ ಪರ್ಯಾಯ ಪಕ್ಷವನ್ನು ಕಟ್ಟಲು 1988ರಲ್ಲಿ ರಾಜಕೀಯ ಚಟುವಟಿಕೆಗಳು ಪ್ರಾರಂಭವಾದವು. ನವೆಂಬರ್ 18, 1988ರಂದು ಲೋಕದಳ (ಬಿ), ಜನತಾಪಕ್ಷ & ವಿ.ಪಿ ಸಿಂಗ್ ರಚಿಸಿದ್ದ ಜನಮೋರ್ಚಾ ವಿಲೀನಗೊಂಡು ಜನತಾದಳ ಉದಯವಾಯಿತು. ಈ ಹೊಸ ಪಕ್ಷದ ಅಧ್ಯಕ್ಷರಾಗಿ ವಿ.ಪಿ ಸಿಂಗ್, ಉಪಾಧ್ಯಕ್ಷರಾಗಿ ರಾಮಕೃಷ್ಣ ಹೆಗಡೆ & ಮಹಾಕಾರ್ಯದರ್ಶಿಯಾಗಿ ಅಜಿತ್ ಸಿಂಗ್ ಅಧಿಕಾರ ವಹಿಸಿಕೊಂಡರು. ವಿ.ಪಿ ಸಿಂಗ್‌ರ ನಾಯಕತ್ವದಲ್ಲಿ ಉತ್ತರ ಪ್ರದೇಶ, ಬಿಹಾರ್ & ಗುಜರಾತ್‌ಗಳಲ್ಲಿ ಸರ್ಕಾರಗಳನ್ನು (1989–90) ರಚಿಸಿತು. ಒರಿಸ್ಸಾದಲ್ಲಿ ಬಹುಮತವನ್ನು ಪಡೆದು ಬಿಜಿಪಾಟ್ನಾಯಕ್ ನೇತೃತ್ವದಲ್ಲಿ ಅಧಿಕಾರಕ್ಕೆ (1990) ಬಂದಿತು. 1989ರ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಭಾರತದ ಬೆಂಬಲವನ್ನು ಪಡೆಯುವುದರಲ್ಲಿ ವಿಫಲವಾಯಿತು. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ಇದು ಕೆಲವು ಪ್ರಗತಿಪರ ಹಾಗೂ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರೂ ಪಕ್ಷದಲ್ಲಿ ಗುಂಪುಗಾರಿಕೆ & ಬಿಕ್ಕಟ್ಟುಗಳು ತಲೆದೋರಿದವು. ಅಜಿತ್‌ಸಿಂಗ್ & ದೇವಿಲಾಲ್ ನಡುವೆ ಉಂಟಾದ ಭಿನ್ನಾಭಿಪ್ರಾಯಗಳು & ಚಂದ್ರಶೇಖರ್‌ರವರ ಅಸಹಕಾರ ನಡವಳಿಕೆ ಜನತಾದಳದ ಅವನತಿಗೆ ಕಾರಣವಾಯಿತು.

1991ರ ಲೋಕಸಭಾ ಚುನಾವಣೆಯಲ್ಲಿ ಜನತಾದಳವಾಗಲಿ ಅಥವಾ ಜನತಾದಳ (ಎಸ್) ಆಗಲಿ ತಮ್ಮ ರಾಜಕೀಯ ಶಕ್ತಿಯನ್ನು ಪ್ರದರ್ಶಿಸಲು ಸಾಧ್ಯವಾಗಲಿಲ್ಲ. 1992ರ ಫೆಬ್ರವರಿಯಲ್ಲಿ ಜನತಾದಳದ 58 ಸದಸ್ಯರು (ಹೊರಹಾಕಿದ 3 ಸದಸ್ಯರನ್ನು ಸೇರಿಸಿ) ಲೋಕಸಭೆಯಲ್ಲಿ ಇದ್ದರು. ಸಮಾಜವಾದಿ ಜನತಾಪಕ್ಷ (ಎಸ್.ಜೆ.ಪಿ) ಎಂದು ಹೊಸ ಹೆಸರು ಪಡೆದ ಜನತಾದಳ (ಎಸ್) ಕೇವಲ 5 ಸದಸ್ಯರನ್ನು ಹೊಂದಿತ್ತು. ಇದರ ಮಾನ್ಯತೆಯನ್ನು 1992ರ ಫೆಬ್ರವರಿಯಲ್ಲಿ ಚುನಾವಣಾ ಆಯೋಗ ರದ್ದುಗೊಳಿಸಿತು.

ಜೆ.ಡಿ.ಯು ಬಿಹಾರ್‌ನಲ್ಲಿ ಪ್ರಬಲವಾಗಿ ನಿತೀಶ್‌ಕುಮಾರ್ ನೇತೃತ್ವದಲ್ಲಿ ಸರ್ಕಾರ ರಚಿಸಿ, 2009ರ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನ ಗಳಿಸಿತು. 2015ರ ಬಿಹಾರ್ ವಿಧಾನ ಸಭಾ ಚುನಾವಣೆಯಲ್ಲಿ 74 ಸ್ಥಾನಗಳನ್ನು ಗೆದ್ದಿತು. ಆರ್.ಜೆ.ಡಿ 80 & ಕಾಂಗ್ರೆಸ್ 27 ಸ್ಥಾನಗಳನ್ನು ಗೆದ್ದವು. ಈ ಮೂರು ಪಕ್ಷಗಳ ಮಹಾಮೈತ್ರಿಕೂಟ ನಿತೀಶ್‌ಕುಮಾರ್ ನೇತೃತ್ವದಲ್ಲಿ ಸರ್ಕಾರವನ್ನು ನವೆಂಬರ್ 20ರಂದು ರಚಿಸಿತು. ಕರ್ನಾಟಕ & ಕೇರಳಗಳಲ್ಲಿ ಸ್ವಲ್ಪ ಮಟ್ಟಿಗೆ ತನ್ನ ರಾಜಕೀಯ ಶಕ್ತಿಯನ್ನು ಹೊಂದಿ ರಾಷ್ಟ್ರ ರಾಜಕಾರಣದಲ್ಲಿ ಇದರ ಪಾತ್ರ ಕಡಿಮೆಯಾಗಿದೆ. ಹಿಂದಿನ ಜನತಾ ಪರಿವಾರದ ಪಕ್ಷಗಳು ಒಂದಾಗಲು 2014ರ ಕೊನೆ ಭಾದಗಲ್ಲಿ ಚರ್ಚೆ ನಡೆಸಿದರೂ ಯಶಸ್ವಿಯಾಗಲಿಲ್ಲ. ಏಪ್ರಿಲ್ 23, 2016ರಂದು ಬಿಹಾರದ ಮುಖ್ಯಮಂತ್ರಿ ನಿತೀಶ್‌ಕುಮಾರ್ ಜೆ.ಡಿಯು.ನ ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಕಗೊಂಡರು.

## ಭಾರತೀಯ ಜನತಾ ಪಕ್ಷ :



ಅಕ್ಟೋಬರ್ 2, 1951ರಲ್ಲಿ ಭಾರತೀಯ ಜನ ಸಂಘವನ್ನು ಶ್ಯಾಮಪ್ರಸಾದ್ ಮುಖರ್ಜಿ ಸ್ಥಾಪಿಸಿದಸರು. ಇದು 1951–1971ರ ವರೆಗೆ ಚುನಾವಣೆಗಳಲ್ಲಿ ಭಾಗವಹಿಸಿ, 1977ರಲ್ಲಿ ಜನತಾಪಕ್ಷದ ಜೊತೆ ವಿಲೀನವಾಯಿತು. 1980ರ ಏಪ್ರಿಲ್ 6ರಂದು ಜನತಾಪಕ್ಷದಿಂದ ಹೊಬಂದು ಇದರ ಸದಸ್ಯರು ಭಾರತೀಯ ಜನತಾಪಕ್ಷವನ್ನು ಸ್ಥಾಪಿಸಿದರು. ಈ ದಿನವನ್ನು ಬಿ.ಜೆ.ಪಿ ಸಂಸ್ಥಾಪನಾ ದಿನವೆಂದು ಆಚರಿಸಲಾಗುತ್ತಿದೆ. ಇತ್ಯರ್ಥವಾಗದಿದ್ದ ಹಿಂದಿನ ಜನತಾ ಪಕ್ಷದ ದ್ವಿಸದಸ್ಯತ್ವ ವಿವಾದ ಬಿ.ಜೆ.ಪಿ ಉದಯಕ್ಕೆ ಮುಖ್ಯ ಕಾರಣವಾಯಿತು. “ಪಕ್ಷದ ಯಾರೇ ಪದಾಧಿಕಾರಿಯಾಗಲೀ ಅಥವಾ ಶಾಸಕನಾಗಲೀ ರಾಷ್ಟ್ರೀಯ ಸ್ವಯಂ ಸೇವಕ ಸಂಘ ನಿತ್ಯದ ವ್ಯವಹಾರಗಳಲ್ಲಿ ಭಾಗವಹಿಸಬಾರದು’ ಎಂದು ಜನತಾಪಕ್ಷದ ಸಂಸಧೀಯ ಮಂಡಲಿ ಮಾರ್ಚ್ 19, 1980ರಂದು ನಿರ್ಣಯವನ್ನು ಅಂಗೀಕರಿಸಿತು. ಸಭೆಯಲ್ಲಿ ಹಾಜರಿದ್ದ ವಾಜಪೇಯಿ, ಎಲ್.ಕೆ ಅಡ್ವಾನಿ, ನಾನಾಜಿ ದೇಶ್ ಮುಖ್ ಈ ನಿರ್ಣಯವನ್ನು ವಿರೋಧಿಸಿದರು. ಏಪ್ರಿಲ್ 5 1980ರಂದು ಹಿಂದಿನ

GNANADHARE IAS KAS ACADEMY

ಜನಸಂಘದವರು ಸಮ್ಮೇಳನವನ್ನು ನಡೆಸಿ, ಆರ್.ಎಸ್.ಎಸ್ ಸಂಬಂಧದ ನಿಷೇಧಕ್ಕೆ ಒಪ್ಪಿಗೆ ನೀಡಿದ್ದನ್ನು ಖಂಡಿಸಿದರು. ಈ ಎರಡು ದಿನಗಳ ಅಧಿವೇಶನ ಬಿ.ಜೆ.ಪಿ ಉದಯದೊಂದಿಗೆ ಮುಕ್ತಾಯವಾಯಿತು.

ಅಟಲ್ ಬಿಹಾರಿ ವಾಜಪೇಯಿ ಈ ಹೊಸ ಪಕ್ಷದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ನಂತರ ಮಾರ್ಚ 8, 1986ರಂದು ಎಲ್.ಕೆ. ಅಡ್ವಾನಿ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದರು. ಈ ಪಕ್ಷದ ಎರಡನೇ ಅಧ್ಯಕ್ಷರಾಗಿದ್ದ ಇವರು 7 ಉಪಾಧ್ಯಕ್ಷರು, 4 ಮಹಾಕಾರ್ಯದರ್ಶಿಗಳು & 7 ಕಾರ್ಯದರ್ಶಿಗಳು ಸೇರಿದಂತೆ 58 ಸದಸ್ಯರ ರಾಷ್ಟ್ರೀಯ ಕಾರ್ಯಮಂಡಲಿಯನ್ನು ಏಪ್ರಿಲ್ 17, 1988ರಂದು ರಚಿಸಿದರು. 1991ರಲ್ಲಿ ಮುರಳಿ ಮನೋಹರ್ ಜೋಶಿ ಅಧ್ಯಕ್ಷರಾದರು. ಮತ್ತೆ ಎಲ್.ಕೆ ಅಡ್ವಾನಿ 1993ರಲ್ಲಿ ಅಧ್ಯಕ್ಷರಾದರು. ಮೇ 3, 1998ರಂದು ಪಕ್ಷದ ಹೊಸ ಅಧ್ಯಕ್ಷರಾದ ಕುಶಬಾವುಠಾಕ್ರೆ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯನ್ನು ರಚಿಸಿ 149 ಸದಸ್ಯರು, 10 ಮಂದಿ ಪರಿಶಿಷ್ಟ ಜಾತಿ & ವರ್ಗಕ್ಕೆ ಹಾಗೂ 8 ಮಂದಿ ಅಲ್ಪಸಂಖ್ಯಾತರಿಗೆ ಸೇರಿದ್ದರು. ಆಂಧ್ರಪ್ರದೇಶದ ಬಂಗಾರು ಅಧ್ಯಕ್ಷರಾಗಿ 2000ರಂದು ನಾಗಾಪುರದಲ್ಲಿ ಅಧಿಕಾರ ವಹಿಸಿಕೊಂಡರು. ರಕ್ಷಣಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಇವರ ಬಗ್ಗೆ ರಹಸ್ಯ ವಿಡಿಯೋ ಚಿತ್ರಗಳು ತೆಹೆಲ್ಕಾ ಡಾಟ್ ಕಾಮ್ ಬಹಿರಂಗ ಪಡಿಸಿದ್ದರಿಂದ ಮಾರ್ಚ 2001ರಂದು ರಾಜೀನಾಮೆ ನೀಡಿದರು. ನಂತರ ಎಲ್.ಕೆ.ಅಡ್ವಾಣಿ ಮತ್ತೆ ಅಧ್ಯಕ್ಷರಾದರು. ಇವರು 2005ರಲ್ಲಿ ಪಾಕಿಸ್ತಾನಕ್ಕೆ ಭೇಟಿ ನೀಡಿದಾಗ ಮಹಮ್ಮದ್ ಜಿನ್ನಾ ಅವರನ್ನು ಜಾತ್ಯಾತೀತವಾದಿಯಾಗಿದ್ದರೆಂದು ಹೇಳಿಕೆ ನೀಡಿ, ಆರ್.ಎಸ್.ಎಸ್.ನ ಟೀಕೆಗೆ ತೆರವುಗೊಳಿಸಿದರು. ನಂತರ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ರಾಜನಾಥಸಿಂಗ್ ಪಕ್ಷದ ಅಧ್ಯಕ್ಷರಾದರು. ಇವರ ನಂತರ ಮಹಾರಾಷ್ಟ್ರದ ನಿತಿನ್ ಗಡ್ಕರಿ ಅಧ್ಯಕ್ಷರಾದರು. ಇವರ ವಿರುದ್ಧ ಭ್ರಷ್ಟಾಚಾರದ ಆರೋಪ ಉಂಟಾದ ಹಿನ್ನೆಲೆಯಲ್ಲಿ 2013ರಲ್ಲಿ ರಾಜೀನಾಮೆ ನೀಡಿದರು. ಎರಡನೇ ಬಾರಿಗೆ ರಾಜನಾಥಸಿಂಗ್ ಬಿ.ಜೆ.ಪಿ ಯ ರಾಷ್ಟ್ರಾಧ್ಯಕ್ಷರಾಗಿ ಜನವರಿ 23ರಂದು ಸರ್ವಾನುಮತದಿಂದ ಆಯ್ಕೆಯಾದರು. ಇವರು ಕೇಂದ್ರದಲ್ಲಿ ಮಂತ್ರಿಯಾದ ಮೇಲೆ ಗುಜರಾತಿನ ಅಮಿತ್ ಶಾ ಸರ್ವಾನುಮತದಿಂದ ಜುಲೈ 9, 2014ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದರು. ಪಕ್ಷವನ್ನು ಸಂಘಟಿಸಲು ರಾಜಕೀಯ ತಂತ್ರಗಳನ್ನು ಬಳಸಿ ದಕ್ಷಿಣ ಭಾರತದಲ್ಲೂ ಬಿ.ಜೆ.ಪಿಯ ಬಲವರ್ಧನೆಗೆ ಹೋರಾಡುತ್ತಿದ್ದಾರೆ. 2015ರ ಜೂನ್ ವರೆಗೆ 11 ಕೋಟಿ ಸದಸ್ಯರನ್ನು ನೋಂದಣಿ ಮಾಡಿಸಿದರು. ಎರಡನೇ ಬಾರಿಗೆ ಜನವರಿ 24, 2016ರಂದು ಸರ್ವಾನುಮತದಿಂದ 3 ವರ್ಷದ ಅವಧಿಗೆ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದರು.

# ಪ್ರಾದೇಶಿಕ ಪಕ್ಷಗಳು :

## ಅಕಾಲಿ ದಳ :



ಬ್ರಿಟಿಷ್ ಸರ್ಕಾರವು ಸಿಖ್ ದೇವಾಲಯಗಳ ಹೊಣೆಯನ್ನು ಸಿಖ್ಖರಲ್ಲದ ಮಹಂತರಿಗೆ ವಹಿಸಿತ್ತು. ಇದನ್ನು ನಿರ್ಮೂಲ ಮಾಡಲು ಹುಟ್ಟಿಕೊಂಡ ಚಳುವಳಿಗೆ ಬೆಂಬಲ ಕೊಡಲು ಅಕಾಲಿದಳ ಡಿಸೆಂಬರ್ 14, 1920ರಂದು ಉದಯವಾಗಿ 1921ರಲ್ಲಿ ನೋಂದಣಿಯಾಯಿತು. ಸ್ವಾತಂತ್ರ್ಯ ಪಡೆದ ಮೇಲೆ ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಸಿಖ್ ಪಂಥದ & ಪಂಜಾಬಿನ ಹಿತಾಸಕ್ತಿಗಳನ್ನು ರಕ್ಷಿಸಲು ಹೋರಾಡುತ್ತಿದೆ. 1952ರಲ್ಲಿ ಪಂಜಾಬಿನ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಇದು 33 ಸ್ಥಾನಗಳನ್ನು ಗೆದ್ದಿತು. 1962ರಲ್ಲಿ 19 ಸ್ಥಾನಗಳನ್ನು ಪಡೆಯಿತು. 1967ರಲ್ಲಿ ಮಾಸ್ಟರ್ ತಾರಾಸಂಗ್ & ಸಂತ್ ಫತೆಸಿಂಗ್ ನೇತೃತ್ವದ ಎರಡು ಗುಂಪುಗಳು ಅನುಕ್ರಮವಾಗಿ 2 & 24 ಸ್ಥಾನಗಳನ್ನು ಪಡೆದವು. 1969ರಲ್ಲಿ 43 & 1972ರಲ್ಲಿ 24 ಸ್ಥಾನಗಳನ್ನು ಗೆದ್ದಿತು.

## ಡಿ.ಎಂ.ಕೆ :

1916ರಲ್ಲಿ ಜಸ್ಟೀಸ್ ಪಾರ್ಟಿ ರಚನೆಗೊಂಡು ಬ್ರಾಹ್ಮಣೇತರ ಚಳುವಳಿಯನ್ನು ಬೆಂಬಲಿಸಿತು. 1944ರಲ್ಲಿ ಇದನ್ನು 'ದ್ರಾವಿಡ ಕಜಗಮ್' ಎಂದು ಸೇಲಂನಲ್ಲಿ ನಾಮಕರಣ ಮಾಡಿ, ಪೆರಿಯಾರ್ ರಾಮಸ್ವಾಮಿ ಇದರ ಮುಖ್ಯ ನಾಯಕರಾದರು. ಇವರ & ಸಿ.ಎನ್. ಅಣ್ಣಾದೊರೈ ನಡುವೆ ಉಂಟಾದ ಭಿನ್ನಾಭಿಪ್ರಾಯದಿಂದ ದ್ರಾವಿಡ ಕಜಗಮ್ ಪಕ್ಷ ಒಡೆದು 1949ರಲ್ಲಿ ಡಿ.ಎಂ.ಕೆ (ದ್ರಾವಿಡ ಮುನ್ನೇತ್ರ ಕಜಗಮ್) ಉದಯವಾಯಿತು. ಅಣ್ಣಾದೊರೈ ಜನಪ್ರಿಯ ನಾಯಕತ್ವದಲ್ಲಿ ಡಿ.ಎಂ.ಕೆ 1967ರ ವಿಧಾನಸಭಾ ಚುನಾವನೆಯಲ್ಲಿ 139 ಸ್ಥಾನಗಳನ್ನು ಗೆದ್ದು ಮೊದಲ ಬಾರಿಗೆ ಮದ್ರಾಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿತು. 1971ರಲ್ಲಿ 184 ಸ್ಥಾನಗಳನ್ನು ಪಡೆದು ಮತ್ತೆ ಸರ್ಕಾರವನ್ನು ರಚಿಸಿತು. 1989ರ ವಿಧಾನಸಭಾ ಚುನಾವಣೆಯಲ್ಲಿ 151 ಸ್ಥಾನಗಳನ್ನು ಗೆದ್ದು ಮೂರನೇ ಬಾರಿಗೆ ಸರ್ಕಾರವನ್ನು ರಚಿಸಿತು. ರಾಜ್ಯಗಳ ಸ್ವಾಯತ್ತತೆಗೆ ಹೋರಾಡುವುದು, ತಮಿಳರ ಹಿತಾಸಕ್ತಿಗಳನ್ನು ರಕ್ಷಿಸುವುದು, ಹಿಂದಿ ಭಾಷೆ ಹೇರುವುದನ್ನು

ವಿರೋಧಿಸುವುದು & ಉತ್ತರದ ಆರ್ಯನ್ ಸಾಮ್ರಾಜ್ಯಶಾಹಿಯನ್ನು ತಿರಸ್ಕರಿಸುವುದು ಇದರ ಮುಖ್ಯ ತತ್ವಗಳಾಗಿವೆ.

## ಎ.ಐ.ಎ.ಡಿ.ಎಂ.ಕೆ :




ಡಿ.ಎಂ.ಕೆ ಪಕ್ಷದಿಂದ ಉಚ್ಚಾಟನೆಗೊಂಡ ಎಂ.ಜಿ.ರಾಮಚಂದ್ರನ್ ಎ.ಐ.ಎ.ಡಿ.ಎಂ.ಕೆ ಪಕ್ಷವನ್ನು 1972 ಅಕ್ಟೋಬರ್ 16ರಂದು ರಚಿಸಿದರು. ಇದು 1977ರ ವಿಧಾನಸಭಾ ಚುನಾವಣೆಯಲ್ಲಿ 130 ಸ್ಥಾನಗಳನ್ನು ಪಡೆದು ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿತು. 1980ರಲ್ಲಿ 129 ಸ್ಥಾನಗಳನ್ನು ಪಡೆದು ರಾಮಚಂದ್ರನ್ ಇರುವವರೆಗೂ ಬೇರೆ ಪಕ್ಷಗಳಿಗೆ ಅಧಿಕಾರವನ್ನು ಬಿಟ್ಟುಕೊಡಲಿಲ್ಲ. ಈ ಪಕ್ಷವೂ ತಮಿಳರ ಹಿತಾಸಕ್ತಿಗಳನ್ನು ರಕ್ಷಿಸಲು ಹೋರಾಡುತ್ತಿದೆ. ಇವರ ಮರಣ ನಂತರ ಜಯಲಲಿತಾ ನೇತೃತ್ವದಲ್ಲಿ ಈ ಪಕ್ಷ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯಿತು. 1991, 2001, 2011 & 2016ರಲ್ಲಿ ಅಧಿಕಾರಕ್ಕೆ ಬಂದಿತು. ಎಂ.ಜಿ.ರಾಮಚಂದ್ರನ್ & ಜಯಲಲಿತಾ ಜಾರಿಗೆ ತಂದ ಜನಪರ ಕಲ್ಯಾಣ ಕಾರ್ಯಕ್ರಮಗಳು ಈ ಪಕ್ಷದ ಜನಪ್ರಿಯತೆಗೆ ಕಾರಣವಾದವು. ಡಿಸೆಂಬರ್ 5, 2016ರಂದು ಜಯಲಲಿತಾ ನಿಧನರಾದ ಮೇಲೆ ಪಕ್ಷದಲ್ಲಿ ಎರಡು ಗುಂಪುಗಳಾದವು. ಶಶಿಕಲಾ ನಟರಾಜನ್ ಗುಂಪಿನ ಪಳನಿಸ್ವಾಮಿ ಮುಖ್ಯಮಂತ್ರಿಯಾದರು. ಪನ್ನೀರ್ ಸೆಲ್ವಂ ನೇತೃತ್ವದ ಇನ್ನೊಂದು ಗುಂಪು ಜಯಲಲಿತಾರ ಜನಪ್ರಿಯತೆಯ ಮೇಲೆ ಅಧಿಕಾರಕ್ಕೆ ಬರಲು ಹೋರಾಡುತ್ತಿದೆ.

## ನ್ಯಾಷನಲ್ ಕಾನ್ಫರೆನ್ಸ್ :

ಸ್ವಾತಂತ್ರ್ಯ ಪೂರ್ವದಲ್ಲಿ ಜಮ್ಮು & ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್ ಶೇಖ್ ಮಹಮದ್ ಅಬ್ದುಲ್ಲಾ ಸ್ಥಾಪಿಸಿತು. ಇದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಜೊತೆ ನಿಖಟ ಸಂಪರ್ಕವನ್ನು ಬೆಳೆಸಿತು. 1962ರಲ್ಲಿ 63 ಸ್ಥಾನಗಳನ್ನು ಗೆದ್ದರೆ, 1967ರಲ್ಲಿ ಕೇವಲ 8 ಸ್ಥಾನಗಳನ್ನು ಗೆದ್ದಿತು. 1981ರಲ್ಲಿ ಶೇಖ್ ಅಬ್ದುಲ್ಲಾ ಪುತ್ರ ಫರೂಕ್ ಅಬ್ದುಲ್ಲಾ ಪಕ್ಷದ ಮುಖಂಡತ್ವವನ್ನು ವಹಿಸಿಕೊಂಡರು. 1987ರಲ್ಲಿ ವಿಧಾನಸಭಾ ಚುನಾವನೆಯಲ್ಲಿ ಈ ಪಕ್ಷ 38 ಸ್ಥಾನಗಳನ್ನು ಪಡೆದು, 24 ಸ್ಥಾನಗಳನ್ನು ಗೆದ್ದ ಕಾಂಗ್ರೆ ಪಕ್ಷದ ಜೊತೆ ಸಮ್ಮಿಶ್ರ ಸರ್ಕಾರವನ್ನು ಮಾರ್ಚ 26ರಂದು ರಚಿಸಿತು. 2009ರ ಜನವರಿಯಿಂದ 2014ರ ಜನವರಿವರೆಗೆ ಫರೂಕ್ ಅಬ್ದುಲ್ಲಾರವರ ಪುತ್ರ ಓಮರ್ ಅಬ್ದುಲ್ಲಾ ನೇತೃತ್ವದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಅಧಿಕಾರದಲ್ಲಿತ್ತು.

2014ರ ವಿಧಾನಸಭಾ ಚುನಾವಣೆಯಲ್ಲಿ ಕೇವಲ 15 ಸ್ಥಾನಗಳನ್ನು ಗೆದ್ದು ಮುಖ್ಯಮಂತ್ರಿಯಾಗಿದ್ದ ಓಮರ್ ಅಬ್ದುಲ್ಲಾ ಪರಾಜಿತರಾದರು.

## ಶಿವಸೇನೆ :

ಬಾಲ್ ಕೇಶವ ಥ್ಯಾಕರೆ (ಬಾಳಠಾಕ್ರೆ) ಮುಖಂಡತ್ವದಲ್ಲಿ ಶಿವಸೇನೆ ಜೂನ್ 19, 1966ರಂದು ಮುಂಬೈನಲ್ಲಿ ಉದಯವಾಯಿತು. ಮುಂಬೈ ನಗರದಲ್ಲಿ ದಕ್ಷಿಣ ಭಾರತೀಯರು ಹೆಚ್ಚು ಸಂಖ್ಯೆಯಲ್ಲಿ ಇರುವುದನ್ನು ವಿರೋಧಿಸಿ ಮರಾಠಿ ಜನರ ಹಿತಾಸಕ್ತಿಗೆ ಹೋರಾಡುತ್ತಿದೆ. ಪಿ.ಎಸ್.ಪಿ ಜೊತೆ ಮೈತ್ರಿಕೂಟವನ್ನು ರಚಿಸಿಕೊಂಡು 1968ರ ಮಾರ್ಚಿನಲ್ಲಿ ನಡೆದ ಮುಂಬೈ ಕಾರ್ಪೋರೇಷನ್ ಚುನಾವಣೆಯಲ್ಲಿ 53 ಸ್ಥಾನಗಳನ್ನು ಗೆದ್ದಿತು. ಕ್ರಮೇಣ ಜನಪ್ರಿಯವಾಗಿ ಮುಂಬೈ ಕಾರ್ಪೋರೇಷನ್‌ನಲ್ಲಿ ತನ್ನ ಪ್ರಭಾವವನ್ನು ಹೊಂದಿದೆ. 1990ರ ವಿಧಾನಸಭಾ ಚುನಾವಣೆಯಲ್ಲಿ 52 ಸ್ಥಾನಗಳನ್ನು ಗೆದ್ದು ತನ್ನ ರಾಜಕೀಯ ಶಕ್ತಿಯನ್ನು ಪ್ರದರ್ಶಿಸಿತು. 2014 ವಿಧಾನಸಭಾ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿ 60ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಬಿ.ಜೆ.ಪಿ ನೇತೃತ್ವದ ಸಮ್ಮಿಶ್ರ ಸರ್ಕಾರವನ್ನು ಸೇರಿತು. ಸಂಸ್ಥಾಪಕ ಬಾಳಠಾಕ್ರೆ ನವೆಂಬರ್ 17, 2012ರಂದು ನಿಧನರಾದ ನಂತರ ಇದು ಒಗ್ಗಟ್ಟಿನಿಂದ ತನ್ನ ರಾಜಕೀಯ ಶಕ್ತಿಯನ್ನು ಪ್ರದರ್ಶಿಸಲು ಸಾಧ್ಯವಾಗಲಿಲ್ಲ. ನಂತರ ಬಾಳಠಾಕ್ರೆ ಅವರ ಪುತ್ರ ಉದ್ಧವ್ ಠಾಕ್ರೆ & ಸಂಬಂಧಿಕರಾದ ರಾಕ್ ಠಾಕ್ರೆ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ಶಿವಸೇನೆಯಲ್ಲಿ ಒಡಕುಂಟಾಯಿತು.

## ತೆಲುಗು ದೇಶಂ:

1982ರಲ್ಲಿ ಎನ್.ಟಿ.ರಾಮರಾವ್‌ರಿಂದ ರಚಿಸಲ್ಪಟ್ಟ ತೆಲುಗುದೇಶಂ ಆಂಧ್ರಪ್ರದೇಶದಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಬೆಳೆದಿದೆ. ಇವರ ಜನಪ್ರಿಯ ನಾಯಕತ್ವದಲ್ಲಿ ಈ ಪಕ್ಷ 1983ರ ವಿಧಾನಸಭಾ ಚುನಾವಣೆಯಲ್ಲಿ 198 ಸ್ಥಾನಗಳನ್ನು ಗೆದ್ದು ಮೊದಲ ಬಾರಿಗೆ ಸರ್ಕಾರವನ್ನು ರಚಿಸಿತು. 1985ರ ಮಧ್ಯಂತರ ಚುನಾವಣೆಯಲ್ಲಿ 202 ಸ್ಥಾನಗಳನ್ನು ಪಡೆದು ಎರಡನೇ ಬಾರಿಗೆ ಅಧಿಕಾರಕ್ಕೆ ಬಂದಿತು. ಪ್ರತಿ ಕಾರ್ಡಿಗೆ 25ಕೆ.ಜಿ ಅಕ್ಕಿವಿತರಣೆ, 60ವರ್ಷ ವಯಸ್ಸಾದ ಕೃಷಿ ಕಾರ್ಮಿಕರಿಗೆ & ವಿಧವೆಯರಿಗೆ ಪಿಂಚಣಿ, ಬಡವರಿಗೆ ರಿಯಾಯಿತಿ ದರದಲ್ಲಿ ಬಟ್ಟೆಗಳ ವಿತರಣೆ ಮುಂತಾದ

ಕಾರ್ಯಕ್ರಮಗಳನ್ನು ಜಾರಿಗೆ ತಂದರು. 1989ರ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡು 74 ಸ್ಥಾನಗಳನ್ನು ಗೆದ್ದು ಎರಡನೇ ಸ್ಥಾನವನ್ನು ಪಡೆಯಿತು. 1994 & 2014ರಲ್ಲಿ ಮತ್ತೆ ಅಧಿಕಾರಕ್ಕೆ ಬಂದಿತು. ಪ್ರಸ್ತುತ ಚಂದ್ರಬಾಬು ನಾಯ್ಡು ನೇತೃತ್ವದಲ್ಲಿ ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದೆ.

## ಸಮಾಜವಾದಿ ಪಕ್ಷ

ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಯಾದವ್ ಅಕ್ಟೋಬರ್ 4, 1992ರಂದು ಸ್ಥಾಪಿಸಿದ ಸಮಾಜವಾದಿ ಪಕ್ಷ (ಎಸ್.ಪಿ) ಇತ್ತೀಚಿನ ವರ್ಷಗಳಲ್ಲಿ ತನ್ನ ರಾಜಕೀಯ ಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಿದೆ. 2009ರ ಲೋಕಸಭಾ ಚುನಾವಣೆಯಲ್ಲಿ 23 ಸ್ಥಾನಗಳನ್ನು ಗೆದ್ದು, ಚಲಾಯಿಸದ ಮತಗಳಲ್ಲಿ ಶೇ.23.4ರಷ್ಟನ್ನು ಪಡೆಯಿತು. 2007ರ ವಿಧಾನಸಭಾ ಚುನಾವಣೆಯಲ್ಲಿ 97 ಸ್ಥಾನಗಳನ್ನು ಪಡೆದು, ಶೇ.25.4ರಷ್ಟು ಮತಗಳನ್ನು ಪಡೆಯಿತು. 2012ರ ವಿಧಾನಸಭಾ ಚುನಾವಣೆಯಲ್ಲಿ 224 ಸ್ಥಾನಗಳನ್ನು ಪಡೆದು ಶೇ.30ರಷ್ಟು ಪಡೆಯಿತು. ಮುಲಾಯಂ ಸಿಂಗ್ ಅವರ ಪುತ್ರ ಅಖಿಲೇಶ್ ಯಾದವ್ ಮಾರ್ಚ್ 15, 2012ರಲ್ಲಿ ಮುಖ್ಯಮಂತ್ರಿಗಳಾದರು. 2017ರ ವಿಧಾನಸಭಾ ಚುನಾವಣೆಯಲ್ಲಿ 47 ಕ್ಷೇತ್ರಗಳಲ್ಲಿ ಶೇ.21.8ರಷ್ಟು ಪಡೆಯಿತು. ಇದರಲ್ಲಿ ಉಂಟಾದ ಗುಂಪುಗಾರಿಕೆ & ಕುಟುಂಬ ರಾಜಕಾರಣ ಇದರ ಸೋಲಿಗೆ ಪ್ರಮುಖ ಕಾರಣವಾಯಿತು.

## ತೃಣಮೂಲ ಕಾಂಗ್ರೆಸ್ :

ಜನವರಿ 1, 1998ರಂದು ಮಮತಾ ಬ್ಯಾನರ್ಜಿ ಕಾಂಗ್ರೆಸ್‌ನಿಂದ ಹೊರಬಂದು ಟಿ.ಎಂ.ಸಿ.ಯನ್ನು ರಚಿಸಿದರು. 2009ರ ಲೋಕಸಭಾ ಚುನಾವಣೆಯಲ್ಲಿ 19 ಸ್ಥಾನಗಳನ್ನು ಗೆದ್ದು ಯು.ಪಿ.ಎ ಸರ್ಕಾರದಲ್ಲಿ ಭಾಗಿಯಾದರು. 2011ರ ಏಪ್ರಿಲ್ & ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ & ಕಾಂಗ್ರೆಸ್‌ನ

ಮೈತ್ರಿಕೂಟ 226 ಸ್ಥಾನಗಳನ್ನು ಗೆದ್ದು ಮೊದಲ ಬಾರಿಗೆ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಮೇ 20ರಂದು ಅಧಿಕಾರಕ್ಕೆ ಬಂದಿತು. ತೃಣ ಮೂಲ ಕಾಂಗ್ರೆಸ್ 185 & ಕಾಂಗ್ರೆಸ್ 42 ಸ್ಥಾನಗಳನ್ನು ಪಡೆದವು. ವಾಮ ಪಂಥೀಯ ರಂಗದ 34 ವರ್ಷಗಳ ಆಡಳಿತವನ್ನು ಅಂತ್ಯಗೊಳಿಸಿತು.

2016ರ ಮೇ ತಿಂಗಳಲ್ಲಿ ನಡೆದ ಪಶ್ಚಿಮಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ 211 ಕ್ಷೇತ್ರಗಳಲ್ಲಿ ಜಯಗಳಿಸಿ ಎರಡನೇ ಬಾರಿಗೆ ಅಧಿಕಾರದಲ್ಲಿ ಮುಂದುವರೆದು ಮಮತಾ ಬ್ಯಾನರ್ಜಿ ಮುಖ್ಯಮಂತ್ರಿಗಳಾದರು.

## ಬಿಜು ಜನತಾ ದಳ :

ನೆಹರು ಸಮಕಾಲೀನರು & ಒಡಿಶಾ ರಾಜ್ಯದ ಪ್ರಮುಖ ರಾಜಕೀಯ ನಾಯಕರಾಗಿದ್ದ ಬಿಜು ಪಟ್ನಾಯಕ್ ಬಿ.ಜೆ.ಡಿ.ಯನ್ನು ಡಿಸೆಂಬರ್ 1977ರಲ್ಲಿ ರಚಿಸಿದರು. ಇವರ ಮಗ ನವೀನ ಪಟ್ನಾಯಕ್ ಅವರ ನೇತೃತ್ವದಲ್ಲಿ ಇದು ಈ ರಾಜ್ಯದ ಮುಖ್ಯ ರಾಜಕೀಯ ಪಕ್ಷವಾಗಿ ಬೆಳೆದು ಬಂದು 2000ದಿಂದ ಅಧಿಕಾರದಲ್ಲಿದೆ. ನವೀನ ಪಟ್ನಾಯಕ್‌ರ ಸರಳತೆ, ದಕ್ಷತೆ & ಪ್ರಾಮಾಣಿಕತೆ ಈ ಪಕ್ಷದ ಬಲವರ್ಧನೆಗೆ ಮುಖ್ಯ ಕಾರಣಗಳಾಗಿವೆ. 2009ರ ಚುನಾವಣೆಯಲ್ಲಿ 103 ಸ್ಥಾನಗಳನ್ನು ಗೆದ್ದು 3ನೇ ಬಾರಿಗೆ ಅಧಿಕಾರಕ್ಕೆ ಬಂದರು. 2014ರ ವಿಧಾನಸಭಾ ಚುನಾವಣೆಯಲ್ಲಿ 117 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದರು.

## ಇತರ ಪ್ರಾದೇಶಿಕ ಪಕ್ಷಗಳು :

ಸಿಕ್ಕಿಂ ಸಂಗ್ರಾಮ್ ಪರಿಷತ್ : ಸಿಕ್ಕಿಂ ರಾಜ್ಯದಲ್ಲಿ ಜನಪ್ರಿಯವಾಗಿ 1985ರ ವಿಧಾನಸಭಾ ಚುನಾವಣೆಯಲ್ಲಿ 30 ಸ್ಥಾನಗಳನ್ನು ಪಡೆದು ಅಧಿಕಾರಕ್ಕೆ ಬಂದಿತು. ಅಲ್ಲದೆ 1989ರಲ್ಲಿ ವಿಧಾನಸಭೆಯ ಎಲ್ಲ 32 ಸ್ಥಾನಗಳನ್ನು & ಲೊಕಸಭಾ ಸ್ಥಾನವನ್ನು ಗೆದ್ದು ತನನ್ ರಾಜಕೀಯ ಶಕ್ತಿಯನ್ನು ಸಾಬೀತುಪಡಿಸಿತು.

## ಮಹಾರಾಷ್ಟ್ರವಾದಿ ಗೋಮಂತಕ್ ಪಕ್ಷ :

ಗೋವಾದಲ್ಲಿ ಒಂದು ಮುಖ್ಯ ರಾಜಕೀಯ ಶಕ್ತಿಯಾಗಿತ್ತು. ಇದು ದಯನಂದ ಬಾಂದೋಡ್ಕರ್ & ಅವರ ಪುತ್ರಿ ಶಶಿಕಲ ಕಾಕೋಡ್ಕರ್ ನೇತೃತ್ವದಲ್ಲಿ ಜನಪ್ರಿಯತೆಯನ್ನು ಗಳಿಸಿ, 18 ವರ್ಷಗಳ ಕಾಲ ಆಡಳಿತ ನಡೆಸಿ 1980ರಲ್ಲಿ ಅಧಿಕಾರವನ್ನು ಕಳೆದುಕೊಂಡಿತು. 1989ರ ಚುನಾವಣೆಯಲ್ಲಿ 18 ಸ್ಥಾನಗಳನ್ನು ಗೆದ್ದಿತ್ತು. ಕೆಲವು ತಿಂಗಳಾದ ಮೇಲೆ ಕಾಂಗ್ರೈನ 6 ಮಂದಿ ಸದಸ್ಯರು ಪಕ್ಷಾಂತರ ಮಾಡಿದಾಗ, ಆವರು ಪರ್ಯಾಯ ಸರ್ಕಾರವನ್ನು ರಚಿಸಲು ಮಹಾರಾಷ್ಟ್ರವಾದಿ ಗೋಮಂತಕ್ ಪಕ್ಷ ಬೆಂಬಲ ನೀಡಿತು. ಇದರ ರಾಜಕೀಯ ಶಕ್ತಿ ಕಡಿಮೆಯಾಗಿದೆ.

**ಅಸ್ಸಾಂ ಗಣ ಪರಿಷತ್ :** ಅಸ್ಸಾಂ ವಿಧಾನಸಭೆಗೆ 1985ರಲ್ಲಿ ನಡೆದ ಚುನಾವಣೆಯಲ್ಲಿ 64 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿತ್ತು.

**ಮಿಜೋ ನ್ಯಾಷನಲ್ ಫ್ರಂಟ್ :** 1987ರಲ್ಲಿ 24 ಸ್ಥಾನಗಳನ್ನು ಮಿಜೋರಾಂನಲ್ಲಿ ಗೆದ್ದು ಲಾಲ್ಡೆಂಗ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಿತ್ತು.

**ನಾಗಾ ಪೀಪಲ್ಸ್ ಫ್ರಂಟ್ :** 2013ರಲ್ಲಿ ಫೆಬ್ರವರಿಯಲ್ಲಿ ನಡೆದ ನಾಗಾಲ್ಯಾಂಡ್ ವಿಧಾನಸಭಾ ಚುನಾವಣೆಯಲ್ಲಿ 37 ಸ್ಥಾನಗಳನ್ನು ಗೆದ್ದು ಸತತವಾಗಿ 3ನೇ ಬಾರಿಗೆ ಅಧಿಕಾರಕ್ಕೆ ಬಂದಿತ್ತು.

**ಕನ್ನಡ ಪಕ್ಷ :** ಕರ್ನಾಟಕದಲ್ಲಿ ಡಿಸೆಂಬರ್ 21, 1987ರಂದು ಹುಬ್ಬಳ್ಳಿಯಲ್ಲಿ ರೈತ ಸಂಘದಿಂದ ರಚನೆಯಾಯಿತು. ಮೊದಲ ಬಾರಿಗೆ ಎರಡು ವಿಧಾನಸಭಾ ಸ್ಥಾನಗಳನ್ನು ಉತ್ತರ ಕರ್ನಾಟಕದಿಂದ 1989ರಲ್ಲಿ ಗೆದ್ದಿತು. 1994ರ ವಿಧಾನಸಭಾ ಚುನಾವಣೆಯಲ್ಲಿ ಕೇವಲ ಒಂದು ಸ್ಥಾನವನ್ನು (ಪಾಂಡವಪುರ) ಗೆದ್ದಿತು.

**ಆಮ್ ಆದ್ಮಿ ಪಾರ್ಟಿ :**




2013ರ ಮಾರ್ಚ 22ರಂದು ಚುನಾವಣಾ ಆಯೋಗದಲ್ಲಿ ನೋಂದಣಿಯಾಗಿ ಜುಲೈ 31ರಂದು ಪೊರಕೆ ಚಿನ್ಹೆಯನ್ನು ಪಡೆಯಿತು. ಅರವಿಂದ ಕೇಜ್ರಿವಾಲ್, ಪ್ರಶಾಂತ್ ಭೂಷಣ್, ಯೋಗೇಂದ್ರ ಯಾದವ್ & ಇತರ ಕೆಲವರು ಇದರ ಉಗಮಕ್ಕೆ ಕಾರಣರಾದರು. 2013ರ ದೆಹಲಿಯ ವಿಧಾನಸಭಾ ಚುನಾವಣೆಯಲ್ಲಿ 28 ಸ್ಥಾನಗಳನ್ನು ಗೆದ್ದು ಮೊದಲ ಬಾರಿಗೆ ಕಾಂಗ್ರೆಸ್ ಬೆಂಬಲದಿಂದ ಸರ್ಕಾರವನ್ನು ರಚಿಸಿತು. 2014ರ ಚುನಾವಣೆಯಲ್ಲಿ 67 ಸ್ಥಾನಗಳನ್ನು ಗೆದ್ದು 2ನೇ ಬಾರಿಗೆ ಅರವಿಂದ ಕೇಜ್ರಿವಾಲ್ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಿತು. ಇದು ದೆಹಲಿ & ಪಂಜಾಬ್‌ನಲ್ಲಿ ಬೆಂಬಲವನ್ನು ಪಡೆದಿದೆ. 2017ರ ಪಂಜಾಬಿನ ವಿಧಾನಸಭಾ ಚುನಾವಣೆಯಲ್ಲಿ ಕೇವಲ 20 ಸ್ಥಾನಗಳನ್ನು ಗೆದ್ದಿತು. ದೆಹಲಿಯ 3 ಮುನಿಸಿಪಲ್ ಕಾರ್ಪೋರೇಷನ್‌ಗಳ ಒಟ್ಟು 272 ವಾರ್ಡ್‌ಗಳಿಗೆ ನಡೆದ ಚುನಾವಣೆಯಲ್ಲಿ ಕೇವಲ 48 ವಾರ್ಡ್‌ಗಳಲ್ಲಿ ಜಯಗಳಿಸಿತು. ಕೇಜ್ರಿವಾಲ್ ದರ್ಪ, ಭ್ರಷ್ಟಾಚಾರದ ಆರೋಪ & ಪಕ್ಷದಲ್ಲಿ

GNANADHARE IAS KAS ACADEMY

ಗುಂಪುಗಾರಿಕೆ ಇದರ ಜನಪ್ರಿಯತೆಯ ಕುಂಠಿತಕ್ಕೆ ಕಾರಣಗಳಾಗಿವೆ. ಇಂದು ಪ್ರಶಾಂತ್ ಭೂಷಣ್, ಯೋಗೇಂದ್ರ ಯಾದವ್ ಈ ಪಕ್ಷದ ಸದಸ್ಯರಲ್ಲ.

# ಸಮ್ಮಿಶ್ರ ಸರ್ಕಾರಗಳು :

ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ರಚಿಸುವ ಸರ್ಕಾರವನ್ನು ಸಮ್ಮಿಶ್ರ ಸರ್ಕಾರ ಅಥವಾ ಮೈತ್ರಿಕೂಟ ಸರ್ಕಾರ ಎಂದು ಕರೆಯುತ್ತಾರೆ. ಸಮ್ಮಿಶ್ರವಾಗುವ ಪಕ್ಷಗಳು ತಮ್ಮ ಸಿದ್ಧಾಂತಗಳನ್ನು ಸಡಿಲಗೊಳಿಸಿ ಅಥವಾ ರಾಜಿ ಮಾಡಿಕೊಂಡು ಸಂವಿಧಾನದ ಚೌಕಟ್ಟಿನಲ್ಲಿ ಆಡಳಿತ ನಡೆಸಲು ತೀರ್ಮಾನಿಸುತ್ತವೆ.

## ಸಮ್ಮಿಶ್ರ ಸರ್ಕಾರಕ್ಕೆ ಮುಖ್ಯ ಕಾರಣಗಳು :

1. ಬಹುಪಕ್ಷ ಪದ್ಧತಿ
2. ಏಕಪಕ್ಷ ಸರ್ಕಾರ ರಚನೆಯ ವಿಫಲತೆ
3. ಪ್ರದೇಶಿಕ ಪಕ್ಷಗಳ ರಚನೆ
4. ರಾಜ್ಯಗಳಲ್ಲಿ ಪ್ರಬಲ ನಾಯಕರ ಉಗಮ

## ಸಮ್ಮಿಶ್ರ ಸರ್ಕಾರಗಳ ಲಕ್ಷಣಗಳು :

1. **ಚುನಾವಣಾ ಪೂರ್ವ ಮೈತ್ರಿ ಸರ್ಕಾರಗಳು :** ಚುನಾವಣೆಗೆ ಮೊದಲು ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಸಾಮಾನ್ಯ ಒಪ್ಪಂದದ ಆಧಾರದ ಮೇಲೆ ಒಮ್ಮತದ ಚುನಾವಣಾ ಪ್ರಣಾಳಿಕೆಯನ್ನು ಪ್ರಕಟಿಸಿ ಅದರ ಆಧಾರದ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸುತ್ತದೆ. ಇಂತಹ ಮೈತ್ರಿಕೂಟ ಸ್ಪಷ್ಟ ಬಹುಮತ ಪಡೆದರೆ ಅಧಿಕಾರಕ್ಕೆ ಬರುತ್ತದೆ. ಸಾಮಾನ್ಯವಾಗಿ ಹೆಚ್ಚು ಸ್ಥಾನಗಳನ್ನು ಪಡೆದ ದೊಡ್ಡ ಪಕ್ಷದ ನಾಯಕ ಪ್ರಧಾನಮಂತ್ರಿ/ಮುಖ್ಯಮಂತ್ರಿಯಾಗುತ್ತಾರೆ.

### ರಾಜ್ಯಗಳು :

- ಪಶ್ಚಿಮ ಬಂಗಾಳ : ಸಿಪಿಎಂ ನೇತೃತ್ವದ ಮೈತ್ರಿ ಸರ್ಕಾರ (1977–2011) & 2011ರಿಂದ ತೃಣಮೂಲ ಕಾಂಗ್ರೆಸ್ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ಮೈತ್ರಿ ಸರ್ಕಾರ. (2012ರ ಕೊನೆಯಲ್ಲಿ ಕಾಂಗ್ರೆಸ್ ಮೈತ್ರಿಕೂಟದಿಂದ ಹೊರಬಂದಿತು)

**ಕೇಂದ್ರ :**

- ಜನತಾ ಪಕ್ಷ ನೇತೃತ್ವದ ಮೈತ್ರಿ ಸರ್ಕಾರ
- ಎನ್.ಡಿ.ಎ ಮೈತ್ರಿಕೂಟ : ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾ ಸತ್ತಾತ್ಮಕ ಕೂಟದ ಸರ್ಕಾರ 1998–1999 & 1999–2004ರ ಅವಧಿಯಲ್ಲಿ ಅಧಿಕಾರದಲ್ಲಿತ್ತು. ಈ ಮೈತ್ರಿಕೂಟ ಮುಂದುವರಿಯುತ್ತಿದ್ದು 2012ರ ಜನತಾಪಕ್ಷವನ್ನು ಸೇರಿಸಕೊಂಡು ಆರು ಪಕ್ಷಗಳ ಕೂಟವಾಯಿತು. ಅವುಗಳೆಂದರೆ, ಬಿಜೆಪಿ, ಜನತಾದಳ(ಯು), ಅಕಾಲಿದಳ, ಶಿವಸೇನೆ, ಆರ್.ಪಿ.ಐ & ಜನತಾಪಕ್ಷ.

2. **ಚುನಾವಣಾ ನಂತರದ ಮೈತ್ರಿ ಸರ್ಕಾರಗಳು** : ಚುನಾವಣೆ ನಂತರ ಯಾವುದೇ ಪಕ್ಷಕ್ಕೆ ಬಹುಮತ ಬರದಿದ್ದರೆ ಎರಡು ಅಥವಾ ಅನೇಕ ಪಕ್ಷಗಳು ಮೈತ್ರಿಕೂಟ ರಚಿಸಿ ಅಧಿಕಾರಕ್ಕೆ ಬರಬಹುದು.

**ರಾಜ್ಯಗಳು :**

- ಕರ್ನಾಟಕ : ಜನತಾಪಕ್ಷ ನೇತೃತ್ವದ ಮೈತ್ರಿ ಸರ್ಕಾರ. ರಾಮಕೃಷ್ಣ ಹೆಗಡೆ ಈ ಸರ್ಕಾರವನ್ನು 1983ರಲ್ಲಿ ರಚಿಸಿದರು.
  - ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ (2004–06)
  - ಬಿಜೆಪಿ–ಜೆಡಿಎಸ್ (2006–07) : ಈ ಮೈತ್ರಿ ಸಕಾರದಲ್ಲಿ ಕಡಿಮೆ ಸ್ಥಾನಗಳನ್ನು ಪಡೆದಿದ್ದ ಜೆ.ಡಿ.ಎಸ್ ಪಕ್ಷದ ಹೆಚ್.ಡಿ. ಕುಮರಸ್ವಾಮಿ ಮುಖ್ಯಮಂತ್ರಿಯಾದರು. 79 ಸ್ಥಾನಗಳನ್ನು ಪಡೆದು ದೊಡ್ಡ ಪಕ್ಷವಾಗಿದ್ದ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಉಪ ಮುಖ್ಯಮಂತ್ರಿಗಳಾದರು.
  - ಬಿಜೆಪಿ–ಪಕ್ಷೇತರರ ಸರ್ಕಾರ (2008–2011)
- ಮಹಾರಾಷ್ಟ್ರ : 2014ರ ವಿಧಾನಸಭಾ ಚುನಾವಣೆಯಲ್ಲಿ ಬಿ,ಜೆ.ಪಿ ದೊಡ್ಡ ಪಕ್ಷವಗಿ ಹೊರಹೊಮ್ಮಿತು. ಮಿತ್ರ ಪಕ್ಷ ಶಿವಸೇನೆ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿತು. ಪರಿಣಾಮವಾಗಿ ಚುನಾವಣೆ ನಂತರ ಈ ಎರಡು ಪಕ್ಷಗಳು & ಆರ್.ಪಿ.ಐ, ಆರ್.ಎಸ್.ಪಿ, ಎಸ್. ಎಸ್. ಎಸ್ & ಶಿವಸಂಗ್ರಾಮ್ ಸರ್ಕಾರಗಳನ್ನು ರಚಿಸಿದವು.
- ಜಮ್ಮು–ಕಾಶ್ಮೀರ್ : ಪಿ.ಡಿ.ಪಿ & ಬಿ.ಜೆ.ಪಿ (2015)



GNANADHARE IAS KAS ACADEMY

- ಬಿಹಾರ್ : ಜೆಡಿಯು–ಬಿಜೆಪಿ, ಜನಲೋಕಶಕ್ತಿ ಇತರೆ (2017)

3. **ಬಾಹ್ಯ ಬೆಂಬಲದಿಂದ ಮೈತ್ರಿಕೂಟ ಸರ್ಕಾರದ ರಚನೆ** : ಕೇಂದ್ರ & ರಾಜ್ಯಗಳಲ್ಲಿ ಹೊರಗಿನ ಬೆಂಬಲದಿಂದ ಸಮ್ಮಿಶ್ರ ಸರ್ಕಾರಗಳು ಅಧಿಕಾರಕ್ಕೆ ಬಂದಿವೆ

**ಕೇಂದ್ರ :**

- ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ ಸರ್ಕಾರಕ್ಕೆ ಬಿಜೆಪಿ ಹೊರಗಿನಿಂದ ಬೆಂಬಲ ನೀಡಿತು (1989–90)
- ಚಂದ್ರಶೇಖರ್ ನೇತೃತ್ವದ ಸರ್ಕಾರಕ್ಕೆ ಕಾಂಗ್ರೆಸ್ ಬಾಹ್ಯ ಬೆಂಬಲದ ನೀಡಿತು
- ಹೆಚ್.ಡಿ. ದೇವೇಗೌಡ & ಐ.ಕೆ.ಗುಜ್ರಾಲ್ ಸಂಯುಕ್ತ ರಂಗ ಸರ್ಕಾರಗಳಿಗೆ ಕಾಂಗ್ರೆಸ್ ಹೊರಗಿನಿಂದ ಬೆಂಬಲ ನೀಡಿತು
- ಮೊದಲನೇ ಯು.ಪಿ.ಎ ಸರ್ಕಾರಕ್ಕೆ ಸಿ.ಪಿ.ಎಂ ಹೊರಗಿನಿಂದ ಬೆಂಬಲ ನೀಡಿತು (2004–2007). ಎರಡನೇ ಯು.ಪಿ.ಎ ಸರ್ಕಾರಕ್ಕೆ ಆರ್.ಜೆ.ಡಿ, ಎಸ್.ಪಿ ಮತ್ತಿತರ ಪಕ್ಷಗಳು ಹೊರಗಿನಿಂದ ಬೆಂಬಲ ನೀಡಿದವು.

**ರಾಜ್ಯ :**

- ಉತ್ತರ ಪ್ರದೇಶ : ಬಿ.ಎಸ್.ಪಿ ನೇತೃತ್ವದ ಸರ್ಕಾರಕ್ಕೆ ಬಿಜೆಪಿ ಹೊರಗಿನಿಂದ ಬೆಂಬಲ ನೀಡಿತು (1995)
- ಬಿಹಾರ್ : ಆರ್.ಜೆ.ಡಿ ಸರ್ಕಾರಕ್ಕೆ ಕಾಂಗ್ರೆಸ್ ಬಾಹ್ಯ ಬೆಂಬಲ ನೀಡಿತು (1999–2004)

4. **ಅಂಗ ಪಕ್ಷಗಳ ಸ್ಥಾನಗಳಿಗೆ ಅನುಸಾರ ಮಂತ್ರಿಗಳ ನೇಮಕ**
5. **ಸಮನ್ವಯ/ಸಲಹಾ ಸಮಿತಿ ರಚನೆ**
6. **ಸಾಮಾನ್ಯ ಕನಿಷ್ಠ ಕಾರ್ಯಕ್ರಮ**

GNANADHARE IAS KAS ACADEMY

## ಸಮ್ಮಿಶ್ರ ಸರ್ಕಾರದ ಸಫಲತೆಗಳು :

1. ರಾಜಕೀಯ ಸ್ಥಿರತೆ : ಕೇಂದ್ರ ಹಾಗೂ ರಾಜ್ಯಗಳಲ್ಲಿ ಚುನಾವಣಾ ಪೂರ್ವ ಮೈತ್ರಿಕೂಟ ಸರ್ಕಾರಗಳು ರಾಜಕೀಯ ಅಥವಾ ಸರ್ಕಾರದ ಸ್ಥಿರತೆಯನ್ನು ರಕ್ಷಿಸುವುದರಲ್ಲಿ ಯಶಸ್ವಿಯಾಗಿದೆ. ಸರ್ಕಾರ ದಕ್ಷತೆಯಿಂದ ಕೆಲಸ ಮಾಡಿ ತನ್ನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾದರೆ ನಿರ್ದಿಷ್ಟ ಅವಧಿಯ ಸರ್ಕಾರದ ಸ್ಥಿರತೆ ಅಗತ್ಯ.

- ಪಶ್ಚಿಮಬಂಗಾಳದಲ್ಲಿ ಸಿ.ಪಿ.ಎಂ ನೇತೃತ್ವದ ಸಮ್ಮಿಶ್ರ ಸರ್ಕಾರ ಮೂರು ದಶಕಗಳ ಕಾಲ ಆಡಳಿತ ನಡೆಸಿತು.
- ಕೇರಳದಲ್ಲಿ ಇರುವ ಎರಡು ಮೈತ್ರಿಕೂಟಗಳು ಪರ್ಯಾಯವಾಗಿ ಅಧಿಕಾರಕ್ಕೆ ಬಂದು ನಿರ್ದಿಷ್ಟ ಅವಧಿಗೆ ಅಧಿಕಾರ ನಡೆಸಿವೆ & ನಡೆಸುತ್ತಿವೆ.
- ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ–ಶಿವಸೇನೆ ಸಮ್ಮಿಶ್ರ ಸರ್ಕಾರ 1995–1999ರ ವರೆಗೆ ಅಧಿಕಾರದಲ್ಲಿತ್ತು
- ಪಂಜಾಬಿನಲ್ಲಿ ಅಕಾಲಿದಳ–ಬಿ.ಜೆ.ಪಿ ಮೈತ್ರಿ ಸರ್ಕಾರ 2000ದ ದಶಕದಲ್ಲಿ ರಾಜಕೀಯ ಸ್ಥಿತರೆಯನ್ನು ಕಾಪಾಡಿತು.
- ಕೇಂದ್ರದಲ್ಲಿ ಯು.ಪಿಎ ಸರ್ಕಾರ 10 ವರ್ಷಗಳ ಕಾಲ (2004–2014) ರಾಜಕೀಯ ಸ್ಥಿರತೆಯನ್ನು ಉಳಿಸಿಕೊಂಡಿತ್ತು.

2. ಒಮ್ಮತದ ತೀರ್ಮಾನಗಳು
3. ಕ್ಯಾಬಿನೆಟ್ ಪ್ರಾಮುಖ್ಯತೆ
4. ಕಾರ್ಯದಕ್ಷತೆ : ಕೇಂದ್ರ & ರಾಜ್ಯ ಸಮ್ಮಿಶ್ರ ಸರ್ಕಾರಗಳು ತಮ್ಮ ಕಾರ್ಯದಕ್ಷತೆಯನ್ನು & ಆಡಳಿತದ ಅನುಭವವನ್ನು ಸಾಬೀತುಪಡಿಸಿವೆ

- **ಎನ್.ಡಿ.ಎ ಸರ್ಕಾರದ ಕೆಲವು ಮುಖ್ಯ ಸಾಧನೆಗಳು :**

1. ದೇಶದ ಮೂಲಭೂತ ಸೌಲಭ್ಯಗಳ ಅಭಿವೃದ್ದಿಗೆ ಆದ್ಯತೆ–ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಯೋಜನೆ ಜಾರಿ
2. ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಲು ಸಂವಿಧಾನ ತಿದ್ದುಪಡಿ
3. ಆರ್ಥಿಕ ಸುಧಾರಣಾ ನೀತಿ ಮುಂದುವರಿಕೆ
4. ಈಶಾನ್ಯ ರಾಜ್ಯಗಳ ಅಭಿವೃದ್ದಿಗೆ ಕಾರ್ಯಕ್ರಮ
5. ಕೇಂದ್ರ–ರಾಜ್ಯಗಳ ಸಹಕಾರ ಸಂಬಂಧಗಳು



GNANADHARE IAS KAS ACADEMY

- **ಯುಪಿಎ ಸರ್ಕಾರದ ಮುಖ್ಯ ಸಾಧನೆಗಳು :**

1. ಮಾಹಿತಿ ಹಕ್ಕು ಕಾಯ್ದೆಯ ಅನುಷ್ಠಾನ (2005)
2. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಜಾರಿ (2005)
3. ಅರಣ್ಯ ಹಕ್ಕುಗಳ ಕಾಯ್ದೆ ಜಾರಿ (2006)
4. ಜವಹರ್‌ಲಾಲ್ ನೆಹರು ನ್ಯಾಷನಲ್ ಅರ್ಬನ್ ರನೀವಲ್ ಮಿಷನ್ ಜಾರಿ
5. 20–ಅಂಶ ಕಾರ್ಯಕ್ರಮದ ಪರಿಷ್ಕರಣೆ & ಅನುಷ್ಠಾನಕ್ಕೆ ಆದ್ಯತೆ.
6. ಸರ್ವರ ಅಭಿವೃದ್ದಿ ನೀತಿ ಜಾರಿ
7. ಅಲ್ಪಸಂಖ್ಯಾಂತರ ಸಮಸ್ಯೆಗಳ ಅಧ್ಯಯನಕ್ಕೆ ಸಚಾರ್ ಸಮಿತಿ ನೇಮಕ & ಅವರ ಪ್ರಗತಿಗೆ ಪ್ರಧಾನಮಂತ್ರಿ ಯೋಜನೆ ಜಾರಿ
8. ಈಶಾನ್ಯ ಹಾಗೂ ಇತರ ಹಿಂದುಳಿದ ಪ್ರದೇಶಗಳಿಗೆ ಅಭಿವೃದ್ದಿ ಪ್ಯಾಕೇಜ್
9. ಭಾರತ–ಅಮೆರಿಕ ಶಾಂತಿ ಅಣು ಒಪ್ಪಂದ (2005)

- **ಬಿಜೆಪಿ–ಜೆಡಿಎಸ್ ಸಮಿಶ್ರ ಸಕಾರದ ಮುಕ್ಯ ಅಭಿವೃದ್ದಿ ಕಾರ್ಯಕ್ರಮಗಳು :**

  1. ಸುವರ್ಣ ಗ್ರಾಮೋದಯ ಯೋಜನೆ
  2. ಕೋಅಪರೇಟಿವ್ ಸೊಸೈಟಿಗಳ ಮೂಲಕ ರೈತರಿಗೆ ಶೇ.4ರಷ್ಟು ಬಡ್ಡಿ ದರದಲ್ಲಿ ಸಾಲ ಯೋಜನೆ
  3. ಸುವರ್ಣ ಸುರಕ್ಷ ಯೋಜನೆ (ಕೃಷಿ, ಕಾರ್ಮಿಕರಿಗೆ ವಿಮಾ ಸೌಲಭ್ಯ)
  4. ಹೈಸ್ಕೂಲ್ ವಿದ್ಯಾರ್ಥಿನಿಯರಿಗೆ ಬೈಸಿಕಲ್ ಸರಬರಾಜು
  5. ಭಾಗ್ಯಲಕ್ಷ್ಮಿ ಯೋಜನೆ (ಬಿ.ಪಿ.ಎಲ್ ಕುಟುಂಬಗಳ ಹೆಣ್ಣುಮಕ್ಕಳಿಗೆ ರಕ್ಷಣಾ ಯೋಜನೆ)
  6. ಹೋಬಳಿಗಳವರೆಗೆ 'ಭೂಮಿ ಯೋಜನೆ' ವಿಸ್ತರಣೆ
  7. ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ